ಮಂಗಳವಾರ, ಏಪ್ರಿಲ್ 16, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 106 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಸ್ನಾಯು ಸೆಳೆತಕ್ಕೆ ಇವೆ ಹಲವು ಪರಿಹಾರ ಸೂತ್ರಗಳು

ಆಳ-ಅಗಲ
ಪ್ರಣಾಳಿಕೆ ಭರವಸೆ ಭರಪೂರ
ಗೀತಾ ಶಿವರಾಜಕುಮಾರ್ ಆಸ್ತಿ ಮೌಲ್ಯ ₹40.04 ಕೋಟಿ 10
ಕೇಜ್ರಿವಾಲ್ ಬಂಧನ: ಇ.ಡಿಗೆ ನೋಟಿಸ್ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,399 ▼	22,272 ▼	₹74,920 (ಬೆಂಗಳೂರು) ▲	₹85,200 (ಬೆಂಗಳೂರು) ▲	83.44 ▼

2ನೇ ಹಂತ: ನಾಮಪತ್ರ ಸಲ್ಲಿಕೆ ಭರಾಟೆ • ಕೇಂದ್ರ ಸಚಿವರು, ಮಾಜಿ ಮುಖ್ಯಮಂತ್ರಿಗಳು ಕಣಕ್ಕೆ

ರಂಗೇರಿದ ಚುನಾವಣಾ ಕಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ 14 ಲೋಕಸಭಾ ಕ್ಷೇತ್ರಗಳಲ್ಲಿ ಘಟಾನುಘಟಿ ನಾಯಕರು ನಾಮಪತ್ರ ಸಲ್ಲಿಸುವುದರೊಂದಿಗೆ ಚುನಾವಣಾ ಅಖಾಡ ರಂಗೇರಿದೆ. ಇಬ್ಬರು ಮಾಜಿ ಮುಖ್ಯಮಂತ್ರಿಗಳು, ಇಬ್ಬರು ಕೇಂದ್ರ ಸಚಿವರು ಸೇರಿದಂತೆ 52 ಮಂದಿ ಸೋಮವಾರ ನಾಮಪತ್ರ ಸಲ್ಲಿಸಿದರು.

ಎರಡನೇ ಹಂತದಲ್ಲಿ ಮತದಾನ ನಡೆಯುವ ಕ್ಷೇತ್ರಗಳಲ್ಲಿ ಶುಕ್ರವಾರದಿಂದ ನಾಮಪತ್ರ ಸಲ್ಲಿಕೆ ಆರಂಭವಾಗಿತ್ತು. ಮೊದಲ ದಿನ 41 ಮಂದಿ ಉಮೇದುವಾರಿಕೆ ಸಲ್ಲಿಸಿದ್ದರು. ಎರಡನೇ ದಿನವಾದ ಸೋಮವಾರ 45 ಪುರುಷರು ಮತ್ತು ಏಳು ಮಹಿಳೆಯರು ನಾಮಪತ್ರ ಸಲ್ಲಿಸಿದರು.

ಈವರೆಗೆ ಒಟ್ಟು 88 ಮಂದಿ ನಾಮಪತ್ರ ಸಲ್ಲಿಸಿದ್ದಾರೆ. ಅವರಲ್ಲಿ 78 ಪುರುಷರಿದ್ದರೆ, ಎಂಟು ಮಂದಿ ಮಹಿಳೆಯರು. ಒಟ್ಟು 126 ನಾಮಪತ್ರಗಳು ಸಲ್ಲಿಕೆಯಾಗಿವೆ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಕೇಂದ್ರದ ಹಾಲಿ ಸಚಿವರಾದ ಪ್ರಲ್ಹಾದ ಜೋಶಿ ಮತ್ತು ಭಗವಂತ ಖೂಬಾ ತಾವು ಈಗ ಪ್ರತಿನಿಧಿಸುತ್ತಿರುವ ಧಾರವಾಡ ಹಾಗೂ ಬೀದರ್ ಕ್ಷೇತ್ರಗಳಲ್ಲಿ ಉಮೇದುವಾರಿಕೆ ಸಲ್ಲಿಸಿದರು. ಮಾಜಿ ಮುಖ್ಯಮಂತ್ರಿಗಳಾದ ಜಗದೀಶ ಶೆಟ್ಟರ್ ಬೆಳಗಾವಿಯಲ್ಲಿ, ಬಸವರಾಜ ಬೊಮ್ಮಾಯಿ ಹಾವೇರಿಯಲ್ಲಿ ನಾಮಪತ್ರ ಸಲ್ಲಿಸಿದರು.

ಸಚಿವ ಮಧುಬಂಗಾರಪ್ಪ ಅವರ ಅಕ್ಕ, ಚಿತ್ರನಟ ಶಿವರಾಜ್ ಕುಮಾರ್ ಪತ್ನಿ ಗೀತಾ ಅವರು ಶಿವಮೊಗ್ಗದಲ್ಲಿ ನಾಮಪತ್ರ ಸಲ್ಲಿಸಿದರೆ, ಸಚಿವೆ ಲಕ್ಷ್ಮಿ ಹೆಬ್ಬಾಳಕರ ಪುತ್ರ ಮೃಣಾಲ್ ಹೆಬ್ಬಾಳಕರ ಬೆಳಗಾವಿಯಲ್ಲಿ, ಸಚಿವ ಶಿವಾನಂದ ಪಾಟೀಲರ ಪುತ್ರಿ ಸಂಯುಕ್ತಾ ಪಾಟೀಲ ಬೀದರ್‌ನಲ್ಲಿ ನಾಮಪತ್ರ ಸಲ್ಲಿಸಿದರು.

ಶಕ್ತಿ ಪ್ರದರ್ಶನ: ಬೆಳಗಾವಿ, ಧಾರವಾಡ, ಶಿವಮೊಗ್ಗ ಸೇರಿದಂತೆ ಹಲವೆಡೆ ನಾಮಪತ್ರ ಸಲ್ಲಿಕೆ ವೇಳೆ ಭಾರಿ ಜನಸ್ತೋಮದೊಂದಿಗೆ ಅಭ್ಯರ್ಥಿಗಳು ಶಕ್ತಿ ಪ್ರದರ್ಶನ ನಡೆಸಿದರು.

ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮೃಣಾಲ್ ಹೆಬ್ಬಾಳಕರ ನಾಮಪತ್ರ ಸಲ್ಲಿಕೆ ವೇಳೆ ಬೃಹತ್ ರ್‍ಯಾಲಿ ನಡೆಸಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರ್‍ಯಾಲಿಯಲ್ಲಿ ಪಾಲ್ಗೊಂಡು, ನಾಮಪತ್ರ ಸಲ್ಲಿಕೆ ವೇಳೆಯೂ ಹಾಜರಿದ್ದು ಬೆಂಬಲ ಸೂಚಿಸಿದರು. ಜಿಲ್ಲಾ ಉಸ್ತುವಾರಿ ಸಚಿವರ ಸತೀಶ ಜಾರಕಿಹೊಳಿ ಕೂಡ ಇದ್ದರು.

ಧಾರವಾಡ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪ್ರಲ್ಹಾದ ಜೋಶಿ ಕೂಡ ಶಕ್ತಿ ಪ್ರದರ್ಶನದೊಂದಿಗೆ ನಾಮಪತ್ರ ಸಲ್ಲಿಸಿದರು. ಬಿ.ಎಸ್. ಯಡಿಯೂರಪ್ಪ, ಜಗದೀಶ ಶೆಟ್ಟರ್ ಮತ್ತು ಅರವಿಂದ ಬೆಲ್ಲದ ನಾಮಪತ್ರ ಸಲ್ಲಿಕೆ ವೇಳೆ ಹಾಜರಿದ್ದರು.

ಗೀತಾ ಶಿವರಾಜ್ ಕುಮಾರ್ ಭಾರಿ ಸಂಖ್ಯೆಯ ಬೆಂಬಲಿಗರೊಂದಿಗೆ ರ್‍ಯಾಲಿ ನಡೆಸಿ, ಶಿವಮೊಗ್ಗ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರು. ಡಿ.ಕೆ. ಶಿವಕುಮಾರ್, ಮಧುಬಂಗಾರಪ್ಪ, ಶಿವರಾಜ್ ಕುಮಾರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ ಭಂಡಾರಿ, ಮಾಜಿ ಸಚಿವ ಕಿಮ್ಮನೆ ರತ್ನಾಕರ ರ್‍ಯಾಲಿಯಲ್ಲಿ ಜತೆಗಿದ್ದರು.

ವಿಜಯಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಜು ಅಲಗೂರ ನಾಮಪತ್ರ ಸಲ್ಲಿಕೆ ವೇಳೆ ನಡೆದ ಮೆರವಣಿಗೆಯಲ್ಲೂ ಭಾರಿ ಜನಸ್ತೋಮವೇ ಇತ್ತು.

ಕಣಕ್ಕಿಳಿದ ಪ್ರಮುಖರು

ಕ್ಷೇತ್ರ	ಹೆಸರು
ಬಿಜೆಪಿ	
ಬೆಳಗಾವಿ	ಜಗದೀಶ ಶೆಟ್ಟರ್
ಹಾವೇರಿ	ಬಸವರಾಜ ಬೊಮ್ಮಾಯಿ
ಧಾರವಾಡ	ಪ್ರಲ್ಹಾದ ಜೋಶಿ
ಬೀದರ್	ಭಗವಂತ ಖೂಬಾ
ದಾವಣಗೆರೆ	ಗಾಯತ್ರಿ ಸಿದ್ದೇಶ್ವರ
ರಾಯಚೂರು	ರಾಜಾ ಅಮರೇಶ್ವರ ನಾಯಕ
ಕಾಂಗ್ರೆಸ್	
ಬಾಗಲಕೋಟೆ	ಸಂಯುಕ್ತಾ ಪಾಟೀಲ
ವಿಜಯಪುರ	ರಾಜು ಅಲಗೂರ
ಶಿವಮೊಗ್ಗ	ಗೀತಾ ಶಿವರಾಜ್ ಕುಮಾರ್
ಹಾವೇರಿ	ಜಿ.ಸಿ. ಆನಂದ ಗಡ್ಡದೇವರಮಠ
ಬೆಳಗಾವಿ	ಮೃಣಾಲ್ ಹೆಬ್ಬಾಳಕರ

ಸೋಮವಾರ ನಾಮಪತ್ರ ಸಲ್ಲಿಕೆ

45 ಪುರುಷರು
7 ಮಹಿಳೆಯರು
52 ಒಟ್ಟು

ಒಟ್ಟು ನಾಮಪತ್ರ ಸಲ್ಲಿಸಿದವರು

78 ಪುರುಷರು
10 ಮಹಿಳೆಯರು
88 ಒಟ್ಟು

ಎಂಇಎಸ್ ಬೆಂಬಲಿತ ಅಭ್ಯರ್ಥಿ ಕಣಕ್ಕೆ

ಉತ್ತರ ಕನ್ನಡ ಲೋಕಸಭಾ ಕ್ಷೇತ್ರದಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಬೆಂಬಲಿತ ಅಭ್ಯರ್ಥಿಗಳಾಗಿ ನಿರಂಜನ ಸರ್ದೇಸಾಯಿ ಮತ್ತು ರಣಜಿತ್ ಪಾಟೀಲ ಸೋಮವಾರ ನಾಮಪತ್ರ ಸಲ್ಲಿಸಿದರು. ನಾಮಪತ್ರ ಸಲ್ಲಿಕೆಗೂ ಮುನ್ನ ಬೃಹತ್ ರ್‍ಯಾಲಿಯನ್ನೂ ನಡೆಸಿದರು.

ಬೀದರ್‌ನಲ್ಲಿ ಮರಾಠಾ ಸಮುದಾಯದ ಡಾ.ದಿನಕರ ಮೋರೆ ಪಕ್ಷೇತರ ಅಭ್ಯರ್ಥಿಯಾಗಿ ಸೋಮವಾರ ಅಖಾಡಕ್ಕಿಳಿದರು.

ಸಂವಾದ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸೋಮವಾರ ತಮಿಳುನಾಡಿನ ನೀಲಗಿರಿಯಲ್ಲಿರುವ ಕಲಾ ಮತ್ತು ವಿಜ್ಞಾನ ಕಾಲೇಜಿಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಫೋಟೊ ತೆಗೆಸಿಕೊಂಡರು –ಪಿಟಿಐ ಚಿತ್ರ

ಹಿಂದೂ ತಾತ್ವಿಕತೆ ಜಗದಗಲ ಪಸರಿಸಲು ಯೋಜನೆ

• ಅಮೃತಾ ಮಧುಕಲ್ಯ

ನವದೆಹಲಿ: ಭಾರತದ ರಾಜತಾಂತ್ರಿಕತೆಯಲ್ಲಿ ಹಿಂದುತ್ವದ ತಾತ್ವಿಕತೆಯ ತಿರುಳನ್ನು ಸೇರಿಸುವ ಆಶಯವನ್ನು ಬಿಜೆಪಿ ತನ್ನ ಪ್ರಣಾಳಿಕೆಯಲ್ಲಿ ಪ್ರಕಟಪಡಿಸಿದೆ.

ಮಹಾತ್ಮ ಗಾಂಧಿ, ಬುದ್ಧನಂತಹ ಸಾಂಪ್ರದಾಯಿಕ ಮಾದರಿಗಳನ್ನು ಬಿಟ್ಟು ರಾಮನನ್ನು ಭಾರತೀಯ ರಾಜತಾಂತ್ರಿಕತೆಯ ಕೇಂದ್ರ ಪ್ರತಿಮೆಯಾಗಿ ಮಾಡುವ ಮೂಲಕ ಹೊಸ ರಾಜತಾಂತ್ರಿಕ ಪರಿಭಾಷೆ ರೂಪಿಸಲು ಬಿಜೆಪಿಯು ಮುಂದಾಗಿದೆ.

ರಾಮಾಯಣದಲ್ಲಿ ಅಡಕವಾಗಿರುವ ಬೋಧನೆಗಳನ್ನು ದಾಖಲೀಕರಿಸುವುದಕ್ಕೆ ಮತ್ತು ಪ್ರಚಾರ ಮಾಡುವುದಕ್ಕೆ ಬದ್ಧವಾದ ಸಮಗ್ರ ಜಾಗತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡುವುದು ಬಿಜೆಪಿಯ ಚಿಂತನೆಯಾಗಿದೆ. ಜಗತ್ತಿನ ಪ್ರಮುಖ ರಾಷ್ಟ್ರಗಳಲ್ಲಿ ರಾಮಾಯಣ ಉತ್ಸವ ಅಥವಾ ಹಬ್ಬಗಳನ್ನು ಆಯೋಜಿಸುವ ಮೂಲಕ ಈ ಯೋಜನೆಯನ್ನು ದೇಶಗಳ ಗಡಿಗಳನ್ನು ದಾಟಿಸುವ ಆಶಯವನ್ನು ಬಿಜೆಪಿ ವ್ಯಕ್ತಪಡಿಸಿದೆ.

'ಭಾರತೀಯ ನಾಗರಿಕತೆಯ ಪ್ರಮುಖ ತಾಣಗಳನ್ನು ಪುನಶ್ಚೇತನಗೊಳಿಸುವ ದಿಸೆಯಲ್ಲಿ ನಾವು ಜಗತ್ತಿನ ಹಲವು ರಾಷ್ಟ್ರಗಳೊಂದಿಗೆ ಒಟ್ಟಿಗೆ ಕೆಲಸ ಮಾಡಲಿದ್ದೇವೆ. ರಾಮನ ಮೂರ್ತ ಮತ್ತು ಅಮೂರ್ತ ಪರಂಪರೆಯನ್ನು ಪ್ರಚುರಪಡಿಸಲು ಎಲ್ಲ ರಾಷ್ಟ್ರಗಳಲ್ಲಿ ಜಾಗತಿಕ ಪ್ರಚಾರ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದೇವೆ' ಎಂದು ಪ್ರಣಾಳಿಕೆಯಲ್ಲಿ ಹೇಳಲಾಗಿದೆ.

ದೇಶದ ಸಾಂಸ್ಕೃತಿಕ ಮತ್ತು ಧಾರ್ಮಿಕ ತಾಣಗಳನ್ನು ರಕ್ಷಿಸಲು ಮತ್ತು ಪ್ರಚಾರ ಮಾಡಲು ತ್ರೈವಾರ್ಷಿಕ ಅಂತರರಾಷ್ಟ್ರೀಯ ಸಮಾವೇಶಗಳನ್ನು ಏರ್ಪಡಿಸುವುದರ ಜತೆಗೆ ಪ್ರಾಚೀನ ಸಾಹಿತ್ಯ ಕೃತಿಗಳನ್ನು ವಿದೇಶಿ ಭಾಷೆಗಳಿಗೆ ತರ್ಜುಮೆ ಮಾಡಿಸಲಾಗುವುದು ಎಂದು ಬಿಜೆಪಿ ಭರವಸೆ ನೀಡಿದೆ.

'ಯುಗೇ ಯುಗೀನ್ ಭಾರತ ರಾಷ್ಟ್ರೀಯ ಮ್ಯೂಸಿಯಂ' ನಿರ್ಮಾಣ ಕಾರ್ಯವನ್ನು ತ್ವರಿತಗೊಳಿಸಲಾಗುವುದು ಮತ್ತು ಅದನ್ನು ಜಗತ್ತಿನ ಅತ್ಯಂತ ಜನಪ್ರಿಯ ಮ್ಯೂಸಿಯಂ ಆಗಿ ರೂಪಿಸಲಾಗುವುದು ಎಂದು ಪ್ರಣಾಳಿಕೆಯಲ್ಲಿ ಭರವಸೆ ನೀಡಿದೆ.

ಯೋಗ, ಆಯುರ್ವೇದ ವಿದೇಶಕ್ಕೆ

'ಪ್ರಮುಖ ರಾಷ್ಟ್ರಗಳಲ್ಲಿ ಯೋಗ ಮತ್ತು ಆಯುರ್ವೇದ ಸಂಸ್ಥೆಗಳನ್ನು ಸ್ಥಾಪಿಸಿ, ವಿವಿಧ ಕೋರ್ಸ್‌ಗಳನ್ನು ಆರಂಭಿಸಲಾಗುವುದು. ಯೋಗ ಮತ್ತು ಆಯುರ್ವೇದಕ್ಕಾಗಿ ಜಾಗತಿಕವಾಗಿ ಮಾನ್ಯತೆ ಪಡೆದ ಪ್ರಮಾಣೀಕರಣ ವ್ಯವಸ್ಥೆ ಕಲ್ಪಿಸಲಾಗುವುದು. ಜಗತ್ತಿನ ಪ್ರಮುಖ ವಿದ್ಯಾಸಂಸ್ಥೆಗಳಲ್ಲಿ ಭಾರತದ ಶಾಸ್ತ್ರೀಯ ಭಾಷೆಗಳ ಕಲಿಕೆಯನ್ನು ಉತ್ತೇಜಿಸಲಾಗುವುದು. ಭಾರತದಿಂದ ಅಕ್ರಮವಾಗಿ ಹೊತ್ತೊಯ್ಯಲಾಗಿರುವ ವಿಗ್ರಹಗಳು ಮತ್ತು ಕಲಾಕೃತಿಗಳನ್ನು ವಾಪಸ್ ತರಲಾಗುವುದು' ಎಂದು ಕೂಡ ಪ್ರಣಾಳಿಕೆಯಲ್ಲಿ ಹೇಳಲಾಗಿದೆ.

'17 ಭಾರತೀಯರ ಬಿಡುಗಡೆಯ ಭರವಸೆ'

ಪ್ರಜಾವಾಣಿ ವಾರ್ತೆ

ಜೈಶಂಕರ್

ಬೆಂಗಳೂರು: 'ಇರಾನ್ ವಶದಲ್ಲಿರುವ ಸರಕು ಸಾಗಣೆ ಹಡಗಿನಲ್ಲಿರುವ 17 ಭಾರತೀಯ ನಾವಿಕರನ್ನು ಬಿಡಿಸಿಕೊಳ್ಳುವ ಸಂಬಂಧ ಅಲ್ಲಿನ ವಿದೇಶಾಂಗ ಸಚಿವರ ಜತೆ ಮಾತುಕತೆ ನಡೆಸಿದ್ದು, ಸಕಾರಾತ್ಮಕ ಭರವಸೆ ಸಿಕ್ಕಿದೆ' ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ತಿಳಿಸಿದರು.

ಬಿಜೆಪಿ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಭಾನುವಾರ (ಏ.14) ರಾತ್ರಿ ಮಾತುಕತೆ ನಡೆದಿದೆ. ಉಳಿದ ವಿಚಾರಗಳು ಮತ್ತು ಮಾತುಕತೆಗಳನ್ನು ವಿದೇಶಾಂಗ ಇಲಾಖೆ ಅಧಿಕಾರಿಗಳು ಇರಾನ್ ಅಧಿಕಾರಿಗಳ ಜತೆ ನಡೆಸಲಿದ್ದಾರೆ' ಎಂದರು.

ಭಾರತದಲ್ಲಿರುವ ನಾಗರಿಕರಲ್ಲದೇ, ವಿದೇಶಗಳಲ್ಲಿ ನೆಲಸಿರುವ ಭಾರತೀಯರ ರಕ್ಷಣೆಯೂ ಮೋದಿ ಸರ್ಕಾರದ ಆದ್ಯತೆ ಮಾತ್ರವಲ್ಲದೇ ಗ್ಯಾರಂಟಿಯೂ ಹೌದು

ಜೈಶಂಕರ್, ವಿದೇಶಾಂಗ ಸಚಿವ

13ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಮುಂಗಾರು: ಹವಾಮಾನ ಇಲಾಖೆಯ ಅಂದಾಜು

ಹುಲುಸು ಮಳೆಯ ಮುನ್ಸೂಚನೆ

ನವದೆಹಲಿ (ಪಿಟಿಐ): ಲಾ ನಿನಾ ಪರಿಸ್ಥಿತಿಯು ಅನುಕೂಲಕರ ಆಗಿರುವುದರ ಕಾರಣ ದೇಶದಲ್ಲಿ ಈ ಬಾರಿ ಮುಂಗಾರು ಅವಧಿಯಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಹೇಳಿದೆ.

ದೇಶದಲ್ಲಿ ಈ ಬಾರಿ ಮುಂಗಾರು ಮಳೆಯು ದೀರ್ಘಾವಧಿ ಸರಾಸರಿಯಾದ 87 ಸೆಂಟಿ ಮೀಟರ್‌ಗಿಂತ ಹೆಚ್ಚಿರಲಿದೆ ಎಂದು ಭೂವಿಜ್ಞಾನ ಸಚಿವಾಲಯದ ಕಾರ್ಯದರ್ಶಿ ಎಂ. ರವಿಚಂದ್ರನ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದೇಶದ ಹಲವು ಭಾಗಗಳಲ್ಲಿ ಈಗ ತೀವ್ರ ಸೆಕೆಯ ವಾತಾವರಣ ಇದೆ. ಏಪ್ರಿಲ್‌ನಿಂದ ಜೂನ್ ಅವಧಿಯಲ್ಲಿ ಬಿಸಿಗಾಳಿಯ ದಿನಗಳು ಗಣನೀಯವಾಗಿ ಹೆಚ್ಚಿರಲಿವೆ ಎಂದು ನಿರೀಕ್ಷಿಸಲಾಗಿದೆ. ಇದರಿಂದಾಗಿ ವಿದ್ಯುತ್ ಜಾಲದ ಮೇಲೆ ವಿಪರೀತ ಒತ್ತಡ ಸೃಷ್ಟಿಯಾಗಬಹುದು; ದೇಶದ ಹಲವು ಭಾಗಗಳಲ್ಲಿ ನೀರಿನ ಅಭಾವ ಹೆಚ್ಚುವ ಸಾಧ್ಯತೆ ಇದೆ.

ದೇಶದ ಕೃಷಿ ಚಟುವಟಿಕೆಗಳಿಗೆ ಮುಂಗಾರು ಮಳೆಯು ಬಹಳ ಮಹತ್ವದ್ದು. ದೇಶದಲ್ಲಿ ಕೃಷಿ ಚಟುವಟಿಕೆಗಳು ನಡೆಯುವ ಒಟ್ಟು ಜಮೀನಿನ ಪೈಕಿ 52ರಷ್ಟು ಭಾಗವು ಮುಂಗಾರು ಮಳೆಯನ್ನೇ ನೆಚ್ಚಿಕೊಂಡಿದೆ.

ಹೀಗಾಗಿ, ಮುಂಗಾರು ಈ ಬಾರಿ ವಾಡಿಕೆಗಿಂತ ಚೆನ್ನಾಗಿ ಆಗಲಿದೆ ಎಂಬ ಅಂದಾಜು ದೇಶದ ಎಲ್ಲ ವಲಯಗಳ ಪಾಲಿಗೆ ಶುಭಸುದ್ದಿಯಂತೆ ಬಂದಿದೆ.

ಒಟ್ಟಾರೆ ಮಳೆಯ ಪ್ರಮಾಣವು ವಾಡಿಕೆಗಿಂತ ಹೆಚ್ಚು ಇರಲಿದೆ ಎಂಬ ಮಾತಿನ ಅರ್ಥ, ದೇಶದ ಎಲ್ಲ ಪ್ರದೇಶಗಳಲ್ಲಿಯೂ, ಮುಂಗಾರಿನ ಅವಧಿಯುದ್ದಕ್ಕೂ ಮಳೆ ಏಕರೂಪದಲ್ಲಿ ಇರುತ್ತದೆ ಎಂದಲ್ಲ. ಹವಾಮಾನ ಬದಲಾವಣೆಯು ಮಳೆಯ ವ್ಯತ್ಯಯವನ್ನು ಹೆಚ್ಚಿಸುವ ಕೆಲಸ ಮಾಡಲಿದೆ. ವಾಯವ್ಯ ಭಾಗದ ಕೆಲವು ಪ್ರದೇಶಗಳು, ಪೂರ್ವ ಹಾಗೂ ಈಶಾನ್ಯ ಭಾಗದ ಕೆಲವು ಪ್ರದೇಶಗಳಲ್ಲಿ ಮುಂಗಾರು ಮಳೆಯು ವಾಡಿಕೆಗಿಂತ ಕಡಿಮೆಯಾಗಬಹುದು ಎಂದು ಹವಾಮಾನ ಇಲಾಖೆಯ ಮಹಾನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಮಧ್ಯಪ್ರದೇಶ, ರಾಜಸ್ಥಾನ, ಮಹಾರಾಷ್ಟ್ರ, ಒಡಿಶಾ, ಛತ್ತೀಸಗಢ, ಉತ್ತರಪ್ರದೇಶ ಮತ್ತು ಪಶ್ಚಿಮ ಬಂಗಾಳದ ಹಲವು ಭಾಗಗಳಲ್ಲಿ ಮುಂಗಾರು ಮಳೆ ಹೇಗಿರಲಿದೆ ಎಂಬ ವಿಚಾರವಾಗಿ 'ಸ್ಪಷ್ಟ ಸೂಚನೆ' ಇಲ್ಲ.

ಸದ್ಯ ಎಲ್ ನಿನೊ ಪರಿಸ್ಥಿತಿ ಇದೆ. ಮುಂಗಾರು ಅವಧಿಯ ಮೊದಲಾರ್ಧದಲ್ಲಿ ಎನ್ಸೊ-ತಟಸ್ಥ ಸ್ಥಿತಿ (ಎಲ್ ನಿನೊ ಹಾಗೂ ಲಾ ನಿನಾ ಎರಡೂ ಇಲ್ಲದ ಸ್ಥಿತಿ) ನಿರ್ಮಾಣ ಆಗುವ ನಿರೀಕ್ಷೆ ಇದೆ. ಅದಾದ ನಂತರದಲ್ಲಿ, ಆಗಸ್ಟ್–ಸೆಪ್ಟೆಂಬರ್ ವೇಳೆಗೆ ಲಾ ನಿನಾ ಪರಿಸ್ಥಿತಿ ನಿರ್ಮಾಣ ಆಗಬಹುದು ಎಂದು ಮಹಾಪಾತ್ರ ವಿವರಿಸಿದರು.

ಎಲ್ ನಿನೊ ಪರಿಸ್ಥಿತಿ ಸೃಷ್ಟಿಯಾದಾಗ ಮುಂಗಾರು ಮಾರುತಗಳು ದುರ್ಬಲವಾಗಿರುತ್ತವೆ. ಇದಕ್ಕೆ ವಿರುದ್ಧವಾಗಿ, ಲಾ ನಿನಾ ಪರಿಸ್ಥಿತಿಯು ಮುಂಗಾರು ಮಳೆಯು ವಾಡಿಕೆಗಿಂತ ಹೆಚ್ಚಾಗುವ ರೀತಿಯಲ್ಲಿ ವರ್ತಿಸುತ್ತದೆ ಎಂದು ಹವಾಮಾನ ಇಲಾಖೆಯ ಹಿರಿಯ ವಿಜ್ಞಾನಿ ಡಿ.ಎಸ್. ಪೈ ತಿಳಿಸಿದರು.

ಪೆಸಿಫಿಕ್ ಸಾಗರದ ಮೇಲ್ಮೈ ಉಷ್ಣಾಂಶದಲ್ಲಿ ಆಗುವ ಏರಿಕೆಯು ಮುಂಗಾರು ಮಾರುತಗಳನ್ನು ದುರ್ಬಲಗೊಳಿಸುತ್ತದೆ. ಈ ವಿದ್ಯಮಾನವನ್ನು ಎಲ್‌ನಿನೊ ಎಂದು ಗುರುತಿಸಲಾಗಿದೆ. ಲಾ ನಿನೊ ಪರಿಸ್ಥಿತಿ ಇದ್ದಾಗ ಪೂರ್ವ ಪೆಸಿಫಿಕ್ ಸಾಗರದಲ್ಲಿ ಉಷ್ಣಾಂಶವು ವಾಡಿಕೆಗಿಂತ ಕಡಿಮೆ ಆಗುತ್ತದೆ. ಹಿಂದೂ ಮಹಾಸಾಗರ ಪ್ರದೇಶದಲ್ಲಿ ತಾಪಮಾನ ಹೆಚ್ಚಿರುತ್ತದೆ. ಭಾರತದಲ್ಲಿ ಮುಂಗಾರು ಚೆನ್ನಾಗಿ ಆಗುತ್ತದೆ.



ಹವಾಮಾನ ಇಲಾಖೆಯ ಮಹಾನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ನೀಡಿರುವ ಮಾಹಿತಿ

ವಾಡಿಕೆಗಿಂತ ಹೆಚ್ಚಾದ ನಿದರ್ಶನ

1951ರಿಂದ 2023ರ ನಡುವಣ ಅವಧಿಯಲ್ಲಿ, ಎಲ್ ನಿನೊ ಪರಿಸ್ಥಿತಿಯ ನಂತರ ಲಾ ನಿನಾ ಪರಿಸ್ಥಿತಿ ನಿರ್ಮಾಣ ಆದ ಒಂಬತ್ತು ಸಂದರ್ಭಗಳಲ್ಲಿ ದೇಶದಲ್ಲಿ ಮುಂಗಾರು ಮಳೆಯು ವಾಡಿಕೆಗಿಂತ ಹೆಚ್ಚಾಗಿದೆ ಎಂದು ಮಹಾಪಾತ್ರ ಹೇಳಿದ್ದಾರೆ. ಭಾರತದಲ್ಲಿ ಆಗುವ ವಾರ್ಷಿಕ ಸರಾಸರಿ ಮಳೆಯ ಪ್ರಮಾಣ 87 ಸೆಂ.ಮೀ. ಐವತ್ತು ವರ್ಷಗಳ ಸರಾಸರಿಯನ್ನು ಇದು ಆಧರಿಸಿದೆ.

ಡಿಕೆಶಿ–ಎಚ್‌ಡಿಕೆ: ಆಸ್ತಿ ಜಗಳ ತಾರಕಕ್ಕೆ

ತಾಯಂದಿರಿಗೆ ಕುಮಾರಸ್ವಾಮಿ ಅವಮಾನ ಮಾಡಿದ್ದಾರೆ ಎಂಬ ವಿಷಯ ಭಾರಿ ವಿವಾದಕ್ಕೆ ಕಾರಣವಾಗಿರುವ ಹೊತ್ತಿನಲ್ಲೇ, ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಮಧ್ಯದ ಆಸ್ತಿ ಜಗಳ ತಾರಕಕ್ಕೇರಿದೆ

'ಕಲ್ಲುಬಂಡೆ ಕದ್ದು ಸಾಗಿಸಿದ್ದೇ ಕೆಲಸ'

ಬೆಂಗಳೂರು: 'ಡಿ.ಕೆ. ಶಿವಕುಮಾರ್ ಯಾವ ಕಷ್ಟಪಟ್ಟು ಆಸ್ತಿ ಸಂಪಾದಿಸಿದ್ದಾರೆ? ಕಲ್ಲು ಬಂಡೆ ಕದ್ದು ವಿದೇಶಕ್ಕೆ ಸಾಗಿಸಿರುವುದೇ ಅವರ ಕೆಲಸ. ಆ ವ್ಯಕ್ತಿಯ ಬಗ್ಗೆ ಹೇಳಲು ಕಂತೆ ಕಂತೆ ಇವೆ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

'ಎಚ್.ಡಿ. ದೇವೇಗೌಡರ ಕುಟುಂಬದ ಬಳಿ 1,000 ಎಕರೆ ಆಸ್ತಿ ಇದೆ' ಎಂಬ ಶಿವಕುಮಾರ್ ಹೇಳಿಕೆ ಕುರಿತು ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಅವರು, 'ಬಿಡದಿ ಬಳಿ ನಾನು 45ರಿಂದ 48 ಎಕರೆ ಜಮೀನು ಹೊಂದಿದ್ದೇನೆ. ಸಿನಿಮಾ ವಿತರಕನಾಗಿದ್ದಾಗ ಗಳಿಸಿದ ಹಣದಿಂದ ಅದನ್ನು ಖರೀದಿ ಮಾಡಿದ್ದು' ಎಂದರು.

'ನಾನು ತೋಟದಲ್ಲಿ ರೆಸಾರ್ಟ್ ಮಾಡಿಲ್ಲ. ಬಂದು ನೋಡಪ್ಪ. ಕಲ್ಲಂಗಡಿ, ಬಾಳೆ, ಕೊಬ್ಬರಿ ಬೆಳೆದಿದ್ದೇನೆ. ಎಲ್ಲಾ ವಿಡಿಯೊ ಮಾಡಿಸಿ ಇಟ್ಟಿದ್ದೇನೆ. 20 ಟನ್ ಕೊಬ್ಬರಿ ದಾಸ್ತಾನು ಇದೆ. 50 ಟನ್ ಕಲ್ಲಂಗಡಿ ಬೆಳೆದಿದ್ದೆ' ಎಂದು ಹೇಳಿದರು.

13ನೇ ಪುಟ ನೋಡಿ

'ಬಾರಯ್ಯ, ಚರ್ಚೆಗೆ ಸಿದ್ಧ'

ಬೆಳಗಾವಿ: 'ನಾನು ಸಾವಿರಾರು ಕೋಟಿ ಆಸ್ತಿವಂತನೋ, ಭಿಕ್ಷುಕನೋ, ಕಲ್ಲು ಲೂಟಿ ಮಾಡಿದ್ದೇನೋ? ದಾಖಲೆ ಸಮೇತ ವಿಧಾನಸೌಧದಲ್ಲಿ ಬಾರಯ್ಯ; ನಾನು ಚರ್ಚೆಗೆ ಸಿದ್ಧ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸವಾಲು ಹಾಕಿದರು.

'ಕುಮಾರಸ್ವಾಮಿ ನಾನು ಗಳಸ್ಯ– ಕಂಠಸ್ಯ. ಅದಕ್ಕೆ ನನ್ನ ಬಗ್ಗೆ ಪದೇಪದೇ ಆರೋಪಿಸುತ್ತಾರೆ' ಎಂದೂ ಹೇಳಿದರು.

'ನಾನು ಯಾವುದೋ ಹೆಣ್ಣುಮಗಳ ಕೆನ್ನೆ ಸವರಿ ಆಸ್ತಿ ಬರೆಸಿಕೊಂಡಿದ್ದೇನೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ. ಕೆನ್ನೆ ಸವರುವುದು, ರೇಟ್ ಫಿಕ್ಸ್ ಮಾಡುವುದರಲ್ಲಿ ಕುಮಾರಸ್ವಾಮಿಗೆ ಸಾಕಷ್ಟು ಅನುಭವ ಇದೆ' ಎಂದರು.

'ಹೆಣ್ಣುಮಕ್ಕಳು ಇಂಥವರಿಗೆ ಹೆದರಬಾರದು. ಆತ್ಮಸ್ಥೈರ್ಯ ಕೊಡಲು ನಾವು ಇದ್ದೇವೆ. ನೀವು ಚುನಾವಣೆಯಲ್ಲೇ ಪಾಠ ಕಲಿಸಿ' ಎಂದು ಶಿವಕುಮಾರ್ ಕರೆ ನೀಡಿದರು.



13ನೇ ಪುಟ ನೋಡಿ

ಗ್ಲೂಕೋಸ್ ಲೆವೆಲ್ ಜಾಸ್ತಿ ಇದ್ದ ಕಾರಣ ನಾನು ನಡೆಯಲು ಕೂಡ ಆಧಾರಕ್ಕೆ ಕೋಲು ಬಳಸಬೇಕಿತ್ತು, ಅಮೃತ್‌ನೋನಿ ಡಿ–ಪ್ಲಸ್ ತೆಗೆದುಕೊಂಡ ನಂತರ ನನ್ನ ಗ್ಲೂಕೋಸ್ ಲೆವೆಲ್ ನಾರ್ಮಲ್ ಆಗಿದೆ. ಈಗ ಯಾರ ಸಹಾಯವಿಲ್ಲದೆ ನಾನೇ ನಡೆಯುತ್ತೇನೆ .

AMRITH NONI

ವಿಲಾಸ ಶಂಕರ ದೇಶಪಾಂಡೆ,
ವಯಸ್ಸು - 75,
ನಿವೃತ್ತ ಬ್ರಾಂಚ್ ಮ್ಯಾನೇಜರ್, ಪುಣೆ



ಮೊದಲು ನನ್ನ ಗ್ಲೂಕೋಸ್ ಲೆವೆಲ್ ೩೦೦ರಷ್ಟು ಇದ್ದ ಕಾರಣ, ನಾನು ದೌರ್ಬಲ್ಯತೆಯನ್ನು ಅನುಭವಿಸಲು ಪ್ರಾರಂಭಿಸಿದೆ. ತಲೆಸುತ್ತು ಬಂದಂತೆ ಆಗುತ್ತಿತ್ತು ಮತ್ತು ನನಗೆ ತುಂಬಾ ಬಾಯಾರಿಕೆ ಆಗುತಿತ್ತು. ಕಾಲುಗಳಲ್ಲಿ ಜುಮ್ಮೆನಿಸುವಿಕೆ ಮತ್ತು ಬೆನ್ನಿನಲ್ಲಿ ನೋವು ಇತ್ತು. ನನಗೆ ನಡೆಯುವಾಗ ತಲೆಸುತ್ತು ಬರುತಿತ್ತು. ನಂತರ ಕೋಲಿನ ಸಹಾಯದಿಂದ ನಡೆಯತೊಡಗಿದೆ. ಮಲಗಿದರೆ ನಿದ್ರಾಹೀನತೆ ಸಮಸ್ಯೆ, ಕೊನೆಗೆ ಅಮೃತ್‌ನೋನಿ ಡಿ-ಪ್ಲಸ್ ತೆಗೆದುಕೊಂಡ ನಂತರ ಗ್ಲೂಕೋಸ್ ಲೆವೆಲ್ ಈಗ ನಾರ್ಮಲ್ ಆಗಿದೆ. ಬೆನ್ನು ನೋವು ಕಡಿಮೆಯಾಗಿದೆ, ತಲೆಸುತ್ತು ಕೂಡ ಕಡಿಮೆಯಾಗಿದೆ. ಈಗ ನಾನು ಯಾರ ಮೇಲು ಅವಲಂಬಿಸುವ ಅಗತ್ಯವಿಲ್ಲ.

ಮಧುಮೇಹಿಗಳ ಮೇಲೆ ನಡೆಸಿದ ಕ್ಲಿನಿಕಲ್ ಟ್ರಯಲ್‌ನಲ್ಲಿ ಅಮೃತ್‌ನೋನಿ ಡಿ-ಪ್ಲಸ್ ಬಳಕೆಯಿಂದ ಉತ್ತಮ ಫಲಿತಾಂಶ ಸಿಗುವುದಾಗಿ ಸಾಬೀತಾಗಿದೆ.

ಅಮೃತ್‌ನೋನಿ ಡಿ-ಪ್ಲಸ್

Scan here to know How to use

For Doctor Consultation:
+91 99866 00304

ಎಲ್ಲಾ ಆಯುರ್ವೇದಿಕ್ ಹಾಗೂ ಮೆಡಿಕಲ್ ಸ್ಟೋರ್‌ಗಳಲ್ಲಿ ಲಭ್ಯ!

www.amrithnoni.com

‘ವಾಹನ ಹಿಂದಿಕ್ಕಿದ್ದ ಯುವಕರು: ವ್ಹೀಲಿಯಿಂದ ಅವಘಡ’

ಬೆಂಗಳೂರು: ‘ಬೈಕ್ ಚಲಾಯಿಸಿಕೊಂಡು ಎಸ್ಎಂಬಿ ಲೇಔಟ್ ರಸ್ತೆಯಲ್ಲಿ ಭಾನುವಾರ ರಾತ್ರಿ ಹೊರಟಿದ್ದೆ. ನನ್ನ ಬೈಕ್ ಹಿಂದಿಕ್ಕಿದ್ದ ಯುವಕರು, ಅತೀ ವೇಗವಾಗಿ ದ್ವಿಚಕ್ರ ವಾಹನ ಚಲಾಯಿಸಿಕೊಂಡು ಮುಂದಕ್ಕೆ ಹೋಗಿದ್ದರು. ನಂತರ, ರಸ್ತೆಯಲ್ಲಿ ವ್ಹೀಲಿ ಮಾಡಿದ್ದರು’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

‘ವ್ಹೀಲಿ ಮಾಡುತ್ತಲೇ ಯುವಕರು ಅತೀ ವೇಗದಲ್ಲಿ ಮುಂದಕ್ಕೆ ಹೋಗಿದ್ದರು. ಗುಂಡಿ ಹಾಗೂ ಅದರ ಬಳಿಯ ಬ್ಯಾರಿಕೇಡ್ ಗಮನಿಸಿರಲಿಲ್ಲ. ಹೀಗಾಗಿ, ದ್ವಿಚಕ್ರ ವಾಹನ ಗುಂಡಿಯಲ್ಲಿ ಬಿದ್ದಿತ್ತು. ನಾನು ಹಾಗೂ ಸ್ಥಳೀಯರು, ಯುವಕರನ್ನು ಗುಂಡಿಯಿಂದ ಮೇಲಕ್ಕೆ ಕರೆತಂದು ಆಸ್ಪತ್ರೆಗೆ ಕಳುಹಿಸಿದೆವು. ಒಬ್ಬ ಯುವಕ, ಗುಂಡಿಯಲ್ಲೇ ತೀರಿಕೊಂಡಿದ್ದ’ ಎಂದು ಹೇಳಿದರು.

ಕೊಮ್ಮಘಟ್ಟ ಬಳಿ ಅವಘಡ • ಬೈಕ್‌ನಲ್ಲಿ ಹೊರಟಿದ್ದ ಮೂವರು ಸ್ನೇಹಿತರು

ಗುಂಡಿಯಲ್ಲಿ ಬಿದ್ದು ಯುವಕ ಸಾವು

ಪ್ರಜಾವಾಣಿ ವಾರ್ತೆ

ಸದ್ದಾಂ ಪಾಷಾ

ಬೆಂಗಳೂರು: ಕುಡಿಯುವ ನೀರಿನ ಪೈಪ್ ಅಳವಡಿಸಲು ತೋಡಲಾಗಿದ್ದ ಗುಂಡಿಯಲ್ಲಿ ಬಿದ್ದು ಸದ್ದಾಂ ಪಾಷಾ (20) ಎಂಬುವವರು ಮೃತಪಟ್ಟಿದ್ದು, ಸ್ನೇಹಿತರಾದ ಉಮ್ರಜ್ ಪಾಷಾ (25) ಹಾಗೂ ಮುಬಾರಕ್ ಪಾಷಾ (17) ತೀವ್ರ ಗಾಯಗೊಂಡಿದ್ದಾರೆ.

‘ಕೊಮ್ಮಘಟ್ಟ ಬಳಿಯ ಎಸ್ಎಂಬಿ ಲೇಔಟ್ 100 ಅಡಿ ರಸ್ತೆಯಲ್ಲಿ ಜಲಮಂಡಳಿ ವತಿಯಿಂದ ತೋಡಲಾಗಿದ್ದ ಗುಂಡಿಯಲ್ಲಿ ಈ ಅವಘಡ ಸಂಭವಿಸಿದೆ. ಸದ್ದಾಂ ಪಾಷಾ ಅವರು ಗುಂಡಿಯೊಳಗೆ ಬಿದ್ದು ಅಲ್ಲಿಯೇ ಮೃತಪಟ್ಟಿದ್ದಾರೆ. ಉಮ್ರಜ್ ಹಾಗೂ ಮುಬಾರಕ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದಾರೆ’ ಎಂದು ಕೆಂಗೇರಿ ಸಂಚಾರ ಠಾಣೆ ಪೊಲೀಸರು ಹೇಳಿದರು.

‘ಜಲಮಂಡಳಿ ಅಧಿಕಾರಿಗಳ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿರುವುದಾಗಿ ಕುಟುಂಬಸ್ಥರು ದೂರು ನೀಡಿದ್ದಾರೆ. ಜಲಮಂಡಳಿ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ಎಫ್ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿದರು.

ಗುಜರಿ ಮಳಿಗೆಯಲ್ಲಿ ಕೆಲಸ: ‘ಜೀವನ್‌ಭಿಮಾನಗರದ ಸದ್ದಾಂ, ಉಮ್ರಜ್ ಹಾಗೂ ಮುಬಾರಕ್ ಅವರು ಕೊಮ್ಮಘಟ್ಟದಲ್ಲಿರುವ ಗುಜರಿ ಮಳಿಗೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಭಾನುವಾರವೂ ಕೆಲಸಕ್ಕೆ ಹೋಗಿದ್ದರು’ ಎಂದು ಪೊಲೀಸರು ಹೇಳಿದರು.

‘ರಾತ್ರಿ 8.30ರ ಸುಮಾರಿಗೆ ಕೆಲಸ ಮುಗಿಸಿಕೊಂಡು ಮೂವರು ಒಂದೇ ದ್ವಿಚಕ್ರ ವಾಹನದಲ್ಲಿ ಮನೆಯತ್ತ ಹೊರಟಿದ್ದಾಗಲೇ ಈ ಅವಘಡ ಸಂಭವಿಸಿದೆ’ ಎಂದು ತಿಳಿಸಿದರು.

ಅತೀ ವೇಗದ ಚಾಲನೆ: ‘ಕೊಮ್ಮಘಟ್ಟ ಎಸ್ಎಂಬಿ ಲೇಔಟ್ ರಸ್ತೆಯಲ್ಲಿ ಕುಡಿಯುವ ನೀರು ಪೂರೈಕೆ ಪೈಪ್ ಅಳವಡಿಸುವ ಕಾಮಗಾರಿ ನಡೆಯುತ್ತಿದೆ. ಇದಕ್ಕಾಗಿ ಗುಂಡಿಯನ್ನು ತೋಡಲಾಗಿದೆ. ಗುಂಡಿ ಬಳಿ ವಾಹನಗಳು ಸಂಚರಿಸದಂತೆ ಸುತ್ತಮುತ್ತ ಬ್ಯಾರಿಕೇಡ್‌ಗಳನ್ನು ನಿಲ್ಲಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಬ್ಯಾರಿಕೇಡ್‌ಗಳ ನಡುವೆ ಬೈಕ್‌ಗಳು ಹೋಗುವಷ್ಟು ಜಾಗವಿತ್ತು. ಹೀಗಾಗಿ, ಹಲವರು ಅದೇ ಜಾಗದಲ್ಲಿ ಬೈಕ್‌ನಲ್ಲಿ ಸಂಚರಿಸುತ್ತಿದ್ದರು. ಬಸವಣ್ಣ ದೇವಸ್ಥಾನ ಕಡೆಯಿಂದ ಕೊಮ್ಮಘಟ್ಟ ಕ್ಲಬ್ ವೃತ್ತದ ಕಡೆಗೆ ಎಸ್ಎಂಬಿ ಲೇಔಟ್ 100 ಅಡಿ ರಸ್ತೆಯಲ್ಲಿ ಹೊರಟಿದ್ದ ಸದ್ದಾಂ ಪಾಷಾ ಹಾಗೂ ಸ್ನೇಹಿತರು, ಅತೀ ವೇಗದಲ್ಲಿ ದ್ವಿಚಕ್ರ ವಾಹನ ಚಲಾಯಿಸಿದ್ದರು. ಚಿಕ್ಕ ಜಾಗದಲ್ಲಿ ಹೋಗುವಾಗ ದ್ವಿಚಕ್ರ ವಾಹನ ನಿಯಂತ್ರಣ ತಪ್ಪಿ ಬ್ಯಾರಿಕೇಡ್‌ಗೆ ಡಿಕ್ಕಿ ಹೊಡೆದಿತ್ತು. ನಂತರ, ಮೂವರು ವಾಹನ ಸಮೇತ ಗುಂಡಿಯೊಳಗೆ ಬಿದ್ದಿದ್ದರು’ ಎಂದು ತಿಳಿಸಿದರು.

‘ಅಪಘಾತದಿಂದ ಜೋರಾದ ಶಬ್ದ ಬಂದಿತ್ತು. ಸ್ಥಳೀಯರು ರಕ್ಷಣೆಗೆ ಹೋಗುವಷ್ಟರಲ್ಲೇ ಸದ್ದಾಂ ಸ್ಥಳದಲ್ಲೇ ಮೃತಪಟ್ಟಿದ್ದರು’ ಎಂದು ಹೇಳಿದರು.

ಕಾಮಗಾರಿ ಸ್ಥಳದಲ್ಲಿ ನಿಗಾವಹಿಸಲು ಸೂಚನೆ

ಕೊಮ್ಮಘಟ್ಟ ವೃತ್ತದ ಬಳಿ ನಡೆಯುತ್ತಿರುವ ‘ವಾಲ್ ಚೇಂಬರ್’ ಕಾಮಗಾರಿ ಸ್ಥಳಕ್ಕೆ ಜಲಮಂಡಳಿ ಅಧ್ಯಕ್ಷ ಡಾ. ವಿ.ರಾಮ್‌ಪ್ರಸಾತ್ ಮನೋಹರ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು

ಬೆಂಗಳೂರು: ಜಲಮಂಡಳಿಯ ಕಾಮಗಾರಿ ಸ್ಥಳಗಳಲ್ಲಿ ಅಹಿತಕರ ಘಟನೆ ನಡೆಯದಂತೆ ನಿಗಾ ವಹಿಸಬೇಕು ಎಂದು ಜಲಮಂಡಳಿ ಅಧ್ಯಕ್ಷ ಡಾ. ವಿ.ರಾಮ್‌ಪ್ರಸಾತ್ ಮನೋಹರ್ ಅಧಿಕಾರಿಗಳಿಗೆ ಸೂಚಿಸಿದರು.

ಕೊಮ್ಮಘಟ್ಟ ವೃತ್ತದ ಬಳಿ ‘ವಾಲ್ ಚೇಂಬರ್’ ಅಳವಡಿಸಲು ಅಗೆದಿದ್ದ ಗುಂಡಿಗೆ ಬಿದ್ದು ಯುವಕ ಮೃತಪಟ್ಟ ಸ್ಥಳಕ್ಕೆ ಭೇಟಿ ನೀಡಿದ್ದ ಅಧ್ಯಕ್ಷರು ಪರಿಶೀಲಿಸಿದರು. ‘ಈ ಘಟನೆ ನಡೆದಿರುವುದು ಬಹಳ ದುರದೃಷ್ಟಕರ ಸಂಗತಿ. ಕಾಮಗಾರಿ ನಡೆಸುವ ಸಂದರ್ಭದಲ್ಲಿ ಎಲ್ಲ ಮುಂಜಾಗ್ರತಾ ಕ್ರಮಗಳನ್ನು ಅಳವಡಿಸಿಕೊಳ್ಳಲಾಗಿತ್ತು. ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಕೆಯಾಗಿದ್ದು, ತನಿಖೆ ನಡೆಯುತ್ತಿದೆ. ಅಂತಿಮ ವರದಿಯಲ್ಲಿ ಲೋಪದೋಷ ಕಂಡಬಂದಲ್ಲಿ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಲು ಜಲಮಂಡಳಿ ಸಿದ್ಧವಿದೆ’ ಎಂದರು.

ಆಕ್ಸಿಸ್ ಬ್ಯಾಂಕ್

ಹರಾಜಿಗೆ ಸಾರ್ವಜನಿಕ ಸೂಚನೆ
ಸಾರ್ವಜನಿಕ ಸೂಚನೆ – ಅಡಮಾನ ಚಿನ್ನಾಭರಣಗಳ ಇ–ಹರಾಜು ನೋಟಿಸ್

ಈ ಮೂಲಕ ಸಾಲಗಾರರರಿಗೆ ಹಾಗೂ ನಿರ್ದಿಷ್ಟವಾಗಿ ಸಾರ್ವಜನಿಕರಿಗೆ ತಿಳಿಸುವುದೇನೆಂದರೇ ಈ ಕೆಳಗಿನ ಖಾತೆಗಳಲ್ಲಿ ಒತ್ತೆಯಿಡಲಾದ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಕೆಳಗೆ ಸೂಚಿಸಿದ ಶಾಖೆಯಲ್ಲಿ ನಡೆಸಲು ಆಕ್ಸಿಸ್ ಬ್ಯಾಂಕ್ ಉದ್ದೇಶಿಸಲಾಗಿದೆ.

ಈ ಕೆಳಗೆ ತಿಳಿಸಲಾದ ಸಾಲಗಾರರು ಭದ್ರತೆಗಾಗಿ ಬ್ಯಾಂಕ್ ಪರವಾಗಿ ಚಿನ್ನದ ಆಭರಣಗಳ ("ಚಿನ್ನದ ಸಾಲ ಸೌಲಭ್ಯ") ಭರವಸೆಯ ವಿರುದ್ಧ **ಆಕ್ಸಿಸ್ ಬ್ಯಾಂಕ್ ಲಿಮಿಟೆಡ್‌**ನಿಂದ ಕ್ರೆಡಿಟ್ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಸಾಲಗಾರರು/ಜಾಮೀನುದಾರರಿಗೆ ಡಿಮ್ಯಾಂಡ್ ನೋಟಿಸ್‌ಗಳನ್ನು ನೀಡಲಾಗಿದ್ದು, ಪಡೆದ ಚಿನ್ನದ ಸಾಲ ಸೌಲಭ್ಯಕ್ಕೆ ತಮ್ಮ ಬಾಕಿ ಮೊತ್ತವನ್ನು ಪಾವತಿಸಲು ಸಾಲಗಾರರು/ಜಾಮೀನುದಾರರಿಗೆ ಈ ಮೂಲಕ ತಿಳಿಸಲಾಗಿದೆ. ಸಾಲಗಾರರು/ಜಾಮೀನುದಾರರು ಬಾಕಿ ಇರುವ ಸಾಲದ ಮೊತ್ತವನ್ನು ಮರುಪಾವತಿಸಲು ವಿಫಲವಾಗಿರುವುದರಿಂದ, ಬ್ಯಾಂಕ್ ಈ ಮೂಲಕ ನಿರ್ಬಂಧಿಸಲಾದ ಆಸ್ತಿಯ ವೇಳಾಪಟ್ಟಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಗಿರವಿ ಇಟ್ಟಿರುವ ಚಿನ್ನದ ಆಭರಣಗಳ ಇ–ಹರಾಜು ಮಾರಾಟವನ್ನು **"ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ" "ಯಾವುದೇ ಆಧಾರ ಇಲ್ಲದೆ" ದಿನಾಂಕ : 26.04.2024 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30 ವರೆಗೆ** ಹರಾಜು ನಡೆಸಲು ಪ್ರಸ್ತಾಪಿಸಲಾಗಿದೆ.

ಸಾಲಗಾರರು ಮತ್ತು ಬಾಕಿ ಮೊತ್ತಗಳ ವಿವರಗಳು

ಶಾಖೆಯ ಹೆಸರು	ಖಾತೆ ಸಂಖ್ಯೆ	ಗ್ರಾಹಕರ ಹೆಸರು	ಬರಬೇಕಾದ ಬಾಕಿ	ಡಿಮ್ಯಾಂಡ್ ನೋಟೀಸ್ ದಿನಾಂಕ	ಒಟ್ಟು ತೂಕ	ನಿವ್ವಳ ತೂಕ
ಬನಶಂಕರಿ, ಬೆಂಗಳೂರು [ಕ]	XXXXXXXXXXX5881	ಗೋವಿಂದರಾಜ್ ಸಿಂಗ್ ಎಂ	190740	28-Feb-24	48.300	48.000
ಬಸವನಗುಡಿ, ಬೆಂಗಳೂರು [ಕ]	XXXXXXXXXXX7531	ಮಂಜುನಾಥ್ ಕೆ ಟಿ	27485	30-Sep-23	6.740	6.590
ಬಸವೇಶ್ವರ ನಗರ, ಬೆಂಗಳೂರು [ಕ]	XXXXXXXXXXX9199	ರಾಜೇಂದ್ರ ಪ್ರಸಾದ್ ಎಸ್	258153.01	15-Feb-24	74.650	69.650
ಬಸವೇಶ್ವರ ನಗರ, ಬೆಂಗಳೂರು [ಕ]	XXXXXXXXXXX1054	ನೇಗೇಂದ್ರ ಪ್ರಸಾದ್	525094	15-Feb-24	158.130	149.730
ಬಿಟಿಎಂ ಲೇಔಟ್, ಬೆಂಗಳೂರು [ಕ]	XXXXXXXXXXX2997	ಕೆ ಸಿ ಚಂದ್ರಲೀಲಾ	118039	15-Feb-24	39.400	38.000
ಬಂಗಾರಪೇಟೆ [ಕ]	XXXXXXXXXXX8191	ಸತೀಶ್ ಕುಮಾರ್.ಕೆ.	105698.4	15-Feb-24	29.800	29.600
ಚಾಮರಾಜಪೇಟೆ, ಬೆಂಗಳೂರು [ಕ]	XXXXXXXXXXX6440	ರವಿ ಎ	179010	25-Oct-23	43.500	43.500
ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು [ಕ]	XXXXXXXXXXX4436	ಚೈತನ್ಯ ತಮ್ಹಂಕರ್	242025	15-Feb-24	60.300	59.500
ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು [ಕ]	XXXXXXXXXXX3863	ನಾಗರಾಜ ಹೆಚ್ ಎಸ್	72289	15-Feb-24	20.300	19.500
ಹೆಗ್ಗಡೆನಗರ, ಬೆಂಗಳೂರು [ಕ]	XXXXXXXXXXX8368	ರುಮಾನಾ	186285.07	28-Feb-24	59.300	57.300
ಜಯನಗರ, ಬೆಂಗಳೂರು [ಕ]	XXXXXXXXXXX3603	ಸೈಯದ್ ಘೌಸ್ ಸೈಯದ್ ಮಹಮೂದ್	253252	15-Feb-24	71.000	70.000
ಜಯನಗರ, ಬೆಂಗಳೂರು [ಕ]	XXXXXXXXXXX3129	ನರ್ತನ್ ಪೂವಣ್ಣ ಎಂ ಜೆ	58695	25-Aug-23	13.800	13.700
ಕೋಲಾರ [ಕ]	XXXXXXXXXXX0668	ನಾರಾಯಣಸ್ವಾಮಿ ಎಲ್	43878	28-Dec-23	10.600	10.000
ಮಹಾಲಕ್ಷ್ಮೀ ಲೇಔಟ್, ಬೆಂಗಳೂರು [ಕ]	XXXXXXXXXXX1846	ಆಕಾಶ್ ಬಿ ಕೆ	60707	15-Feb-24	18.300	17.600
ಮಾರತಹಳ್ಳಿ, ಬೆಂಗಳೂರು [ಕ]	XXXXXXXXXXX1975	ಬಿ ಸುಧಾಕರ್	171776	9-Nov-23	50.200	44.900
ನಾಗರಭಾವಿ, ಬೆಂಗಳೂರು [ಕ]	XXXXXXXXXXX8931	ರಂಗನಾಥ ಎಂ	221308.33	15-Feb-24	57.800	57.000
ನಾಗರಭಾವಿ, ಬೆಂಗಳೂರು [ಕ]	XXXXXXXXXXX4206	ರಂಗನಾಥ ಎಂ	53479	15-Feb-24	19.700	19.600
ಪೀಣ್ಯ, ಬೆಂಗಳೂರು [ಕ]	XXXXXXXXXXX4562	ಸುನೀಲ್ ಕುಮಾರ್ ಎ ಸಿ	78718	28-Feb-24	19.900	19.900
ಪ್ರಶಾಂತನಗರ ಬೆಂಗಳೂರು [ಕ]	XXXXXXXXXXX8440	ವಿಜಯ ಎಸ್	360352	25-Oct-23	105.300	99.900
ಪ್ರಶಾಂತನಗರ, ಬೆಂಗಳೂರು [ಕ]	XXXXXXXXXXX3599	ಆದರ್ಶ ಶುಭಕರ ರಾವ್	1138053	15-Feb-24	308.500	292.000
ವಿಜಯನಗರ, ಬೆಂಗಳೂರು [ಕ]	XXXXXXXXXXX8507	ಪ್ರಸಾದ್ ಬಿ ಎದ್	213684	15-Feb-24	58.100	54.700
ವೈಟ್‌ಫೀಲ್ಡ್ ಮೇನ್, ಬೆಂಗಳೂರು [ಕ]	XXXXXXXXXXX8025	ರಾಘವೇಂದ್ರ ಎಂ	104409	25-Feb-24	29.800	29.000
ಯಲಹಂಕ, ಬೆಂಗಳೂರು [ಕ]	XXXXXXXXXXX6524	ಫರ್ಹೀನ್ ಫಾತಿಮಾ	164140	15-Feb-24	43.000	42.800

ಆಕ್ಸಿಸ್ ಬ್ಯಾಂಕ್ ಯಾವುದೇ ಪೂರ್ವ ಸೂಚನೆ ಇಲ್ಲದೆ ಖಾತೆಯನ್ನು ತೆಗೆದುಹಾಕುವ/ಹರಾಜು ದಿನಾಂಕವನ್ನು ಮುಂದೂಡುವ ಅಧಿಕಾರವನ್ನು ಹೊಂದಿದೆ.
ಹರಾಜು ಆನ್‌ಲೈನ್ **https://gold.samil.in** ನಲ್ಲಿ **ದಿನಾಂಕ : 26.04.2024 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30 ವರೆಗೆ** ನಡೆಯಲಿದೆ.
ಹೆಚ್ಚಿನ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ವೆಬ್‌ಸೈಟ್ **https://gold.samil.in** ಗೆ ಲಾಗ್ ಇನ್ ಮಾಡಿ (ಆನ್‌ಲೈನ್ ಮಾರಾಟಗಾರರ ವೆಬ್‌ಸೈಟ್)

ಸ್ಥಳ: ಬೆಂಗಳೂರು — ಸಹಿ/– ಅಧಿಕೃತ ಅಧಿಕಾರಿ, ಆಕ್ಸಿಸ್ ಬ್ಯಾಂಕ್ ಲಿಮಿಟೆಡ್

ನೈಋತ್ಯ ರೈಲ್ವೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2024–25/03 ದಿನಾಂಕ : 05–04–2024

ಕೆಲಸದ ಹೆಸರು	ಅಂದಾಜು ಮೌಲ್ಯ
ಕೃಷ್ಣರಾಜನಗರ : ಮೈಸೂರು – ಹಾಸನ ಮಾರ್ಗದಲ್ಲಿ ಹೆಚ್ಚುವರಿ ರನ್ನಿಂಗ್ ಮಾರ್ಗವನ್ನು ಒದಗಿಸುವುದು.	ರೂ. 1,20,36,717.11

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 29–04–2024 ರಂದು 11:00 ಗಂಟೆಯವರೆಗೆ

ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2024–25/04 ದಿನಾಂಕ : 05–04–2024

ಕೆಲಸದ ಹೆಸರು	ಅಂದಾಜು ಮೌಲ್ಯ
ಓಹೆಚ್‌ಇ ಸಪೋರ್ಟ್ ಸ್ಟ್ರಕ್ಚರ್‌ನ ಮೇಲೆ ರೆಟ್ರೋ ರಿಫ್ಲೆಕ್ಟೀವ್ ಸಿಗ್ಮಾ ಬೋರ್ಡ್‌ಗಳನ್ನು ಒದಗಿಸುವುದು.	ರೂ. 12,35,598.55

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 29–04–2024 ರಂದು 11:00 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಟಿಆರ್ ಮೈಸೂರು
ಪಿಯುಬಿ/17/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25
South Western Railway - SWR | SWRRLY | SWRRLY

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

PERSONAL

Change of Name

CHANGE OF NAME
I, **S. SANTOSH,** Residing at # 24/38, 14th Cross, Padma Nivas, Manorayanapalya, Bengaluru-560032 have changed my name to **S. SANTHOSH** vide affidavit dated 15-04-2024, before notary G. Dayananda, Bengaluru. Henceforth I shall be called **S. SANTHOSH** only.

CHANGE OF NAME
I, **KAKOUL SAMHITA SRIDHAR** D/o Sridhar Raghavendra, residing at 19/1, 8th Main, 9th Cross, Malleshwaram, Bangalore-560003, aged 24 years have changed my name and shall be known as **SAMHITA SRIDHAR** for all future purpose vide affidavit dated 15/04/24 sworn before notary S.R.Paramashivaiah, Bangalore

MOHAMMED FAIZAN #4F, Building- 71, CSB Layout, 4th Cross, Kasavanahalli, Bengaluru- 560035, have changed my name to FAIZAN RAKIN MOHAMMED SAJID, vide affidavit dated- 15/04/2024

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

ಕ್ಲಾಸಿಫೈಡ್ಸ್
ADMISSION CORNER

ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಠೇವಣಿದಾರರ ಸಭೆಯಲ್ಲಿ ಗಲಾಟೆ

ಬಿಜೆಪಿ, ಕಾಂಗ್ರೆಸ್ ದೂರು–ಪ್ರತಿದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಇತ್ತೀಚೆಗೆ ನಡೆದಿದ್ದ ಸಹಕಾರ ಬ್ಯಾಂಕ್‌ಗಳ ಠೇವಣಿದಾರರ ಸಭೆಯಲ್ಲಿ ನಡೆದ ಗಲಾಟೆ ಪ್ರಕರಣ ಸಂಬಂಧ ಬಿಜೆಪಿ ಹಾಗೂ ಕಾಂಗ್ರೆಸ್ ಮುಖಂಡರು ಚುನಾವಣಾ ಆಯೋಗಕ್ಕೆ ದೂರು – ಪ್ರತಿದೂರು ಸಲ್ಲಿಸಿದ್ದಾರೆ.

ಅಲ್ಲದೇ ತಪ್ಪಿತಸ್ಥರ ವಿರುದ್ಧ ಕ್ರಮಕ್ಕೂ ಆಗ್ರಹಿಸಿದ್ದಾರೆ. ಘಟನೆ ಸಂಬಂಧ ಮುಖಂಡರ ನಡುವೆ ಪರಸ್ಪರ ಆರೋಪ, ಪ್ರತ್ಯಾರೋಪಗಳು ನಡೆಯುತ್ತಿವೆ.

ಬಿಜೆಪಿ ಮುಖಂಡರ ವಾದ ಏನು?: 'ಏಪ್ರಿಲ್ 13ರಂದು ನಡೆಯುತ್ತಿದ್ದ ಸಭೆಗೆ ಬಂದ ಕಾಂಗ್ರೆಸ್ ಕಾರ್ಯಕರ್ತರು, ಹಿರಿಯ ನಾಗರಿಕರು ಹಾಗೂ ಮಹಿಳೆಯರ ಮೇಲೆ ಹಲ್ಲೆ ನಡೆಸಿದ್ದಾರೆ' ಎಂದು ಬಿಜೆಪಿ ಮುಖಂಡರು ದೂರಿದ್ದಾರೆ.

ಪ್ರಜಾ ಮತ ಜನತಂತ್ರದ ಹಬ್ಬ

ಲೋಕಸಭಾ ಚುನಾವಣೆ - 2024

'ಬೆಂಗಳೂರು ದಕ್ಷಿಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ತೇಜಸ್ವಿ ಸೂರ್ಯ ಅವರಿಗೆ ಬೆಂಬಲ ಸೂಚಿಸಲು ಸಭೆ ಆಯೋಜಿಸಲಾಗಿತ್ತು. ಸಭೆಯಲ್ಲಿ ಸಹಕಾರ ಸಂಘಗಳ ಸದಸ್ಯರು ಪಾಲ್ಗೊಂಡಿದ್ದರು. ಗುರು ರಾಘವೇಂದ್ರ ಬ್ಯಾಂಕ್ ಠೇವಣಿದಾರರ ಹೆಸರಿನಲ್ಲಿ ಆಗಮಿಸಿರುವ ಕಾಂಗ್ರೆಸ್‌ನ ಕೆಲವರು, ಹಿರಿಯ ನಾಗರಿಕರು, ಮಹಿಳೆಯರ ಮೇಲೆ ಹಲ್ಲೆ ನಡೆಸಿದ್ದಾರೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

> **ಸೋಲಿನ ಹತಾಶೆಯಿಂದ ಕಾಂಗ್ರೆಸ್ ಈ ರೀತಿಯ ಕುತಂತ್ರಗಳ ಮೊರೆ ಹೋಗುತ್ತಿದೆ.**
> **ತೇಜಸ್ವಿ ಸೂರ್ಯ**
> ಬಿಜೆಪಿ ಅಭ್ಯರ್ಥಿ

> **ಸಭೆಯಲ್ಲಿ ಪಾಲ್ಗೊಂಡಿದ್ದ ಹಿರಿಯ ನಾಗರಿಕರನ್ನು ಸಂಸದ ಹಾಗೂ ಶಾಸಕ ಹೀನಾಯವಾಗಿ ನಡೆಸಿಕೊಂಡಿದ್ದಾರೆ.**
> **ಶಂಕರ ಗುಹಾ ದ್ವಾರಕಾನಾಥ್**
> ಪ್ರಧಾನ ಕಾರ್ಯದರ್ಶಿ, ಕೆಪಿಸಿಸಿ

'ಕಾಂಗ್ರೆಸ್‌ನ ಲಕ್ಷ್ಮಿ ಮಂಜುಳಾ ಸೇರಿದಂತೆ ಹಲವರು ಸಭೆಗೆ ಬಂದು ಗಲಾಟೆ ನಡೆಸಿರುವುದು ಗಮನಕ್ಕೆ ಬಂದಿದೆ. ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದ ನಾಗರಿಕರನ್ನು ತಳ್ಳಿ ದಾಂದಲೆ ನಡೆಸಲಾಗಿದೆ. ಅವಾಚ್ಯ ಶಬ್ದಗಳಿಂದಲೂ ನಿಂದಿಸಲಾಗಿದೆ. ಸಭೆ ನಡೆಯುತ್ತಿದ್ದ ವೇಳೆ ಕಾಂಗ್ರೆಸ್ ಮುಖಂಡರಿಂದ ವಿಡಿಯೊ ಕಾಲ್ ಮೂಲಕ ನಿರ್ದೇಶನ ಪಡೆದುಕೊಂಡು ವ್ಯವಸ್ಥಿತವಾಗಿ ಗಲಾಟೆ ಮಾಡಲಾಗಿದೆ' ಎಂದು ಬಿಜೆಪಿ ಮುಖಂಡರು ದೂರಿದ್ದಾರೆ.

'ದಾಂದಲೆ ನಡೆಸಿದ್ದವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಬೇಕು. ಚುನಾವಣೆ ಆಯೋಗದ ಅಧಿಕಾರಿಗಳು ಇಡೀ ಕಾರ್ಯಕ್ರಮವನ್ನು ಚಿತ್ರೀಕರಿಸಿದ್ದಾರೆ. ವಿಡಿಯೊ ಗಮನಿಸಿದರೆ ಘಟನೆ ಮಾಹಿತಿ ತಿಳಿಯಲಿದೆ' ಎಂದು ದೂರಿನಲ್ಲಿ ಬಿಜೆಪಿ ತಿಳಿಸಿದೆ.

ಕಾಂಗ್ರೆಸ್‌ನ ದೂರಿನಲ್ಲಿ ಏನಿದೆ?: 'ಅಂದು ಸಂಜೆ 4 ಗಂಟೆಗೆ ಸಭೆ ಆಯೋಜಿಸಲಾಗಿತ್ತು. ತೇಜಸ್ವಿ ಸೂರ್ಯ ಹಾಗೂ ಅವರ ಚಿಕ್ಕಪ್ಪ ಶಾಸಕ ರವಿ ಸುಬ್ರಹ್ಮಣ್ಯ ಅವರು ಸಭೆಯ ಅತಿಥಿಗಳಾಗಿದ್ದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಎಲ್ಲಾ ಸಹಕಾರ ಬ್ಯಾಂಕ್‌ಗಳು ಮತ್ತು ಸೌಹಾರ್ದ ಸಂಘಗಳ ಠೇವಣಿದಾರರನ್ನು ಚರ್ಚೆಗೆ ಆಹ್ವಾನಿಸಿದ್ದರು. ಒಂದೇ ತಿಂಗಳಲ್ಲಿ ಬ್ಯಾಂಕ್ ಪುನರುಜ್ಜೀವನಗೊಳಿಸುವುದಾಗಿ ವಿಧಾನಸಭೆ ಚುನಾವಣೆಯಲ್ಲಿ ನೀಡಿದ್ದ ಭರವಸೆಯನ್ನು ಏಕೆ ಈಡೇರಿಸಿಲ್ಲ ಎಂದು ಠೇವಣಿದಾರರು ಪ್ರಶ್ನಿಸಿದ್ದರು. ಇದರಿಂದ ಸಿಟ್ಟಿಗೆದ್ದ ತೇಜಸ್ವಿ ಸೂರ್ಯ ಹಾಗೂ ಶಾಸಕರೇ ಸಭಿಕರು ಹಾಗೂ ಚುನಾವಣೆ ಏಜೆಂಟ್‌ರನ್ನು ಥಳಿಸಲು ಸೂಚಿಸಿದ್ದರು. ಅಧಿಕಾರಿಗಳು ಮತ್ತು ಶಾಸಕರ ನಡುವೆ ಮಾತಿನ ಚಕಮಕಿ ನಡೆಯಿತು' ಎಂದು ಕಾಂಗ್ರೆಸ್ ದೂರಿನಲ್ಲಿ ತಿಳಿಸಿದೆ.

ಈ ಪ್ರಕರಣ ಉಲ್ಲೇಖಿಸಿ ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ್ ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಶಂಕರ ಗುಹಾ ದ್ವಾರಕಾನಾಥ್ ಅವರು ಆಯೋಗಕ್ಕೆ ದೂರು ಸಲ್ಲಿಸಿದ್ದಾರೆ.

ವಿಶ್ವನಾಥ್ ಪ್ರಚಾರ

ಪ್ರಜಾವಾಣಿ ವಾರ್ತೆ

ಯಲಹಂಕ: ಚಿಕ್ಕಬಳ್ಳಾಪುರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಡಾ.ಕೆ. ಸುಧಾಕರ್ ಪರ, ಬಿಜೆಪಿ–ಜೆಡಿಎಸ್ ಜಂಟಿ ಪ್ರಚಾರಕ್ಕೆ ಶಾಸಕ ಎಸ್.ಆರ್. ವಿಶ್ವನಾಥ್, ಅದ್ದಿಗಾನಹಳ್ಳಿಯ ಪಟಾಲಮ್ಮ ದೇವಸ್ಥಾನದಲ್ಲಿ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದರು.

'ಮೋದಿಯವರನ್ನು ಮತ್ತೊಮ್ಮೆ ಪ್ರಧಾನಿಯಾಗಿ ಮಾಡಲು ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಬಿಜೆಪಿ ಅತ್ಯಧಿಕ ಮತಗಳನ್ನು ಪಡೆಯಲು ಸಂಕಲ್ಪಮಾಡಿ ಪ್ರಚಾರಕಾರ್ಯ ಆರಂಭಿಸಲಾಗಿದೆ' ಎಂದು ವಿಶ್ವನಾಥ್ ತಿಳಿಸಿದರು.

ರಾಜಾನುಕುಂಟೆ, ಅರಕೆರೆ, ಸೊಣ್ಣೇನಹಳ್ಳಿ ಸೇರಿದಂತೆ 10 ಗ್ರಾ.ಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಮತಯಾಚಿಸಿದರು.

ನಗರದ ಮೂರು ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯ ಒಕ್ಕಲಿಗರ ಶೃಂಗಸಭೆ

ಒಕ್ಕಲಿಗರಿಗೆ ಅನ್ಯಾಯ ಮಾಡಿಲ್ಲ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾವು ಒಕ್ಕಲಿಗರಿಗೆ ಎಲ್ಲೂ ಅನ್ಯಾಯ ಮಾಡಿಲ್ಲ. ನಮ್ಮ ಕಾಂಗ್ರೆಸ್ ಪಕ್ಷ ಎಲ್ಲರನ್ನೂ ಒಟ್ಟಿಗೆ ಕರೆದುಕೊಂಡು ಹೋಗುವ ಕೆಲಸವನ್ನು ಮೊದಲಿನಿಂದಲೂ ಮಾಡುತ್ತಿದೆ. ಈಗಲೂ ಮಾಡುತ್ತಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಗ್ರಾಮಾಂತರ ಸೇರಿದಂತೆ ನಗರದ ಮೂರು ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯ ಒಕ್ಕಲಿಗರ ಶೃಂಗಸಭೆಯಲ್ಲಿ ಸೋಮವಾರ ಅವರು ಮಾತನಾಡಿದರು.

'ನಮ್ಮ ಸಚಿವ ಸಂಪುಟದಲ್ಲಿ ಏಳು ಒಕ್ಕಲಿಗ ಸಚಿವರಿದ್ದಾರೆ. 11 ಜನ ಸಚಿವ ಸಂಪುಟದ ದರ್ಜೆ ಹೊಂದಿರುವ ಅಧ್ಯಕ್ಷರಿದ್ದಾರೆ' ಎಂದರು.

ಒಕ್ಕಲಿಗರ ಶೃಂಗಸಭೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಒಕ್ಕಲಿಗ ಮುಖಂಡರು ಅಭಿನಂದಿಸಿದರು

'ಸೌಮ್ಯಾರೆಡ್ಡಿ ಹೊರದೇಶದಲ್ಲಿ ವಿದ್ಯಾಭ್ಯಾಸ ಮಾಡಿ ಅತಿ ಹೆಚ್ಚು ಜ್ಞಾನ ಹೊಂದಿದ್ದಾರೆ. ಶಾಸಕಿಯಾಗಿ ಅವರು ಐದು ವರ್ಷ ಜಯನಗರದಲ್ಲಿ ಮಾಡಿದ ಕೆಲಸ ಎಲ್ಲರಿಗೂ ತಿಳಿದಿದೆ. ಜಿಎಸ್‌ಟಿ, ಮೇಕೆದಾಟು ನೀರು ಸೇರಿದಂತೆ ಹಲವು ವಿಚಾರಗಳ ಬಗ್ಗೆ ಲೋಕಸಭೆಯಲ್ಲಿ ಪ್ರಸ್ತಾಪ ಮಾಡಲು ಅರಿವು ಹೊಂದಿರುವ ಮಹಿಳಾ ಸದಸ್ಯರ ಅಗತ್ಯವಿದೆ. ಅವರು ಈ ಬೆಂಗಳೂರಿನಿಂದ ಆಯ್ಕೆಯಾಗಬೇಕು. ಸೌಮ್ಯಾರೆಡ್ಡಿ ಅವರನ್ನು ನಾವೆಲ್ಲರೂ ಒಟ್ಟಾಗಿ ಬೆಂಬಲಿಸಬೇಕು' ಎಂದರು.

'ಬೆಂಗಳೂರು ಗ್ರಾಮಾಂತರ ಸೇರಿದಂತೆ ನಾಲ್ಕು ಲೋಕಸಭಾ ಕ್ಷೇತ್ರಗಳಲ್ಲಿ ನಮ್ಮ ಸಮುದಾಯದವರು ಕಾಂಗ್ರೆಸ್ ಪಕ್ಷದ ಕೈ ಹಿಡಿಯುವಂತೆ ಎಲ್ಲ ಮತದಾರರಿಗೂ ಮನವಿ ಮಾಡಬೇಕು' ಎಂದು ಶಿವಕುಮಾರ್ ಹೇಳಿದರು.

ಸಭೆಯಲ್ಲಿ ವಕೀಲ ಸಂಘದ 14 ನಿರ್ದೇಶಕರು, ಒಕ್ಕಲಿಗರ ಸಂಘದ ಅಧ್ಯಕ್ಷ, ಸಚಿವರಾದ ರಾಮಲಿಂಗಾರೆಡ್ಡಿ, ಡಿ.ಕೆ. ಶಿವಕುಮಾರ್, ಕೃಷ್ಣಬೈರೇಗೌಡ, ಶಾಸಕ ಪ್ರಿಯಕೃಷ್ಣ ಹಾಜರಿದ್ದರು.

ವಹ್ನಿಕುಲ ಕ್ಷತ್ರಿಯ ಸಮುದಾಯಕ್ಕೆ ರಾಜಕೀಯ ಪ್ರಾತಿನಿಧ್ಯ ನೀಡಲು ಆಗ್ರಹ

ಬೆಂಗಳೂರು: ರಾಜ್ಯದಲ್ಲಿ ಶೇ 8ರಷ್ಟು ಜನಸಂಖ್ಯೆ ಹೊಂದಿರುವ ವಹ್ನಿಕುಲ ಕ್ಷತ್ರಿಯ ಸಮುದಾಯಕ್ಕೆ ರಾಜಕೀಯ ಪ್ರಾತಿನಿಧ್ಯ ನೀಡಬೇಕು ಎಂದು ವಹ್ನಿಕುಲ ಕ್ಷತ್ರಿಯರ ಗುರು ಪೀಠ ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪೀಠದ ಸಹ ಕಾರ್ಯದರ್ಶಿ ವೆಂಕಟೇಶ್, 'ಆದಿಶಕ್ತಿ ಮಹಾಸಂಸ್ಥಾನ ಮಠ ಟ್ರಸ್ಟ್ ವಹ್ನಿಕುಲ ಕ್ಷತ್ರಿಯರ ಗುರುಪೀಠದ ಸಮುದಾಯ ಭವನ ನಿರ್ಮಿಸುವುದಕ್ಕೆ ಮಂಜೂರಾಗಿರುವ ₹1 ಕೋಟಿಗೆ ಹೆಚ್ಚುವರಿಯಾಗಿ ₹50 ಲಕ್ಷ ಅನುದಾನ ಒದಗಿಸಿ ಕೂಡಲೇ ಬಿಡುಗಡೆಗೊಳಿಸಬೇಕು' ಎಂದು ಒತ್ತಾಯಿಸಿದರು.

'ವಹ್ನಿಕುಲ ಕ್ಷತ್ರಿಯರ ಮತ್ತು ಇದರ ಉಪಜಾತಿಗಳು ಶೈಕ್ಷಣಿಕವಾಗಿ ಬಹಳ ಹಿಂದುಳಿದಿವೆ. ಆದ್ದರಿಂದ, ಪ್ರತಿ ಜಿಲ್ಲೆಯಲ್ಲಿ ವಸತಿ ಶಾಲೆ ಮತ್ತು ಕಾಲೇಜುಗಳನ್ನು ನಿರ್ಮಿಸಲು ಕನಿಷ್ಠ ₹100 ಕೋಟಿ ಅನುದಾನದ ಜೊತೆಗೆ 100 ಎಕರೆ ಜಮೀನು ಒದಗಿಸಬೇಕು. ವಹ್ನಿಕುಲ ಕ್ಷತ್ರಿಯ ಸಮುದಾಯಕ್ಕೆ ಒಳಮೀಸಲಾತಿ ಕಲ್ಪಿಸಿ, ಎಲ್ಲ ಸರ್ಕಾರಿ ಸೌಲಭ್ಯಗಳನ್ನು ಹಂಚಿಕೆ ಮಾಡಬೇಕು' ಎಂದರು.

'ನೀಲಸಂದ್ರ ಮತ್ತು ಹೊಂಗಸಂದ್ರ ಗ್ರಾಮದಲ್ಲಿರುವ ಧರ್ಮರಾಯಸ್ವಾಮಿ ದೇವಸ್ಥಾನದ ಹೆಸರಿನಲ್ಲಿರುವ ಕಂದಾಯ ಜಮೀನನ್ನು ಕೂಡಲೇ ದೇವಸ್ಥಾನಕ್ಕೆ ಹಸ್ತಾಂತರಿಸಬೇಕು. ಬೆಂಗಳೂರು ನಗರದ ವಾರ್ಡ್ ಸಂಖ್ಯೆ 119ರ ಪೈಲ್ವಾನ್ ಎಂ. ಕೃಷ್ಣಪ್ಪ ರಸ್ತೆಯಲ್ಲಿರುವ ಕರಗ ಭವನ ನಿರ್ಮಿಸುವುದಕ್ಕೆ ಬಿಬಿಎಂಪಿಯಿಂದ ಮಂಜೂರಾಗಿರುವ 3,500 ಚದರಡಿ ವಿಸ್ತೀರ್ಣದ ನಿವೇಶವನ್ನು ಕೂಡಲೇ ಹಸ್ತಾಂತರಿಸಬೇಕು' ಎಂದು ಆಗ್ರಹಿಸಿದರು.

ಆಶಾಕಾರ್ಯಕರ್ತೆಯರಿಗೆ ಸಂಭಾವನೆ ನೀಡಲು ಆಗ್ರಹ

ಬೆಂಗಳೂರು: ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮತಗಟ್ಟೆಗಳಲ್ಲಿ ಕಾರ್ಯನಿರ್ವಹಿಸಿದ್ದ ಆಶಾ ಕಾರ್ಯಕರ್ತೆಯರಿಗೆ ಬಾಕಿ ಗೌರವಧನ ನೀಡಬೇಕು ಹಾಗೂ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಕಾರ್ಯನಿರ್ವಹಿಸುವವರಿಗೆ ಗೌರವಧನ ನಿಗದಿ ಮಾಡಬೇಕು ಎಂದು ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ಆಗ್ರಹಿಸಿದೆ.

ಆಶಾ ಕಾರ್ಯಕರ್ತೆಯರು ಪ್ರೋತ್ಸಾಹಧನ ಮಾದರಿಯ ವೇತನದಲ್ಲಿ ಕೆಲಸ ಮಾಡುವವರು. ಚುನಾವಣೆ ಸಂದರ್ಭದಲ್ಲಿ ಮತಗಟ್ಟೆಗೆ ಬರುವ ಮತದಾರರಿಗೆ ಬಿಸಿಲಿನಿಂದ ತೊಂದರೆಯಾದರೆ ಅವರಿಗೆ ಒಆರ್‌ಎಸ್ ನೀಡುವುದು, ಆರೋಗ್ಯ ಸಮಸ್ಯೆ ಉಂಟಾದರೆ ಸಹಾಯ ಮಾಡುತ್ತಾರೆ.. ಮತದಾನ ಪೂರ್ವದಲ್ಲಿ ಜಾಗೃತಿ ಮೂಡಿಸುವ ಕಾರ್ಯದಲ್ಲೂ ತೊಡಗಿಸಿಕೊಂಡಿರುತ್ತಾರೆ.

2020ರಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಕೆಲಸ ಮಾಡಿದ ಆಶಾಕಾರ್ಯಕರ್ತೆಯರಿಗೆ ರಾಜ್ಯ ಚುನಾವಣಾ ಆಯೋಗದ ಆದೇಶದಂತೆ ₹ 700 ಗೌರವಧನ ನೀಡಲಾಗಿತ್ತು. ಈ ಆದೇಶ 2023ರ ವಿಧಾನಸಭೆಯಲ್ಲಿ ಅನ್ವಯವಾಗಿಲ್ಲ. ಈ ಬಗ್ಗೆ ಆಯೋಗಕ್ಕೆ ಮನವಿ ಸಲ್ಲಿಸಿದರೂ ಇಲ್ಲಿವರೆಗೆ ಕ್ರಮ ಕೈಗೊಂಡಿಲ್ಲ ಎಂದು ಸಂಘ ಬೇಸರ ವ್ಯಕ್ತಪಡಿಸಿದೆ.

ಈ ಲೋಕಸಭಾ ಚುನಾವಣೆಯಲ್ಲಿಯೂ ಕಾರ್ಯ ನಿರ್ವಹಿಸಲು ಆಶಾ ಕಾರ್ಯಕರ್ತೆಯರನ್ನು ನಿಯೋಜಿಸಲಾಗಿದೆ. ರಾಜ್ಯದಲ್ಲಿ 15,000ಕ್ಕೂ ಹೆಚ್ಚು ಕಾರ್ಯಕರ್ತೆಯರು ಕೆಲಸ ಮಾಡಲಿದ್ದಾರೆ. ಅವರಿಗೆ ಊಟ, ತಿಂಡಿ, ಟಿಎ, ಡಿಎ ಜೊತೆಗೆ ಸಂಭಾವನೆ ನೀಡಲು ಆದೇಶಿಸಬೇಕು. ಸರ್ಕಾರಿ, ಅರೆ ಸರ್ಕಾರಿ ನೌಕರರನ್ನು ನಿಯೋಜಿಸಿದರೆ ಸಂಭಾವನೆ ನೀಡುವಂತೆ ಆಶಾ ಕಾರ್ಯಕರ್ತೆಯರಿಗೂ ನೀಡಬೇಕು ಎಂದು ಎಐಯುಟಿಯುಸಿ ಸಂಯೋಜಿತ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಅಧ್ಯಕ್ಷ ಕೆ. ಸೋಮಶೇಖರ್ ಯಾದಗಿರಿ, ಕಾರ್ಯದರ್ಶಿ ಡಿ. ನಾಗಲಕ್ಷ್ಮಿ ಒತ್ತಾಯಿಸಿದ್ದಾರೆ.

'ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮಿದ ಭಾರತ'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಪ್ರಧಾನಿ ನರೇಂದ್ರ ಮೋದಿ ಅವರ ಪಾರದರ್ಶಕ ಆಡಳಿತದಿಂದ ವಿಶ್ವದಲ್ಲೇ ಭಾರತ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮಿದೆ' ಎಂದು ಉತ್ತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶೋಭಾ ಕರಂದ್ಲಾಜೆ ಹೇಳಿದರು.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಲಕ್ಕೀಪುರ, ಕಾನ್ಷಿರಾಮ್ ನಗರ, ಸೋಮಶೆಟ್ಟಿಹಳ್ಳಿ, ಕೆರೆಗುಡ್ಡದಹಳ್ಳಿ, ಚಿಕ್ಕಬಾಣಾವರದ ಸಂತೆಬೀದಿ, ಮಾರುತಿನಗರ, ಗಣಪತಿನಗರದ ಬಡಾವಣೆಗಳಲ್ಲಿ ರೋಡ್ ಶೋ ನಡೆಸಿದ ಬಳಿಕ ಅವರು ಮಾತನಾಡಿದರು.

'ಮೋದಿ ಅವರ ಯೋಜನೆಗಳು ದೇಶದ ಜನರಿಗೆ ತಲುಪಿವೆ. ಈ ಬಾರಿ 400ಕ್ಕೂ ಹೆಚ್ಚು ಲೋಕಸಭಾ ಕ್ಷೇತ್ರದಲ್ಲಿ ಎನ್‌ಡಿಎ ಮೈತ್ರಿ ಕೂಟ ಗೆಲ್ಲುವ ಮೂಲಕ ಮೂರನೇ ಬಾರಿಗೆ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಚುಕ್ಕಾಣಿ ಹಿಡಿಯುವುದು ಖಚಿತ' ಎಂದರು.

ಚಿಕ್ಕಬಾಣಾವರದ ಗಣಪತಿನಗರ ಬಡಾವಣೆಗಳಲ್ಲಿ ಶಾಸಕ ಎಸ್. ಮುನಿರಾಜು ಮತ್ತು ಉತ್ತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶೋಭಾ ಕರಂದ್ಲಾಜೆ ರೋಡ್ ಶೋ ನಡೆಸಿ ಮತಯಾಚಿಸಿದರು

'ಪ್ರಧಾನಿ ನರೇಂದ್ರ ಮೋದಿ ನೇತೃತ್ವ ಮತ್ತು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಮಾರ್ಗದರ್ಶನದಲ್ಲಿ ಉತ್ತರ ಲೋಕಸಭಾ ಕ್ಷೇತ್ರದಲ್ಲಿ ಮೈತ್ರಿಪಕ್ಷಗಳು ಸದೃಢವಾಗಿದ್ದು, ಬಹಳ ದೊಡ್ಡ ಮಟ್ಟದಲ್ಲಿ ಗೆಲ್ಲುವ ವಿಶ್ವಾಸವಿದೆ' ಎಂದರು.

ಶಾಸಕ ಎಸ್.ಮುನಿರಾಜು, ದಾಸರಹಳ್ಳಿ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಎಂ.ಮುನಿಸ್ವಾಮಿ, ಬಿಜೆಪಿ ಮುಖಂಡರಾದ ಚಿಕ್ಕಣ್ಣ, ಭಾಗ್ಯಮ್ಮ, ಕಬೀರ್, ಶೆಟ್ಟಿಹಳ್ಳಿ ಸುರೇಶ್, ಮಂಡಲ ಅಧ್ಯಕ್ಷ ಸೋಮಶೇಖರ್, ಪಿ.ಎಚ್.ರಾಜು, ಸುಜಾತಾ ಮುನಿರಾಜು, ಸೌಂದರ್ಯ ಭರತ್, ಸಿ.ಜಿ.ಗಂಗಾಧರ್ ಹಾಜರಿದ್ದರು.

ಚುನಾವಣಾ ಬಾಂಡ್ ರದ್ದುಪಡಿಸಿದ್ದಕ್ಕೆ ಪಶ್ಚಾತ್ತಾಪಪಡಬೇಕಾಗುತ್ತದೆ: ಮೋದಿ

ನವದೆಹಲಿ(ರಾಯಿಟರ್ಸ್): 'ಚುನಾವಣಾ ಬಾಂಡ್‌ಗಳ ರದ್ದತಿಯಿಂದ ಕಪ್ಪು ಹಣಕ್ಕೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಈ ಯೋಜನೆ ರದ್ದುಪಡಿಸಿದ್ದಕ್ಕೆ ಮುಂದಿನ ದಿನಗಳಲ್ಲಿ ಪ್ರತಿಯೊಬ್ಬರು ಪಶ್ಚಾತ್ತಾಪಪಡುತ್ತಾರೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಅಭಿಪ್ರಾಯಪಟ್ಟಿದ್ದಾರೆ.

ಚುನಾವಣಾ ಬಾಂಡ್‌ಗಳ ಯೋಜನೆಯನ್ನು ಸುಪ್ರೀಂ ಕೋರ್ಟ್ ಆದೇಶದನ್ವಯ ಫೆಬ್ರವರಿಯಲ್ಲಿ ರದ್ದುಪಡಿಸಲಾಗಿತ್ತು.

ಎಎನ್‌ಐ ಸುದ್ದಿ ಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಚುನಾವಣಾ ಬಾಂಡ್ ಯೋಜನೆಯನ್ನು ಸಮರ್ಥಿಸಿಕೊಂಡ ಮೋದಿ ಅವರು, ಈ ನೀತಿಯ ಬಗ್ಗೆ ಮಾಡಿದ ಆರೋಪಗಳನ್ನು ತಳ್ಳಿ ಹಾಕಿದರು.

'ವಿರೋಧ ಪಕ್ಷಗಳಿಗೂ ವಿವಿಧ ಕಂಪನಿಗಳು ದೇಣಿಗೆ ನೀಡಿವೆ' ಎಂದು ಹೇಳಿದ ಪ್ರಧಾನಿ ಅವರು, 'ಚುನಾವಣಾ ಬಾಂಡ್ ಯೋಜನೆಯು ಈ ಹಿಂದಿನ ವ್ಯವಸ್ಥೆಗಿಂತಲೂ ಅತಿ ಹೆಚ್ಚು ಪಾರದರ್ಶಕವಾಗಿತ್ತು. ಜತೆಗೆ, ಈ ನೀತಿಯನ್ನು ಸುಧಾರಿಸಲು ಅವಕಾಶವಿತ್ತು ಎಂದು ಪ್ರತಿಪಾದಿಸಿದರು.

'ನಿರ್ಧಾರಗಳನ್ನು ಕೈಗೊಳ್ಳುವಾಗ ನಾವು ಹಲವಾರು ಅಂಶಗಳನ್ನು ಕಲಿಯುತ್ತೇವೆ ಮತ್ತು ಸುಧಾರಿಸಿಕೊಳ್ಳುತ್ತೇವೆ. ಆದರೆ, ಇಂದು ನಾವು ದೇಶವನ್ನು ಕಪ್ಪು ಹಣದತ್ತ ತಳ್ಳುತ್ತಿದ್ದೇವೆ. ಇನ್ನು ಮುಂದೆ ರಾಜಕೀಯ ಪಕ್ಷಗಳಿಗೆ ನೀಡುವ ದೇಣಿಗೆ ಸಹ ಕಪ್ಪು ಹಣ ಅಥವಾ ಅಕ್ರಮ ಹಣ ಇರಬಹುದು. ಹೀಗಾಗಿಯೇ, ಪ್ರತಿಯೊಬ್ಬರು ಪಶ್ಚಾತ್ತಾಪಪಡುತ್ತಾರೆ ಎಂದು ನಾನು ಹೇಳುತ್ತಿದ್ದೇನೆ. ಪ್ರಾಮಾಣಿಕವಾಗಿ ಯೋಚಿಸಿದಾಗ ಎಲ್ಲರೂ ಪಶ್ಚಾತ್ತಾಪಪಡುತ್ತಾರೆ' ಎಂದರು.

'ಜಾರಿ ನಿರ್ದೇಶನಾಲಯದ (ಇ.ಡಿ) ಒಟ್ಟು ಪ್ರಕರಣಗಳಲ್ಲಿ ಶೇ 3ರಷ್ಟು ಮಾತ್ರ ರಾಜಕೀಯ ನಾಯಕರು ಭಾಗಿಯಾಗಿದ್ದಾರೆ. ಶೇ 97ರಷ್ಟು ಪ್ರಕರಣಗಳಲ್ಲಿ ರಾಜಕೀಯಕ್ಕೆ ಸಂಬಂಧ ಪಡದ ವ್ಯಕ್ತಿಗಳೇ ಭಾಗಿಯಾಗಿದ್ದಾರೆ. ಇ.ಡಿ. ಮುಕ್ತವಾಗಿ ಕಾರ್ಯನಿರ್ವಹಿಸಲು ನಾವು ಅವಕಾಶ ಕಲ್ಪಿಸಬಾರದೇ' ಎಂದು ಅವರು ಪ್ರಶ್ನಿಸಿದ್ದಾರೆ.

'ಸಮಗ್ರ ಅಭಿವೃದ್ಧಿ ಕನಸು ನನ್ನದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ವಜ್ಞ ನಗರ ವಿಧಾನಸಭಾ ಕ್ಷೇತ್ರದ ಶಾಸಕರೂ ಆಗಿರುವ ಇಂಧನ ಸಚಿವ ಕೆ.ಜೆ. ಜಾರ್ಜ್ ಸಾರಥ್ಯದಲ್ಲಿ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮನ್ಸೂರ್ ಅಲಿ ಖಾನ್ ಅವರು ಕ್ಷೇತ್ರ ವ್ಯಾಪ್ತಿಯ ವಿವಿಧ ಕಡೆಗಳಲ್ಲಿ ಸೋಮವಾರ ಚುನಾವಣಾ ಪ್ರಚಾರ ರ‍್ಯಾಲಿ ನಡೆಸಿದರು.

ವೀರಣ್ಣಪಾಳ್ಯ, ನಾಗವಾರ ಮುಖ್ಯರಸ್ತೆ, ಎಚ್.ಬಿ.ಆರ್. ಲೇಔಟ್, ಕೆ.ಜಿ. ಹಳ್ಳಿ ಹಾಗೂ ಪಿಳ್ಳಣ್ಣ ಗಾರ್ಡನ್ ಸೇರಿದಂತೆ ವಿವಿಧೆಡೆ ಮನ್ಸೂರ್ ಅಲಿ ಖಾನ್ ಮತ ಯಾಚಿಸಿದರು. 'ಯುವಶಕ್ತಿಗೆ ಉದ್ಯೋಗ, ಎಲ್ಲ ವರ್ಗದ ಜನರ ಪ್ರಗತಿ, ನಮ್ಮ ಬೆಂಗಳೂರು ಕೇಂದ್ರದ ಸಮಗ್ರ ದೂರದೃಷ್ಟಿಯ ಅಭಿವೃದ್ಧಿಯ ಕನಸು ನನ್ನದು. ನನಗೆ ಮತ ನೀಡಿ ಕ್ಷೇತ್ರದ ಅಭಿವೃದ್ಧಿಗೆ ಕೈ ಜೋಡಿಸಿ' ಎಂದು ಅವರು ಮನವಿ ಮಾಡಿದರು.

ಸರ್ವಜ್ಞ ನಗರ ವಿಧಾನಸಭಾ ಕ್ಷೇತ್ರದ ವಿವಿಧ ಕಡೆ ಇಂಧನ ಸಚಿವ ಕೆ.ಜೆ. ಜಾರ್ಜ್ ಅವರ ಸಾರಥ್ಯದಲ್ಲಿ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮನ್ಸೂರ್ ಅಲಿ ಖಾನ್ ಅವರು ಚುನಾವಣಾ ಪ್ರಚಾರ ರ‍್ಯಾಲಿ ನಡೆಸಿದರು

ಕೆಪಿಸಿಸಿ ಉಪಾಧ್ಯಕ್ಷ ಉಬೇದುಲ್ಲ ಷರೀಫ್, ಕ್ಷೇತ್ರದ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ರಾಣಾ ಜಾರ್ಜ್, ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷರು, ವಾರ್ಡ್ ಅಧ್ಯಕ್ಷರು, ಬಿಬಿಎಂಪಿ ಮಾಜಿ ಸದಸ್ಯರು ಹಾಗೂ ಯುವ ಕಾಂಗ್ರೆಸ್ ಕಾರ್ಯಕರ್ತರು ರ‍್ಯಾಲಿಯಲ್ಲಿ ಭಾಗವಹಿಸಿದರು.

ಹೈಕೋರ್ಟ್‌ನಲ್ಲಿ ಮತಯಾಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣಾ ಪ್ರಚಾರದ ಅಂಗವಾಗಿ ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳ ಪರ ಆಯಾ ಪಕ್ಷಗಳ ಅಭ್ಯರ್ಥಿಗಳು, ಮುಖಂಡರು ಸೋಮವಾರ ಹೈಕೋರ್ಟ್, ಸಿಟಿ ಸಿವಿಲ್ ಕೋರ್ಟ್ ಮತ್ತು ಮ್ಯಾಜಿಸ್ಟ್ರೇಟ್ ಕೋರ್ಟ್‌ಗಳಲ್ಲಿ ಸಂಚರಿಸಿ ವಕೀಲ ವೃಂದದಲ್ಲಿ ಮತ ಯಾಚಿಸಿದರು.

ಕಾಂಗ್ರೆಸ್ ಪಕ್ಷದಿಂದ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಸೌಮ್ಯಾ ರೆಡ್ಡಿ, ಬೆಂಗಳೂರು ಉತ್ತರ ಕ್ಷೇತ್ರದ ಅಭ್ಯರ್ಥಿ ರಾಜೀವ್ ಗೌಡ ಮತ್ತು ಬೆಂಗಳೂರು ಕೇಂದ್ರ ಕ್ಷೇತ್ರದ ಅಭ್ಯರ್ಥಿ ಮನ್ಸೂರ್ ಅಲಿಖಾನ್ ಖುದ್ದು ವಕೀಲರನ್ನು ಭೇಟಿ ಮಾಡಿ ಮತ ಯಾಚಿಸಿದರು. ಇವರ ಪರವಾಗಿ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು, ಮಾಧ್ಯಮ ವಕ್ತಾರ ಸೂರ್ಯ ಮುಕುಂದರಾಜ್, ಕಾನೂನು ವಿಭಾಗದ ಉಪಾಧ್ಯಕ್ಷ ಎನ್.ದಿವಾಕರ್, ಹಿರಿಯ ವಕೀಲ ಎಚ್.ಎಸ್.ಚಂದ್ರಮೌಳಿ, ಬೆಂಗಳೂರು ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ ಚಂದ್ರಕಾಂತ ಪಾಟೀಲ ಕಾನೂರು ಸೇರಿದಂತೆ ಹಲವರು ಇದ್ದರು.

ಬಿಜೆಪಿ: ಬೆಂಗಳೂರು ಕೇಂದ್ರ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾದ ಪಿ.ಸಿ. ಮೋಹನ್ ಅವರೂ ಸ್ವತಃ ಹೈಕೋರ್ಟ್ ಮತ್ತು ಸಿಟಿ ಸಿವಿಲ್ ಕೋರ್ಟ್‌ಗೆ ಭೇಟಿ ನೀಡಿ ವಕೀಲರಲ್ಲಿ ಮತ ಯಾಚಿಸಿದರು. ಇವರ ಪರವಾಗಿ ಶಾಸಕ ಎಸ್.ಸುರೇಶ್ ಕುಮಾರ್, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಮಾಜಿ ಅಧ್ಯಕ್ಷ ಎ.ಪಿ.ರಂಗನಾಥ್, ಬಿಜೆಪಿಯ ಕಾನೂನು ಘಟಕದ ಅಧ್ಯಕ್ಷ ವಸಂತ್ ಕುಮಾರ್ ಪಾಲ್ಗೊಂಡಿದ್ದರು.

ಮನೆಗಳ ಮುಂದೆ 'ವೋಟರ್ ಸ್ಟಿಕ್ಕರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಬೆಂಗಳೂರು ವ್ಯಾಪ್ತಿಯಲ್ಲಿ ಕಡಿಮೆ ಮತದಾನವಾಗಿರುವ ಮತಗಟ್ಟೆಗಳ ವ್ಯಾಪ್ತಿಯ ಮನೆಗಳ ಮುಂದೆ 'ವೋಟರ್ ಸ್ಟಿಕ್ಕರ್' ಅಂಟಿಸಲು ಮತಗಟ್ಟೆ ಅಧಿಕಾರಿಗಳಿಗೆ ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಸೂಚಿಸಿದರು.

'ವೋಟರ್ ಸ್ಟಿಕ್ಕರ್'

ಲೋಕಸಭಾ ಚುನಾವಣೆ ಹಿನ್ನೆಲೆ ನಡೆದ ವಿಡಿಯೊ ಸಂವಾದದಲ್ಲಿ ಅವರು, 'ಲೋಕಸಭಾ ಕ್ಷೇತ್ರ ವ್ಯಾಪ್ತಿಯ ವಿಧಾನ ಸಭಾ ಕ್ಷೇತ್ರಗಳಲ್ಲಿ 'ಮತಚೀಟಿ', 'ಮತ ಮಾರ್ಗದರ್ಶಿ'ಯನ್ನು ತ್ವರಿತಗತಿಯಲ್ಲಿ ವಿತರಿಸಬೇಕು ಎಂದರು.

> **ಕ್ಯೂಆರ್ ಕೋಡ್ 'ವೋಟರ್ ಸ್ಲಿಪ್'**
>
> ದೇಶದಲ್ಲಿಯೇ ಮೊದಲ ಬಾರಿಗೆ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಮತದಾರರಿಗೆ ಕ್ಯೂಆರ್ ಕೋಡ್ ಹೊಂದಿರುವ ಮತಚೀಟಿ (ವೋಟರ್ ಸ್ಲಿಪ್) ನೀಡಲಾಗುತ್ತದೆ.
>
>
>
> ಕ್ಯೂಆರ್ ಕೋಡ್ 'ವೋಟರ್ ಸ್ಲಿಪ್'
>
> ಮತದಾರರಿಗೆ ತಮ್ಮ ಮತಗಟ್ಟೆಯನ್ನು ಸುಲಭವಾಗಿ ಹುಡುಕಲು ಅನುವಾಗಲು ಮನೆ ಮನೆಗೆ ಹಂಚುವ ಮತಚೀಟಿಗಳಲ್ಲಿ ಮತಗಟ್ಟೆಯ ಮಾಹಿತಿಯ ಕ್ಯೂಆರ್ ಕೋಡ್ ಮುದ್ರಿಸಲಾಗಿದೆ ಎಂದು ಚುನಾವಣಾಧಿಕಾರಿ ತಿಳಿಸಿದ್ದಾರೆ.

ಚುನಾವಣಾ ವಿಭಾಗದ ವಿಶೇಷ ಆಯುಕ್ತ ಸೆಲ್ವಮಣಿ ಮಾತನಾಡಿ, ಲೋಕಸಭಾ ಚುನಾವಣೆಗೆ ನಿಯೋಜನೆ ಮಾಡಿರುವ ಮತಗಟ್ಟೆ ಅಧಿಕಾರಿಗಳಿಗೆ 17ರಂದು ಎರಡನೇ ಹಂತದ ತರಬೇತಿ ನಡೆಯಲಿದೆ. ಶೇಕಡ 120ರಷ್ಟು ಅಧಿಕಾರಿ/ಸಿಬ್ಬಂದಿಯನ್ನು ನಿಯೋಜಿಸಲಾಗಿರುತ್ತದೆ. ತರಬೇತಿ ಸ್ಥಳದಲ್ಲಿ ನೀರಿನ ವ್ಯವಸ್ಥೆ, ಊಟದ ವ್ಯವಸ್ಥೆ ಸೇರಿದಂತೆ ಇನ್ನಿತರೆ ವ್ಯವಸ್ಥೆಗಳನ್ನು ಸರಿಯಾಗಿ ಮಾಡಲು ಸಹಾಯಕ ಚುನಾವಣಾಧಿಕಾರಿಗಳಿಗೆ ಸೂಚನೆ ನೀಡಿದರು.

ಪ್ರತಿಯೊಂದು ಮತವೂ ಉತ್ತಮ ಪ್ರಜಾಪ್ರಭುತ್ವದ ಉಜ್ವಲ ಭವಿಷ್ಯ: ನಟ ರಮೇಶ್ ಅರವಿಂದ್

'ನಮ್ಮ ನಡೆ ಮತಗಟ್ಟೆಯ ಕಡೆ' ಜಾಗೃತಿ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಂದು ಇಟ್ಟಿಗೆಯಿಂದ ಕಟ್ಟಡ ಕಟ್ಟಲು ಸಾಧ್ಯವಿಲ್ಲ. ಸಾವಿರಾರು ಇಟ್ಟಿಗೆಗಳು ಸೇರಿ ಕಟ್ಟಡವಾಗುತ್ತದೆ. ಅದೇ ರೀತಿ ಪ್ರತಿಯೊಬ್ಬ ಮತದಾರನೂ ಒಂದೊಂದು ಇಟ್ಟಿಗೆಯ ಹಾಗೆ. ಎಲ್ಲರೂ ಒಟ್ಟಾಗಿ ಸೇರಿದರೆ ಮಾತ್ರ ಉತ್ತಮ ಪ್ರಜಾಪ್ರಭುತ್ವವನ್ನು ನಿರ್ಮಿಸಿ, ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ' ಎಂದು ಚುನಾವಣಾ ರಾಯಭಾರಿ, ನಟ ರಮೇಶ್ ಅರವಿಂದ್ ಹೇಳಿದರು.

ಚುನಾವಣಾ ಆಯೋಗ, ಬಿಬಿಎಂಪಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಆಯೋಜಿಸಿದ್ದ 'ನಮ್ಮ ನಡೆ ಮತಗಟ್ಟೆಯ ಕಡೆ' ಜಾಗೃತಿ ಅಭಿಯಾನಕ್ಕೆ ಸೋಮವಾರ ಚಾಲನೆ ಅವರು ಮಾತನಾಡಿದರು.

'ನಿಮ್ಮೆಲ್ಲರ ಕನಸು ಈಡೇರಬೇಕಾದರೆ ಮತದಾನ ದಿನವಾದ ಏಪ್ರಿಲ್ 26ರಂದು ನೀವೆಲ್ಲರೂ ಒಟ್ಟಾಗಿ ಸೇರಿ, ನಿಮ್ಮ 'ಡ್ರೀಮ್ ಟೀಮ್' ಕಟ್ಟಬಹುದು. ಆದ್ದರಿಂದ ನಿಮ್ಮ ಸ್ವವಿವೇಚನೆಯಿಂದ ಉತ್ತಮ ಅಭ್ಯರ್ಥಿಯನ್ನು ಆಯ್ಕೆ ಮಾಡಿ' ಎಂದು ಕರೆ ನೀಡಿದರು.

'ನಮ್ಮ ನಡೆ ಮತಗಟ್ಟೆಯ ಕಡೆ' ಜಾಗೃತಿ ಅಭಿಯಾನದಲ್ಲಿ ವಿದ್ಯಾರ್ಥಿಗಳೊಂದಿಗೆ ಚುನಾವಣಾ ರಾಯಭಾರಿ, ನಟ ರಮೇಶ್ ಅರವಿಂದ್ ಮಾತುಕತೆ ನಡೆಸಿದರು

'ನೀವು ಮಾಡುವ ಆಯ್ಕೆ ಸರಿಯಾಗಿದ್ದರೆ ಯಶಸ್ಸು ತಾನಾಗಿಯೇ ಬರಲಿದೆ. ನಿಮ್ಮ ಭವಿಷ್ಯ ನಿಮ್ಮ ಕೈಯ್ಯಲ್ಲಿ ಅಲ್ಲ, ನಿಮ್ಮ ಒಂದು ಬೆರಳಲ್ಲಿದ್ದು, ಎಲ್ಲರೂ ಮತದಾನ ಮಾಡಬೇಕು' ಎಂದು ಪ್ರೇರೇಪಿಸಿದರು.

> **ವಿದ್ಯಾರ್ಥಿಗಳ ಪ್ರಶ್ನೆಗಳು ಹೀಗಿದ್ದವು...**
>
> - ಎಲ್ಲರಿಗೂ ಮತದಾನ ಕಡ್ಡಾಯವೆಂದು ಯಾಕೆ ಮಾಡಿಲ್ಲ ?
> - ಉತ್ತಮ ಅಭ್ಯರ್ಥಿ ಎಂದರೆ ಯಾರು, ನಾವು ಹೇಗೆ ಆಯ್ಕೆ ಮಾಡಬೇಕು ?
> - ಗುಮಾಸ್ತನಾಗಬೇಕಾದರೂ ವಿದ್ಯಾರ್ಹತೆಯ ಅಗತ್ಯವಿರು ತ್ತದೆ. ಆದರೆ ರಾಜಕೀಯ ಪ್ರತಿನಿಧಿಗಳಿಗೆ ಯಾಕೆ ಆ ನಿಯಮವಿಲ್ಲ ?
> - ನೋಟಾದಿಂದ ಏನು ಪ್ರಯೋಜನವಿದೆ ?
> - ಇವಿಎಂ ಯಂತ್ರವನ್ನು ನಾವು ಎಷ್ಟು ಬಾರಿ ಒತ್ತಬಹುದು ?
> - ಮತದಾರರ ಗುರುತಿನ ಚೀಟಿಯಲ್ಲಿ ಬರುವ ತಪ್ಪುಗಳನ್ನು ತಿದ್ದಿಕೊಳ್ಳುವುದು ಹೇಗೆ ?
> - ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಿದ್ದು, ಗುರುತಿನ ಚೀಟಿ ಇಲ್ಲದಿದ್ದಲ್ಲಿ ಬೇರೆ ದಾಖಲಾತಿಗಳ ಮೂಲಕವೂ ಮತದಾನ ಚಲಾಯಿಸಬಹುದೇ ?
> - ಮತದಾನದ ದಿನ ಪ್ರವಾಸಿ ತಾಣಗಳು, ಮಾಲ್‌ಗಳನ್ನು ಬಂದ್ ಮಾಡಲು ಸಾಧ್ಯವಿಲ್ಲವೇ ?

'ಪ್ರತಿ ಬಾರಿಯ ಚುನಾವಣೆಯಲ್ಲೂ ಕಡಿಮೆ ಮತದಾನವಾಗುತ್ತದೆ. ಮತಗಟ್ಟೆಗಳ ಬಳಿ ಎಲ್ಲಾ ರೀತಿಯ ವ್ಯವಸ್ಥೆಗಳು ಇರಲಿದ್ದು, ಈ ಬಾರಿ ಹೆಚ್ಚು ಮತದಾನವಾಗಬೇಕು. ಎಲ್ಲರೂ ಒಟ್ಟಾಗಿ, ಇತರರನ್ನೂ ಪ್ರೇರೇಪಿಸಿ ತಪ್ಪದೆ ಮತ ಚಲಾಯಿಸಬೇಕು' ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಹೇಳಿದರು.

'ನಿಮ್ಮ ಅಭ್ಯರ್ಥಿಯನ್ನು ತಿಳಿದುಕೊಳ್ಳಿ(KYC-ECI)' ಎಂಬ ತಂತ್ರಾಂಶದಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿದ ಎಲ್ಲಾ ಅಭ್ಯರ್ಥಿಗಳ ಮಾಹಿತಿ ಲಭ್ಯ. ತಾವೆಲ್ಲರೂ ತಂತ್ರಾಂಶವನ್ನು ಡೌನ್ ಲೋಡ್ ಮಾಡಿಕೊಂಡು, ಮಾಹಿತಿ ಅರಿತು ಉತ್ತಮ ಅಭ್ಯರ್ಥಿಯನ್ನು ಆಯ್ಕೆ ಮಾಡಬಹುದು' ಎಂದರು.

2000ಕ್ಕೂ ವಿದ್ಯಾರ್ಥಿಗಳು ಭಾಗಿ: 'ನಮ್ಮ ನಡೆ ಮತಗಟ್ಟೆಯ ಕಡೆ ಜಾಗೃತಿ ಅಭಿಯಾನ' ಕಾರ್ಯಕ್ರಮದಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯ, ಮಹಾರಾಣಿ ಕಾಲೇಜು, ನೃಪತುಂಗಾ ವಿಶ್ವವಿದ್ಯಾನಿಲಯ, ಆರ್.ವಿ ಕಾಲೇಜು, ಎಸ್.ಜೆ.ಆರ್.ಸಿ ಕಾಲೇಜುಗಳಿಂದ 2000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಇದೇ ವೇಳೆ ಎಲ್ಲಾ ವಿದ್ಯಾರ್ಥಿಗಳು ಮತದಾನ ಪ್ರತಿಜ್ಞಾವಿಧಿಯನ್ನು ಸ್ವೀಕರಿಸಿದರು. ವಿದ್ಯಾರ್ಥಿಗಳ ಪ್ರಶ್ನೆಗೆ ಚುನಾವಣಾ ಅಧಿಕಾರಿಗಳು ಉತ್ತರಿಸಿದರು.

ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷ ಕಾಂತರಾಜು, ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಲಿಂಗರಾಜು ಗಾಂಧಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತ ಜಗದೀಶ್, ಜಿಲ್ಲಾ ಸ್ವೀಪ್ ಸಮಿತಿ ನೋಡಲ್ ಅಧಿಕಾರಿ ಪ್ರತಿಭಾ, ಬೆಂಗಳೂರು ಕೇಂದ್ರ ಸ್ವೀಪ್ ನೋಡಲ್ ಅಧಿಕಾರಿ ರಮಾಮಣಿ ಉಪಸ್ಥಿತರಿದ್ದರು.

ರೈಲು ತಾತ್ಕಾಲಿಕ ನಿಲುಗಡೆ ಮುಂದುವರಿಕೆ

ಬೆಂಗಳೂರು: ಬೀರೂರು ಮತ್ತು ರಾಮಗಿರಿ ನಿಲ್ದಾಣಗಳಲ್ಲಿ ಇದ್ದ ರೈಲುಗಳ ತಾತ್ಕಾಲಿಕ ನಿಲುಗಡೆಯನ್ನು ಮುಂದಿನ ಆರು ತಿಂಗಳವರೆಗೆ ನೈರುತ್ಯ ರೈಲ್ವೆ ಮುಂದುವರಿಸಿದೆ. ದೇವನಗೊಂದಿ ನಿಲ್ದಾಣದಲ್ಲಿ ತಾತ್ಕಾಲಿಕ ನಿಲುಗಡೆಯನ್ನು ಮೂರು ತಿಂಗಳವರೆಗೆ ವಿಸ್ತರಿಸಲಾಗಿದೆ.

ಕಾಣೆಯಾಗಿದ್ದಾರೆ

ಸುಮಂತ್ .ಕೆ
ದಿನಾಂಕ: 26ನೇ ಮಾರ್ಚ್ 2024 ರಂದು ಹೊಸಕೆರೆಹಳ್ಳಿ, ಬೆಂಗಳೂರಿನಿಂದ ಕಾಣೆಯಾಗಿದ್ದಾರೆ.
ದೂ: 8618193954, 9148401984

KUWAIT KNPC SHUTDOWN PROJECT UNDER A REPUTED CO. 6-11 MONTHS JOB FREE FOOD & ACCOMMODATION
Client Interview at Mangalore: 19.04.2024 at Srinivas Saffron Hotel, Opp. GHS High School, Next to Janatha Bazar, Hampankata Road, Mangalore-575001. Mob: 7034436222, 9645953800, 9061982277
Bulk Hiring - Given in Job Category, Salary in KD
• Supervisor-Mechanical Maintenance, 320. • Supervisor-Rigging, 295 • Supervisor-Welding & Fabrication 345. • Supervisor-Machinist 295. • Bench Fitter 100. • General Fitter 100. • Machine Operator (Hydrojetter) 110. • Auto Electrician 160. • Rigger 100. • Machinist 160. • Pipe Fabricator 170. • Industrial Labour 85. • Driver-Heavy, Kuwait Valid License 170. • Time Keeper 145. • Rotating Equipment Engineer 1300. • Supervisor-Rotating Equipment 370. • Rotating Equipment Mechanic 245. • Welder TIG & ARC 170. • Engineer - Safety 620. • Supervisor-Safety 320.
Candidate Must have 7-12 yrs Exp. in Gulf/Indian From Oil & Gas/Refineary/Petrochimical fields. May report with Bio-Data, Original & Copies of Educational Certificates, Gate Pass, ID Cards, Original Passport & Passport Size Photo.
S.M. Enterprises, Mumbai
Address at: Link International Placement Service
4th floor, Muthiraparambil building, Near Kaloor Metro Station, Kochi- 682107
Mob: +91 7034436222, 9645953800, 9061982277
Regd: B-0772/MUM/PART/1000+/5/6506/2004

ಕ್ಷೇಮ ಕುಶಲ

ಸ್ನಾಯುಸೆಳೆತಕ್ಕೆ ಪರಿಹಾರಸೂತ್ರಗಳು

ಮಹಿಳೆಯರಲ್ಲಿ ಕಂಡುಬರುವ ಸ್ನಾಯುಸೆಳೆತಕ್ಕೆ ಮುಖ್ಯ ಕಾರಣ ಕ್ಯಾಲ್ಸಿಯಂ ಕೊರತೆ. ಋತುಬಂಧದ ನಂತರ ಮಹಿಳೆಯರು ವೈದ್ಯರ ಸಲಹೆಯ ಮೇರೆಗೆ ಕ್ಯಾಲ್ಸಿಯಂ ಪೂರಕಗಳನ್ನು ಸೇವಿಸುವುದು ಉತ್ತಮ. ಪದೇ ಪದೇ ಸೆಳೆತ ಕಾಣಿಸಿಕೊಳ್ಳುತ್ತಿದ್ದರೆ ವೈದ್ಯರ ಸಲಹೆಯನ್ನು ಪಡೆಯಬೇಕು.

ಡಾ. ವಿನಯ ಶ್ರೀನಿವಾಸ್

ಕಾರು ಚಲಾಯಿಸುತ್ತಿದ್ದ ಗೆಳತಿ ದಿಢೀರ್ ಎಂದು ನಿಲ್ಲಿಸಿ, ಜೋರಾಗಿ 'ಅಯ್ಯೋ! ಕಾಲು..' ಎಂದು ಕೂಗಿಕೊಂಡಾಗ ಪಕ್ಕದ ಸೀಟಿನಲ್ಲಿ ಕುಳಿತಿದ್ದ ನಾನು ಗಾಬರಿಯಾಗಿದ್ದೆ. 'ಏನಾಯಿತು' ಎಂದು ಆತಂಕದಿಂದ ಕೇಳಿದಾಗ 'ತನ್ನ ಬಲಪಾದವನ್ನು ತೋರುತ್ತಾ ಕಾಲು ಹಿಡಿದುಕೊಂಡಂತಾಗಿದೆ, ಈ ಕಡೆಯಿಂದ ಬಂದು ಆ ಭಾಗವನ್ನು ಸ್ವಲ್ಪ ನಿಧಾನವಾಗಿ ತಿಕ್ಕುತ್ತೀಯ' ಎಂದಳು. ನಾನು ಹಾಗೆಯೇ ಮಾಡಿದ್ದೆ. ಕೆಲವೇ ಕ್ಷಣಗಳಲ್ಲಿ ಆಕೆಯ ಕಾಲುನೋವು ಮಾಯವಾಗಿತ್ತು.

ಇಂತಹ ಅನುಭವ ನಿಮಲ್ಲಿಯೂ ಕೆಲವರಿಗೆ ಆಗಿರಬಹುದು. ಹೌದು, ವೈದ್ಯಕೀಯ ಪರಿಭಾಷೆಯಲ್ಲಿ 'ಮಸಲ್ ಕ್ರ್ಯಾಂಪ್ಸ್' ಎಂದು ಕರೆಯಿಸಿಕೊಳ್ಳುವ ಸ್ನಾಯುಗಳಲ್ಲಿನ ಈ ಬಗೆಯ ದಿಢೀರ್ ಸೆಳೆತ ಅಥವಾ ನೋವಿಗೆ ಕಾರಣಗಳು ಹಲವು. ಸ್ನಾಯುಗಳ ಸಂಕೋಚನ (ಕುಗ್ಗುವಿಕೆ) ಮತ್ತು ಹಿಗ್ಗುವಿಕೆಗೆ ಹಲವು ಅಂಶಗಳು ಅತ್ಯವಶ್ಯಕ. ಕ್ಯಾಲ್ಸಿಯಂ, ಮೆಗ್ನೀಶಿಯಂ, ಸೋಡಿಯಂ, ಪೊಟ್ಯಾಶಿಯಂ ಅವುಗಳಲ್ಲಿ ಮುಖ್ಯವಾದುವು. ಯಾವುದೇ ಕಾರಣದಿಂದ ಶರೀರದಲ್ಲಿ ಈ ಅಂಶಗಳು ಕಡಿಮೆಯಾದಾಗ ಸಂಕುಚಿಸಿದ ಸ್ನಾಯುಗಳು ಪುನಃ ಮೊದಲಿನ ಸ್ಥಿತಿಗೆ ತಲುಪಲು ವಿಫಲವಾಗುತ್ತವೆ. ಇದರಿಂದಾಗಿ ಆ ಭಾಗದಲ್ಲಿ ವಿಪರೀತ ಸೆಳೆತ ಕಾಣಿಸಿಕೊಳ್ಳುತ್ತದೆ. ಇದು ತೀವ್ರವಾಗಿರುವುದಷ್ಟೇ ಅಲ್ಲದೆ ಆ ಸಮಯದಲ್ಲಿ ಸ್ನಾಯುಚಲನೆಯೂ ಅಸಾಧ್ಯವೆನಿಸುತ್ತದೆ. ಇದು ಕೆಲವು ಕ್ಷಣಗಳು ಮಾತ್ರ ಕಾಣಿಸಿಕೊಂಡರೂ ವಾಹನವನ್ನು ಚಲಾಯಿಸುವಾಗ, ವಾಹನಗಳ ದಟ್ಟಣೆ ಇರುವ ರಸ್ತೆಗಳನ್ನು ದಾಟುವಾಗ, ಈಜಾಡುವಾಗ ಇನ್ನೂ ಮೊದಲಾದ ಸಂದರ್ಭಗಳಲ್ಲಿ ಕಂಡುಬಂದರೆ ಅಪಾಯವೂ ಹೌದು.

ಕಾರಣಗಳೇನು?

ನಿರ್ಜಲೀಕರಣ: ಬೇಸಿಗೆಯ ಈ ದಿನಗಳಲ್ಲಿ ತಮ್ಮ ಬಿಡುವಿಲ್ಲದ ಕೆಲಸಗಳಲ್ಲಿ ಮಗ್ನರಾಗಿ ಸಾಕಷ್ಟು ನೀರನ್ನು ಕುಡಿಯುವುದನ್ನು ಕೆಲವರು ಮರೆತೇ ಬಿಡುತ್ತಾರೆ. ಅತಿಸಾರ, ವಾಂತಿ ಮೊದಲಾದ ಸಮಸ್ಯೆಯಲ್ಲಿ ಕೂಡಲೇ ಸೂಕ್ತ ಚಿಕಿತ್ಸೆ ಮಾಡದಿದ್ದಾಗಲೂ ಶರೀರದ ನೀರಿನಾಂಶ ಕಡಿಮೆಯಾಗಬಹುದು.

ಋತುಸ್ರಾವದ ಸಮಯದಲ್ಲಿ: ಅಂಡಾಶಯದಿಂದ ಬಿಡುಗಡೆಗೊಳ್ಳುವ ರಸದೂತಗಳು ಗರ್ಭಾಶಯದ ಸ್ನಾಯುಗಳ ಸಂಕೋಚನ ಮತ್ತು ಹಿಗ್ಗುವಿಕೆಯನ್ನು ತೀವ್ರಗೊಳಿಸುತ್ತವೆ. ಈ ಸಂದರ್ಭದಲ್ಲಿ ಉತ್ಪತ್ತಿಯಾಗುವ 'ಪ್ರೋಸ್ಟಾಗ್ಲ್ಯಾಂಡಿನ್' ಎಂಬ ರಸದೂತದಂಥ ಅಂಶವೂ ಈ ಪ್ರಕ್ರಿಯೆಗೆ ಪೂರಕವಾಗುತ್ತದೆ. ಈ ಅವಧಿಯಲ್ಲಿ ಕೆಲವು ಮಹಿಳೆಯರು ಕಾಲುಗಳ ಸ್ನಾಯುಗಳಲ್ಲಿಯೂ ಸೆಳೆತವನ್ನು ಅನುಭವಿಸುತ್ತಾರೆ.

ಲವಣಾಂಶಗಳ ಕೊರತೆ: ಅತಿಯಾಗಿ ಬೆವರುವಾಗ, ಬೆವರಿನೊಂದಿಗೆ ಲವಣಾಂಶಗಳೂ ಶರೀರದಿಂದ ಹೊರಕ್ಕೆ ವಿಸರ್ಜನೆಯಾಗುತ್ತವೆ. ಅಂತಹ ಸಂದರ್ಭಗಳಲ್ಲಿ ಸೂಕ್ತ ಪೂರಕ ಲವಣಾಂಶಗಳನ್ನು ಆಹಾರದಲ್ಲಿ ಪೂರೈಸದಿದ್ದಾಗ ವ್ಯಕ್ತಿ ಸ್ನಾಯುಸೆಳೆತಕ್ಕೆ ಒಳಗಾಗಬಹುದು.

ತೀವ್ರವಾದ ವ್ಯಾಯಾಮ: ಬೇಸಿಗೆಯ ದಿನಗಳಲ್ಲಿನ ಯಾವುದೇ ಬಗೆಯ ದೈಹಿಕ ಚಟುವಟಿಕೆ ಹೆಚ್ಚಿನ ನೀರು ಮತ್ತು ಲವಣಾಂಶವನ್ನು ಬೇಡುತ್ತದೆ. ತೀವ್ರ ವ್ಯಾಯಾಮದ ಬಳಿಕ ಸ್ನಾಯುಸೆಳೆತ ಸಾಮಾನ್ಯ. ಓಡುವವರಲ್ಲಿ ಮುಖ್ಯವಾಗಿ ಕಾಲುಗಳ ಸ್ನಾಯುಗಳು ಸೆಳೆತಕ್ಕೊಳಗಾಗುತ್ತವೆ.

ತಕ್ಷಣದ ಪರಿಹಾರವೇನು?

- ಸೆಳೆತ ಬಂದ ಸ್ನಾಯುವಿನ ಮೇಲೆ ನಿಧಾನವಾಗಿ ತಿಕ್ಕುವುದು.
- ಸೆಳೆತಕ್ಕೆ ಒಳಗಾದ ಸ್ನಾಯುಗಳನ್ನು ಹಿಗ್ಗಿಸುವುದು (ಸ್ಟ್ರೆಚಿಂಗ್).
- ವ್ಯಾಯಾಮದ ಮೊದಲು ಮತ್ತು ನಂತರ ಕಡ್ಡಾಯವಾಗಿ ಸ್ನಾಯು ಹಿಗ್ಗಿಸುವ (ಸ್ಟ್ರೆಚಿಂಗ್) ಚಲನೆಗಳನ್ನು ಮಾಡುವುದು.
- ವ್ಯಾಯಾಮದ ಮೊದಲು ಮತ್ತು ನಂತರ ಸಮರ್ಪಕವಾಗಿ ನೀರನ್ನು ಕುಡಿಯುವುದು.
- ಮಂಜುಗಡ್ಡೆಯ ತುಂಡುಗಳನ್ನು ನೋವಾದ ಸ್ನಾಯುವಿನ ಮೇಲೆ ಸ್ವಲ್ಪ ಸಮಯ ಇರಿಸುವುದು.

ಸರಿಯಾದ ಆಹಾರವೇ ಪರಿಹಾರ

- ಬೇಸಿಗೆಯಲ್ಲಿ ದಿನವೂ ಕಡ್ಡಾಯವಾಗಿ ಮೂರರಿಂದ ನಾಲ್ಕು ಲೀಟರ್ ನೀರಿನ ಸೇವನೆ.
- ಪೊಟ್ಯಾಸಿಯಂ, ಮೆಗ್ನೀಶಿಯಂ ಮತ್ತು ಕ್ಯಾಲ್ಸಿಯಂ ಹೇರಳವಾಗಿರುವ ಬಾಳೆಹಣ್ಣು ನಿತ್ಯದ ಆಹಾರ ದಲ್ಲಿರಲಿ. ಮೂತ್ರಪಿಂಡದ ವೈಫಲ್ಯದಿಂದ ಬಳಲುವವರು ಮತ್ತು ಮಧುಮೇಹಿಗಳು ಬಾಳೆಹಣ್ಣನ್ನು ತಿನ್ನುವ ಮೊದಲು ವೈದ್ಯರ ಸಲಹೆಯನ್ನು ಪಡೆಯಬೇಕು.
- ಆಹಾರದಲ್ಲಿ ಸಿಹಿಗೆಣಸು, ಕುಂಬಳಕಾಯಿ, ಆಲೂಗಡ್ಡೆಯ ಬಳಕೆ ಸಹ ಸಹಕಾರಿ.
- ಬೆಣ್ಣೆಹಣ್ಣು ಅಥವಾ ಅವಕಾಡೊ ಹಣ್ಣಿನ ಸೇವನೆ ಕೂಡ ಸಾಕಷ್ಟು ಪೊಟ್ಯಾಸಿಯಂಯನ್ನು ಒದಗಿಸುತ್ತದೆ.
- ಆಹಾರದಲ್ಲಿ ಕಡ್ಡಾಯವಾಗಿ ಬೇಳೆಕಾಳುಗಳ ಬಳಕೆ ಇರಲಿ.
- ಪೊಟ್ಯಾಶಿಯಂ ಮತ್ತು ಸೋಡಿಯಂ ಹೆಚ್ಚಾಗಿರುವ ಕರ್ಬೂಜ ಅಥವಾ ಬನಾಸ್ಪತ್ರೆ ಹಣ್ಣುಗಳ ಸೇವನೆಯೂ ಸ್ನಾಯುಸೆಳೆತಕ್ಕೆ ರಾಮಬಾಣ.
- ನೀರಿನಾಂಶ ಮತ್ತು ಸಾಕಷ್ಟು ಪೊಟ್ಯಾಶಿಯಂ ಇರುವ ಎಳನೀರು ಮತ್ತು ಕಲ್ಲಂಗಡಿ ಹಣ್ಣಿನ ಸೇವನೆ ಬೇಸಿಗೆಯ ದಿನಗಳಲ್ಲಿ ಬಹಳ ಉತ್ತಮ.
- ನಿತ್ಯವೂ ಒಂದು ಲೋಟ ಹಾಲಿನ ಸೇವನೆ ಶರೀರಕ್ಕೆ ಕ್ಯಾಲ್ಸಿಯಂ, ಸೋಡಿಯಂ ಜೊತೆಯಲ್ಲಿ ಸಾಕಷ್ಟು ಪ್ರೊಟೀನ್ ಕೂಡ ಒದಗಿಸುತ್ತದೆ. ಪ್ರೊಟೀನ್‌ನ ಅಂಶವು ಸ್ನಾಯುಗಳ ದುರಸ್ತಿಯಲ್ಲಿಯೂ ಸಹಕರಿಸುತ್ತದೆ.
- ಪ್ರೊಬಯೋಟಿಕ್ ಆಹಾರ ಎಂದು ಗುರುತಿಸಲ್ಪಟ್ಟಿರುವ ಉಪ್ಪಿನಕಾಯಿ ಸಹ ಹೇರಳವಾದ ಸೋಡಿಯಂ ಅನ್ನು ಹೊಂದಿರುತ್ತದೆ. ಸ್ನಾಯುಗಳ ಸಮರ್ಪಕ ಕಾರ್ಯನಿರ್ವಹಣೆಗೆ ಇದೂ ಅತ್ಯವಶ್ಯಕ.
- ಮೆಗ್ನೀಶಿಯಂ ಮತ್ತು ಕ್ಯಾಲ್ಸಿಯಂ ಅಧಿಕವಾಗಿರುವ ಪಾಲಕ್ ಸೊಪ್ಪು ಮತ್ತು ಎಲೆಕೋಸು ಆಹಾರದಲ್ಲಿರಲಿ.
- ಕಿತ್ತಳೆಹಣ್ಣು, ಟೊಮೆಟೊ ರಸದಲ್ಲಿಯೂ ಲವಣಾಂಶಗಳು ಅಧಿಕವಾಗಿದ್ದು ಲಭ್ಯವಿದ್ದಲ್ಲಿ ಸೇವಿಸಬೇಕು.
- ಬಾದಾಮಿ, ಸೂರ್ಯಕಾಂತಿ ಬೀಜಗಳಲ್ಲಿಯೂ ಮೆಗ್ನೀಶಿಯಂ ಲವಣವಿದ್ದು, ನಿಯಮಿತ ಸೇವನೆ ಆರೋಗ್ಯವನ್ನು ವೃದ್ಧಿಸಬಹುದು.

❖

ಕೇಶ ಆಗದಿರಲಿ ಅನಾರೋಗ್ಯದ ಪಾಶ

ಡಾ. ಪಲ್ಲವಿ ಹೆಗಡೆ

ಸೌಂದರ್ಯ ಮತ್ತು ಆರೋಗ್ಯವನ್ನು ಕೂದಲಿನ ಮೂಲಕ ಅಳೆಯಬಹುದು. ಸೊಂಪಾದ ನೀಳಕೇಶ ಕೂದಲಿನ ಆರೋಗ್ಯ ಸೂಚಕವೂ ಹೌದು. ಬೇಸಿಗೆಯಲ್ಲಿ ತಾಪಮಾನ ಏರುತ್ತಿರುವಾಗ ಕೂದಲು ಉದುರುವುದು, ಒರಟು ಕೂದಲು, ಸೀಳು ಕೂದಲು, ತಲೆಹೊಟ್ಟು, ಬೆವರಿನ ಗುಳ್ಳೆಗಳು ಸಾಮಾನ್ಯವಾಗಿ ಕಾಡುವುದು.

ಕೂದಲಿನ ಆರೈಕೆ ಹೀಗಿರಲಿ

- ಬೆವರುವ ವಾತಾವರಣದಲ್ಲಿ ದಿನವೂ ತಲೆಸ್ನಾನವನ್ನು ಮಾಡುವುದು ಸೂಕ್ತ. ವಾರಕ್ಕೊಮ್ಮೆ ಮಾತ್ರ ತಲೆಯನ್ನು ತೊಳೆಯುವುದು ಬೆವರಿನ ಗುಳ್ಳೆ, ತಲೆಹೊಟ್ಟು, ಉದುರುವುದಕ್ಕೆ ಕಾರಣ. ಕೂದಲಿನಿಂದ ಕೂಡಿದ ತಲೆಯ ಭಾಗದಲ್ಲಿ ಬೆವರು ನಿಂತು, ಕೂದಲಿನ ಬುಡದಲ್ಲಿ ಉಷ್ಣತೆ ಹೆಚ್ಚಿ, ಕೇಶಕೂಪವು ಮುಚ್ಚಿಕೊಂಡು ಕೂದಲಿನ ಪೋಷಣೆಗೆ ಹಾನಿ ತರುತ್ತದೆ. ಚಳಿಗಾಲದಲ್ಲಿ ವಾರಕ್ಕೆ ಮೂರು ಬಾರಿ ತಲೆಯ ಸ್ನಾನವನ್ನು ಮಾಡಬಹುದು. ಅಥವಾ ವೃತ್ತಿ, ದಿನಚರಿಯ ಆಧಾರದ ಮೇಲೆ ಬೆವರುವಿಕೆ, ತಾಪಮಾನಕ್ಕೆ ತಲೆಯನ್ನು ಒಡ್ಡುವುದನ್ನು ಗಮನಿಸಿ ತಲೆಸ್ನಾನವನ್ನು ಮಾಡಬಹುದು.
- ತಲೆಸ್ನಾನಕ್ಕೂ ಮುನ್ನ ಕೂದಲಿನ ಬುಡಕ್ಕೆ ಎಣ್ಣೆಯನ್ನು ಮೃದುವಾಗಿ ಸವರುವುದು ಕೂದಲು, ಕಣ್ಣು, ಕಿವಿಗಳನ್ನು, ಮುಖದ ಚರ್ಮಕ್ಕೂ ಪೋಷಣೆಯನ್ನು ನೀಡುತ್ತದೆ. ಒರಟು, ಸೀಳು ಕೂದಲಿನ ಸಮಸ್ಯೆ, ತಲೆಹೊಟ್ಟು, ಬೆವರುಸಾಲೆ, ಕೂದಲು ಉದುರುವುದನ್ನು ಎಣ್ಣೆಯನ್ನು ಹಚ್ಚುವುದರಿಂದ ತಡೆಯಬಹುದು, ಹೋಗಲಾಡಿಸಬಹುದು. ಇದು 'ಶಿರೋಭ್ಯಂಗ' ಎಂಬ ದಿನಚರಿ; ನಿತ್ಯವೂ ಮಾಡಿಕೊಳ್ಳಬೇಕಾದ ಆರೈಕೆ. ಶಿರೋಭ್ಯಂಗದಿಂದ ಮುಖದ ಕಾಂತಿ, ಕಣ್ಣಿನ ದೃಷ್ಟಿಶಕ್ತಿ, ಕಿವಿಯ ಕಾರ್ಯಕ್ಷಮತೆ, ಕೂದಲಿನ ಆರೋಗ್ಯವು ದೀರ್ಘಕಾಲ ಉಳಿಯುತ್ತದೆ.
- ರಾಸಾಯನಿಕ, ತೀಕ್ಷ್ಣ ಮಾರ್ಜಕಗಳ ಪ್ರಯೋಗವನ್ನು ಮಾಡಿದಷ್ಟೂ ಕೂದಲಿನ ಸಹಜವಾದ ಮೃದುತ್ವವು ಮಾಯವಾಗುತ್ತದೆ. ನಿತ್ಯವೂ ತಣ್ಣೀರಿನಿಂದ ತಲೆಯನ್ನು ಚೆನ್ನಾಗಿ ತೊಳೆಯುವುದು ಸೂಕ್ತ. ಮೂರು ದಿನಗಳಿಗೊಮ್ಮೆ ಶೀಗೆ, ಅಂಟವಾಳದ ನೊರೆ, ದಾಸವಾಳ, ಮೆಂತೆಕಾಳಿನ ಲೋಳೆ, ಇವುಗಳನ್ನು ಉಪಯೋಗಿಸಿ ತಲೆಯನ್ನು ತೊಳೆಯಬಹುದು. ಪ್ರಾಕೃತಿಕ ಮಾರ್ಜಕಗಳು ಕೂದಲಿನ ಸಹಜವಾದ ವರ್ಣ, ಮೃದುತ್ವವನ್ನು ಕಾಪಾಡುತ್ತವೆ. ಮೃದುವಾದ, ತೀಕ್ಷ್ಣಮಾರ್ಜಕಗಳಿರದ ಶಾಂಪೂ, ಹೇರ್‌ವಾಶ್‌ಗಳನ್ನು ಬಳಸಬಹುದು.
- ಕೃತ್ರಿಮಬಣ್ಣಗಳ ಪ್ರಯೋಗದಿಂದ ಕಣ್ಣು, ತಲೆಯ ಚರ್ಮ, ಕೂದಲಿನ ಆರೋಗ್ಯಕ್ಕೆ ಹಾನಿ. ಕ್ರಮೇಣವಾಗಿ ದೃಷ್ಟಿಮಂಜಾಗುವುದು, ಕೂದಲು ಒರಟಾಗುವುದು, ಸೀಳುವುದು, ಉದುರುವುದು. ನೈಸರ್ಗಿಕವಾಗಿ ಲಭ್ಯವಿರುವ ಕೇಶಕ್ಕೆ ಹಾನಿಕರವೂ ಅಲ್ಲದ ಕೂದಲಿಗೆ ಬಣ್ಣವನ್ನು, ಅಂದವನ್ನೂ ನೀಡುವ ದಾಸವಾಳದ ಎಲೆ-ಹೂವು, ಮೆಂತೆಕಾಳಿನ ಕಲ್ಕ, ಮತ್ತಿಸೊಪ್ಪು, ನೀಲಿನಿ, ಮದರಂಗಿ ಎಲೆಗಳನ್ನು ಬಳಸಬಹುದು.
- ತಲೆಯ ಸ್ನಾನಕ್ಕೆ ಚಳಿಗಾಲ, ಮಳೆಗಾಲದಲ್ಲಿ ಅತ್ಯಂತ ಬೆಚ್ಚಗಿನ ನೀರು ಹಿತಕರ. ಬೇಸಿಗೆಯಲ್ಲಿ ತಣ್ಣೀರು ಸ್ನಾನವೇ ಹಿತಕರ. ನಂತರ ಹತ್ತಿಯ ಬಟ್ಟೆಯನ್ನು ಸುತ್ತಿಕೊಂಡು ಒಳಗೆ ಬಿಸಿಯೆನಿಸಿದ ಮೇಲೆ, ಬಟ್ಟೆ ತೆಗೆದು ಹಾಗೆಯೇ ಕೂದಲು ಆರಲು ಬಿಡಬೇಕು.
- ಫ್ಯಾನ್, ಎ.ಸಿ.ಯಂತಹ ಶೀತಲೀಕರಣ ವಿಧಾನಕ್ಕೆ ಸತತವಾಗಿ ತಲೆ-ಮೈ ಒಡ್ಡುವುದು ಕೂದಲಿನ ಒರಟುತನ, ತಲೆಹೊಟ್ಟು, ಉದುರುವುದಕ್ಕೆ ಕಾರಣ. ಅಗತ್ಯವಿದ್ದಾಗ ಮಿತವಾಗಿಯೇ ಬಳಕೆಯಿರಲಿ. ತಲೆಗೆ ತೆಳುಬಟ್ಟೆಯ ಹೊದಿಕೆಯಿರಲಿ.
- ತಲೆಯನ್ನು ಸುತ್ತಿಕೊಳ್ಳದೆ, ಕೂದಲನ್ನು ಕಟ್ಟದೆ ಬಿಚ್ಚಿಕೊಂಡು ಪ್ರಯಾಣಿಸುವುದು ಒರಟುತನಕ್ಕೆ ಕಾರಣ. ಕೂದಲಿನ ಬುಡಕ್ಕೆ ಹಾನಿಕರ. ಬೀಸುವ ಗಾಳಿ, ಬಿಸಿಲು, ಹೇರ್ ಡ್ರೈಯರ್‌ನಿಂದ ತಲೆಒಣಗಿಸುವುದು ಕೂಡ ಹಾನಿಕರ. ಅತಿಶೀತ, ಅತಿಉಷ್ಣ - ಇವೆರಡೂ ಕೂದಲಿಗೆ ಹಾನಿಕರ.
- ರಾತ್ರಿ ಮಲಗುವಾಗ ತಲೆಗೆ ಎಣ್ಣೆ ಸುರಿದುಕೊಳ್ಳುವ ಅಭ್ಯಾಸದಿಂದ ಕೂದಲಿನ ಬುಡವು ಮುಚ್ಚಿಹೋಗುವುದು. ಇದರಿಂದ ಕೂದಲು ಉದುರುವುದು, ತಲೆಹೊಟ್ಟು ಕಾಣಿಸಿಕೊಳ್ಳುವುದು. ಆದ್ದರಿಂದ ಸ್ನಾನಕ್ಕೂ ಮುನ್ನ ಅರ್ಧ ಗಂಟೆ ಮೊದಲು ಎಣ್ಣೆಯನ್ನು ಸವರುವುದು ಸೂಕ್ತ.
- ತಡರಾತ್ರಿ ಊಟ, ರಾತ್ರಿಯ ಆಹಾರದ ನಂತರ ನೀರು, ಹಾಲು, ಬಾಳೇಹಣ್ಣು ಇತ್ಯಾದಿ ತಿನ್ನುವ / ಕುಡಿಯುವ ಅಭ್ಯಾಸ, ರಾತ್ರಿ ಮೊಸರು, ಮಜ್ಜಿಗೆ ಕುಡಿಯುವ ಅಭ್ಯಾಸಗಳಿಂದ ತಲೆಹೊಟ್ಟು ಕಾಣಿಸಿಕೊಳ್ಳುವುದು. ಖಾರ, ಹುಳಿ, ಉಪ್ಪುರುಚಿಯ ಗೊಜ್ಜು, ಉಪ್ಪಿನಕಾಯಿ, ಮಸಾಲೆಪದಾರ್ಥಗಳ ಬಳಕೆಯಿಂದ ಕೂದಲು ಉದುರುವುದು, ಕಳೆಗುಂದುವುದು. ಇಂತಹ ಆಹಾರಗಳ ಸೇವನೆಯಲ್ಲಿ ಮಿತವಿರಲಿ. ರಕ್ತವನ್ನು ಕೆಡಿಸುವ ಅತಿಯಾದ ತೀಕ್ಷ್ಣ, ಕ್ಷಾರೀಯ ಪದಾರ್ಥಗಳು ಕೂದಲನ್ನು ಹಾಳುಗೆಡವುತ್ತವೆ. ಸೋಡಾ, ಕಾರ್ಬೋನೇಟೆಡ್ ಡ್ರಿಂಕ್ಸ್, ಮದ್ಯಪಾನ, ಧೂಮಪಾನ ಇವುಗಳು ಕೂಡ ಕೂದಲಿನ ಅನಾರೋಗ್ಯಕ್ಕೆ ಕಾರಣ.
- ರಾತ್ರಿ ಜಾಗರಣೆಯ ಅಭ್ಯಾಸದಿಂದ ಕೂದಲು ಉದುರುವುದು, ಕಳೆಗುಂದುವುದು, ತಲೆಹೊಟ್ಟಿಗೂ ಕಾರಣ. ಆದ್ದರಿಂದ ರಾತ್ರಿ ಬೇಗನೆ ಮಲಗುವ ಅಭ್ಯಾಸ ಹಿತಕರ.
- ಆಹಾರದಲ್ಲಿ ಹಾಲು, ಬೆಣ್ಣೆ, ತುಪ್ಪ, ತೆಂಗಿನಕಾಯಿ, ಕೊಬ್ಬರಿಎಣ್ಣೆ, ತೆಂಗಿನ ಕಾಯಿಯ ಹಾಲು, ಎಣ್ಣೆಕಾಳುಗಳಾದ ಬಾದಾಮಿ, ವಾಲ್‌ನಟ್, ಚಿರೋಂಜಿ ಮೊದಲಾದ ಉತ್ತಮ ಕೊಬ್ಬುಪದಾರ್ಥಗಳ ಬಳಕೆಯು ಕೂದಲಿನ ಆರೋಗ್ಯವನ್ನು ಕಾಪಾಡುತ್ತದೆ.
- ಸಕಾಲದಲ್ಲಿ ಆಹಾರ, ರಾತ್ರಿ ಬೇಗನೆ ನಿದ್ರೆ, ಹಗಲಲ್ಲಿ ಹಿತ-ಮಿತ ಚಟುವಟಿಕೆ, ದೇಹದ ಅಗತ್ಯಗಳನ್ನು ಸಕಾಲದಲ್ಲಿ ಪೂರೈಸುವುದು ಸದಾ ಆರೋಗ್ಯಕರ.

❖

ನೀಟ್- ಪಿಯುಸಿ ಸಿಇಟಿ ಪರೀಕ್ಷೆ ದಿಕ್ಸೂಚಿ

II PUC MATHS

MULTIPLE CHOICE QUESTIONS

23) If $|x + 5| \geq 10$ then

a) $x \in (-15, 5]$ b) $x \in (-5, 5]$
c) $x \in (-\infty, -15] \cup [5, \infty)$
d) $x \in [-\infty, -15] \cup [5, \infty)$

Ans: (c)

$\Rightarrow |x + 5| \geq 10$
$\Rightarrow x + 5 \leq -10$ or $x + 5 \geq 10$
$\Rightarrow x \leq -15$ or $x \geq 5$
$\Rightarrow x \in (-\infty, -15] \cup [5, \infty)$

24) The constant term in the expansion of $(x^2 - [1 / x^2])^{16}$ is ……..

a) ${}^{16}C_8$ b) ${}^{16}C_7$
c) ${}^{16}C_9$ d) ${}^{16}C_{10}$

Answer: (a)

Let T_{r+1} be the constant term.

$\Rightarrow T_{r+1} = {}^{16}C_r (x^2)^{16-r} (1 / x^2)^r$
$= {}^{16}C_r x^{32 - 4r}$

For constant term $32 - 4r = 0$

$\Rightarrow 4r = 32$
$\Rightarrow r = 8$
$\Rightarrow T_{8+1} = {}^{16}C_8$

25) The product of the degree and other of the D.E. $\left(\frac{d^2y}{dx^2}\right)^2 - \left(\frac{dy}{dx}\right)^3 = y^3$ is

(A) 4 **(B) 6**
(C) 2 **(D) 3**

Ans: (A) 4

Expln:- The order of a differential equation is that of the highest order derivative. Here it is 2.

The degree of a D.E. is the degree of the highest ordered derivative. Here it is 2. Their product is 4

9. The value of the integral $\int_0^{\pi} \frac{x \sin^{2n} x}{\sin^{2n} x + \cos^{2n} x} dx$ is

(A) π^2 (B) $2\pi^2$
(C) $\frac{\pi^2}{4}$ (D) $\frac{\pi^2}{2}$

Ans : (C) $\frac{\pi^2}{4}$

$$I = \int_0^{\pi} \frac{x \sin^{2n} x \, dx}{\sin^{2n} x + \cos^{2n} x} \quad ...(1)$$

$$I = \int_0^{\pi} \frac{(\pi - x) \sin^{2n} (\pi - x)}{\sin^{2n} x + \cos^{2n} x} dx = \int_0^{\pi} \frac{(\pi - x) \sin^{2n} x}{\sin^{2n} x + \cos^{2n} x} dx \quad ...(2)$$

Adding (1) and (2),

$$2I = \pi \int_0^{\pi} \frac{x \sin^{2n} x \, dx}{\sin^{2n} x + \cos^{2n} x}$$

$$2I = \pi . 2 \int_0^{\pi/2} \frac{\sin^{2n} x \, dx}{\sin^{2n} x + \cos^{2n} x} \text{ (applying } \int_0^{2a} f(x) dx = 2\int_0^{a} f(x) dx \text{ if } f(2a - x) = f(x)]$$

$$I = \pi \int_0^{\pi/2} \frac{\sin^{2n} x}{\sin^{2n} x + \cos^{2n} x} dx \quad ...(3)$$

$$= \pi \int_0^{\pi/2} \frac{\sin^{2n}\left(\frac{\pi}{2} - x\right)}{\sin^{2n}\left(\frac{\pi}{2} - x\right) + \cos^{2n}\left(\frac{\pi}{2} - x\right)} dx$$

$$I = \pi \int_0^{\pi/2} \frac{\cos^{2n} x}{\cos^{2n} x + \sin^{2x} n} dx \quad ...(4)$$

Adding (3) and (4), $2I = \pi \int_0^{\pi/2} \frac{\sin^{2n} x + \cos^{2n} x}{\sin^{2n} x + \cos^{2n} x} dx$

$2I = \pi \int_0^{\pi/2} dx.$ $2I = \pi[x]_0^{\pi/2} = \pi . \frac{\pi}{2}$ $\therefore I = \frac{\pi^2}{4}.$

26) Everybody in a room shakes hands with everybody else. The total number of handshakes is 45. The total number of persons in the room is

a) 9 b) 10
c) 5 d) 15

Answer: (b)

Let the total number of handshake = ${}^nC_2$
We know $\Rightarrow {}^nC_2 = 45$
$\Rightarrow n! / 2! !(n - 2)! = 45$
$\Rightarrow n (n - 1) / 2 = 45$
$\Rightarrow n^2 - n - 90 = 0$
$\Rightarrow n = 10, -9$ (not possible)
Total no. of persons in the room is 10.

27) If $\begin{bmatrix} 1 & 1 \\ -1 & 1 \end{bmatrix}\begin{bmatrix} x \\ y \end{bmatrix} = \begin{bmatrix} 2 \\ 4 \end{bmatrix}$ then the Value of x and y respectively are

A) -3 , -1 **B) 1, 3**
C) 3, 1 **D) -1, 3**

Ans:- D

Expln:-

$$\begin{bmatrix} 1 & 1 \\ -1 & 1 \end{bmatrix}\begin{bmatrix} x \\ y \end{bmatrix} = \begin{bmatrix} x + y \\ -x + y \end{bmatrix} = \begin{bmatrix} 2 \\ 4 \end{bmatrix}$$

x + y = 2
-x + y = 4
Add 2y - 6 $\therefore y = 3$ **Then x = -1**

Ans:- -1, 3

28) $\int \frac{x^3 - 1}{x^3 + x} dx =$

(A) $x - \log x + \log (x^2 + 1) - \tan^{-1} x + c$
(B) $x - \log x + \frac{1}{2} \log (x^2 + 1) - \tan^{-1} x + c$
(C) $x + \log x + \log (x^2 + 1) - \tan^{-1} x + c$
(D) $x + \log x + \frac{1}{2} \log (x^2 + 1) - \tan^{-1} x + c$

Ans : (B) $x - \log x + \frac{1}{2} \log (x^2 + 1) - \tan^{-1} x +$

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

NEET BIOLOGY

25) Given below are two statements:

Statement I: Ligaments are dense irregular tissue
Statement II: Cartilage is dense regular tissue. In the light of above statements

choose the correct answer from the option given below:

a) Statement I is false but Statement III is true.
b) Both Statement I and II are true
c) Both Statement I and II are false
d) Statement I is true but Statement II is false

Ans:- (c) Ligaments are dense regular connective tissue that connect bone to bone. Cartilage is one of the types of specialised connective tissues

26) Which of the following situations correctly describe the similarity between an angiosperm egg and a human egg?

i. Eggs of both are formed only once in a lifetime
ii. Both the angiosperm egg and human egg are stationary
iii. Both the angiosperm egg and human egg are motile transported
iv. Syngamy in both results in the formation of zygote

Choose the correct answer from the options given below:

a) ii and iv b) iv only
c) iii and iv d) i and iv

Ans:- b

27) Appearance of vegetative propagules from the nodes of plants such as sugarcane and ginger is mainly because:

a) Nodes are shorter than internodes
b) Nodes have meristematic cells
c) Nodes are located near the soil
d) Nodes have non-photosynthetic cells

Ans:- b

28) Given below are two statements: One is labelled as Assertion A and the other is labelled as Reason R

Assertion A: ATP is used at two steps in glycolysis.
Reason R: First ATP is used in converting glucose into glucose-6-phosphate and second ATP is used in conversion of fructose-6- phosphate into fructose-1-6-diphosphate.

In the light of the above statements, choose the correct answer from the options given below is true,

a) A is false but R is true.
b) Both A and R are true and R is the correct explanation of A
c) Both A and R are true but R is NOT the correct explanation of A.
d) A is true but R is false.

Ans:- (b) ATP is utilised at two steps: first in the conversion of glucose into glucose 6-phosphate and second in the conversion of fructose 6-phosphate to fructose 1, 6-bisphosphate

29) Which of the following statements, support the view that elaborate sexual reproductive process appeared much later in the organic evolution?

i. Lower groups of organisms have simpler body design
ii. Asexual reproduction is common in lower groups
iii. Asexual reproduction is common in higher groups of organisms
iv. The high incidence of sexual reproduction in angiosperms and vertebrates

Choose the correct answer from the options given below:

a) i and ii b) i and iii
c) ii and iv d) ii and iii

Ans:- c

30) Offspring formed by sexual reproduction exhibit more variation than those formed by Asexual reproduction because:

a) Sexual reproduction is a lengthy process
b) Gametes of parents have qualitatively different genetic composition
c) Genetic material comes from parents of two different species
d) Greater amount of DNA is involved in sexual reproduction.

Ans:- b

31) Choose the correct statement from amongst the following:

a) Dioecious (hermaphrodite) organisms are seen only in animals
b) Dioecious organisms are seen only in plants
c) Dioecious organisms are seen in both plants and animals
d) Dioecious organisms are seen only in vertebrates

Ans:- c

32) There is no natural death in single celled organisms like Amoeba and bacteria because:

a) They cannot reproduce sexually
b) They reproduce by binary fission
c) Parental body is distributed among the offspring
d) They are microscopic

Ans:- c

33) There are various types of reproduction. The type of reproduction adopted by an organism depends on:

(Contd…..)

ಮಾಲೀಕರ ಮನೆಯಲ್ಲಿ ಕೃತ್ಯ: ತಂದೆ– ಮಗ ಸೆರೆ

ವಜ್ರ, ಚಿನ್ನ ಕಳ್ಳತನ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದನಾಯಕನಹಳ್ಳಿ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಮಿರ್ಜಾ ಸೈಯದ್ ಬೇಗ್ (19) ಹಾಗೂ ತಂದೆ ಮಿರ್ಜಾ ದಾದಾ ನುರುದ್ದೀನ್ ಬೇಗ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಬಳ್ಳಾರಿ ಜಿಲ್ಲೆಯ ಕಂಪ್ಲಿಯ ಸೈಯದ್ ಬೇಗ್ ಹಾಗೂ ದಾದಾ ನುರುದ್ದೀನ್ ಬೇಗ್ ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಕಡಬಗೆರೆಯಲ್ಲಿ ವಾಸವಿದ್ದರು. ಕಳ್ಳತನ ಪ್ರಕರಣದಡಿ ಇವರಿಬ್ಬರನ್ನು ಬಂಧಿಸಿ, 1.25 ಕೆ.ಜಿ ಚಿನ್ನಾಭರಣ, 2 ಕೆ.ಜಿ ಬೆಳ್ಳಿ ಸಾಮಗ್ರಿ ಹಾಗೂ ₹ 21.5 ಲಕ್ಷ ನಗದು ಜಪ್ತಿ ಮಾಡಲಾಗಿದೆ' ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಕಡಬಗೆರೆಯ ದೂರುದಾರ, ಬಹುಮಹಡಿ ಕಟ್ಟಡದಲ್ಲಿ ವೃದ್ಧಾಶ್ರಮ ಹಾಗೂ ಪುನರ್ವಸತಿ ಕೇಂದ್ರ ನಡೆಸುತ್ತಿದ್ದಾರೆ. ಇದೇ ಕಟ್ಟಡದ ನೆಲ ಮಹಡಿಯಲ್ಲಿ ಅವರು ವಾಸವಿದ್ದಾರೆ. ಸೈಯದ್ ಬೇಗ್, ದೂರುದಾರರ ಮನೆ ಹಾಗೂ ವೃದ್ಧಾಶ್ರಮದಲ್ಲಿ ಸ್ವಚ್ಛತೆ ಕೆಲಸ ಮಾಡುತ್ತಿದ್ದ. ದೂರುದಾರರ ಹಣಕಾಸಿನ ವ್ಯವಹಾರದ ಬಗ್ಗೆ ಆರೋಪಿಗೆ ಮಾಹಿತಿ ಇತ್ತು' ಎಂದರು.

'ಅಸ್ತಿ ಖರೀದಿಸಲು ಯೋಜಿಸುತ್ತಿದ್ದ ದೂರುದಾರ, ಅದಕ್ಕಾಗಿ ಹಣ ಹೊಂದಿಸಿ ಮನೆಯಲ್ಲಿಟ್ಟಿದ್ದರು. ಇದನ್ನು ಆರೋಪಿ ಸೈಯದ್ ಬೇಗ್ ನೋಡಿದ್ದ. ಕಳ್ಳತನ ಮಾಡಲು ತಂದೆ ಜೊತೆ ಸೇರಿ ಸಂಚು ರೂಪಿಸಿದ್ದ. ಯುಗಾದಿ ಹಬ್ಬದಂದು ದೂರುದಾರ ಬೇರೆಡೆ ಹೋಗಿದ್ದರು. ಇದೇ ಸಂದರ್ಭದಲ್ಲಿ ಮನೆಗೆ ನುಗ್ಗಿದ್ದ ತಂದೆ-ಮಗ, ವಜ್ರ-ಚಿನ್ನಾಭರಣ ಹಾಗೂ ನಗದು ಕದ್ದುಕೊಂಡು ಪರಾರಿಯಾಗಿದ್ದರು' ಎಂದು ತಿಳಿಸಿದರು.

'ಕಳ್ಳತನ ಬಗ್ಗೆ ಯಾವುದೇ ಪುರಾವೆ ಸಿಗಬಾರದೆಂದು ಆರೋಪಿಗಳು, ಮನೆಯಲ್ಲೇ ಖಾರದ ಪುಡಿ ಚೆಲ್ಲಿದ್ದರು. ಕೆಲಸ ಮುಗಿಸಿಕೊಂಡು ಮನೆಗೆ ಬಂದಿದ್ದ ದೂರುದಾರ, ಪರಿಶೀಲನೆ ನಡೆಸಿದಾಗ ಕಳ್ಳತನ ನಡೆದಿದ್ದು ಗೊತ್ತಾಗಿತ್ತು. ಠಾಣೆಗೆ ಮಾಹಿತಿ ನೀಡಿದ್ದರು' ಎಂದು ಹೇಳಿದರು.

'ಸೈಯದ್ ಬೇಗ್ ತಂದೆ ದಾದಾ ನುರುದ್ದೀನ್ ಬೇಗ್, ಆಟೊ ಚಾಲಕ. ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ. ಚಿಕಿತ್ಸೆ ಸಾಕಷ್ಟು ಹಣ ಖರ್ಚಾಗಿತ್ತು. ಅದಕ್ಕಾಗಿ ಸಾಲ ಸಹ ಮಾಡಿದ್ದರು. ಸಾಲ ತೀರಿಸಿ ಉಳಿದ ಹಣದಲ್ಲಿ ಐಷಾರಾಮಿ ಜೀವನ ನಡೆಸುವುದಕ್ಕಾಗಿ ಮಗ-ತಂದೆ ಕಳ್ಳತನ ಎಸಗಿದ್ದರೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದರು.

ಕೊಠಡಿಯಲ್ಲಿ ಬೆಂಕಿ: ಮಗು ಸಜೀವ ದಹನ

ಬೆಂಗಳೂರು: ಆರ್‌.ಟಿ. ನಗರ ಠಾಣೆ ವ್ಯಾಪ್ತಿಯಲ್ಲಿರುವ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಕೊಠಡಿಯಲ್ಲಿ ಭಾನುವಾರ ಬೆಂಕಿ ಅವಘಡ ಸಂಭವಿಸಿದ್ದು, ಘಟನೆಯಲ್ಲಿ ನಾಲ್ಕು ವರ್ಷದ ಮಗು ಅನುಷ್ ಸಜೀವ ದಹನವಾಗಿದೆ.

'ಮೃತ ಅನುಷ್, ನೇಪಾಳದ ಪೂರನ್ ಖಂಡಕ್ ಮತ್ತು ಲಕ್ಷ್ಮಿ ದಂಪತಿ ಮಗ. ವಿದ್ಯುತ್ ಶಾರ್ಟ್ ಸರ್ಕೀಟ್‌ನಿಂದ ಬೆಂಕಿ ಹೊತ್ತಿಕೊಂಡು ಅವಘಡ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಪೂರನ್ ಖಂಡಕ್ ಮತ್ತು ಲಕ್ಷ್ಮಿ, ಅವರು ಕೆಲಸ ಹುಡುಕಿಕೊಂಡು ನಾಲ್ಕು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಸುಲ್ತಾನ್‌ಪಾಳ್ಯದ ರಿಯಾನ್ ವುಡ್ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಪೂರನ್ ಭದ್ರತಾ ಸಿಬ್ಬಂದಿ ಆಗಿ ಕೆಲಸಕ್ಕೆ ಸೇರಿದ್ದರು. ಲಕ್ಷ್ಮಿ, ಅಕ್ಕ-ಪಕ್ಕದ ಮನೆಗಳಲ್ಲಿ ಸ್ವಚ್ಛತೆ ಕೆಲಸ ಮಾಡುತ್ತಿದ್ದರು' ಎಂದು ತಿಳಿಸಿದರು.

'ನಾಲ್ಕು ಮಹಡಿಯ ಅಪಾರ್ಟ್‌ಮೆಂಟ್ ಸಮುಚ್ಚಯದ ಚಾವಣಿಯಲ್ಲಿದ್ದ ಕೊಠಡಿಯಲ್ಲಿ ಪೂರನ್ ಖಂಡಕ್ ದಂಪತಿ ನೆಲೆಸಿದ್ದರು. ಅದೇ ಕೊಠಡಿಯಲ್ಲಿ ಬೆಂಕಿ ಅವಘಡ ಸಂಭವಿಸಿತ್ತು' ಎಂದು ಹೇಳಿದರು.

ಕೆಲಸಕ್ಕೆ ಹೋಗಿದ್ದ ದಂಪತಿ: 'ಪೂರನ್ ಹಾಗೂ ಲಕ್ಷ್ಮಿ, ಮಗುವನ್ನು ಕೊಠಡಿಯಲ್ಲಿ ಮಲಗಿಸಿ ಹೊರಗಿನಿಂದ ಬೀಗ ಹಾಕಿಕೊಂಡು ಕೆಲಸಕ್ಕೆ ಹೋಗುತ್ತಿದ್ದರು. ಭಾನುವಾರವೂ ಬೀಗ ಹಾಕಿಕೊಂಡು ದಂಪತಿ ಕೆಲಸಕ್ಕೆ ಹೋಗಿದ್ದರು. ಮಗು ಒಳಗೆಯೇ ಇತ್ತು' ಎಂದು ಪೊಲೀಸರು ಹೇಳಿದರು.

'ಸಂಜೆ ಕೊಠಡಿಯಿಂದ ದಟ್ಟ ಹೊಗೆ ಬರಲಾರಂಭಿಸಿತ್ತು. ಅದನ್ನು ಗಮನಿಸಿದ್ದ ಸ್ಥಳೀಯರು, ಪೂರನ್‌ಗೆ ವಿಷಯ ತಿಳಿಸಿದ್ದರು. ಪೂರನ್ ಕೊಠಡಿಗೆ ಹೋಗಿ ಬಾಗಿಲು ತೆರೆದು ನೋಡಿದಾಗ, ಮಗು ಸುಟ್ಟು ಕರಕಲಾಗಿದ್ದು ಕಂಡಿತ್ತು' ಎಂದು ತಿಳಿಸಿದರು.

'ದಂಪತಿ ಮಗುವನ್ನು ಕೊಠಡಿಯಲ್ಲಿ ಒಂಟಿಯಾಗಿ ಬಿಟ್ಟು ಹೋಗಿದ್ದರು. ಇದೇ ಸಂದರ್ಭದಲ್ಲಿ ಬೆಂಕಿ ಹೊತ್ತಿಕೊಂಡು ಇಡೀ ಕೊಠಡಿ ಆವರಿಸಿತ್ತು. ಬೆಂಕಿ ತಗುಲಿ ಮಗು ಸಹ ಸಜೀವವಾಗಿ ದಹನವಾಗಿದೆ' ಎಂದು ಅವರು ಮಾಹಿತಿ ನೀಡಿದರು.

ಟ್ಯಾಂಕರ್– ಬೈಕ್ ಡಿಕ್ಕಿ: ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ನೀರಿನ ಟ್ಯಾಂಕರ್ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಹಿಂಬದಿ ಸವಾರ ಆರ್. ಹರೀಶ್ (32) ಎಂಬುವವರು ಮೃತಪಟ್ಟಿದ್ದಾರೆ.

'ಅಂದ್ರಹಳ್ಳಿಯ ಹರೀಶ್, ಆಟೊ ಚಾಲಕ. ಸ್ನೇಹಿತ ಸುಚಿತ್ ಜೊತೆ ಭಾನುವಾರ ತಡರಾತ್ರಿ ಬೈಕ್‌ನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು.

'ಸುಚಿತ್ ಬೈಕ್ ಚಲಾಯಿಸುತ್ತಿದ್ದರು. ಹಿಂಬದಿಯಲ್ಲಿ ಹರೀಶ್ ಕುಳಿತಿದ್ದರು. ಮಾಗಡಿ ಮುಖ್ಯರಸ್ತೆಯಿಂದ ಹೊಸಹಳ್ಳಿಗೆ ಸಂಪರ್ಕ ಕಲ್ಪಿಸುವ ತುಂಗಾನಗರ ಮುಖ್ಯರಸ್ತೆಯಲ್ಲಿ ಬೈಕ್ ಹೊರಟಿತ್ತು. ಇದೇ ರಸ್ತೆಯಲ್ಲಿ ಎದುರಿಗೆ ಬಂದ ನೀರಿನ ಟ್ಯಾಂಕರ್, ಬೈಕ್‌ಗೆ ಡಿಕ್ಕಿ ಹೊಡೆದಿತ್ತು' ಎಂದರು.

'ಅಪಘಾತದಿಂದಾಗಿ ಬೈಕ್ ಉರುಳಿಬಿದ್ದಿತ್ತು. ಹಿಂಬದಿ ಸವಾರ ಹರೀಶ್ ಅವರು ನೀರಿನ ಟ್ಯಾಂಕರ್ ಅಡಿ ಸಿಲುಕಿದ್ದರು. ಅತೀ ವೇಗದಲ್ಲಿದ್ದ ಟ್ಯಾಂಕರ್, ಹರೀಶ್ ಅವರನ್ನು ಉಜ್ಜಿಕೊಂಡು ಕೆಲ ಮೀಟರ್ ಮುಂದಕ್ಕೆ ಹೋಗಿ ನಿಂತುಕೊಂಡಿತ್ತು' ಎಂದು ಪೊಲೀಸರು ಹೇಳಿದರು.

'ರಕ್ತದ ಮಡುವಿನಲ್ಲಿ ಬಿದ್ದಿದ್ದ ಹರೀಶ್ ಹಾಗೂ ಗಾಯಾಳು ಸುಚಿತ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ದಿದ್ದರು. ಹರೀಶ್ ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು. ಸುಚಿತ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಅವರು ತಿಳಿಸಿದರು.

'ನೀರಿನ ಟ್ಯಾಂಕರ್ ಚಾಲಕನ ಅತೀ ವೇಗದ ಚಾಲನೆ ಹಾಗೂ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಹರೀಶ್ ಪತ್ನಿ ನೀಡಿರುವ ದೂರು ಆಧರಿಸಿ, 'ಶ್ರೀ ಕೃಷ್ಣ ವಾಟರ್ ಟ್ಯಾಂಕರ್' ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅಪಘಾತದ ಬಳಿಕ ಟ್ಯಾಂಕರ್ ಸ್ಥಳದಲ್ಲೇ ಬಿಟ್ಟು ಚಾಲಕ ಪರಾರಿಯಾಗಿದ್ದಾನೆ' ಎಂದು ಪೊಲೀಸರು ಹೇಳಿದರು.

'ಬೆಂಗಳೂರು ಕರಗ' ಉತ್ಸವಕ್ಕೆ ಚಾಲನೆ

ಬೆಂಗಳೂರು: ತಿಗಳರಪೇಟೆಯ ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ 'ಬೆಂಗಳೂರು ಕರಗ' ಶಕ್ತ್ಯೋತ್ಸವಕ್ಕೆ ಸೋಮವಾರ ಚಾಲನೆ ದೊರೆಯಿತು. ರಥೋತ್ಸವ ಹಾಗೂ ಧ್ವಜಾರೋಹಣ ತಡರಾತ್ರಿ ನಡೆಯಿತು.

ಏಪ್ರಿಲ್ 23ರ ರಾತ್ರಿ 'ಬೆಂಗಳೂರು ಕರಗ' ನಡೆಯಲಿದ್ದು, ಅಂದು ಧರ್ಮರಾಯಸ್ವಾಮಿ ಮಹಾರಥೋತ್ಸವವೂ ಜರುಗಲಿದೆ. ಮಂಗಳವಾರದಿಂದ ಶುಕ್ರವಾರದವರೆಗೆ ಪ್ರತಿ ದಿನ ವಿಶೇಷ ಪೂಜೆಗಳು ನಡೆಯಲಿವೆ. ಶನಿವಾರ ಆರತಿ ದೀಪ, ಏ.21ರ ಭಾನುವಾರ ರಾತ್ರಿ 'ಹಸಿ ಕರಗ'ದ ಉತ್ಸವ ಸಂಪಂಗಿ ಕೆರೆ ಅಂಗಳದ ಶಕ್ತಿಪೀಠದಲ್ಲಿ ನಡೆಯಲಿದೆ ಎಂದು ಧರ್ಮರಾಯಸ್ವಾಮಿ ದೇವಾಲಯದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಸತೀಶ್ ತಿಳಿಸಿದರು.

ಎ. ಜ್ಞಾನೇಂದ್ರ ಅವರು ಈ ಸಾಲಿನ ಕರಗದ ಪೂಜಾರಿಯಾಗಿದ್ದು, ಕರಗವನ್ನು ಹೊರಲಿದ್ದಾರೆ. ಏಪ್ರಿಲ್ 25ರಂದು ವಸಂತೋತ್ಸವ, ಧ್ವಜಾರೋಹಣದೊಂದಿಗೆ ಕರಗ ಉತ್ಸವ ಮುಗಿಯಲಿದೆ ಎಂದು ಹೇಳಿದರು.

ಧರ್ಮರಾಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಏಪ್ರಿಲ್ 25ರವರೆಗೆ ಸಂಜೆ 6ರಿಂದ ನಾಟ್ಯ, ಯಕ್ಷಗಾನ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ತಿಳಿಸಿದರು.

ರಾಮನಕೊಪ್ಪ: ₹2 ಕೋಟಿ ವಶ

ಪ್ರಜಾವಾಣಿ ವಾರ್ತೆ

ಕುಂದಗೋಳ (ಧಾರವಾಡ ಜಿಲ್ಲೆ): ತಾಲ್ಲೂಕಿನ ರಾಮನಕೊಪ್ಪ ಗ್ರಾಮದ ಮನೆಯೊಂದರಲ್ಲಿ ಆದಾಯ ತೆರಿಗೆ ಅಧಿಕಾರಿಗಳು, ಚುನಾವಣಾ ವಿಚಕ್ಷಣ ದಳದ ಸಿಬ್ಬಂದಿ ಹಾಗೂ ಪೊಲೀಸರು ಕಾರ್ಯಾಚರಣೆ ನಡೆಸಿ ದಾಖಲೆ ಇಲ್ಲದ ₹2ಕೋಟಿ ನಗದು ವಶಪಡಿಸಿಕೊಂಡಿದ್ದಾರೆ.

ತಾಲ್ಲೂಕಿನ ರಾಮನಕೊಪ್ಪದ ಚೆಕ್‌ಪೋಸ್ಟ್‌ನಲ್ಲಿ ನಿಲ್ಲಿಸದ ಸಾಗಿದ ಕಾರೊಂದನ್ನು ಅಧಿಕಾರಿಗಳು, ಸಿಬ್ಬಂದಿ ಹಿಂಬಾಲಿಸಿದ್ದಾರೆ. ವ್ಯಕ್ತಿಯೊಬ್ಬ ಬ್ಯಾಗುಗಳೊಂದಿಗೆ ಹೋದ ಮನೆ ಮೇಲೆ ದಾಳಿ ಮಾಡಿ ನಗದು ವಶಪಡಿಸಿಕೊಂಡಿದ್ದಾರೆ.

ಸಂಗೀತ ಕಛೇರಿ

ನಗರದ ಚಾಮರಾಜಪೇಟೆಯ ಕೋಟೆ ಹೈಸ್ಕೂಲ್ ಆವರಣದಲ್ಲಿ ಶ್ರೀರಾಮ ಸೇವಾ ಮಂಡಲಿ ಮತ್ತು ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಆಯೋಜಿಸಿದ ರಾಮನವಮಿ ಸಂಗೀತೋತ್ಸವದಲ್ಲಿ ಸೋಮವಾರ ಬೆಂಗಳೂರು ಎಸ್. ಶಂಕರ್ ಮತ್ತು ಬೆಂಗಳೂರು ರಮಣಿ ಶಂಕರ್ ಅವರು ಸಂಗೀತ ಕಛೇರಿ ನೀಡಿದರು ಪ್ರಜಾವಾಣಿ ಚಿತ್ರ

ಮಾಂಸ ಮಾರಾಟ ನಿಷೇಧ ನಾಳೆ

ಬೆಂಗಳೂರು: ಶ್ರೀರಾಮನವಮಿ ಹಬ್ಬದ ಪ್ರಯುಕ್ತ ಏಪ್ರಿಲ್ 17ರಂದು ಬಿಬಿಎಂಪಿ ವ್ಯಾಪ್ತಿಯ ಕಸಾಯಿಖಾನೆಯಲ್ಲಿ ಪ್ರಾಣಿವಧೆ ಹಾಗೂ ಮಾರಾಟ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಪಶುಪಾಲನೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಮ್ಮದು ಮೊಘಲ್ ಸರ್ಕಾರವಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮದು ಜನರ ಕಲ್ಯಾಣಕ್ಕಾಗಿ ಶ್ರಮಿಸುವ ಆಡಳಿತ ವ್ಯವಸ್ಥೆ ಎಂಬುದನ್ನು ಮರೆಯಬೇಡಿ. ಇದು ಮೊಘಲರ ಸರ್ಕಾರವಲ್ಲ' ಎಂದು ಹೈಕೋರ್ಟ್, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ (ಕೆಎಸ್‌ಪಿಸಿಬಿ) ಚಾಟಿ ಬೀಸಿದೆ.

ಸಿದ್ದಸಿರಿ ಸಕ್ಕರೆ ಕಾರ್ಖಾನೆ ಮುಚ್ಚುವಂತೆ ನೀಡಲಾಗಿದ್ದ ನೋಟಿಸ್ ರದ್ದುಪಡಿಸುವಂತೆ ಕೋರಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಪುತ್ರ ಹಾಗೂ ಸಂಸ್ಥೆಯ ನಿರ್ದೇಶಕ ರಾಮನಗೌಡ ಬಿ.ಪಾಟೀಲ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ನ್ಯಾಯಪೀಠವು, 'ಘಟಕ ಮುಚ್ಚಲು ಕಾರಣವೇನು' ಎಂದು ಮಾಲಿನ್ಯ ನಿಯಂತ್ರಣ ಮಂಡಳಿಗೆ ಪ್ರಶ್ನಿಸಿತು. ಇದಕ್ಕೆ ಕೆಎಸ್‌ಪಿಸಿಬಿ ಅಧಿಕಾರಿಗಳು, 'ಈ ಘಟಕವನ್ನು ನಡೆಸಲು ಪರಿಸರ ಇಲಾಖೆ ಅನುಮತಿ ನೀಡಿಲ್ಲ' ಎಂದು ತಿಳಿಸಿದರು.

ಅತೃಪ್ತಿ ವ್ಯಕ್ತಪಡಿಸಿದ ನ್ಯಾಯಪೀಠ, 'ಏಕಾಏಕಿ ಮುಚ್ಚಲು ಆದೇಶ ನೀಡಿದ ಬಗ್ಗೆ ಕಾರಣ ಕೊಡಬೇಕು. ನಿಮ್ಮ ತೀರ್ಮಾನದ ಹಿಂದಿನ ಕಾರಣ ಜನರಿಗೆ ತಿಳಿಯಬೇಕು' ಎಂದು ಅತೃಪ್ತಿ ವ್ಯಕ್ತಪಡಿಸಿತು. ವಿಚಾರಣೆಯನ್ನು ಜೂನ್ 4ಕ್ಕೆ ಮುಂದೂಡಲಾಗಿದೆ.

ಪ್ರಕರಣವೇನು?: 'ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಹೂಡದಲಯದಲ್ಲಿರುವ ಸಿದ್ದಸಿರಿ ಎಥನಾಲ್ ಮತ್ತು ಪವರ್ ಘಟಕವನ್ನು ಅರ್ಜಿದಾರರು 2021ರಲ್ಲಿ ಖರೀದಿಸಿದ್ದಾರೆ. ಇದಕ್ಕೆ ಅಗತ್ಯ ಅನುಮತಿ ಪಡೆದಿಲ್ಲ ಹಾಗೂ ಕೆಲ ಪರಿಸರ ನಿಯಮ ಉಲ್ಲಂಘಿಸಲಾಗಿದೆ' ಎಂಬ ಆರೋಪದಡಿಯಲ್ಲಿ ಕಾರ್ಖಾನೆ ಮುಚ್ಚಲು ಕಲಬುರಗಿ ವಲಯದ ಕೆಎಸ್‌ಪಿಸಿಬಿ ಅಧಿಕಾರಿಗಳು 2024ರ ಜನವರಿ 18ರಂದು ನೋಟಿಸ್ ಜಾರಿ ಮಾಡಿದ್ದರು. ಅರ್ಜಿದಾರರು ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಗೋವಾ: ಕನ್ನಡಿಗರ ಹಿತರಕ್ಷಣೆಗೆ ಆಗ್ರಹ

ಬೆಂಗಳೂರು: 'ಗೋವಾದಲ್ಲಿ ಕನ್ನಡಿಗರ ಮನೆಗಳನ್ನು ನೆಲಸಮ ಮಾಡುವ ಕಾರ್ಯಾಚರಣೆಯನ್ನು ನಿಲ್ಲಿಸಬೇಕು. ಅಲ್ಲಿನ ಸರ್ಕಾರ ಕನ್ನಡಿಗರ ಹಿತರಕ್ಷಣೆ ಮಾಡಬೇಕು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಆಗ್ರಹಿಸಿದ್ದಾರೆ.

ಉತ್ತರ ಗೋವಾದಲ್ಲಿ ಕನ್ನಡಿಗರ 22 ಮನೆಗಳನ್ನು ಕೆಡವಿದ್ದಲ್ಲದೇ, ನೆಲಸಮ ಗೊಳಿಸುವ ಕಾರ್ಯ ಮುಂದುವರಿಸಿದ್ದಾರೆ. ರಾಜ್ಯದ ರಾಜಕೀಯ ಮುಖಂಡರು ಪಕ್ಷಭೇದ ಮರೆತು ಕನ್ನಡಿಗರ ರಕ್ಷಣೆಗೆ ಧಾವಿಸಬೇಕು. ಬರಹಗಾರರು ಧ್ವನಿ ಎತ್ತಬೇಕು ಎಂದಿದ್ದಾರೆ.

ಕರ್ನಾಟಕ ಮತ್ತು ಗೋವಾ ನಡುವೆ ಶತಮಾನಗಳಷ್ಟು ಪುರಾತನ ಬಾಂಧವ್ಯ ಇದೆ. ಇಂದಿಗೂ ಗೋವಾ ತನ್ನ ನಿತ್ಯದ ಚಟುವಟಿಕೆಗೆ ಕರ್ನಾಟಕವನ್ನು ಅವಲಂಬಿಸಿದೆ. ಗೋವಾದ 10 ಲಕ್ಷ ಜನಸಂಖ್ಯೆಯಲ್ಲಿ 2 ಲಕ್ಷ ಕನ್ನಡಿಗರಿದ್ದಾರೆ. ಅನೇಕ ವಿಚಾರದಲ್ಲಿ ನಿರ್ಣಾಯಕ ಸ್ಥಾನದಲ್ಲಿದ್ದಾರೆ. 2004ರಿಂದ ಇಲ್ಲಿವರೆಗೆ ಕನ್ನಡಿಗರ 800ಕ್ಕೂ ಅಧಿಕ ಮನೆಗಳನ್ನು ಧ್ವಂಸ ಮಾಡಲಾಗಿದೆ. ಬೈನಾ ಬೀಚ್‌ನಲ್ಲಿ 2015ರಲ್ಲಿ ಕನ್ನಡಿಗರನ್ನು ಹೊರ ಹಾಕಿದಾಗ ವಿರೋಧಿಸಿದ ರೀತಿಯೇ ಈಗ ಹೋರಾಟ ಅಗತ್ಯವಿದೆ ಎಂದರು.

7,367 ಜನ ಮನೆಯಿಂದಲೇ ಮತದಾನ

ಬೆಂಗಳೂರು: ಬೆಂಗಳೂರು ಉತ್ತರ, ಕೇಂದ್ರ, ದಕ್ಷಿಣ, ಗ್ರಾಮಾಂತರ ಹಾಗೂ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿರುವ 85 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವರು ಹಾಗೂ ಅಂಗವಿಕಲರಲ್ಲಿ 7,367 ಜನ ಮನೆಯಿಂದಲೇ ಅಂಚೆ ಮತದಾನ ಮಾಡಿದ್ದಾರೆ.

ನಗರ ವ್ಯಾಪ್ತಿಯ 28 ವಿಧಾನ ಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ 85 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನ 7,556 ಹಾಗೂ 302 ಅಂಗವಿಕಲರು ಮನೆಯಿಂದ ಅಂಚೆ ಮತದಾನಕ್ಕೆ ನೋಂದಾಯಿಸಿಕೊಂಡಿದ್ದರು. ಏ.15ರವರೆಗೆ ಶೇ 93.75ರಷ್ಟು ಮತದಾನವಾಗಿದೆ.

60 ಮಂದಿ ಮರಣ: ಮತದಾನಕ್ಕೆ ನೋಂದಾಯಿಸಿಕೊಂಡವರಲ್ಲಿ 60 ಮಂದಿ ಮರಣ ಹೊಂದಿದ್ದಾರೆ. 145 ಮಂದಿ ಮನೆಯಲ್ಲಿ ಇರಲಿಲ್ಲ, 18 ಜನ ಮತದಾನಕ್ಕೆ ನಿರಾಕರಿಸಿದರು ಎಂದು ಚುನಾವಣಾ ಅಧಿಕಾರಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಜ್ಞಾನಾಕ್ಷಿ ರಾಜರಾಜೇಶ್ವರಿ ದೇವಸ್ಥಾನದ ವಸಂತ ನವರಾತ್ರಿ ಬ್ರಹ್ಮೋತ್ಸವ: ರಥಾರೋಹಣ ಅಲಂಕಾರ ಪೂಜೆ, ರಥಾರೋಹಣ, ಆಯೋಜನೆ ಮತ್ತು ಸ್ಥಳ: ಜ್ಞಾನಾಕ್ಷಿ ರಾಜರಾಜೇಶ್ವರಿ ದೇವಸ್ಥಾನ, ರಾಜರಾಜೇಶ್ವರಿನಗರ, ಬೆಳಿಗ್ಗೆ 10.40

ಬೆಂಗಳೂರು ಕರಗೋತ್ಸವ: ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ರೋಹಿಣಿ ನಾಟ್ಯಾಲಯದ ಅಶಾ ಹರೀಶ್ ಮತ್ತು ತಂಡ, ಭಜನೆ: ದೇವಿ ಕನ್ನಿಕಾಪರಮೇಶ್ವರಿ ಮಂಡಲಿ, ಆಯೋಜನೆ ಮತ್ತು ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ ತಿಗಳರಪೇಟೆ, ಸಂಜೆ 5ರಿಂದ

ಡಾ.ಬಿ.ಆರ್. ಅಂಬೇಡ್ಕರ್ ಅವರ ಕುರಿತು ಸ್ಮರಣೆ: ಉದ್ಘಾಟನೆ: ಸುಭಾಷ್ ಭರಣಿ, ಅಧ್ಯಕ್ಷತೆ: ಮಹೇಶ ಜೋಶಿ, ಉಪನ್ಯಾಸ: ಸಿ.ಬಿ. ಹೊನ್ನುಸಿದ್ಧಾರ್ಥ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣ, ಚಾಮರಾಜಪೇಟೆ, ಸಂಜೆ 5

ಶ್ರೀರಾಮನವಮಿ ಸಂಗೀತ ಮಹೋತ್ಸವ: ಗಾಯನ: ಶ್ರೀಕೃಷ್ಣ ಪ್ರಿಯಾ ಸ್ಕೂಲ್ ಆಫ್ ಮ್ಯೂಸಿಕ್ ವಿದ್ಯಾರ್ಥಿಗಳು, ನಿರ್ದೇಶನ: ಪ್ರತ್ಯೂಷ ಶಾಸ್ತ್ರಿ, ಹಿಂದೂಸ್ತಾನಿ ಕರ್ನಾಟಕ ಜುಗಲ್‌ಬಂದಿ: ತಿರುಮಲೈ ಶ್ರೀನಿವಾಸ, ನಾಗರಾಜ್ ಹವಲ್ದಾರ್ ಮತ್ತು ತಂಡ, ಆಯೋಜನೆ: ಕಾರಂಜಿ ಶ್ರೀರಾಮ ಸೇವಾ ಸಮಿತಿ ಟ್ರಸ್ಟ್, ಸ್ಥಳ: ಕಾರಂಜಿ ಆಂಜನೇಯಸ್ವಾಮಿ ದೇವಸ್ಥಾನ, ಬಸವನಗುಡಿ, ಸಂಜೆ 5.30ರಿಂದ

ಶ್ರೀರಾಮೋತ್ಸವ–2024: ಪುಣ್ಯಾಹ, ಪಂಚಗವ್ಯ ಪೂಜೆ, ನಾಂದಿ, ಗ್ರಹಾರಾಧನ, ಕಲಶಸ್ಥಾಪನೆ, ಅಂಕುರಾರ್ಪಣ, ಧ್ವಜಾರೋಹಣ, ನೃತ್ಯ ಪ್ರದರ್ಶನ: ರಮಾ ವೇಣುಗೋಪಾಲ್, ಲಕ್ಷ್ಮಿ ಕಲಾಲಯ, ಹರಿಕಥೆ: ಉಪೇಂದ್ರಾಚಾರ್, ಆಯೋಜನೆ ಮತ್ತು ಸ್ಥಳ: ಶ್ರೀರಾಮ ಸೇವಾ ಮಂಡಲಿ, ರಾಜಾಜಿನಗರ, ಸಂಜೆ 5.30ರಿಂದ

ರಾಮನವಮಿ ಸಂಗೀತೋತ್ಸವ–2024: ಕರ್ನಾಟಕ ಶಾಸ್ತ್ರೀಯ ಸಂಗೀತ: ಗಾಯನ: ಕಲಾವತಿ ಅವಧೂತ್, ಪಿಟೀಲು: ಚಾರುಲತಾ ರಾಮಾನುಜಂ, ಮೃದಂಗ: ಆನೂರು ಅನಂತಕೃಷ್ಣ ಶರ್ಮ, ಜಿ. ಗುರುಪ್ರಸನ್ನ, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೆಷನ್ ಟ್ರಸ್ಟ್, ಸ್ಥಳ: ಕೋಟೆ ಹೈಸ್ಕೂಲ್ ಆವರಣ, ಚಾಮರಾಜಪೇಟೆ, ಸಂಜೆ 6.30ರಿಂದ

400ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲಿಸಿ: ವಿದೇಶಾಂಗ ಸಚಿವ ಜೈಶಂಕರ್ ಮನವಿ

‘ದೇಶಕ್ಕೆ ಮೋದಿ ನಾಯಕತ್ವ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಯೋತ್ಪಾದನೆ ಮತ್ತು ಯುದ್ಧಗಳಿಂದಾಗಿ ಇಡೀ ವಿಶ್ವವೇ ಅತ್ಯಂತ ಇಕ್ಕಟ್ಟಿನ ಸ್ಥಿತಿಗೆ ಸಿಲುಕಿಕೊಂಡಿದೆ. ಹಲವು ರಾಷ್ಟ್ರಗಳು ತೀವ್ರ ಆರ್ಥಿಕ ಸಂಕಷ್ಟವನ್ನೂ ಎದುರಿಸುತ್ತಿವೆ. ಇಂತಹ ಸಂಕೀರ್ಣ ಸಂದರ್ಭದಲ್ಲಿ ಭಾರತಕ್ಕೆ ನರೇಂದ್ರ ಮೋದಿ ಅವರ ನಾಯಕತ್ವ ಅತ್ಯಗತ್ಯ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಪ್ರತಿಪಾದಿಸಿದರು.

ಭಯೋತ್ಪಾದನೆ ಮತ್ತು ಯುದ್ಧಗಳಿಂದ ತತ್ತರಿಸುತ್ತಿರುವ ಭಾರತವನ್ನು ಅತ್ಯಂತ ಸುರಕ್ಷಿತವಾಗಿ ಮುನ್ನಡೆಸುತ್ತಿದ್ದಾರೆ. ಅಲ್ಲದೇ, ಆರ್ಥಿಕವಾಗಿಯೂ ಪುಟಿದೆದ್ದಿದೆ ಎಂದು ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

2014ಕ್ಕೂ ಹಿಂದೆ ದೇಶದ ಸ್ಥಿತಿ ಹೇಗಿತ್ತು? ಆಗ ಭಯೋತ್ಪಾದಕರು ಪದೇ ಪದೇ ಬಂದು ದಾಳಿ ನಡೆಸಿದರೂ ಅದಕ್ಕೆ ತಿರುಗೇಟು ನೀಡುವ ಅಥವಾ ತಡೆಯುವ ಯಾವುದೇ ಪ್ರಯತ್ನ ಮಾಡದೇ ಮೃದು ಧೋರಣೆ ಅನುಸರಿಸಲಾಗುತ್ತಿತ್ತು. ಮುಂಬೈ ಮೇಲೆ ದಾಳಿ ನಡೆದ ಸಂದರ್ಭದಲ್ಲಂತೂ, ಭಾರತ ಅಸಹಾಯಕ ಸ್ಥಿತಿಯಲ್ಲಿತ್ತು. ಮೋದಿಯವರು ಪ್ರಧಾನಿ ಆದ ಬಳಿಕ ದೇಶದಲ್ಲಿ ಭಯೋತ್ಪಾದಕರ ಆಟ ನಡೆಯುತ್ತಿಲ್ಲ ಎಂದು ಹೇಳಿದರು.

ಭಯೋತ್ಪಾದನೆ ನಿಗ್ರಹದ ಜತೆ ದೇಶದ ಎಲ್ಲ ಭಾಗಗಳಲ್ಲೂ ಗಡಿಗಳನ್ನು ಭದ್ರಗೊಳಿಸಲಾಗಿದೆ. ಈಗ ಇರುವ ಸವಾಲುಗಳೆಂದರೆ, ಸೈಬರ್ ಭದ್ರತೆ ಮತ್ತು ಸಾಗರೋತ್ತರ ಭದ್ರತೆ.



ವಿದೇಶಾಂಗ ಸಚಿವ ಎಸ್‌.ಜೈಶಂಕರ್ ಅವರು ಬೆಂಗಳೂರಿನಲ್ಲಿ ‘ಭಾರತಪಥ’ ಪುಸ್ತಕವನ್ನು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯಘಟಕದ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್, ಶಾಸಕ ಡಾ.ಸಿ.ಎನ್‌.ಅಶ್ವತ್ಥನಾರಾಯಣ, ಬಿಜೆಪಿ ಮುಖ್ಯ ವಕ್ತಾರ ಅಶ್ವತ್ಥ ನಾರಾಯಣಗೌಡ ಇದ್ದರು

‘ಶೀಘ್ರವೇ ಯುಎಸ್ ಕಾನ್ಸುಲೇಟ್ ಕಚೇರಿ’

ಬೆಂಗಳೂರಿನಲ್ಲಿ ಅಮೆರಿಕಾದ ಕಾನ್ಸುಲೇಟ್ ಕಚೇರಿ ಆದಷ್ಟು ಶೀಘ್ರವೇ ಆರಂಭವಾಗಲಿದೆ ಎಂದು ಜೈಶಂಕರ್ ವಿಶ್ವಾಸ ವ್ಯಕ್ತಪಡಿಸಿದರು.

ಕಳೆದ ಜೂನ್‌ನಲ್ಲಿ ಅಮೆರಿಕ ಶ್ವೇತಭವನ ಈ ವಿಷಯ ಪ್ರಕಟಿಸಿತ್ತು. ಭಾರತದ ಜತೆ ಬಾಂಧವ್ಯವನ್ನು ಗಟ್ಟಿಗೊಳಿಸುವ ಉದ್ದೇಶದಿಂದ ಅಮೆರಿಕ ಈ ಕ್ರಮ ತೆಗೆದುಕೊಂಡಿದೆ. ಅಲ್ಲದೇ, ದಕ್ಷಿಣ ಭಾರತದಲ್ಲಿ ಬೆಂಗಳೂರಿನಿಂದ ಅತಿ ಹೆಚ್ಚು ಜನ ಅಮೆರಿಕಾಗೆ ಪ್ರಯಾಣಿಸುತ್ತಾರೆ. ಅವರಿಗೆ ಇದರಿಂದ ಹೆಚ್ಚಿನ ಅನುಕೂಲವಾಗುತ್ತದೆ.

ಇತ್ತೀಚೆಗೆ ಕೆಂಪು ಸಮುದ್ರ ಭಾಗದಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಗೊತ್ತೇ ಇದೆ. ಇವೆಲ್ಲವನ್ನು ಗಮನದಲ್ಲಿಟ್ಟು ವಿದೇಶಾಂಗ ನೀತಿ ಮತ್ತು ಕಾರ್ಯತಂತ್ರವನ್ನು ನಿರ್ಧರಿಸಲಾಗುತ್ತದೆ ಎಂದರು.

ರಷ್ಯಾ ಮತ್ತು ಉಕ್ರೇನ್ ಯುದ್ಧದಲ್ಲಿ ನಮ್ಮ ದೇಶದ ಹಿತ ಕಾಪಾಡುವ ನಿಟ್ಟಿನಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳಲಾಯಿತು. ರಿಯಾಯ್ತಿ ದರದಲ್ಲಿ ಕಚ್ಚಾ ತೈಲ ಆಮದು ಮಾಡಿಕೊಂಡಿದ್ದರಿಂದ ದೇಶೀಯ ಮಾರುಕಟ್ಟೆಯಲ್ಲಿ ಸುಸ್ಥಿರತೆ ಕಾಯ್ದುಕೊಳ್ಳಲು ಸಾಧ್ಯವಾಯಿತು. ಇಲ್ಲವಾಗಿದ್ದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ವಿಪರೀತವಾಗಿ ಏರುತ್ತಿತ್ತು. ಇದೇ ಸಂದರ್ಭದಲ್ಲಿ ಬೇರೆ ದೇಶಗಳಲ್ಲಿ ಇಂಧನ ದರ ಎಷ್ಟಿತ್ತು ಎಂಬುದನ್ನು ಗಮನಿಸುವುದು ಸೂಕ್ತ ಎಂದು ಪ್ರಶ್ನೆಯೊಂದಕ್ಕೆ ಜೈಶಂಕರ್ ಉತ್ತರಿಸಿದರು.

ಎಚ್‌ಎಎಲ್ ಷೇರು ದರ ಏರಿಕೆ: ಕಳೆದ ಲೋಕಸಭಾ ಚುನಾವಣೆ ವೇಳೆಯಲ್ಲಿ ರಾಹುಲ್‌ಗಾಂಧಿ ಎಚ್‌ಎಎಲ್ ಕುರಿತು ಅಪ ಪ್ರಚಾರ ಮಾಡಿದರು. ಆದರೆ, ಎಚ್‌ಎಎಲ್ ಲಾಭದಾಯಕವಾಗಿ ಕಾರ್ಯನಿರ್ವಹಿಸುತ್ತಿರುವುದು ಮಾತ್ರವಲ್ಲದೆ, ಈಗ ಅದರ ಷೇರು ದರ ₹3,000ರಷ್ಟಿದೆ ಎಂದು ಹೇಳಿದರು.

‘ದೂತಾವಾಸದ ಜತೆ ಸಂಪರ್ಕದಲ್ಲಿರಿ’

‘ವಿದೇಶದಲ್ಲಿರುವ ಭಾರತೀಯ ವಿದ್ಯಾರ್ಥಿಗಳು ದೂತಾವಾಸದ ಜತೆ ಸಂಪರ್ಕದಲ್ಲಿರಬೇಕು. ಯಾವುದೇ ರೀತಿಯ ತೊಂದರೆ ಆದಲ್ಲಿ ದೂತಾವಾಸದ ಗಮನಕ್ಕೆ ತರಬೇಕು’ ಎಂದು ಜೈಶಂಕರ್ ಮನವಿ ಮಾಡಿದರು.

ಅಮೆರಿಕ, ಕೆನಡಾ ಮತ್ತಿತರ ದೇಶಗಳಲ್ಲಿ ಭಾರತೀಯ ವಿದ್ಯಾರ್ಥಿಗಳ ಹತ್ಯೆ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ದೂತಾವಾಸದ ಸಿಬ್ಬಂದಿಗೂ ಭಾರತೀಯ ವಿದ್ಯಾರ್ಥಿಗಳ ಜತೆ ಸಂಪರ್ಕದಲ್ಲಿ ಇರಲು ಸೂಚನೆ ನೀಡಲಾಗಿದೆ ಎಂದರು.

ದೊಡ್ಡಬಳ್ಳಾಪುರ: ಕಾಂಗ್ರೆಸ್ ಮಹಿಳಾ ಘಟಕದಿಂದ ಪ್ರತಿಭಟನೆ

ಎಚ್‌ಡಿಕೆಗೆ ‘ಗೋ ಬ್ಯಾಕ್’ ಬಿಸಿ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಚಿಕ್ಕಬಳ್ಳಾಪುರ ಲೋಕಸಭೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಕೆ.ಸುಧಾಕರ್ ಪರ ಪ್ರಚಾರಕ್ಕೆ ನಗರಕ್ಕೆ ಆಗಮಿಸಿದ್ದ ಜೆಡಿಎಸ್ ರಾಜ್ಯ ಘಟಕ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಗೋ ಬ್ಯಾಕ್ ಬಿಸಿ ತಟ್ಟಿತು.

‘ಗ್ಯಾರಂಟಿಗಳಿಂದ ಹಳ್ಳಿಗಳ ಹೆಣ್ಣು ಮಕ್ಕಳು ದಾರಿ ತಪ್ಪಿದ್ದಾರೆ’ ಎಂಬ ಕುಮಾರಸ್ವಾಮಿ ಅವರ ಹೇಳಿಕೆಯನ್ನು ಖಂಡಿಸಿ ಕಾಂಗ್ರೆಸ್ ಮಹಿಳಾ ಘಟಕದ ಕಾರ್ಯಕರ್ತೆಯರು ಪ್ರಚಾರ ಸಭೆಯ ವೇದಿಕೆ ಬಳಿ ‘ಗೋ ಬ್ಯಾಕ್’ ಭಿತ್ತಿ ಪತ್ರ ಹಿಡಿದು ಪ್ರತಿಭಟನೆ ನಡೆಯಿತು.

ಕಳೆದ ಲೋಕಸಭೆಯಲ್ಲಿ ಮಹಿಳೆಯ ಬಗ್ಗೆ ಹಗುರುವಾಗಿ ಮಾತನಾಡಿದ ಪರಿಣಾಮ ಜೆಡಿಎಸ್ ಮಂಡ್ಯದಲ್ಲಿ ಸೋಲಬೇಕಾಯಿತು. ಕುಮಾರಸ್ವಾಮಿ ಅವರು ಇನ್ನು ಮುಂದೆ ಮಹಿಳೆಯರ ಬಗ್ಗೆ ಮಾತನಾಡುವಾಗ ಎಚ್ಚರವಾಗಿ ಮಾತನಾಡಬೇಕು. ಈಗ ನೀಡಿರುವ ಹೇಳಿಕೆಗೆ ಕೂಡಲೇ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷೆ ರೇವತಿ ಅನಂತರಾಮ್ ಮಾತನಾಡಿ, ‘ಕುಮಾರಸ್ವಾಮಿ ಗ್ಯಾರಂಟಿ ಯೋಜನೆ ಟೀಕಿಸುವುದರೊಂದಿಗೆ ಮಹಿಳೆಯರು ಹಾದಿ ತಪ್ಪುತ್ತಿದ್ದಾರೆ ಎಂದು ಹೇಳಿರುವುದು ಅಕ್ಷಮ್ಯ’ ಎಂದು ಕಿಡಿಕಾರಿದರು.

ಕೆಪಿಸಿಸಿ ಸದಸ್ಯ ಜಿ.ಲಕ್ಷ್ಮೀಪತಿ ಮಾತನಾಡಿ, ಕುಮಾರಸ್ವಾಮಿ ಹೇಳಿಕೆ ಕ್ಷಮಿಸಲಾರದ ಅಪರಾಧವಾಗಿದೆ. ಮಹಿಳೆಯರ ಕುರಿತು ಅವರ ಹಗುರ ಮಾತು ಮುಂದುವರಿಸಿದರೆ ರಾಜ್ಯದಾದ್ಯಂತ ಪ್ರತಿಭಟನೆ ಮಾಡಲಾಗುವುದು ಎಂದರು.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ.ಕುಮಾರಸ್ವಾಮಿ ಹೇಳಿಕೆ ಖಂಡಿಸಿ ದೊಡ್ಡಬಳ್ಳಾಪುರದಲ್ಲಿ ಸೋಮವಾರ ಕಾಂಗ್ರೆಸ್ ಮಹಿಳಾ ಘಟಕದ ವತಿಯಿಂದ ಪ್ರತಿಭಟನೆ ನಡೆಯಿತು

ಇಸ್ರೇಲ್–ಇರಾನ್ ಸಂಘರ್ಷ: ಶಮನಕ್ಕೆ ಭಾರತ ಸಮರ್ಥ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಷ್ಯಾ- ಉಕ್ರೇನ್ ವಿಷಯವನ್ನು ನಿಭಾಯಿಸಿದ ರೀತಿಯಲ್ಲೇ ಇಸ್ರೇಲ್- ಇರಾನ್ ಪರಿಸ್ಥಿತಿ ನಿಭಾಯಿಸಲು ಭಾರತ ಸಮರ್ಥವಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಹೇಳಿದರು.

ರಾಜ್ಯ ಬಿಜೆಪಿ ಘಟಕ ನಗರದಲ್ಲಿ ಸೋಮವಾರ ನಾಗರಿಕರ ಜತೆ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಯಾವುದೇ ದೇಶದ ಮೇಲೆ ನಡೆಯುವ ದಾಳಿ, ಆ ಎರಡು ದೇಶಗಳ ಭೌಗೋಳಿಕ ವಿಷಯವಷ್ಟೇ ಆಗಿರದೆ ಇತರೆ ರಾಷ್ಟ್ರಗಳ ಮೇಲೂ ಪರಿಣಾಮ ಬೀರುತ್ತಿವೆ. ರಷ್ಯಾ–ಉಕ್ರೇನ್, ಇಸ್ರೇಲ್–ಪ್ಯಾಲೆಸ್ಟೀನ್ ಯುದ್ಧಗಳು ಜಗತ್ತಿನ ಮೇಲೂ ಪರಿಣಾಮ ಬೀರುತ್ತವೆ. ಎಲ್ಲೋ ನಡೆಯುವ ಯುದ್ಧ, ಇತರೆ ರಾಷ್ಟ್ರಗಳ ಆರ್ಥಿಕತೆಯ ಮೇಲೂ ಪ್ರಭಾವ ಬೀರುತ್ತವೆ. ಇಂತಹ ವಾತಾವರಣ ತಿಳಿಗೊಳ್ಳಬೇಕಿದೆ. ಎಂದರು.

ದ್ವಿತೀಯ ಪಿಯು ಸಾಧಕರು

ಆಚಾರ್ಯ ಪಾಠಶಾಲಾ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಪಿಯು ಕಾಲೇಜು

ಅಮೋಘ ಎನ್. ಶೇ 95.7 ವಿಜ್ಞಾನ

ಮಾನಸ ಎಂ. ಶೇ 95.3 ವಾಣಿಜ್ಯ

ಚೈತ್ರಾ ಡಿ.ವಿ. ಶೇ 95.8 ವಾಣಿಜ್ಯ

ಸುಜಿತ್ ಪಿ. ಶೇ 96 ವಾಣಿಜ್ಯ

ಹರ್ಷಿತಾ ಎಂ.ಎಂ. 96.7 – ವಾಣಿಜ್ಯ

ಶ್ರೇಯಾ ಕೆ. 95.2 – ವಾಣಿಜ್ಯ

ದಿಶಾ ದೇಶಪಾಂಡೆ ಶೇ 97 – ಕಲಾ

ರೂಪಾ ಎಚ್. ಶೇ 96.66 (ವಾಣಿಜ್ಯ) ಜ್ಞಾನಪೀಠ ಪಿಯು ಕಾಲೇಜು, ಪಾರ್ವತಿನಗರ ಲಗ್ಗೆರೆ

ನಿಶ್ಚಿತ.ಎಂ ಶೇ 98 (ವಿಜ್ಞಾನ ವಿಭಾಗ) ಪ್ರೆಸಿಡೆನ್ಸಿ ವಸತಿ ಕಾಲೇಜು, ಶಿರಾ

ಐಶ್ವರ್ಯ ಬಿ.ಎಸ್. ಶೇ 96.66 (ವಿಜ್ಞಾನ ವಿಭಾಗ) ಕುಮಾರ ಕಾಲೇಜು, ಬೆಂಗಳೂರು

ಕೋಲ್ಕತ ರೇಸ್

ಬ್ಲ್ಯಾಕ್ ಈಗಲ್ ಗೆಲ್ಲುವ ನಿರೀಕ್ಷೆ

ವ್ರೂಮೇಕ್ಸ್‌ದಿರೂಲ್ಸ್ ಕಪ್ ಮಂಗಳವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಬ್ಲ್ಯಾಕ್ ಈಗಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30 ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಈಸ್ಟಾರಿಕ್ 5, ಎಲ್ಯೆಟ್ 4, ಇಲಿಯಾಸ್ 1
2ನೇ ರೇಸ್: ಇಂಡಿಯನ್ ಟೈಗರ್ 1, ಸೆಸ್ಟ್‌ಲಾಮೋರ್ 8, ಈಸ್ಟ್‌ಸೈಡ್ 3
3ನೇ ರೇಸ್: ಎಕ್ಸ್‌ಟ್ರಾವೆಗೆಂಟ್ ಸ್ಟಾರ್ 4, ಫ್ಲೆಮಿಂಗೊ ರೋಡ್ 3. ಇಟಾಲಿಯನ್ ಗೋಲ್ಡ್ 1
4ನೇ ರೇಸ್: ಇವಾನೋ 1, ಮಲ್ಟಿಸ್ಟಾರರ್ 3. ಡ್ರಾಗನ್ಸ್ ಗೋಲ್ಡ್ 5
5ನೇ ರೇಸ್: ಬ್ಲ್ಯಾಕ್ ಈಗಲ್ 2, ಐರನ್ ಕ್ಲಾಡ್ 1, ಜ್ಯೂಕೊರ್ 5
6ನೇ ರೇಸ್: ಬ್ಲ್ಯಾಕ್‌ಸ್ಟೋನ್ 6, ಡಾಲಿ ಸ್ವಿರ್ಲ್ 7, ಬ್ಲಿಂಕಿ ಬಿಲ್ 1
7ನೇ ರೇಸ್: ಸ್ಪೆಕ್ಟಾಕ್ಯುಲರ್ 3, ಅಲ್ಮಾಸ್ 5, ದುಬಾಯ್ ಡ್ಯೂನ್ಸ್ 6

ಉತ್ತಮ ಬೆಟ್: ಇಂಡಿಯನ್ ಟೈಗರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಮಲ ವಿಲೇವಾರಿ: ಟೀಕೆ

ಹನೂರು: ಶೌಚಗುಂಡಿಯಿಂದ ಸಾಗಿಸುತ್ತಿದ್ದಾಗ ರಸ್ತೆಗೆ ಬಿದ್ದ ಮಲವನ್ನು ಪಟ್ಟಣ ಪಂಚಾಯಿತಿಯು ಪೌರಕಾರ್ಮಿಕರಿಂದ ಸ್ವಚ್ಛಗೊಳಿಸಿದ್ದು ಟೀಕೆಗೆ ಗುರಿಯಾಗಿದೆ. ಅದರ ಫೋಟೊ ಮತ್ತು ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು.

‘ಡಾ. ಬಿ.ಆರ್‌. ಅಂಬೇಡ್ಕರ್ ಪ್ರಶಸ್ತಿ’ ಪ್ರದಾನ ಸಮಾರಂಭ

‘ಜ್ಞಾನ ಸಂಪಾದನೆಗೆ ಶಿಕ್ಷಣ ಮೂಲ ಮಂತ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಕ್ಕಳಿಗೆ ಉತ್ತಮ ವಿದ್ಯಾರ್ಜನೆ ಮತ್ತು ಜ್ಞಾನ ಸಂಪಾದನೆಗೆ ತಂದೆ, ತಾಯಂದಿರು ಸಹಕಾರ ನೀಡಬೇಕು’ ಎಂದು ಹೈಕೋರ್ಟ್ ನ್ಯಾಯಮೂರ್ತಿ ಆರ್.ದೇವದಾಸ್ ಹೇಳಿದರು.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಡೆದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ ಜನ್ಮದಿನಾಚರಣೆ ಮತ್ತು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕ/ಸಾಧಕಿಯರು, ಬಿಬಿಎಂಪಿ ಅಧಿಕಾರಿ, ನೌಕರರಿಗೆ ‘ಡಾ. ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ’ ಪ್ರದಾನ ಮಾಡಿ ಅವರು ಮಾತನಾಡಿದರು.

‘ಅಂಬೇಡ್ಕರ್ ಅವರು ‘ಜ್ಞಾನ ಸಂಪಾದನೆಗೆ ಶಿಕ್ಷಣ’ ಎಂಬ ಮಂತ್ರವನ್ನು ಎಲ್ಲರಿಗೂ ಹಾಕಿಕೊಟ್ಟರು. ನ್ಯಾಯಾಂಗ ಕ್ಷೇತ್ರದಲ್ಲಿ ಸಿವಿಲ್ ನ್ಯಾಯಧೀಶರ ನೇಮಕಾತಿ ಆಯ್ಕೆಯಲ್ಲಿ ಎಸ್.ಸಿ ಮತ್ತು ಎಸ್.ಟಿ ವಿದ್ಯಾರ್ಥಿ ಹೆಚ್ಚು ಆಯ್ಕೆಯಾಗುತ್ತಿದ್ದಾರೆ. ಮೆರಿಟ್ ಮೇಲೆ ವೈದ್ಯ, ಎಂಜಿನಿಯರಿಂಗ್ ಸೀಟ್ ಪಡೆದು ಸಮಾಜದ ಮುಖ್ಯವಾಹಿನಿಗೆ ಬರುತ್ತಿದ್ದಾರೆ. ಅಂಬೇಡ್ಕರ್ ಕಂಡ ಕನಸು ನನಸು ಮಾಡುತ್ತಿದ್ದಾರೆ’ ಎಂದರು.

ಚಲನಚಿತ್ರ ನಟ ಶರಣ್ ಮಾತನಾಡಿ, ‘ಅಂಬೇಡ್ಕರ್ ಅವರ ಆದರ್ಶ ಸಿದ್ಧಾಂತವನ್ನು ಎಲ್ಲರ ಜೀವನದಲ್ಲಿ ಅಳವಡಿಸಿಕೊಳ್ಳಿ. ಪ್ರಪಂಚ ಕಂಡ ಅಮೂಲ್ಯರತ್ನ ಅಂಬೇಡ್ಕರ್ ಹುಟ್ಟಿದ ನಾಡಿನಲ್ಲಿ ನಾವು ಹುಟ್ಟುವುದಕ್ಕೆ ಪುಣ್ಯ ಮಾಡಿದ್ದೇವೆ’ ಎಂದರು.

ವಕೀಲ ಎ.ರಾಜೇಶ್, ನಟ ರಥಸಪ್ತಮಿ ಅರವಿಂದ್, ನಟಿ ಪದ್ಮನಿ, ‘ಮಿಸೆಸ್ ಯೂನಿವರ್ಸ್’ ಎಂ.ಸುಧಾ, ಪೌರ ಕಾರ್ಮಿಕ ಮುಖಂಡರಾದ ತ್ಯಾಗರಾಜ, ಆದಿ ಜಾಂಬವ ಸಂಘರ್ಷ ಸಮಿತಿ ರಾಜ್ಯ ಸಂಚಾಲಕರಾದ ನಾರಾಯಣಸ್ವಾಮಿ ಮತ್ತು ಬಿಬಿಎಂಪಿ ಕಾರ್ಯನಿರ್ವಹಿಸುತ್ತಿರುವ 18 ಅಧಿಕಾರಿ/ನೌಕರರಿಗೆ ‘ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ’ ನೀಡಿ ಗೌರವಿಸಲಾಯಿತು.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಸಚಿವಾಲಯ ನೌಕರರ ಸಂಘ ಅಧ್ಯಕ್ಷ ರಮೇಶ್ ಸಂಘ ಮತ್ತು ಸುಮಂಗಲಿ ಸೇವಾ ಆಶ್ರಮದ ಅಧ್ಯಕ್ಷೆ ಡಾ. ಎಸ್.ಜಿ.ಸುಶೀಲಮ್ಮ, ಬಿಬಿಎಂಪಿ ಕಂದಾಯ ವಿಭಾಗ ಜಂಟಿ ಆಯುಕ್ತೆ ಲಕ್ಷ್ಮಿದೇವಿ, ಬಿಬಿಎಂಪಿ ಸಂಘದ ಅಧ್ಯಕ್ಷ ಎ.ಅಮೃತ್ ರಾಜ್ ಉಪಸ್ಥಿತರಿದ್ದರು.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ವಿವಿಧ ಕ್ಷೇತ್ರಗಳ ಸಾಧಕರಿಗೆ ‘ಡಾ. ಬಿ.ಆರ್‌.ಅಂಬೇಡ್ಕರ್ ಪ್ರಶಸ್ತಿ’ ಪ್ರದಾನ ಮಾಡಲಾಯಿತು

1.74 ಲಕ್ಷ ವಾಣಿಜ್ಯ, 1.28 ಲಕ್ಷ ಕಲಾ ವಿದ್ಯಾರ್ಥಿಗಳಿಗೆ ಬೇಕಿದೆ ಸೌಲಭ್ಯ

ತೇರ್ಗಡೆ ದಾಖಲೆ; ಕಾಲೇಜುಗಳದ್ದೇ ಕೊರತೆ

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ದ್ವಿತೀಯ ಪಿಯುಗೆ ಪ್ರಸಕ್ತ ವರ್ಷದಿಂದ ಮೂರು ವಾರ್ಷಿಕ ಪರೀಕ್ಷೆಗಳು ನಡೆಯುತ್ತಿದ್ದು, ಉತ್ತೀರ್ಣತೆಯ ಪ್ರಮಾಣ ಶೇ 90 ದಾಟುವ ನಿರೀಕ್ಷೆ ಇದೆ. ಆದರೆ, ತೇರ್ಗಡೆಯ ಪ್ರಮಾಣಕ್ಕೆ ತಕ್ಕಂತೆ ಪದವಿ ಕೋರ್ಸ್‌ಗಳಿಗೆ ಅಗತ್ಯವಾದ ಕಾಲೇಜುಗಳಿಲ್ಲದೇ ವಿದ್ಯಾರ್ಥಿಗಳು ಪ್ರವೇಶಕ್ಕಾಗಿ ಪರಿತಪಿಸಬೇಕಿದೆ.

ಕಳೆದ ಏಳು ವರ್ಷಗಳಿಂದ ಈಚೆಗೆ ದ್ವಿತೀಯ ಪಿಯು ಫಲಿತಾಂಶದಲ್ಲಿ ಗಣನೀಯ ಏರಿಕೆಯಾಗಿದೆ. ಎರಡು ವರ್ಷಗಳಲ್ಲೇ ಉತ್ತೀರ್ಣತೆ ಪ್ರಮಾಣ ಶೇ 20ರಷ್ಟು ಹೆಚ್ಚಳವಾಗಿದೆ. ಈ ಬಾರಿ 5.52 ಲಕ್ಷ ವಿದ್ಯಾರ್ಥಿಗಳು (ಶೇ 81.15) ತೇರ್ಗಡೆಯಾಗುವ ಮೂಲಕ ಹೊಸ ಇತಿಹಾಸ ಸೃಷ್ಟಿಸಿದ್ದಾರೆ. 2022ರಲ್ಲಿ ಶೇ 61.88 ಫಲಿತಾಂಶ ಬಂದಿತ್ತು.

ಕಲಾ ವಿಭಾಗದ ವಿದ್ಯಾರ್ಥಿಗಳಿಗೇ ಸಮಸ್ಯೆ: ವಿಜ್ಞಾನ ವಿಭಾಗದಲ್ಲಿ ಈ ಬಾರಿ ದಾಖಲೆಯ 2.49 ಲಕ್ಷ ವಿದ್ಯಾರ್ಥಿಗಳು (ಶೇ 89.96) ತೇರ್ಗಡೆಯಾಗಿದ್ದರೂ ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿರುವ ಕಾರಣ ಪ್ರವೇಶಕ್ಕೆ ವಿಪುಲ ಅವಕಾಶಗಳಿವೆ. ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (ನೀಟ್) ಅಖಿಲ ಭಾರತ ಮಟ್ಟದಲ್ಲಿ ನಡೆವುದರಿಂದ ರಾಜ್ಯದ ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ಪಡೆಯುತ್ತಿದ್ದಾರೆ. 2014ರಲ್ಲಿ 51,000 ಇದ್ದ ವೈದ್ಯಕೀಯ ಸೀಟುಗಳು ಈಗ ಒಂದು ಲಕ್ಷ ದಾಟಿದೆ.

ವೈದ್ಯಕೀಯ ಶಿಕ್ಷಣ ಹೊರತುಪಡಿಸಿ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು (ಸಿಇಟಿ) ಪ್ರತಿ ವರ್ಷ ಸರಾಸರಿ 2.50 ಲಕ್ಷ ವಿದ್ಯಾರ್ಥಿಗಳು ಬರೆಯುತ್ತಾರೆ. ಎಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶುಸಂಗೋಪನೆ, ಯೋಗ ಮತ್ತು ನ್ಯಾಚುರೋಪತಿ, ಬಿ ಫಾರ್ಮಾ, ಡಿ ಫಾರ್ಮಾ ಹಾಗೂ 2 ಲಕ್ಷ ವಿದ್ಯಾರ್ಥಿಗಳು ಅರ್ಹರಾಗಿದ್ದರು. ಇತರೆ ವೃತ್ತಿಪರ ಕೋರ್ಸ್‌ಗಳನ್ನು ಹೊರತುಪಡಿಸಿ ಸರ್ಕಾರಿ ಹಾಗೂ ಖಾಸಗಿ ಸೇರಿದಂತೆ 1.20 ಲಕ್ಷ ಎಂಜಿನಿಯರಿಂಗ್ ಸೀಟುಗಳು ಈ ಬಾರಿ ಲಭ್ಯವಿವೆ. ಇತರೆ ಕೋರ್ಸ್‌ಗಳಿಗೆ 30 ಸಾವಿರ ಸೀಟುಗಳು ಲಭ್ಯವಿವೆ. ಅಲ್ಲದೇ, ಬಿ.ಎಸ್ಸಿ ಸೀಟುಗಳೂ ದೊರಕಲಿವೆ.

ವಾಣಿಜ್ಯ ವಿದ್ಯಾರ್ಥಿಗಳಲ್ಲಿ ಈ ಬಾರಿ 1.74 ವಿದ್ಯಾರ್ಥಿಗಳು (ಶೇ 68.36) ಹಾಗೂ ಕಲಾ ವಿಭಾಗದಲ್ಲಿ 1.28 ಲಕ್ಷ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ರಾಜ್ಯದಲ್ಲಿ 430 ಸರ್ಕಾರಿ ಪದವಿ ಕಾಲೇಜುಗಳು ಸೇರಿ ವಿವಿಧ ವಿಶ್ವ ವಿದ್ಯಾಲಯಗಳ ವ್ಯಾಪ್ತಿಯಲ್ಲಿ 3,417 ಕಾಲೇಜುಗಳಿವೆ. ವಿಜ್ಞಾನ ಕಾಲೇಜುಗಳೂ ಸೇರಿದಂತೆ ಪ್ರತಿ ವರ್ಷ ಒಂದು ಲಕ್ಷ ವಿದ್ಯಾರ್ಥಿಗಳಿಗೆ ಪ್ರವೇಶ ದೊರಕುತ್ತಿದೆ. ವಾಣಿಜ್ಯ ಹಾಗೂ ಕಲಾ ವಿಷಯಗಳಲ್ಲಿ ಕಾಲೇಜುಗಳು ಹಾಗೂ ಬೋಧಕರ ಕೊರತೆ ಇದೆ. ಕಳೆದ ವರ್ಷದಿಂದ ರಾಜ್ಯದ ಬಹುತೇಕ ಸರ್ಕಾರಿ ಕಾಲೇಜುಗಳಲ್ಲಿ ಕಲಾ ವಿಭಾಗದಲ್ಲೂ ಮೆರಿಟ್ ಆಧಾರದ ಮೇಲೆ ಪ್ರವೇಶ ನೀಡುವ ಪ್ರಕ್ರಿಯೆ ಆರಂಭಿಸಲಾಗಿದೆ. ಇದರಿಂದ ಕಡಿಮೆ ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ತಮ್ಮ ಸಮೀಪದ ಕಾಲೇಜುಗಳಲ್ಲಿ ಪ್ರವೇಶ ಸಿಗದೇ ಪರದಾಡಿದ್ದರು. ಈ ಬಾರಿ ಸಮಸ್ಯೆ ಇನ್ನಷ್ಟು ಉಲ್ಬಣವಾಗುವ ಸಾಧ್ಯತೆ ಇದೆ.

'ಈಚಿನ ದಿನಗಳಲ್ಲಿ ಉನ್ನತ ಶಿಕ್ಷಣದಲ್ಲಿ ದಾಖಲಾತಿ ಪ್ರಮಾಣವೂ ಕಡಿಮೆಯಾಗುತ್ತಿತ್ತು. ಹೆಚ್ಚು ಅಂಕಗಳಿಸುವ ಪ್ರತಿಭಾವಂತರು ವೈದ್ಯಕೀಯ, ಎಂಜಿನಿಯರಿಂಗ್, ಕೃಷಿ ಮತ್ತಿತರ ವೃತ್ತಿಪರ ಕೋರ್ಸ್‌ಗಳತ್ತ ಚಿತ್ತ ಹರಿಸಿದರೆ, ಕಡಿಮೆ ಅಂಕ ಗಳಿಸಿದ ವಿದ್ಯಾರ್ಥಿಗಳು ಕನಿಷ್ಠ ಪದವಿ ಶಿಕ್ಷಣವನ್ನಾದರೂ ಪಡೆಯಬೇಕು ಎನ್ನುವ ಉದ್ದೇಶ ಇಟ್ಟುಕೊಂಡು ಸರ್ಕಾರ ಪರೀಕ್ಷಾ ಪದ್ಧತಿಯಲ್ಲಿ ಸುಧಾರಣೆ ತಂದಿದೆ' ಎನ್ನುವುದು ಸರ್ಕಾರಿ ಪಿಯು ಕಾಲೇಜು ಉಪನ್ಯಾಸಕರ ಸಂಘದ ಅಧ್ಯಕ್ಷ ಎ.ಎಚ್.ನಿಂಗೇಗೌಡ ಅಭಿಮತ.

'ಕಳೆದ ವರ್ಷ ಪ್ರಥಮ ವರ್ಷದ ಪದವಿಗೆ ನಮ್ಮ ಕಾಲೇಜಿನಲ್ಲಿ 2,400 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಂಡು ಪಾಠ ಮಾಡಿಸಿದ್ದೇವೆ. ಆದರೆ, ಅಗತ್ಯ ಕೊಠಡಿ ಸೇರಿದಂತೆ ಮೂಲಸೌಕರ್ಯಗಳದ್ದೇ ದೊಡ್ಡ ಸವಾಲು. ಪದವಿ ಕಾಲೇಜುಗಳ ಸಂಖ್ಯೆ ಹೆಚ್ಚಿಸುವ ಜತೆಗೆ, ಅಗತ್ಯ ಮೂಲಸೌಕರ್ಯ, ಬೋಧಕ–ಬೋಧಕೇತರ ಸಿಬ್ಬಂದಿ ನೇಮಿಸಿದರೆ ಫಲಿತಾಂಶದ ಹೆಚ್ಚಳ ಸಾರ್ಥಕವಾಗುತ್ತದೆ' ಎನ್ನುತ್ತಾರೆ ದಾವಣಗೆರೆ ಸರ್ಕಾರಿ ಪದವಿ ಕಾಲೇಜಿನ ಪ್ರಾಧ್ಯಾಪಕರೊಬ್ಬರು.

> ಪರೀಕ್ಷಾ ಸುಧಾರಣೆಯಿಂದಾಗಿ ರಾಜ್ಯ ಪಠ್ಯಕ್ರಮ ವಿದ್ಯಾರ್ಥಿಗಳು ವೃತ್ತಿಪರ ಕೋರ್ಸ್‌ಗಳ ಸೀಟುಗಳಿಗಾಗಿ ಸಿಬಿಎಸ್‌ಇ ಜತೆ ಸ್ಪರ್ಧಿಸಲು ಅನುಕೂಲವಾಗಿದೆ
>
> **ರಿತೇಶ್ ಕುಮಾರ್ ಸಿಂಗ್**, ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಇಲಾಖೆ

> ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಕೆಲ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಕೊರತೆ ಎದುರಾಗುತ್ತಿತ್ತು. ಪಿಯು ಫಲಿತಾಂಶದ ಹೆಚ್ಚಳದಿಂದಾಗಿ ಎಲ್ಲ ಕೋರ್ಸ್‌ಗಳಿಗೂ ಬೇಡಿಕೆ ಹೆಚ್ಚಿದೆ
>
> **ಮಂಜುನಾಥ ಭಂಡಾರಿ**, ಅಧ್ಯಕ್ಷ, ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು

ವರ್ಷ	ಶೇಕಡಾವಾರು ಫಲಿತಾಂಶ
2017	52.83
2018	59.56
2019	61.73
2020	61.81
2021	ಪರೀಕ್ಷೆ ಇಲ್ಲದೆ ಫಲಿತಾಂಶ
2022	61.88
2023	74.67
2024	81.15

ಸಿಬಿಎಸ್‌ಸಿ ಜತೆ ಸ್ಪರ್ಧೆಗೆ ಹೊಸ ಪದ್ಧತಿ

ರಾಜ್ಯದ ದ್ವಿತೀಯ ಪಿಯು ಫಲಿತಾಂಶಗಳನ್ನು ಕೇಂದ್ರೀಯ ಮಂಡಳಿಗಳ ಫಲಿತಾಂಶದೊಂದಿಗೆ ಹೋಲಿಸಿದಾಗ ರಾಜ್ಯದ ವಿದ್ಯಾರ್ಥಿಗಳ ಉತ್ತೀರ್ಣ ಪ್ರಮಾಣ ಮತ್ತು ಅಂಕಗಳ ಸಾಮರ್ಥ್ಯ ಕಡಿಮೆಯಾಗುತ್ತಿತ್ತು. ವೃತ್ತಿಪರ ಕೋರ್ಸ್‌ಗಳ ಸೀಟುಗಳಿಗಾಗಿ ಸಿಬಿಎಸ್‌ಇ ವಿದ್ಯಾರ್ಥಿಗಳ ಜತೆ ಸ್ಪರ್ಧಿಸಲು ಪದವಿಪೂರ್ವ ಶಿಕ್ಷಣ ಇಲಾಖೆಯ ಅಧೀನದ ಕಾಲೇಜುಗಳಲ್ಲಿ ಓದಿದ ವಿದ್ಯಾರ್ಥಿಗಳು ಹಲವು ಸವಾಲುಗಳನ್ನು ಎದುರಿಸುತ್ತಿದ್ದರು. ಹಾಗಾಗಿ, ಉತ್ತೀರ್ಣತೆಯ ಶೇಕಡಾವಾರು ಪ್ರಮಾಣ ಸುಧಾರಿಸಲು ದ್ವಿತೀಯ ಪಿಯು ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳಲ್ಲಿ ಹೊಸ ಪದ್ಧತಿ ಅಳವಡಿಸಿಕೊಂಡೆವು. ನಂತರ ಪ್ರತಿ ವಿಷಯದಲ್ಲೂ 20 ಅಂಕಗಳಿಗೆ ಆಂತರಿಕ ಮೌಲ್ಯಮಾಪನ ಪರಿಚಯಿಸಿದೆವು. ಈಗ ಮೂರು ಪರೀಕ್ಷೆಗಳನ್ನು ನಡೆಸುತ್ತಿದ್ದು, ಉತ್ತೀರ್ಣತೆ ಶೇ 90ರಷ್ಟು ದಾಟುವ ನಿರೀಕ್ಷೆ ಇದೆ. ಉನ್ನತ ಶ್ರೇಣಿಯಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ತೇರ್ಗಡೆಯಾಗುತ್ತಿದ್ದಾರೆ ಎನ್ನುತ್ತಾರೆ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್.

- **1.11 ಲಕ್ಷ** ಲಭ್ಯವಿರುವ ಎಂಜಿನಿಯರಿಂಗ್ ಸೀಟುಗಳು
- **53,248** ಸರ್ಕಾರಿ ಕೋಟಾ
- **25,171** ಕಾಮೆಡ್–ಕೆ ಸೀಟುಗಳು
- **33,463** ಆಡಳಿತ ಮಂಡಳಿ ಕೋಟಾ
- **1.50** ಲಕ್ಷ ದೇಶದ ವೈದ್ಯಕೀಯ ಸೀಟುಗಳು
- **11,320** ಕರ್ನಾಟಕದಲ್ಲಿ ಲಭ್ಯವಿರುವ ಸೀಟುಗಳು
- **5,363** ರಾಜ್ಯದ ಸರ್ಕಾರಿ ಕೋಟಾದ ಸೀಟುಗಳು

ವಂಚನೆ ಪ್ರಕರಣ: ಸಮಗ್ರ ಮಾಹಿತಿ ಸಲ್ಲಿಕೆಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐ ಮಾನಿಟರಿ ಅಡ್ವೈಸರಿ (ಐಎಂಎ) ಕಂಪನಿಯ ಬಹುಕೋಟಿ ವಂಚನೆಯೂ ಸೇರಿದಂತೆ ಇನ್ನಿತರ ವಂಚನೆ ಪ್ರಕರಣಗಳಲ್ಲಿ ಸಕ್ಷಮ ಪ್ರಾಧಿಕಾರಗಳಿಂದ ಎಷ್ಟು ಆಸ್ತಿ ವಶಪಡಿಸಿಕೊಂಡು ಹರಾಜು ಮಾಡಲಾಗಿದೆ ಹಾಗೂ ಎಷ್ಟು ಠೇವಣಿದಾರಿಗೆ ಹಣ ಹಿಂತಿರುಗಿಸಲಾಗಿದೆ ಎಂಬುದರ ಅಂಕಿ-ಅಂಶಗಳನ್ನು ಒಳಗೊಂಡ ಸಮಗ್ರ ವರದಿ ಸಲ್ಲಿಸಿ' ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

'ಠೇವಣಿದಾರರಿಗೆ ಶೀಘ್ರವೇ ಪರಿಹಾರ ಒದಗಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ನರೇಂದ್ರ ಕುಮಾರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರು, 'ಐಎಂಎ ಸೇರಿದಂತೆ 20 ಕಂಪನಿಗಳಿಂದ ಸುಮಾರು ಒಂದು ಲಕ್ಷ ಠೇವಣಿದಾರರಿಗೆ ವಂಚನೆಯಾಗಿದೆ. ಹಣ ಕಳೆದುಕೊಂಡಿರುವವರು ಸಂಕಷ್ಟದಲ್ಲಿ ಇದ್ದಾರೆ. ಐಎಂಎ ಪ್ರಕರಣದಲ್ಲಿ ಮಾತ್ರವೇ ಒಂದಷ್ಟು ಸಂತ್ರಸ್ತರಿಗೆ ಹಣ ಹಿಂತಿರುಗಿಸಲಾಗಿದೆ. ಆದರೆ, ಉಳಿದ ಕಂಪನಿಗಳ ವಿಚಾರದಲ್ಲಿ ಯಾವುದೇ ಪ್ರಗತಿಯಾಗಿಲ್ಲ. ಆಸ್ತಿಗಳನ್ನು ವಶಪಡಿಸಿಕೊಂಡಿರುವ ಹಾಗೂ ಠೇವಣಿದಾರರಿಂದ ಮರು ಪಾವತಿ ಕ್ಲೇಮು ಸ್ವೀಕರಿಸಿರುವ ಬಗ್ಗೆ ಯಾವುದೇ ಮಾಹಿತಿ ಇಲ್ಲ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಇದಕ್ಕೆ ಪ್ರತಿಯಾಗಿ ಸಕ್ಷಮ ಪ್ರಾಧಿಕಾರಗಳ ಪರ ವಕೀಲರು, ಐಎಂಎ ಸೇರಿದಂತೆ 20 ವಂಚನೆ ಪ್ರಕರಣಗಳಲ್ಲಿ ರಚಿಸಲಾಗಿರುವ ಸಕ್ಷಮ ಪ್ರಾಧಿಕಾರಗಳು, ಆಸ್ತಿ ಮುಟ್ಟುಗೋಲು, ಹರಾಜು ಹಾಗೂ ಠೇವಣಿದಾರರಿಗೆ ಹಣ ಮರುಪಾವತಿಗೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮಗಳನ್ನು ನ್ಯಾಯಪೀಠಕ್ಕೆ ವಿವರಿಸಿದರು.

ಇದನ್ನು ಆಲಿಸಿದ ನ್ಯಾಯಪೀಠ, 'ಠೇವಣಿದಾರರು ಕಷ್ಟಪಟ್ಟು ದುಡಿದ ಹಣವನ್ನು ಕಂಪನಿಗಳಲ್ಲಿ ತೊಡಗಿಸಿರುತ್ತಾರೆ. ಕಂಪನಿಗಳ ವಂಚನೆಯಿಂದ ಅವರೆಲ್ಲಾ ತೊಳಲಾಡುತ್ತಿದ್ದಾರೆ. ಸಕ್ಷಮ ಪ್ರಾಧಿಕಾರಗಳ ಆದ್ಯತೆ ಠೇವಣಿದಾರರ ಹಿತ ರಕ್ಷಿಸುವಂತಿರಬೇಕು. ಠೇವಣಿದಾರರಿಗೆ ಶೀಘ್ರ ಹಣ ಮರುಪಾವತಿಯಾಗಬೇಕು. ಯಾವುದೇ ಕಾರಣಕ್ಕೂ ವಿಳಂಬವಾಗಬಾರದು. ಅದಕ್ಕಾಗಿ ಪ್ರಾಧಿಕಾರಗಳು ತುರ್ತಾಗಿ ಎಲ್ಲಾ ಕ್ರಮ ಕೈಗೊಳ್ಳಬೇಕು' ಎಂದು ತಾಕೀತು ಮಾಡಿತು.

'ಸಕ್ಷಮ ಪ್ರಾಧಿಕಾರಗಳು ಐಎಂಎ ಸೇರಿದಂತೆ ಇನ್ನಿತರ ಕಂಪನಿಗಳಿಂದ ಈವರೆಗೂ ಎಷ್ಟು ಆಸ್ತಿ ವಶಪಡಿಸಿಕೊಂಡಿವೆ. ಅದರಲ್ಲಿ ಎಷ್ಟನ್ನು ಹರಾಜು ಮಾಡಿ, ಎಷ್ಟು ಠೇವಣಿದಾರಿಗೆ ಹಣ ಹಿಂತಿರುಗಿಸಲಾಗಿದೆ. ಎಷ್ಟು ಠೇವಣಿದಾರರಿಗೆ ಹಣ ಪಾವತಿಸಬೇಕಿದೆ ಎಂಬೆಲ್ಲಾ ಅಂಶಗಳು ಕುರಿತು ಸಮಗ್ರ ವರದಿ ಸಲ್ಲಿಸಿ' ಎಂದು ಸಕ್ಷಮ ಪ್ರಾಧಿಕಾರದ ಪರ ವಕೀಲರಿಗೆ ಸೂಚಿಸಿ ವಿಚಾರಣೆಯನ್ನು ಇದೇ 23ಕ್ಕೆ ಮುಂದೂಡಿತು.

ವಂಟಮುರಿ ಪ್ರಕರಣ: ಅರ್ಜಿ ವಿಲೇವಾರಿ

ಬೆಂಗಳೂರು: 'ಬೆಳಗಾವಿ ಜಿಲ್ಲೆಯ ಹೊಸ ವಂಟಮುರಿ ಗ್ರಾಮದಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಿ ಥಳಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲ 12 ಆರೋಪಿಗಳನ್ನು ಬಂಧಿಸಲಾಗಿದ್ದು, ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ಹೈಕೋರ್ಟ್ ದಾಖಲಿಸಿಕೊಂಡಿರುವ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಡ್ವೋಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಹಾಜರಾಗಿ, 'ಪ್ರಕರಣದ ವಿಚಾರಣೆಯನ್ನು ಪೂರ್ಣಗೊಳಿಸಲು ವಿಚಾರಣಾ ನ್ಯಾಯಲಯಕ್ಕೆ ಕಾಲಮಿತಿ ನಿಗದಿಪಡಿಸಬೇಕು. ಇದು ಅತಿ ಅಪರೂಪದ ಪ್ರಕರಣವಾಗಿದ್ದು, ಈ ಇಂತಹ ಘಟನೆ ಮರುಕಳಿಸದಂತೆ ಎಚ್ಚರಿಕೆಯ ಸಂದೇಶ ರವಾನಿಸಬೇಕಿದೆ. ಸಂತ್ರಸ್ತೆಯ ಆರೋಗ್ಯ ಸ್ಥಿತಿಗತಿ ಮೇಲೆ ನಿಗಾ ವಹಿಸಲಾಗುವುದು. ಆಕೆಯ ಮಾನಸಿಕ ಆರೋಗ್ಯ ಪರಿಗಣಿಸಿ ಒಂದು ವರ್ಷದ ಅವಧಿಯವರೆಗೆ ಎರಡು ತಿಂಗಳಿಗೊಮ್ಮೆ ತಜ್ಞರ ಸಮಾಲೋಚನೆಗೆ ಒಳಪಡಿಸಲು ಅವಕಾಶ ನೀಡಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಪ್ರಕರಣದ ವರದಿಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸಲ್ಲಿಸುವಂತೆ ಸೂಚಿಸಿತು. ಅರ್ಜಿಗೆ ಸಂಬಂಧಿಸಿದಂತೆ ಆದೇಶ ಪ್ರಕಟಿಸಲಾಗುವುದು' ಎಂದು ತಿಳಿಸಿ ವಿಲೇವಾರಿ ಮಾಡಿತು.

ಟಿಇಟಿ: ಮೇ 15ರವರೆಗೆ ಅರ್ಜಿ ಸಲ್ಲಿಕೆ

ಬೆಂಗಳೂರು: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ 'ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಗೆ (ಟಿಇಟಿ)' ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಮೇ 15 ಕೊನೆಯ ದಿನ. ರಾಜ್ಯದಾದ್ಯಂತ ಏಕಕಾಲಕ್ಕೆ ಜೂನ್ 30ರಂದು ಟಿಇಟಿ ಪರೀಕ್ಷೆಗಳು ನಡೆಯಲಿವೆ.

ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗೆ ಇಲಾಖೆಯ ವೆಬ್‌ಸೈಟ್ www.schooleducation.kar.nic.in ಸಂಪರ್ಕಿಸಬಹುದು.

ಬಹು ಮಾಧ್ಯಮ ಪ್ರಜಾವಾಣಿ www.prajavani.net

ಪ್ರಜಾವಾಣಿ ಸಾಧಕಿಯರು

ರಾಜ್ಯದ 10 ಸಾಧಕಿಯರ ಪ್ರೇರಣಾದಾಯಕ ಪಯಣ

ವಿಶ್ವಸಂಸ್ಥೆಯಲ್ಲಿ ದಲಿತರ ಪರ ಧ್ವನಿ ಅಶ್ವಿನಿ

ಗರ್ಭಿಣಿಯರ ಪಾಲಿನ ಸಂಚಾರಿ ಆಸ್ಪತ್ರೆ ಶಿವಲಿಂಗಮ್ಮ

Prajavani.net Prajavani Prajavani

ಪರೀಕ್ಷೆ ನಿರ್ವಹಣೆಯಲ್ಲಿ ವಿಫಲ: ಶಿಕ್ಷಣ ಇಲಾಖೆ ಉಪನಿರ್ದೇಶಕ ಅಮಾನತು

ಪ್ರಜಾವಾಣಿ ವಾರ್ತೆ

ಎನ್‌.ಎಚ್ ನಾಗೂರ

ವಿಜಯಪುರ: ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸುಗಮವಾಗಿ ನಿರ್ವಹಿಸುವಲ್ಲಿ ವಿಫಲರಾದ ಮತ್ತು ಕರ್ತವ್ಯ ಲೋಪ ಆರೋಪದ ಮೇಲೆ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎನ್‌.ಎಚ್‌. ನಾಗೂರ ಅವರನ್ನು ಅಮಾನತುಗೊಳಿಸಲಾಗಿದೆ.

ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ, ವೆಬ್ ಕಾಸ್ಟಿಂಗ್ ವ್ಯವಸ್ಥೆ ಸರಿಯಾಗಿ ಮಾಡಿಲ್ಲ. ಪರೀಕ್ಷೆ ನಕಲಿಗೆ ಅವಕಾಶ ನೀಡಿದ ಆರೋಪವೂ ಅವರ ಮೇಲಿದೆ. ಹೊರ್ತಿಯ ರೇವಣ ಸಿದ್ದೇಶ್ವರ ಪದವಿಪೂರ್ವ ಕಾಲೇಜು ಪರೀಕ್ಷಾ ಕೇಂದ್ರ ಹಾಗೂ ಕಾರಜೋಳದ ರಾಣಿ ಚನ್ನಮ್ಮ ವಸತಿ ಶಾಲೆಯ ಪರೀಕ್ಷಾ ಕೇಂದ್ರದ ಒಳಗೆ ವಿದ್ಯಾರ್ಥಿಗಳನ್ನು ತಪಾಸಣೆ ಮಾಡದೇ ಬಿಟ್ಟಿರುವುದು ಮತ್ತು ಪರೀಕ್ಷಾ ಕೇಂದ್ರದ ಹೊರಗೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಗುಂಪುಗೂಡಿ ನಕಲು ಮಾಡಲು ಸಹಕರಿಸಿರುವುದು ವಿಚಾರಣೆ ವೇಳೆ ಸಾಬೀತಾಗಿದೆ.

ಈ ಬಗ್ಗೆ ವಿವರಣಾತ್ಮಕ ವರದಿ ನೀಡುವಂತೆ ಸೂಚಿಸಿದರೂ ಸೂಕ್ತ ಮಾಹಿತಿ ನೀಡದೇ ನಿರ್ಲಕ್ಷ್ಯ ವಹಿಸಿದ್ದಾರೆ. ಹಿರಿಯ ಅಧಿಕಾರಿಗಳು ಕರೆ ಮಾಡಿದರೂ ಸ್ವೀಕರಿಸದೇ ನಿರ್ಲಕ್ಷ್ಯ ವಹಿಸಿದ್ದಾರೆ. ಈ ಎಲ್ಲದರ ಹಿನ್ನೆಲೆಯಲ್ಲಿ ಶಿಸ್ತು ಕ್ರಮ ಬಾಕಿ ಇರಿಸಿ, ಸೇವೆಯಿಂದ ಅಮಾನತು ಮಾಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ.

ಉಭಯ ಮಠಗಳಿಗೆ ಪೂಜೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಆನೆಗೊಂದಿ ಗ್ರಾಮ ಸಮೀಪದ ನವ ವೃಂದಾವನ ಗಡ್ಡೆಯಲ್ಲಿ ಏಪ್ರಿಲ್ 16ರಿಂದ 18ರವರೆಗೆ ಶ್ರೀಕವೀಂದ್ರ ತೀರ್ಥರ ಆರಾಧನೆ ನಡೆಸಲು ಉತ್ತರಾದಿಮಠ ಮತ್ತು ಮಂತ್ರಾಲಯ ರಾಯರ ಮಠಕ್ಕೆ ಕರ್ನಾಟಕ ಹೈಕೋರ್ಟ್ ಏಕಸದಸ್ಯ ಪೀಠ ತಲಾ ಒಂದೂವರೆ ದಿನದಂತೆ ಅವಕಾಶ ನೀಡಿ, ಮಧ್ಯಂತರ ಆದೇಶ ಹೊರಡಿಸಿದೆ.

ಇದರನ್ವಯ ಉತ್ತರಾದಿಮಠದಿಂದ ಮಂಗಳವಾರ (ಏ.16) ಬೆಳಿಗ್ಗೆ ಶ್ರೀಕವೀಂದ್ರ ತೀರ್ಥರ ಆರಾಧನೆ ಭಾಗವಾಗಿ ಕವೀಂದ್ರತೀರ್ಥರ ಬೃಂದಾವನಕ್ಕೆ ವಿಶೇಷ ಪೂಜೆ, ಮನ್ಯಾಯಸುಧಾಪಾಠ, ಪೂಜೆ, ಜ್ಞಾನಸತ್ರ ಸೇರಿ ಸಂಜೆ ದೀಪೋತ್ಸವ, ಉಪನ್ಯಾಸ, ಸಾರ್ವಜನಿಕ ದರ್ಶನ ಕಾರ್ಯಕ್ರಮಗಳು ನಡೆಯಲಿವೆ.

ರಥೋತ್ಸವ ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನಲ್ಲಿ ಸೋಮವಾರ ನಡೆದ ಎಡೆಯೂರು ಸಿದ್ದಲಿಂಗೇಶ್ವರ ರಥೋತ್ಸವದಲ್ಲಿ ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಅಪಾರ ಸಂಖ್ಯೆಯ ಜನರು ಭಾಗವಹಿಸಿದ್ದರು.

ಹುಲ್ಲೇಮಕ್ಕಿ ಗ್ರಾಮದ ಯೂನಸ್ ಅವರ ಮನೆಯ ಮುಂಭಾಗದ ಗೇಟಿನ ಸಮೀಪವೇ ಕರಡಿ ಹಾಗೂ ಕ್ಯಾಪ್ಟನ್ ಎಂಬ ಹೆಸರಿನ ಕಾಡಾನೆಗಳು ಕಾದಾಟ ನಡೆಸಿದವು

ಹುಲ್ಲೇಮಕ್ಕಿ: ಕಾಡಾನೆಗಳ ಕಾದಾಟ

ಪ್ರಜಾವಾಣಿ ವಾರ್ತೆ

ಬೇಲೂರು (ಹಾಸನ ಜಿಲ್ಲೆ): ತಾಲ್ಲೂಕಿನ ಅರೇಹಳ್ಳಿ ಹೋಬಳಿಯ ಹುಲ್ಲೇಮಕ್ಕಿ ಗ್ರಾಮದಲ್ಲಿ, ಕಾಡಾನೆ ಹಿಂಡಿ ನಿಂದ ಬೇರ್ಪಟ್ಟ ಎರಡು ಕಾಡಾನೆಗಳ ನಡುವೆ ಸೋಮವಾರ ಅರ್ಧ ಗಂಟೆಗೂ ಹೆಚ್ಚು ಸಮಯ ಕಾದಾಟ ನಡೆಯಿತು.

ಹುಲ್ಲೇಮಕ್ಕಿ ಗ್ರಾಮದ ಯೂನಸ್ ಅವರ ಮನೆಯ ಮುಂಭಾಗದ ಗೇಟಿನ ಸಮೀಪವೇ ಕರಡಿ ಹಾಗೂ ಕ್ಯಾಪ್ಟನ್ ಎಂಬ ಹೆಸರಿನ ಕಾಡಾನೆಗಳು ಕಾದಾಡಿದವು. ಜನರ ಕೂಗಾಟ ಕಿರುಚಾಟ, ಪಟಾಕಿ ಶಬ್ದಕ್ಕೂ ಹೆದರಲಿಲ್ಲ. ನಂತರ ಕಾಡಿಗೆ ಮರಳಿದವು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆಯ ವಲಯ ಅರಣ್ಯಾಧಿಕಾರಿ, ಇಟಿಎಫ್ ಮತ್ತು ಆರ್‌ಆರ್‌ಟಿ ಸಿಬ್ಬಂದಿ ಈ ಆನೆಗಳು ಸಾಗಿದ ಬಗ್ಗೆ ಮಾಹಿತಿ ಪಡೆದರು. ಆನೆಗಳ ಚಲನವಲನದ ಬಗ್ಗೆ ನಿಗಾ ಇಟ್ಟಿದ್ದು, ಗ್ರಾಮಸ್ಥರು ಎಚ್ಚರಿಕೆ ವಹಿಸುವಂತೆ ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ.

ನಿಧನ ವಾರ್ತೆ

ಗಿಡಿಗೆರೆ ರಾಮಕ್ಕ

ಮೂಲ್ಕಿ (ದಕ್ಷಿಣ ಕನ್ನಡ): ಸಿರಿ ಪಾಡ್ದನದ ಮೂಲಕ ಖ್ಯಾತರಾಗಿದ್ದ ಪಾಡ್ದನ ಕಲಾವಿದೆ, ರಾಜ್ಯಪ್ರಶಸ್ತಿ ಪುರಸ್ಕೃತ ಗಿಡಿಗೆರೆ ರಾಮಕ್ಕ ಮೊಗೇರ (102) ಅವರು ಕಟೀಲು ಸಮೀಪದ ಗಿಡಿಗೆರೆಯ ಮನೆಯಲ್ಲಿ ಸೋಮವಾರ ನಿಧನರಾದರು.

ರಾಮಕ್ಕ ಮಂಗಳೂರು ತಾಲ್ಲೂಕಿನ ವಾಮಂಜೂರಿನ ಕೂಕ್ರ ಮುಗ್ಗೇರ–ದುಗ್ಗಮ್ಮ ದಂಪತಿಯ ಪುತ್ರಿ. 17ನೇ ವಯಸ್ಸಿನಲ್ಲಿ ಕಟೀಲಿನ ಸಮೀಪದ ಗಿಡಿಗೆರೆಯ ಕಾಪೀರ ಮುಗ್ಗೇರ ಅವರನ್ನು ವಿವಾಹವಾಗಿದ್ದರು. ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಪಾಡ್ದನಗಳನ್ನು ಕಟ್ಟಿದ್ದ ಅವರು ಅವುಗಳನ್ನು ನಾಟಿಗದ್ದೆಗಳಲ್ಲಿ ಹಾಡುತ್ತಿದ್ದರು. ತುಳು ಕವಿತೆ, ಪಾಡ್ದನ ಮತ್ತು ಸಂಧಿಗಳು ಅವರ ಅಜ್ಜಿಯಿಂದ ಅವರಿಗೆ ಬಳುವಳಿಯಾಗಿ ಬಂದಿದ್ದವು.

ಅಕ್ಷರ ಜ್ಞಾನವಿಲ್ಲದ ರಾಮಕ್ಕ ಅವರಿಗೆ ಓ ಬೇಲೆ, ನಲ್ಲೂರಿ ಮಾಮ, ಮಂಜೊಟ್ಟಿ ಗೋಣ, ಗೋವಿಂದ ಬದನೆ, ಕಾನಡ, ಮಾಲ್‌ಂಡ್ ಮರ, ಕುಮಾರ, ಸಿರಿ, ಬಂಟರು, ಅಬ್ಬಗ-ದಾರಗೆ ಮೊದಲಾದ ಸಂಧಿ- ಪಾಡ್ದನಗಳು ಕಂಠಪಾಠವಾಗಿದ್ದವು. ಅವರು ಹಾಡಿರುವ ಸುದೀರ್ಘವಾದ 'ಸಿರಿ ಪಾಡ್ದನ'ವನ್ನು ಸಂಶೋಧಕ ಎ.ವಿ. ನಾವಡ ಸಂಪಾದಿಸಿದ್ದು, 'ರಾಮಕ್ಕ ಮುಗ್ಗೇರ್ತಿ ಕಟ್ಟಿದ ಸಿರಿಪಾಡ್ದನ' ಎಂಬ ಈ ಗ್ರಂಥವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗವು ಪ್ರಕಟಿಸಿದೆ.

2015ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, 2000ದಲ್ಲಿ ವೀರರಾಣಿ ಅಬ್ಬಕ್ಕ ಪ್ರಶಸ್ತಿ, ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಪ್ರಶಸ್ತಿ, ಕಟೀಲು ದೇವಳದ 'ಪಾಡ್ದನ ಕೋಗಿಲೆ' ಬಿರುದು, 2001ರಲ್ಲಿ ಜಿಲ್ಲಾ ಮಟ್ಟದ ಗಣರಾಜ್ಯೋತ್ಸವ ಪ್ರಶಸ್ತಿಗಳಿಗೆ ಅವರು ಭಾಜನರಾಗಿದ್ದಾರೆ. ಅವರಿಗೆ ಆರು ಮಂದಿ ಪುತ್ರರು ಹಾಗೂ ಪುತ್ರಿ ಇದ್ದಾರೆ.

YES BANK

ನೋಂದಾಯಿತ ಮತ್ತು ಕಾರ್ಪೊರೇಟ್ ಕಚೇರಿ:
ಯೆಸ್ ಬ್ಯಾಂಕ್ ಲಿಮಿಟೆಡ್: ಯೆಸ್ ಬ್ಯಾಂಕ್ ಹೌಸ್, ವೆಸ್ಟರ್ನ್ ಎಕ್ಸ್‌ಪ್ರೆಸ್ ಹೈವೇ, ಆಫ್ ಸಾಂತಾಕ್ರೂಜ್ (ಪೂ), ಮುಂಬೈ - 400055, ಭಾರತ. **ದೂರವಾಣಿ:** +91 (22) 5091 9800 /+91 (22) 6507 9800
ಫ್ಯಾಕ್ಸ್: +91 (22) 2619 2866 | **ವೆಬ್‌ಸೈಟ್:**www.yesbank.in
ಇಮೇಲ್: shivakumar.garudas@yesbank.in | **CIN:** L65190MH2003PLC143249

ಎಚ್ಚರಿಕೆಯ ಸೂಚನೆ / ಸಾರ್ವಜನಿಕ ಸೂಚನೆ

ಈ ಸೂಚನೆಯನ್ನು ಯೆಸ್ ಬ್ಯಾಂಕ್ ಲಿಮಿಟೆಡ್ **("ಬ್ಯಾಂಕ್")** ಪರವಾಗಿ ಸಾರ್ವಜನಿಕರಿಗೆ ನೀಡಲಾಗಿದೆ ("ಬ್ಯಾಂಕ್"), ಈ ಕೆಳಗಿನ **ಶೆಡ್ಯೂಲಿನಲ್ಲಿ ("ಶೆಡ್ಯೂಲ್ ಪ್ರಾಪರ್ಟೀಸ್")** ಹೆಚ್ಚು ನಿರ್ದಿಷ್ಟವಾಗಿ ವಿವರಿಸಿದ ಹಾಗೂ ಹಾಸನ ಜಿಲ್ಲೆಯಲ್ಲಿ ನೆಲೆಗೊಂಡಿರುವ ಆಸ್ತಿಗಳ ಹಕ್ಕು ಪತ್ರಗಳನ್ನು ಠೇವಣಿ ಮಾಡುವ ಮೂಲಕ ಯೆಸ್ ಬ್ಯಾಂಕ್ ಲಿಮಿಟೆಡ್ **("YBL / ಬ್ಯಾಂಕ್")**ಗೆ ಅಡಮಾನ ಇಡಲಾಗಿದೆ 1. ನೋಂದಣಿ ಸಂಖ್ಯೆ 2484 / 20-21 ಪ್ರವೇಶದ ಗುರುತಿನ ಪತ್ರ ಹೊಂದಿರುವ ಮಾರ್ಚ್ 8, 2021 ರ ಮತ್ತು 2. ಮೇ 16, 2022 ಹಾಗೂ ನೋಂದಣಿ ಸಂ. 460 / 22-23 ರಲ್ಲಿ ಇವೆರಡರ ನೋಂದಣಿಯನ್ನು ಸಕಲೇಶಪುರದಲ್ಲಿರುವ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಮಾಡಿದ್ದು, ಇದು 1) ಶ್ರೀ ಡಿ.ಎಂ. ಪೂರ್ಣೇಶ್, 2) ಶ್ರೀ ಡಿ.ಎಂ. ಶಂಕರ್, 3) ಶ್ರೀ ಡಿ.ಎಸ್.ಶ್ರವಣ ತೇಜಸ್, 4) ಮೆ. IBC ರಕ್ಸಿಡಿ ಎಸ್ಟೇಟ್ಸ್. ರವರಿಗೆ ಸೇರಿದುದಾಗಿರುತ್ತೆ.

ಮೇಲ್ಕಾಣಿಸಿದ ಯಾವುದೇ ಭಾಗದ ಯಾವುದೇ ಹೊರೆ, ಖರೀದಿ ಅಥವಾ ಮಾರಾಟ ಸೇರಿದಂತೆ ಯಾವುದೇ ರೀತಿಯಲ್ಲಿ ಮತ್ತು / ಅಥವಾ ಯಾವುದೇ ಸರ್ವೇ ನಂ ಮತ್ತು / ಅಥವಾ ಎಲ್ಲಾ ಶೆಡ್ಯೂಲ್ ಆಸ್ತಿಗಳನ್ನು ಬ್ಯಾಂಕ್ ನೀಡಿದ ಸಮ್ಮತಿ ಅಥವಾ ನಿರಾಕ್ಷೇಪಣಾ ಪ್ರಮಾಣಪತ್ರದ ಮೂಲಕ ಎಕ್ಸ್‌ಪ್ರೆಸ್ ಲಿಖಿತ ಅನುಮೋದನೆಯನ್ನು ಪಡೆಯದೇ ಯಾವುದೇ ರೀತಿಯಲ್ಲಿ ವ್ಯವಹರಿಸದಂತೆ ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡಲಾಗಿದೆ.

ಮೇಲೆ ಹೇಳಲಾದ ರೀತಿಯಲ್ಲಿ ಯಾರಾದರೂ ಕ್ರಮವನ್ನು ಕೈಗೊಂಡಲ್ಲಿ ಅದನ್ನು ತಮ್ಮ ಸ್ವಂತ ಅಪಾಯ ಮತ್ತು ವೆಚ್ಚದಲ್ಲಿ ಮಾಡಿರುತ್ತಾರೆ ಎಂದು ಪರಿಗಣಿಸಲಾಗುತ್ತಿದೆ. ಅಂತಹ ಯಾವುದೇ ವಹಿವಾಟು ಬ್ಯಾಂಕಿನ ಹಕ್ಕುಗಳಿಗೆ ಒಳಪಟ್ಟಿರುತ್ತದೆ.

ಮೇಲೆ ಉಲ್ಲೇಖಿಸಲಾದ ಮೇಲಿನ ಸ್ವತ್ತುಗಳ ಶೆಡ್ಯೂಲ್

ಕುಂಬರಡಿ ಗ್ರಾಮ, ಕಸಬ ಹೋಬ್ಲಿ, ಸಕಲೇಶಪುರ ತಾಲುಕು, ಹಾಸನ ಜಿಲ್ಲೆಯಲ್ಲಿ ಇರುವ ಸರ್ವೆ. ನಂ 176, 178, 201, 205, 206, 207, 208, 209, 211, 217, 218, 219, 220, 225, 226, 227, 228, 229, 230/1, 231, 234/1 & 234/3 (Old no. 234), 235, 239, 248, 249 (Old no. 186/P), 177/2, 181/2, 185/1 New 185/2, 190/2, 199/2, 200/2, 212/2, 216/2, 232/1, 261/2.

ಸರ್ವೆ. ನಂ.120/2, 122, 123 ಕ್ಯಾಮನಹಳ್ಳಿ ಗ್ರಾಮದ ಕಸಬಾ ಹೋಬಳಿ, ಸಕಲೇಶಪುರ ತಾಲೂಕು, ಹಾಸನ ಜಿಲ್ಲೆ,

ಸರ್ವೆ. ನಂ. 124, 125, 358, 364 (ಹಳೆಯ ಸಂ. 128) ನಡಹಳ್ಳಿ ಗ್ರಾಮದ ಕಸಬಾ ಹೋಬಳಿ, ಸಕಲೇಶಪುರ ತಾಲೂಕು, ಹಾಸನ ಜಿಲ್ಲೆ

ಸರ್ವೆ. ನಂ. 205/7p (ಹೊಸ ಸಂಖ್ಯೆ. 205/7), 185/p, 4/1 (ಹೊಸ ಸಂಖ್ಯೆ. 4/4), 6/1p (ಹೊಸ ಸಂಖ್ಯೆ. 6/22), 7, 8/p (ಹೊಸ ಸಂಖ್ಯೆ . 8/2), 9/p(ಹೊಸ ಸಂಖ್ಯೆ. 9/4), 10, 12, 4/1 (ಹೊಸ ಸಂಖ್ಯೆ. 4/3), 8/p (ಹೊಸ ಸಂಖ್ಯೆ. 8/3), 14/1Ap (ಹೊಸ ಸಂಖ್ಯೆ. 14/10), 8/p (ಹೊಸ ಸಂಖ್ಯೆ. 8/4), 9/p(ಹೊಸ 9/1), 6/1p(ಹೊಸ ಸಂಖ್ಯೆ. 6/21), 13, 14/1Ap(14/ 1A) 14/1 ಎಪಿ (ಹೊಸ ಸಂ. 14/9) ಎಲ್ಲವೂ ರಾಕ್ಸಿಡಿ ಎಸ್ಟೇಟ್ ಗ್ರಾಮ, ಹಾನ್ಬಾಳ್ ಹೋಬಳಿ, ಸಕಲೇಶಪುರ ತಾಲೂಕು, ಸಕಲೇಶಪುರ- ಮೂಡಿಗೆರೆ ರಾಜ್ಯ ಹೆದ್ದಾರಿಯ ಪಕ್ಕ , ಕಿಮನಹಳ್ಳಿ ಪೋಸ್ಟ್, ಹಾಸನ ಜಿಲ್ಲೆ.

ಸರ್ವೆ. ನಂ. 185/p, 186, 187, 191/1p, 193, 195, 190, 189, 205/7p (new no. 205/7) ಎಲ್ಲವೂ ರಾಕ್ಸಿಡಿ ಎಸ್ಟೇಟ್ ಗ್ರಾಮ, ಹಾನ್ಬಾಳ್ ಹೋಬಳಿ, ಸಕಲೇಶಪುರ ತಾಲೂಕು, ಸಕಲೇಶಪುರ- ಮೂಡಿಗೆರೆ ರಾಜ್ಯ ಹೆದ್ದಾರಿಯ ಪಕ್ಕ , ಕಿಮನಹಳ್ಳಿ ಪೋಸ್ಟ್, ಹಾಸನ ಜಿಲ್ಲೆ.

ಆದ್ದರಿಂದ, ಈ ತ್ವರಿತ ಸಾರ್ವಜನಿಕ ಸೂಚನೆ.

ದಿನಾಂಕ: ಏಪ್ರಿಲ್ 16, 2024
ಸ್ಥಳ: ಮುಂಬೈ

ಸಹಿ
ಅಧಿಕೃತ ಅಧಿಕಾರಿ
ಯೆಸ್ ಬ್ಯಾಂಕ್ ಲಿಮಿಟೆಡ್

Infosys® Navigate your next

ಇನ್‌ಫೋಸಿಸ್ ಲಿಮಿಟೆಡ್
ಕಾರ್ಪೊರೇಟ್ ಗುರುತು ಸಂಖ್ಯೆ (ಸಿಐಎನ್): L85110KA1981PLC013115
ನೋಂದಾಯಿತ ಕಛೇರಿ: ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560100
ದೂರವಾಣಿ: 91 80 2852 0261, ಫ್ಯಾಕ್ಸ್: 91 80 2852 0362
investors@infosys.com, www.infosys.com

ಸೂಚನೆ
ಕಂಪನಿಯ ಈಕ್ವಿಟಿ ಷೇರುಗಳನ್ನು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಗೆ ವರ್ಗಾವಣೆ (ಐಇಪಿಎಫ್) ಕುರಿತು

ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿ ಪ್ರಾಧಿಕಾರ (ಲೆಕ್ಕಪತ್ರಗಳು, ಪರಿಶೋಧನೆ, ವರ್ಗಾವಣೆ ಮತ್ತು ಮರುಪಾವತಿ) ನಿಯಮಾವಳಿಗಳು, 2016 ('ನಿಯಮಾವಳಿಗಳು') ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಇದರ ಅನ್ವಯ ಕೋರಿಕೆ ಬಾರದೆ ಏಳು ವರ್ಷಗಳವರೆಗೆ ಉಳಿದ, ಆರ್ಥಿಕ ವರ್ಷ 2016–17ರಲ್ಲಿ ಘೋಷಿಸಲಾದ ಅಂತಿಮ ಲಾಭಾಂಶ ಮತ್ತು ತತ್ಸಂಬಂಧಿತ ಷೇರುಗಳನ್ನು ಮೇಲೆ ಹೇಳಲಾದ ನಿಯಮಾವಳಿಗನುಸಾರವಾಗಿ ಐಇಪಿಎಫ್ ಖಾತೆಗೆ ದಿನಾಂಕ **ಜುಲೈ 25, 2024** ರಂದು ವರ್ಗಾಯಿಸಲಾಗುವುದು ಎಂದು ಷೇರುದಾರರಿಗೆ ಈ ಮೂಲಕ ಸೂಚನೆ ನೀಡಲಾಗಿದೆ.

ನಿಯಮಾವಳಿಗನುಸಾರವಾಗಿ ಕಂಪನಿಯು ಯಾರ ಷೇರುಗಳು ಐಇಪಿಎಫ್‌ಗೆ ವರ್ಗಾವಣೆಯಾಗಲು ಅರ್ಹವಾಗಿವೆಯೋ ಅಂತಹ ಷೇರುದಾರರಿಗೆ ಸೂಚನಾ ಪತ್ರಗಳನ್ನು ವೈಯಕ್ತಿಕವಾಗಿ ಕಳುಹಿಸಲಾಗುತ್ತಿದೆ. ಅಂತಹ ಷೇರುದಾರರ ಪೂರ್ಣವಿವರಗಳನ್ನು ಕಂಪನಿಯ ಜಾಲತಾಣದಲ್ಲಿ ಒದಗಿಸಲಾಗಿದೆ:https://www.infosys.com/investors/shareholder-services/Pages/transfer-equity-shares.aspx.

ಈ ಸಂಬಂಧವಾಗಿ ಕೆಳಕಂಡ ಅಂಶಗಳನ್ನು ದಯಮಾಡಿ ಗಮನಿಸಿ:

1) **ಷೇರುಗಳನ್ನು ನೀವು ಭೌತಿಕ ರೂಪದಲ್ಲಿ ಹೊಂದಿದ್ದರೆ:** ಷೇರುಗಳ ದ್ವಿಪ್ರತಿ(ಗಳನ್ನು)ಯನ್ನು ನೀಡಿ ಐಇಪಿಎಫ್‌ಗೆ ವರ್ಗಾಯಿಸಲಾಗುವುದು. ನಿಮ್ಮ ಹೆಸರಿನಲ್ಲಿ(ರುಗಳಲ್ಲಿ) ನೋಂದಾಯಿಸಲ್ಪಟ್ಟಿದ್ದ ಮೂಲ ಷೇರುಪತ್ರ(ಗಳು) ಸ್ವಯಂರದ್ದಾಗುತ್ತವೆ.

2) **ಷೇರುಗಳನ್ನು ನೀವು ವಿದ್ಯುನ್ಮಾನ ರೂಪದಲ್ಲಿ ಹೊಂದಿದ್ದಿರೆ:** ಐಇಪಿಎಫ್ ಖಾತೆಗೆ ವರ್ಗವಾಗಲು ಅರ್ಹವಾದ ನಿಮ್ಮ ಷೇರುಗಳನ್ನು ನಿಮ್ಮ ಡಿಮ್ಯಾಟ್ ಖಾತೆಯಿಂದ ವರ್ಗಾವಣೆ ಮಾಡಲಾಗುವುದು.

ಒಂದು ವೇಳೆ ದಿನಾಂಕ **ಜುಲೈ 16, 2024**ರ ಒಳಗೆ ಕ್ರಮಬದ್ಧ ಕೋರಿಕೆ ಬರದಿದ್ದಲ್ಲಿ, ಕಂಪನಿಯು ಲಾಭಾಂಶ ಮತ್ತು ತತ್ಸಂಬಂಧಿತ ಷೇರುಗಳನ್ನು ಐಇಪಿಎಫ್‌ಗೆ ವರ್ಗಾಯಿಸುವ ಪ್ರಕ್ರಿಯೆಯನ್ನು, ಯಾವುದೇ ಸೂಚನೆ ಕೊಡದೆ ಜಾರಿಯಾಗುತ್ತದೆ. ನಿಯಮಾವಳಿಗನುಸಾರ ಐಇಪಿಎಫ್‌ಗೆ ವರ್ಗಾವಣೆಯಾದ ಕೋರಿಕೆ ಬಾರದ ಲಾಭಾಂಶದ ಹಣ/ತತ್ಸಂಬಂಧಿತ ಷೇರುಗಳ ಕುರಿತಾಗಿ ಕಂಪನಿಗೆ ಯಾವುದೇ ಬಾಧ್ಯತೆಯಿರುವುದಿಲ್ಲವೆಂಬುದನ್ನು ಈ ಮೂಲಕ ಸ್ಪಷ್ಟಪಡಿಸಲಾಗಿದೆ. ಸದರಿ ಷೇರುದಾರರು ತಮ್ಮ ಲಾಭಾಂಶ ಮತ್ತು ಷೇರುಗಳನ್ನು ಐಇಪಿಎಫ್‌ನಿಂದ ಮರಳಿ ಪಡೆಯಲು ಕಂಪನಿಯಿಂದ ಹಕ್ಕು ಪತ್ರ ಪಡೆದ ನಂತರ ಐಇಪಿಎಫ್‌ಗೆ ನಿಗದಿತ ಐಇಪಿಎಫ್–5 ನಮೂನೆಯಲ್ಲಿ ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಿ ತಮ್ಮ ಷೇರುಗಳು ಹಾಗೂ ಲಾಭಾಂಶವನ್ನು ಪಡೆಯಬಹುದಾಗಿರುತ್ತದೆ.

ಸದರಿ ವಿಷಯ ಕುರಿತಾದ ಯಾವುದೇ ವಿಚಾರಣೆಗಳಿದ್ದಲ್ಲಿ ಷೇರುದಾರರು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರಾದ ಶ್ರೀಮತಿ ಶೋಭಾ ಆನಂದ್, ಉಪ ಉಪಾಧ್ಯಕ್ಷರು, ಮೆ॥ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ವಿಭಾಗ: ಇನ್‌ಫೋಸಿಸ್ ಲಿಮಿಟೆಡ್, ಸೆಲೇನಿಯಮ್ ಬಿಲ್ಡಿಂಗ್, ಟವರ್ ಬಿ, ಪ್ಲಾಟ್ ನಂ. 31–32, ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಕ್ರಮ್‌ಗುಡ, ಸೆರಿಲಿಂಗಂಪಲ್ಲಿ ಮಂಡಲ್, ಹೈದರಾಬಾದ್, ರಂಗಾರೆಡ್ಡಿ, ತೆಲಂಗಾಣ, ಭಾರತ – 500032. ದೂರವಾಣಿ: +91 40 6716 2222 ಅಥವಾ ಇ ಅಂಚೆ: einward.ris@kfintech.com ಸಂಪರ್ಕಿಸಲು ಕೋರಲಾಗಿದೆ.

ಇನ್‌ಫೋಸಿಸ್ ಲಿಮಿಟೆಡ್ ಪರವಾಗಿ
ಸಹಿ/–
ಎ.ಜಿ.ಎಸ್. ಮಣಿಕಂಠ
ಕಂಪನಿ ಕಾರ್ಯದರ್ಶಿ

ಎಪ್ರಿಲ್ 15, 2024
ಬೆಂಗಳೂರು, ಭಾರತ

ಸುಭಾಷಿತ

ಬೇರೆಯವರ ಬಗ್ಗೆ ನಮ್ಮ ಮನಸ್ಸಿನಲ್ಲಿ ಕೆಟ್ಟ ಭಾವನೆಗಳನ್ನು ಇಟ್ಟುಕೊಳ್ಳಬಾರದು. ಹಾಗೆ ಮಾಡಿದರೆ ನಮ್ಮ ಮನಸ್ಸೇ ಮಲಿನವಾಗುವುದು.

–ಮಹರ್ಷಿ ವಾಲ್ಮೀಕಿ

ವಿಶ್ವಕ್ಕೆ ಬೇಕಿರುವುದು ಶಾಂತಿ ಇನ್ನೊಂದು ಯುದ್ಧ ಬೇಡ

ಏಷ್ಯಾದ ಪಶ್ಚಿಮ ಭಾಗವು ತೀವ್ರ ಸಂಘರ್ಷದ ಕಡೆ ಸಾಗುತ್ತಿದೆ. ಸಿರಿಯಾ ದೇಶದ ರಾಜಧಾನಿ ಡಮಾಸ್ಕಸ್‌ನಲ್ಲಿ ಇರುವ ಇರಾನ್ ದೇಶದ ದೂತಾವಾಸ ಕಚೇರಿಯ ಮೇಲೆ ಇಸ್ರೇಲ್ ಏಪ್ರಿಲ್ 1ರಂದು ನಡೆಸಿದ ವಿನಾಶದ ದಾಳಿಗೆ ಪ್ರತೀಕಾರ ಎಂಬಂತೆ ಇಸ್ರೇಲ್ ಮೇಲೆ ಇರಾನ್ ದಾಳಿ ನಡೆಸಿದೆ. ಇಸ್ರೇಲ್ ಮತ್ತು ಇರಾನ್ ನಡುವೆ ಛಾಯಾ ಸಮರವು ದಶಕಗಳಿಂದ ನಡೆಯುತ್ತಿದೆ. ಆದರೆ ಇಸ್ರೇಲ್ ಮೇಲೆ ಇರಾನ್ ನೇರವಾಗಿ ಮಿಲಿಟರಿ ದಾಳಿ ನಡೆಸಿರುವುದು ಇದೇ ಮೊದಲು. ಇಸ್ರೇಲ್ ಗುರಿಯಾಗಿಸಿಕೊಂಡು ಇರಾನ್ ನೂರಾರು ಕ್ಷಿಪಣಿಗಳನ್ನು ಹಾರಿಸಿದೆ. ಇಸ್ರೇಲ್ ಅಧಿಕಾರಿಗಳು ನೀಡಿರುವ ಮಾಹಿತಿ ಪ್ರಕಾರ, ಈ ಕ್ಷಿಪಣಿಗಳ ಪೈಕಿ ಹೆಚ್ಚಿನವನ್ನು ಆಗಸದಲ್ಲಿಯೇ ಹೊಡೆದುರುಳಿಸಲಾಗಿದೆ. ಶತ್ರುಗಳ ದಾಳಿಯಿಂದ ಇಸ್ರೇಲ್ ದೇಶವನ್ನು ರಕ್ಷಿಸುವ ವಿಚಾರದಲ್ಲಿ ತಮ್ಮ ಬದ್ಧತೆಯು ಎಂದಿಗೂ ಕುಗ್ಗುವುದಿಲ್ಲ ಎಂಬ ಮಾತನ್ನು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ. ಅಮೆರಿಕದ ಯುದ್ಧವಿಮಾನಗಳು ಹಾಗೂ ಕ್ಷಿಪಣಿ ನಾಶಕಗಳನ್ನು ಕಳೆದ ವಾರ ಇಸ್ರೇಲ್ ಕಡೆ ರವಾನಿಸಲಾಗಿತ್ತು. ಇವು ಇರಾನ್ ದಾಳಿಯನ್ನು ಮಟ್ಟಹಾಕಲು ಇಸ್ರೇಲ್‌ಗೆ ನೆರವಾಗಿವೆ. ಡಮಾಸ್ಕಸ್‌ನಲ್ಲಿ ನಡೆದ ದಾಳಿಯಲ್ಲಿ ಇರಾನ್‌ನ ಇಸ್ಲಾಮಿಕ್

ರೆವಲ್ಯೂಷನರಿ ಗಾರ್ಡ್ಸ್‌ನ ಹಲವು ಮಂದಿ ಮಿಲಿಟರಿ ಕಮಾಂಡರ್‌ಗಳು, ಇರಾನ್ ಸೇನೆಯ ಯೋಧರು ಹಾಗೂ ಇರಾನ್‌ನ ಪ್ರಮುಖ ಜನರಲ್ ಒಬ್ಬರು ಮೃತಪಟ್ಟಿದ್ದರು. ಇಸ್ರೇಲ್‌ಗೆ ಕೆಡುಕು ಉಂಟುಮಾಡುವವರಿಗೆ ತಾವೂ ಕೆಡುಕು ತಂದಿಡುವುದಾಗಿ ಅಲ್ಲಿನ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದರು. ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದಿಂದಾಗಿ ಉಂಟಾಗಿರುವ ಬೆಲೆ ಏರಿಕೆಯ ಸಮಸ್ಯೆ ಹಾಗೂ ಕೋವಿಡ್ ಸಾಂಕ್ರಾಮಿಕದ ನಂತರದಲ್ಲಿ ವಿವಿಧ ದೇಶಗಳ ಅರ್ಥವ್ಯವಸ್ಥೆಯಲ್ಲಿ ಸೃಷ್ಟಿಯಾಗಿರುವ ಸಮಸ್ಯೆಗಳಿಗೆ ಇನ್ನೂ ಪರಿಹಾರ ಕಂಡಿಲ್ಲ. ಈ ಸಂದರ್ಭದಲ್ಲಿ ವಿಶ್ವಕ್ಕೆ ಇನ್ನೊಂದು ಯುದ್ಧ ಬೇಕಿಲ್ಲ. ಪರಿಸ್ಥಿತಿಯನ್ನು ಪ್ರಕ್ಷುಬ್ಧಗೊಳಿಸುವ ಕೆಲಸವನ್ನು ಇರಾನ್ ಮಾಡಿದೆ. ಈಗ ಸಂಯಮ ತೋರುವಂತೆ ನೆತನ್ಯಾಹು ಅವರ ಮೇಲೆ ಜಾಗತಿಕ ನಾಯಕರು ಯಾವ ರೀತಿಯಲ್ಲಿ ಒತ್ತಡ ತರುತ್ತಾರೆ ಎಂಬುದರ ಆಧಾರದ ಮೇಲೆ ಇಸ್ರೇಲ್‌ನ ಪ್ರತಿಕ್ರಿಯೆ ನಿಂತಿದೆ.

ಇಸ್ರೇಲ್–ಇರಾನ್ ನಡುವಿನ ಸಂಘರ್ಷ ಉಲ್ಬಣಿಸಿದರೆ ಅದರ ಪರಿಣಾಮವು ರಷ್ಯಾ–ಉಕ್ರೇನ್ ಯುದ್ಧದ ಪರಿಣಾಮಕ್ಕಿಂತ ಹೆಚ್ಚು ತೀವ್ರವಾಗಿ ಇರಲಿದೆ

ಇಸ್ರೇಲ್‌ನ ಪಾಶ್ಚಿಮಾತ್ಯ ಮಿತ್ರರಾದ ಅಮೆರಿಕ ಮತ್ತು ಇತರ ಕೆಲವು ದೇಶಗಳು ಗಾಜಾ ವಿಚಾರವಾಗಿ ಇಸ್ರೇಲ್ ಕದನ ವಿರಾಮ ಘೋಷಿಸುವಂತೆ ಮಾಡುವಲ್ಲಿ ಯಶಸ್ಸು ಕಂಡಿಲ್ಲ. ಈ ದಿಕ್ಕಿನಲ್ಲಿ ಇಸ್ರೇಲ್‌ನ ಮಿತ್ರ ರಾಷ್ಟ್ರಗಳು ಹೆಚ್ಚಿನ ಪ್ರಯತ್ನವನ್ನು ಮಾಡಿದಂತೆಯೂ ಕಾಣುತ್ತಿಲ್ಲ. ಪ್ಯಾಲೆಸ್ಟೀನಿಯನ್ನರ ಹತ್ಯಾಕಾಂಡಕ್ಕೆ ಕಾರಣವಾಗಬಲ್ಲ ಪರಿಸ್ಥಿತಿಯನ್ನು ಇಸ್ರೇಲ್ ರಕ್ಷಣಾ ಪಡೆಗಳು ನಿರ್ಮಿಸುತ್ತಿವೆ ಎಂದು ಅಂತರರಾಷ್ಟ್ರೀಯ ನ್ಯಾಯಾಲಯ ಹೇಳಿದ್ದರೂ, ಕದನ ವಿರಾಮ ಸಾಧ್ಯವಾಗಿಸುವ ಕೆಲಸವನ್ನು ಈ ರಾಷ್ಟ್ರಗಳು ಮಾಡಿಲ್ಲ. ಹಮಾಸ್ ಬಂಡುಕೋರರು ಇಸ್ರೇಲ್ ಮೇಲೆ ನಡೆಸಿದ ದಾಳಿಯಲ್ಲಿ 1,200 ಮಂದಿಯ ಹತ್ಯೆಯಾಗಿತ್ತು. ಇದಕ್ಕೆ ಪ್ರತಿಯಾಗಿ ಇಸ್ರೇಲ್‌ಗೆ 'ಆತ್ಮರಕ್ಷಣೆಯ ಹಕ್ಕು ಇದೆ' ಎಂಬ ಕಾರಣ ನೀಡಿ, ಗಾಜಾದಲ್ಲಿ ನಾಗರಿಕರ ಹತ್ಯೆ ನಡೆಸಿದ್ದಕ್ಕೆ ವಿಶ್ವದ ಹಲವು ದೇಶಗಳು ಸಮರ್ಥನೆ ಒದಗಿಸಿದವು. ಗಾಜಾದಲ್ಲಿ ಸುಮಾರು 32 ಸಾವಿರ ಮಂದಿ ಸಾವನ್ನಪ್ಪಿದ್ದಾರೆ. ಇವರಲ್ಲಿ ಹೆಚ್ಚಿನವರು ಮಹಿಳೆಯರು. ಈಗಿನ ಪರಿಸ್ಥಿತಿಗೆ ನೆತನ್ಯಾಹು ಅವರಿಗೆ ವಿಶ್ವದ ಹಲವು ದೇಶಗಳು ನೀಡಿದ ಅತಿಯಾದ ಬೆಂಬಲವೇ ಕಾರಣ ಎಂಬುದರಲ್ಲಿ ಅನುಮಾನ ಇಲ್ಲ. ಇಸ್ರೇಲ್ ಮತ್ತು ಇರಾನ್ ನಡುವೆ ಪೂರ್ಣ ಪ್ರಮಾಣದ ಯುದ್ಧ ಸಂಭವಿಸಿದರೆ, ಅದರ ಪರಿಣಾಮವು ರಷ್ಯಾ–ಉಕ್ರೇನ್ ಯುದ್ಧದ ಪರಿಣಾಮಕ್ಕಿಂತ ಹೆಚ್ಚು ತೀವ್ರವಾಗಿರಲಿದೆ. ನೆತನ್ಯಾಹು ಅವರು ಸಕಾರಣಗಳ ಆಗ್ರಹವನ್ನು ಒಪ್ಪಿಕೊಳ್ಳದೇ ಇದ್ದರೆ, ಇರಾನ್ ಅವರನ್ನು ಬದಲಾಯಿಸುವಂತೆ ಜಗತ್ತು ಒತ್ತಾಯಿಸುವುದು ನ್ಯಾಯಸಮ್ಮತ ಆಗುತ್ತದೆ.

ಇಸ್ರೇಲ್ ಬಗ್ಗೆ ಒಲವು ಹೊಂದಿರುವ ಭಾರತದ ಪಾಲಿಗೆ ಒಂದಿಷ್ಟು ಒತ್ತಡಗಳು ಸೃಷ್ಟಿಯಾಗಿವೆ. ಭಾರತವು ಈಗ, 'ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ವಶದಲ್ಲಿ ಇರುವ ಇಸ್ರೇಲ್‌ನ ಹಡಗಿನಲ್ಲಿರುವ 17 ಮಂದಿ ಭಾರತೀಯ ಸಿಬ್ಬಂದಿಯ ಬಿಡುಗಡೆಗಾಗಿ ಇರಾನ್ ಜೊತೆ ಮಾತುಕತೆ ನಡೆಸಬೇಕಿದೆ. ಭಾರತೀಯರು ಇರಾನ್ ಮತ್ತು ಇಸ್ರೇಲ್‌ಗೆ ಪ್ರಯಾಣಿಸುವುದನ್ನು ತಡೆಹಿಡಿಯಬೇಕು ಎಂದು ಕೇಂದ್ರ ಸರ್ಕಾರವು ಸಲಹೆ ನೀಡಿದೆ. ಆದರೆ, ಇಸ್ರೇಲ್‌ನಲ್ಲಿ ಹಲವು ಕೆಲಸಗಳಿಗೆ ಪ್ಯಾಲೆಸ್ಟೀನಿಯನ್ನರ ಬದಲು ಭಾರತೀಯರನ್ನು ನೇಮಕ ಮಾಡಿಕೊಳ್ಳಬೇಕು ಎಂದು ನೆತನ್ಯಾಹು ಕರೆ ನೀಡಿದಾಗ, ಅದಕ್ಕೆ ಸ್ಪಂದಿಸುವ ಕೆಲಸ ಮಾಡಿದ್ದು ಆತುರದ ಹೆಜ್ಜೆಯಾಗಿತ್ತಲ್ಲವೇ ಎಂಬ ಪ್ರಶ್ನೆ ಎದುರಾಗುತ್ತದೆ. ಆಗ ನೆತನ್ಯಾಹು ಅವರ ಕರೆಗೆ ಸ್ಪಂದಿಸಿದ್ದನ್ನು, 'ಮುಸ್ಲಿಂ ಭಯೋತ್ಪಾದಕರ' ವಿರುದ್ಧದ ಸಮರದಲ್ಲಿ ಇಸ್ರೇಲ್‌ಗೆ ಭಾರತವು ನೀಡುತ್ತಿರುವ ನೆರವು ಎಂದು ಭಾರತದಲ್ಲಿ ಹಲವರು ಕೊಂಡಾಡಿದ್ದರು. ಸರ್ಕಾರದ ಒಲವು ಏನೇ ಇರಬಹುದು. ಅದು ಭಾರತೀಯರನ್ನು ಅಪಾಯಕ್ಕೆ ಸಿಲುಕಿಸುವ ಕೆಲಸಗಳಿಂದ ದೂರ ಇರಬೇಕು.

ದಿನದ ಟ್ವೀಟ್

ತರಬೇತಿ ಬೇಕಾಗಿದೆ

ಉಚಿತ ಪಡಿತರ ಪಡೆಯುವ 80 ಕೋಟಿ ಜನರಿಗೆ ತಮ್ಮ ಬದುಕಿಗಾಗುವಷ್ಟು ಸಂಪಾದಿಸಲು ಅನುವಾಗುವಂತಹ ತರಬೇತಿ ಕೊಟ್ಟರೆ ಅವರು ₹ 2 ಲಕ್ಷ ಕೋಟಿ ಮೊತ್ತಕ್ಕೂ ಹೆಚ್ಚಿನ ತೆರಿಗೆ ಪಾವತಿಸಬಲ್ಲರು. ಅವರ ಆಹಾರಕ್ಕಾಗಿ ₹ 2 ಲಕ್ಷ ಕೋಟಿ ವ್ಯಯಿಸುವ ಬದಲು, ಗಳಿಸಲು ಅವರಿಗೆ ತರಬೇತಿ ಕೊಡುವುದು ಸೂಕ್ತ. 5 ಟ್ರಿಲಿಯನ್ ಡಾಲರ್ ಗಾತ್ರದ ಆರ್ಥಿಕತೆಯ ಗುರಿಯನ್ನು ಸುಲಭವಾಗಿ ಸಾಧಿಸಬಹುದು.

ನೂರಿ ಕಪಾಡಿಯಾ

ಕಿಡಿನುಡಿ

ವಯಸ್ಸಾಗಿರುವವರ ಹಾಗೂ ಅಂಗವಿಕಲರ ಮನೆಗೇ ಹೋಗಿ ಮತ ಪಡೆಯುವ ಕೆಲಸ ಮೆಚ್ಚುವಂಥದ್ದು. ಒಂದುವೇಳೆ ಇಂತಹವರಿಗೂ ಸೌಕರ್ಯಗಳಿರುವ ಊರನ್ನು ನಾವು ಕಟ್ಟಿದ್ದರೆ, ಅವರು ಊರುಗೋಲು ಹಿಡಿದು ಅಥವಾ ಗಾಲಿಕುರ್ಚಿಯಲ್ಲಿ ಎಲ್ಲೆಡೆ ಓಡಾಡಬಹುದಿತ್ತು. ಅವರು ಓಡಾಡಲು ಸಾಧ್ಯವಾಗದಂತಹ ಊರು, ಪೇಟೆ ಕಟ್ಟಿರುವ ನಾವು, ಕೇವಲ ಅವರ ಮತದಾನಕ್ಕೆ ವ್ಯವಸ್ಥೆ ಮಾಡಿದರೆ ಸಾಕೇ?

ಗಿರೀಶ್ ಕಾರ್ಗದ್ದೆ, ಎಂಜಿನಿಯರ್

50 ವರ್ಷಗಳ ಹಿಂದೆ

ಮಂಗಳವಾರ, 16-4-1974

• ಖಾಸಗಿ ಸಕ್ಕರೆ ಕಾರ್ಖಾನೆಗಳ ರಾಷ್ಟ್ರೀಕರಣಕ್ಕೆ ಶಿಫಾರಸು

ನವದೆಹಲಿ, ಏ. 15– ಸಹಕಾರಿ ಕ್ಷೇತ್ರಕ್ಕೆ ಸೇರದಿರುವ ಸಕ್ಕರೆ ಕಾರ್ಖಾನೆಗಳನ್ನು ರಾಷ್ಟ್ರೀಕರಿಸಬೇಕೆಂದು ಸಕ್ಕರೆ ಉದ್ಯಮ ವಿಚಾರಣಾ ಆಯೋಗವು ಶಿಫಾರಸು ಮಾಡಿದೆ.

ಸಹಕಾರೇತರ ಕಾರ್ಖಾನೆಗಳವರು ತಮ್ಮ ಸಂಸ್ಥೆಗಳನ್ನು ಸಾರ್ವಜನಿಕರ ಷೇರು ಬಂಡವಾಳಕ್ಕೂ ಅವಕಾಶವಿರುವ ಉದ್ಯಮ ಸಂಸ್ಥೆಗಳನ್ನಾಗಿ ನಿಶ್ಚಿತ ಅವಧಿಯೊಳಗೆ ಪರಿವರ್ತಿಸಲು ಒಪ್ಪಿಕೊಂಡರೆ ಅವನ್ನು ರಾಷ್ಟ್ರೀಕರಿಸಬಾರದೆಂದು ಆಯೋಗದ ಅಧ್ಯಕ್ಷರನ್ನೂ ಒಳಗೊಂಡಂತೆ ಅರ್ಧದಷ್ಟು ಸದಸ್ಯರು ಅಭಿಪ್ರಾಯಪಟ್ಟಿದ್ದರು. ಆದರೂ ಇನ್ನರ್ಧ ಜನ ರಾಷ್ಟ್ರೀಕರಣದ ಪರವಾಗಿ ಶಿಫಾರಸು ಮಾಡಿದರು.

ಅಧ್ಯಕ್ಷ ವಿ. ಭಾರ್ಗವ ಹಾಗೂ ಇತರ ನಾಲ್ವರು ಒಂದು ಶಿಫಾರಸನ್ನು, ಇನ್ನು ಐವರು ಇನ್ನೊಂದು ಶಿಫಾರಸನ್ನು ನೀಡಿದರು.

• ಕಚ್ಚಾ ವಸ್ತುಗಳ ಪೋಲು ನಿಲ್ಲಿಸಿ ಉದ್ಯಮಿಗಳಿಗೆ ಪ್ರಧಾನಿ ಇಂದಿರಾ ಕರೆ

ನವದೆಹಲಿ, ಏ. 15– ಕೊರತೆಯಿರುವ ಕೈಗಾರಿಕಾ ಕಚ್ಚಾವಸ್ತುಗಳು ಪೋಲಾಗುವುದನ್ನು ತಡೆಯಲು ಹಾಗೂ ಉತ್ಪಾದನಾವೃದ್ಧಿಗೆ ಬಂಡವಾಳ ದೊರೆಯುವಂತೆ ಉಳಿತಾಯ ಹೆಚ್ಚಿಸಲು ಸಹಕಾರ ನೀಡಬೇಕು ಎಂದು ಉದ್ಯಮಿಗಳಿಗೆ ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಕರೆ ನೀಡಿದರು.

ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಸಂಘಗಳ ಫೆಡರೇಷನ್ನಿನ ವಾರ್ಷಿಕ ಅಧಿವೇಶನವನ್ನು ಉದ್ಘಾಟಿಸಿದ ಅವರು, ವಿಶ್ವದಾದ್ಯಂತ ಉಲ್ಬಣಗೊಂಡಿರುವ ಕಚ್ಚಾವಸ್ತು ಕೊರತೆ ಹಾಗೂ ದುಬಾರಿ ಬೆಲೆಗಳನ್ನು ಪ್ರಸ್ತಾಪಿಸಿ, ಇಂಥ ಪರಿಸ್ಥಿತಿಯಲ್ಲೂ ರಾಷ್ಟ್ರದಲ್ಲಿ ಅವುಗಳು ಸಾಕಷ್ಟು ಪೋಲಾಗುತ್ತಿರುವುದು ಸರಿಯಲ್ಲ ಎಂದರು.

• ಎಲ್.ಎಂ.ಪಿ. ಮಾದರಿಯ ಅಲ್ಪಾವಧಿ ವೈದ್ಯಕೀಯ ಶಿಕ್ಷಣಕ್ಕೆ ಎಚ್ಚೆನ್ ಕರೆ

ಬೆಂಗಳೂರು, ಏ. 15– ದೇಶದ ಅಗತ್ಯವನ್ನು ಪೂರೈಸಬಲ್ಲ ಹಾಗೂ ಬಡವರ ಮಕ್ಕಳಿಗೂ ಕೈಗೆಟಕುವ ಹಿಂದಿನ ಎಲ್.ಎಂ.ಪಿ. ಮಾದರಿಯ ಅಲ್ಪಾವಧಿಯ ವೈದ್ಯಕೀಯ ಶಿಕ್ಷಣವನ್ನು ಜಾರಿಗೆ ತರುವುದು ಅಗತ್ಯ ಎಂದು ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ. ಎಚ್. ನರಸಿಂಹಯ್ಯ ಅವರು ಇಂದು ಇಲ್ಲಿ ನುಡಿದರು.

ಭಾರತದ ವಿದ್ಯಾರ್ಥಿ ದಾದಿಯರ ಸಂಘದ ರಾಜ್ಯಮಟ್ಟದ ಸಮ್ಮೇಳನ ಉದ್ಘಾಟಿಸಿದ ಅವರು, ಇಂದಿನ ಎಂ.ಬಿ.ಬಿ.ಎಸ್. ಶಿಕ್ಷಣ ಸಾಮಾನ್ಯರ ಮಕ್ಕಳಿಗೆ ದೊರಕದಷ್ಟು ದುಬಾರಿಯಾಗಿದ್ದು ಒಬ್ಬ ವೈದ್ಯ ತಯಾರಾಗಲು ಒಂದು ಲಕ್ಷ ರೂಪಾಯಿ ವೆಚ್ಚ ಮಾಡಬೇಕಾದ ಪ್ರಸಂಗ ಇದೆ ಎಂದರು.

ಪ್ರತಿಯೊಬ್ಬ ವೈದ್ಯನೂ ಪ್ರತಿಯೊಂದು ವಿಭಾಗದಲ್ಲೂ ಪರಿಣತನಾಗಿರಬೇಕೆಂಬ ಭಾವನೆ ತಪ್ಪು ಎಂದು ಅವರು ಹೇಳಿದರು.

ಪ್ರಧಾನಿಯವರ ಆತ್ಮಸ್ತುತಿ ಕೇಂದ್ರಿತ ನಡೆ ಬಿಜೆಪಿಗೂ ಪ್ರಜಾಪ್ರಭುತ್ವಕ್ಕೂ ಹಿತಕರವಲ್ಲ

ಮೋದಿ ಮತ್ತು ಸ್ವನಾಮಪ್ರೇಮ

ವಿಶ್ಲೇಷಣೆ

ಸುಧೀಂದ್ರ ಕುಲಕರ್ಣಿ

ನರೇಂದ್ರ ಮೋದಿ ಅವರಲ್ಲಿ ಮೆಚ್ಚಬಹುದಾದ ಹಲವಾರು ಗುಣಗಳಿವೆ. ಅವರು ದಣಿವಿಲ್ಲದೆ ಕೆಲಸ ಮಾಡುತ್ತಾರೆ. ಹಿಂದಿ ಹಾಗೂ ಮಾತೃಭಾಷೆ ಗುಜರಾತಿಯಲ್ಲಿ ಅದ್ಭುತ ವಾಕ್ಪಟು. ನಮ್ಮ ವಿಶಾಲ ಮತ್ತು ವೈವಿಧ್ಯಮಯ ದೇಶದ ಜನಮಾನಸದ ಬಲ ಮತ್ತು ದೌರ್ಬಲ್ಯ ಎರಡನ್ನೂ ಅವರು ಚೆನ್ನಾಗಿ ಅರಿತಿದ್ದಾರೆ. ಆರ್‌ಎಸ್‌ಎಸ್ ಪ್ರಚಾರಕರಾಗಿ, ಬಿಜೆಪಿಯ ಸಂಘಟಕರಾಗಿ ಕಾರ್ಯ ಆರಂಭಿಸಿದ ಮೋದಿ, ಸ್ಪರ್ಧಾತ್ಮಕವೂ ದೋಷಪೂರ್ಣವೂ ಆಗಿರುವ ಇಂದಿನ ರಾಜಕಾರಣ ಬೇಡುವ ಕೆಲವು ಸಾಮರ್ಥ್ಯಗಳನ್ನು ಚಾಣಾಕ್ಷತನದಿಂದ ರೂಢಿಸಿಕೊಂಡಿದ್ದಾರೆ. ಅವರು ಹಾಗೆ ಮಾಡದೇ ಹೋಗಿದ್ದರೆ ಇಷ್ಟು ಎತ್ತರಕ್ಕೆ ಬೆಳೆಯುತ್ತಿರಲಿಲ್ಲ.

ಈ ಮಾತು ಎಷ್ಟು ಸತ್ಯವೋ ಅಷ್ಟೇ ಅಪ್ರಿಯವಾದ ಇನ್ನೊಂದು ಸತ್ಯವೆಂದರೆ, ಭಾರತಕ್ಕೆ ಇದುವರೆಗೆ ಲಭಿಸಿದ 14 ಮಂದಿ ಪ್ರಧಾನಮಂತ್ರಿಗಳಲ್ಲಿ ಆತ್ಮಸ್ತುತಿಗೆ ಮೋದಿಯವರಷ್ಟು ಪ್ರಾಮುಖ್ಯ ನೀಡಿದ ಮತ್ತೊಬ್ಬ ಪ್ರಧಾನಿಯನ್ನು ದೇಶ ಕಂಡಿಲ್ಲ. ಮೋದಿಯವರ ಯಾವುದೇ ಭಾಷಣವನ್ನು, ವಿಶೇಷವಾಗಿ ಸದ್ಯದ ಚುನಾವಣಾ ಸಂದರ್ಭದ ಭಾಷಣವನ್ನು ಕೇಳಿನೋಡಿ. ಅದರಲ್ಲಿ ಅವರು ಕನಿಷ್ಠ ಹತ್ತಿಪ್ಪತ್ತು ಬಾರಿಯಾದರೂ ತಮ್ಮ ಹೆಸರನ್ನು ತಾವೇ ಹೇಳಿಕೊಳ್ಳುತ್ತಾರೆ. 'ಯೇ ಮೋದಿ ಕೀ ಗ್ಯಾರಂಟಿ ಹೈ' (ಇದು ಮೋದಿಯ ಗ್ಯಾರಂಟಿ), 'ಮೋದಿ ಜೋ ಕಹತಾ ಹೈ, ವೋ ಕರ್‌ಕೆ ದಿಖಾತಾ ಹೈ' (ಮೋದಿ ಏನು ಹೇಳುತ್ತಾನೋ ಅದನ್ನು ಮಾಡಿ ತೋರಿಸುತ್ತಾನೆ), 'ಮೋದಿ ಮೌಜ್ ಕರ್‌ನೆ ಕೆ ಲಿಯೇ ಪೈದಾ ನಹೀ ಹುವಾ ಹೈ' (ಮೋದಿ ಮಜಾ ಮಾಡಲು ಹುಟ್ಟಿಬಂದಿಲ್ಲ)... ಇದು ಅವರ ಶೈಲಿ. ಬಿಜೆಪಿಯ 2024ರ ಚುನಾವಣಾ ಪ್ರಣಾಳಿಕೆಯ ಶೀರ್ಷಿಕೆ ಕೂಡ 'ಮೋದಿ ಕೀ ಗ್ಯಾರಂಟಿ'.

ಮೋದಿಯವರಿಗೆ ತಮ್ಮ ಸಚಿವ ಸಂಪುಟ ಅಥವಾ ತಮ್ಮ ಪಕ್ಷ ಎಲ್ಲವೂ ಗೌಣ. ಎಲ್ಲ ಸಾಧನೆಗಳೂ ತಮ್ಮವು, ಎಲ್ಲ ಆಶ್ವಾಸನೆಗಳೂ ತಾವೊಬ್ಬರೇ ನೀಡುವಂಥವು. ಒಬ್ಬ ಪ್ರಧಾನಿಯಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ವಿಷಯದಲ್ಲಿ ಪಾಲಿಸಬೇಕಾದ ಸಾಂವಿಧಾನಿಕ ಶಿಷ್ಟಾಚಾರವನ್ನೂ ಮೋದಿ ಹಲವು ಬಾರಿ ಪಾಲಿಸಿಲ್ಲ. ವಿನಮ್ರತೆ ಮತ್ತು ಅಹಂಕಾರಶೂನ್ಯತೆಯು ಒಬ್ಬ ಆದರ್ಶ ನಾಯಕನ ಸದ್ಗುಣಗಳು ಎಂದು ಹಿಂದೂ ಧರ್ಮಶಾಸ್ತ್ರಗಳು ಹೇಳುತ್ತವೆ. ಮೋದಿಯವರ ಹಿಂದುತ್ವ ಇದನ್ನು ಒಪ್ಪುವುದಿಲ್ಲ.

ಇಷ್ಟೊಂದು ಅತಿಯಾದ ಸ್ವನಾಮಪ್ರೇಮದ ಹಿಂದೆ ಒಂದು ನಿರ್ವಿವಾದವಾದ ಸರ್ವಾಧಿಕಾರಿ ಪ್ರವೃತ್ತಿಯಿದೆ. ನಮ್ಮಲ್ಲಿ ಬಹುಪಕ್ಷೀಯ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಿದ್ದರೂ ಇಂದು ಭಾರತ 'ಒಂದು ದೇಶ, ಒಬ್ಬನೇ ನಾಯಕ' ಎಂಬ ದಿಕ್ಕಿನಲ್ಲಿ ಸಾಗಿದೆ. ಮೋದಿಯವರು ಒಮ್ಮೆ ಸಂಸತ್ತಿನಲ್ಲಿಯೇ ವಿರೋಧ ಪಕ್ಷಗಳನ್ನು ಉದ್ದೇಶಿಸಿ 'ಏಕ್ ಅಕೇಲಾ ಮೋದಿ ಸಬ್ ಪರ್ ಭಾರಿ' (ನಿಮ್ಮೆಲ್ಲರನ್ನೂ ಮೂಲೆಗುಂಪು ಮಾಡಲು ಮೋದಿಯೊಬ್ಬನೇ ಸಾಕು) ಎಂದು ಎದೆ ತಟ್ಟಿಕೊಳ್ಳುತ್ತಾ ಗರ್ಜಿಸಿದ್ದರು. ಹಿಂದಿನ ಹತ್ತು ವರ್ಷಗಳಲ್ಲಿ ಸಂಸತ್ತಿನಲ್ಲಿ ವಿರೋಧ ಪಕ್ಷಗಳಿಗೆ ದನಿಯೇ ಇಲ್ಲ. ಅವುಗಳೇನಾದರೂ ಸರ್ಕಾರದ ವಿರುದ್ಧ ಟೀಕೆ ಟಿಪ್ಪಣಿ ಮಾಡಿದರೆ, ಬಿಜೆಪಿ ಸದಸ್ಯರು ಪ್ರಧಾನಿಯವರ ಸಮ್ಮುಖದಲ್ಲಿಯೇ 'ಮೋದಿ, ಮೋದಿ' ಎಂದು ಕೂಗಾಡತೊಡಗುತ್ತಾರೆ.

ಭಾರತದ ಪ್ರಥಮ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅವರು ಪ್ರಸಿದ್ಧ ಫ್ರೆಂಚ್ ಚಿಂತಕ ವೋಲ್ಟೇರ್ ಅವರ ಒಂದು ವಾಕ್ಯವನ್ನು ಪದೇ ಪದೇ ಹೇಳುತ್ತಿದ್ದರು- 'ಐ ಡಿಸ್‌ಅಪ್ರೂವ್ ಆಫ್ ವಾಟ್ ಯೂ ಸೇ, ಬಟ್ ವಿಲ್ ಡಿಫೆಂಡ್ ಟು ದಿ ಡೆತ್ ಯುವರ್ ರೈಟ್ ಟು ಸೇ ಇಟ್' (ನೀನು ಹೇಳುವುದನ್ನು ನಾನು ಒಪ್ಪುವುದಿಲ್ಲ. ಆದರೆ ಅದನ್ನು ಹೇಳುವ ನಿನ್ನ ಹಕ್ಕನ್ನು ನನ್ನ ಪ್ರಾಣವನ್ನೇ ಪಣಕ್ಕಿಟ್ಟಾದರೂ ರಕ್ಷಿಸುವೆ). ನೆಹರೂ ಅವರ ಕಾಲದಿಂದ ಮೋದಿ ಅವರ ಕಾಲದವರೆಗೆ ನಮ್ಮ ಪ್ರಜಾಪ್ರಭುತ್ವ, ಸಂಸದೀಯ ವ್ಯವಸ್ಥೆ ಎಷ್ಟೊಂದು ತಳಮಟ್ಟಕ್ಕೆ ತಲುಪಿವೆ ಎಂದು ಯೋಚಿಸಿದರೆ ಅತೀವ ಚಿಂತೆಯಾಗುತ್ತದೆ.

ನಮ್ಮ ಸಂವಿಧಾನವು ಭಾರತವನ್ನು 'ರಾಜ್ಯಗಳ ಒಕ್ಕೂಟ' ಎಂದು ಪರಿಗಣಿಸಿದೆ. ಆದರೆ ಮೋದಿ ನೇತೃತ್ವದಲ್ಲಿ ರಾಜ್ಯಗಳ ಅಧಿಕಾರ ದಿನೇದಿನೇ ಕುಗ್ಗುತ್ತಿದೆ. 2014ಕ್ಕಿಂತ ಮೊದಲು ಮೋದಿಯವರೇ 'ನಾನು ರಾಜ್ಯಗಳಿಗೆ ಪ್ರೋತ್ಸಾಹ, ಸಹಕಾರ ನೀಡುತ್ತೇನೆ' ಎಂದು ಗ್ಯಾರಂಟಿ ನೀಡಿದ್ದಲ್ಲದೆ 'ಟೀಮ್ ಇಂಡಿಯಾ = ಪ್ರಧಾನಮಂತ್ರಿ + ಮುಖ್ಯಮಂತ್ರಿಗಳು' ಎಂಬ ಆಶ್ವಾಸನೆಯನ್ನು ಕೂಡ ಕೊಟ್ಟಿದ್ದರು. ಆದರೆ ಇಂದು ಬಿಜೆಪಿಯನ್ನು ವಿರೋಧಿಸುವ ಪಕ್ಷಗಳಿಗೆ ಸೇರಿದ ಮುಖ್ಯಮಂತ್ರಿಗಳನ್ನು ಹೀಯಾಳಿಸುವುದಷ್ಟೇ ಅಲ್ಲ, ಬಿಜೆಪಿ ಅಥವಾ ಬಿಜೆಪಿ ಬೆಂಬಲಿತ ಮುಖ್ಯಮಂತ್ರಿಗಳಿಗೂ ಏನೂ ಕಿಮ್ಮತ್ತಿಲ್ಲದಂತೆ ಮಾಡಿದ್ದಾರೆ. ಮತ್ತೊಂದು ವಿಷಯ ಗಮನಾರ್ಹ. ಕೇಂದ್ರ ಸರ್ಕಾರದ ಬಹುತೇಕ ಯೋಜನೆಗಳು 'ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನಾ', 'ಪ್ರಧಾನಮಂತ್ರಿ ಜನಧನ ಯೋಜನಾ' ಎಂಬಂತಹ ಪ್ರಧಾನಿ ಕೇಂದ್ರಿತ ನಾಮಾಂಕಿತವನ್ನೇ ಹೊಂದಿವೆ. ಇವೆಲ್ಲವುಗಳಲ್ಲಿ ಮೋದಿಯವರದೇ ಚಿತ್ರ, ಅವರದೇ ಸತತ ಪ್ರಚಾರ.

ಇಂದು ನಡೆದಿರುವ ಮೋದಿಯವರ ವೈಭವೀಕರಣದ ಮಾದರಿಯು ಬಿಜೆಪಿ ಮತ್ತು ಆರ್‌ಎಸ್‌ಎಸ್ ಸಂಸ್ಕೃತಿಯಲ್ಲಿ ಈ ಮೊದಲು ಇರಲಿಲ್ಲ. ಆರ್‌ಎಸ್‌ಎಸ್ ಕಲಿಸುವ ಒಂದು ಒಳ್ಳೆಯ ಸಂಸ್ಕಾರವೆಂದರೆ ವಿನಯ, 'ನಾನಲ್ಲ, ನಾವು' ಎಂಬ ಸಾಮೂಹಿಕತೆಯ ಮಂತ್ರ. ಅಲ್ಲಿ ಸ್ವಪ್ರಶಂಸೆಗೆ ಸ್ಥಾನವಿಲ್ಲ, ವ್ಯಕ್ತಿಪೂಜೆಗಂತೂ ಇಲ್ಲವೇ ಇಲ್ಲ. 'ನೇಷನ್ ಫಸ್ಟ್, ಪಾರ್ಟಿ ನೆಕ್ಸ್ಟ್, ಸೆಲ್ಫ್ ಲಾಸ್ಟ್' (ರಾಷ್ಟ್ರ ಮೊದಲು, ಪಕ್ಷ ನಂತರ, ನಾನು ಎಂಬುದು ಕೊನೆಗೆ). ಇದು, ಅಟಲ್ ಬಿಹಾರಿ ವಾಜಪೇಯಿ ಮತ್ತು ಲಾಲ್‌ಕೃಷ್ಣ ಅಡ್ವಾಣಿ ಅವರ ಕಾಲದಲ್ಲಿ ಬಿಜೆಪಿಯ ಮೂಲಮಂತ್ರ ಆಗಿತ್ತು. ಮೋದಿಯವರು 'ರಾಷ್ಟ್ರಕ್ಕಿಂತ ನಾನು ಮೊದಲು' ಎಂದು ಹೇಳಿಲ್ಲದಿದ್ದರೂ 'ಪಕ್ಷಕ್ಕಿಂತ ನಾನೇ ಮೊದಲು' ಎಂಬುದನ್ನು ತಮ್ಮ ಮಾತಿನಿಂದ, ಆಚರಣೆಯಿಂದ ಸಾರಿ ಸಾರಿ ಹೇಳುತ್ತಿದ್ದಾರೆ. ಅವರ ಭಕ್ತರಂತೂ 'ಮೋದಿಯವರೇ ರಾಷ್ಟ್ರ, ರಾಷ್ಟ್ರವೇ ಮೋದಿ' ಎಂದು ನಂಬಿದ್ದಾರೆ. ಏಕೆಂದರೆ, ಮೋದಿಯವರನ್ನು ಟೀಕಿಸುವವರನ್ನೆಲ್ಲ ಅವರು ರಾಷ್ಟ್ರದ್ರೋಹಿಗಳೆಂದು ತೆಗಳುತ್ತಾರೆ. ಕಂಗನಾ ರನೌತ್ ಅಂತಹವರಂತೂ ಮೋದಿಯವರನ್ನು ವಿಷ್ಣುವಿನ ಅವತಾರ ಎಂದೇ ಘೋಷಿಸಿದ್ದಾರೆ.

ಬಿಜೆಪಿ ಹಿಂದಿಗಿಂತಲೂ ಈಗ ಎಷ್ಟು ಬದಲಾಗಿದೆ ಎಂಬುದಕ್ಕೆ ನನ್ನದೇ ಒಂದು ಅನುಭವವನ್ನು ಹೇಳಬಯಸುತ್ತೇನೆ. ನಾನು ಹದಿನಾರು ವರ್ಷ ಬಿಜೆಪಿ ಕಾರ್ಯಕರ್ತನಾಗಿದ್ದವನು. ಆ ಅವಧಿಯಲ್ಲಿ ಆರು ವರ್ಷಗಳ ಕಾಲ ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗ, ಪ್ರಧಾನಮಂತ್ರಿ ಕಾರ್ಯಾಲಯದಲ್ಲಿ ಸೇವೆ ಸಲ್ಲಿಸಿದ್ದೇನೆ. 2004ರ ಲೋಕಸಭಾ ಚುನಾವಣೆ ವೇಳೆ ಆಗಿನ ಹಿರಿಯ ಸಚಿವ ಪ್ರಮೋದ್ ಮಹಾಜನ್ ಅವರ ಮನೆಯಲ್ಲಿ 'ವಾರ್ ರೂಮ್' ನಿರ್ವಹಣೆಯ ಜವಾಬ್ದಾರಿ ನನ್ನದಾಗಿತ್ತು. ನಾವು ವಾಜಪೇಯಿ ನೇತೃತ್ವದ ಸರ್ಕಾರದ ವಿವಿಧ ಸಾಧನೆಗಳನ್ನು ವಿವರಿಸುವ ಒಂದು ಆಕರ್ಷಕ ಪುಸ್ತಕವನ್ನು ಸಿದ್ಧಪಡಿಸಿದೆವು. ಅದರ ಪ್ರತಿಯೊಂದು ಪುಟದಲ್ಲಿಯೂ ಅಟಲ್‌ಜಿ ಅವರ ಸುದೀರ್ಘ ರಾಜಕೀಯ ಜೀವನ ಪಯಣದ ಚಿತ್ರಗಳನ್ನು ಬಳಸಿದ್ದೆವು. ಆ ಪುಸ್ತಕವನ್ನು ಅತ್ಯಂತ ಹೆಮ್ಮೆಯಿಂದ ನಾನು ಪ್ರಧಾನಿ ಅವರಿಗೆ ತೋರಿಸಲು ಹೋದೆ. ಅವರು ಅದನ್ನು ನೋಡಿ, ತೀವ್ರ ಅಸಮಾಧಾನದಿಂದ ನನ್ನತ್ತ ಹೊರಳಿ 'ಇದೇನು ಮಾಡಿರುವಿರಿ? ಪುಸ್ತಕದುದ್ದಕ್ಕೂ ನನ್ನ ಚಿತ್ರಗಳೇ ಕಾಣುತ್ತಿವೆ. ನಾನೊಬ್ಬನೇ ಸರ್ಕಾರವೇ? ಬೇರೆ ಮಂತ್ರಿಗಳು ಏನೂ ಮಾಡಿಲ್ಲವೇ? ಇದನ್ನು ಕೂಡಲೇ ಬದಲಿಸಿ' ಎಂದು ತಾಕೀತು ಮಾಡಿದರು. ಇಂದು ನೋಡಿದರೆ ಮೋದಿಯವರೇ ಸರ್ವತ್ರ, ಮೋದಿಯವರೇ ಸರ್ವಸ್ವ.

ಸ್ಟಾಲಿನ್- ಮಾವೊ ಕಾಲದಲ್ಲಿ ಇದ್ದಂತಹ ವ್ಯಕ್ತಿಪೂಜೆಯು ಭಾರತದಲ್ಲಿ ಇಂದಿಗೂ ಮೋದಿಯವರ ಈ ಕಾಲದಲ್ಲೂ ಆಗಿಲ್ಲ. ಆದರೆ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಯದೇ ಹೋದರೆ ಹಾಗೂ ಅದರಿಂದಾಗಿ ಬಿಜೆಪಿಯವರ 'ಚಾರಸೋ ಪಾರ್' (ಈ ಬಾರಿ 400ಕ್ಕೂ ಹೆಚ್ಚು ಸೀಟುಗಳನ್ನು ಗೆಲ್ಲುವೆವು) ಎಂಬ ದರ್ಪೋಕ್ತಿಯು ಚುನಾವಣಾ ಫಲಿತಾಂಶದಲ್ಲಿ ಪ್ರತಿಫಲಿಸಿದರೆ, ಭಾರತದಲ್ಲಿ ಏಕಾಧಿಕಾರಶಾಹಿ ಇನ್ನೂ ಹೆಚ್ಚು ಪ್ರಬಲಗೊಳ್ಳಲಿದೆ ಎಂಬುದನ್ನು ನಾವು ಮರೆಯಬಾರದು.

ಮೋದಿಯವರು ಮೂರನೇ ಬಾರಿ ದೇಶದ ನಾಯಕತ್ವ ವಹಿಸಿಕೊಳ್ಳುವರೋ ಇಲ್ಲವೋ ಎಂಬುದನ್ನು ನಿರ್ಣಯಿಸುವವರು ಪ್ರಜೆಗಳು. ಆದರೆ ಪ್ರಜಾಪ್ರಭುತ್ವ ಆರೋಗ್ಯಕರವಾಗಿ ಉಳಿಯಬೇಕಾದರೆ, ಬೆಳೆಯಬೇಕಾದರೆ ಪ್ರಧಾನಮಂತ್ರಿ ನಿರಂಕುಶನಾಗಿ ಇರಬಾರದು. ಇದನ್ನು ಖಾತರಿಪಡಿಸುವ ಶಕ್ತಿಯೂ ಪ್ರಜೆಗಳಿಗಿದೆ. ಈ ಶಕ್ತಿಯನ್ನು ಅವರು 2024ರ ಚುನಾವಣೆಯಲ್ಲಿ ಸಾಬೀತು ಮಾಡಲಿ.

ಚುರುಮುರಿ

ಬೆಂಬಲ ಬೆಲೆ

• ಲಿಂಗರಾಜು ಡಿ.ಎಸ್.

'ನೋಡ್ರಿ ಸಾ, ನಮ್ಮ ರೈತರ ಕತೆಯಾ. ಮೈಮುರಿಯ ದುಡಿದ್ರೂ ಸರಿಯಾಗಿ ಪ್ರತಿಫಲ ಬತ್ತಿಲ್ಲ' ಅಂತಂದೆ ಪೇಪರಿನಲ್ಲಿ ರೈತರ ಕಷ್ಟಗಳನ್ನು ಓದಿ.

'ರೈತರಿಗೆ ಅನುಕೂಲ ಆಗ್ಲಿ ಅಂತಲೇ ಅವರ ಬೆಳೆಗೆ ಕನಿಷ್ಠ ಬೆಂಬಲ ಬೆಲೆ ಕೊಡ್ತಿರದು ಕಲಾ. ಅವರ ಬೆನ್ನಿಗೆ ಬಲ ಬರಲಿ ಅಂತ ಸರ್ಕಾರ ಕೊಡೋ ಗೌರವ ಬೆಲೆ ಇದು!' ವಿವರಿಸಿದರು.

'ಸಾ, ಬೆಂಬಲ ಬೆಲೆ ಅನ್ನೋದು ಇನ್ನೆಲ್ಲೆಲ್ಲಿ ಹ್ಯಂಗೆಂಗೆ ಅದೆ?' ವಿವರ ಕೇಳಿದೆ.

'ನೋಡ್ಲಾ, ಸಾಹಿತಿ ಒಬ್ಬ ಬರೆದಿರೋ ಪುಸ್ತಕವ ಪ್ರಕಾಶಕ ಪ್ರಿಂಟು ಮಾಡಿದ್ಕೆ ರಾಯಧನ ಅಂತ ಕೊಡ್ತರಲ್ಲಾ ಅದು ಪುಸ್ತಕದ ಬೆಲೆ ಅಲ್ಲ. ಸಾಹಿತಿ ಸೊಂಟ ಬಗ್ಗಿಸಿ ಬರೆಯಕ್ಕೆ ಗೌರವದ ಬೆಂಬಲ ಬೆಲೆ ಕಯ್ಯಾ' ತುರೇಮಣೆ ವಿಶ್ಲೇಷಣೆ ಮಾಡಿದರು.

'ನೀವೇಳ್ತಿರದು ಯಂಗೆ ಅಂದ್ರೆ, ಕಾಲೇಜು ಮೇಷ್ಟ್ರು ಅತಿಥಿ ಉಪನ್ಯಾಸಕ ಅಂತ ಅಪಾಯಿಂಟಾಗಿ ಮೈಮುರಿಯ ದುಡೀಲಿ ಅಂತ ಕೊಡೋ ಜುಜುಬಿ ಕಾಸು ಮೇಷ್ಟ್ರಿಗೆ ಸಿಕ್ಕೋ ಬೆಂಬಲ ಬೆಲೆ ಅನ್ರಿ!' ಅಂತ ತಿವಿದೆ.

'ಬುದುವಂತಾಯ್ತಿದೀಯ ಕಲಾ!' ಅಂತ ತುರೇಮಣೆ ಹೊಗಳಿದರು.

'ಹಂಗಾದ್ರೆ ಸಾ, ಒಂದು ಪಕ್ಷ ಬುಟ್ಟು ಇನ್ನೊಂದಕ್ಕೆ ಸೇರುವಾಗ ರಾಜಕಾರಣಿಗಳಿಗೆ ಏನಾದ್ರೂ ಬೆಂಬಲ ಬೆಲೆ ಸಂದಾಯವಾಗಿರ ತದಾ?' ಅಂತ ಕೇಳಿದೆ.

'ಪಾರ್ಟಿಯ ಒಳಗೆ ಇದ್ದುಕ್ಯಂದು, ಅಧಿಕಾರ ಸಿಕ್ಕಲಿಲ್ಲ ಅಂತ ಸಿಟುಗಂದು ಬೋದಾಡಿದ್ರೆ ಅದು ಭಿನ್ನಮತ, ಬಂಡಾಯ. ಅವರ ಯೇಗ್ತೇಗೆ ತಕ್ಕಂಗೆ ಕಾಸು-ಕರೇಮಣಿ ಇಸುಗಂದು 'ವರಿಷ್ಠರ ಮಾತಿಗೆ ತಲೆಬಾಗಿದ್ದೇನೆ' ಅಂತ ಸಬೂಬು ಹೇಳಕ್ಕುಲ್ವಾ! ಇದೇ ರಾಜಕೀಯದ ಬೆಂಬಲ ಬೆಲೆ. ಮತದಾರರ ಹೆಸರೇಳಿಕ್ಯಂದು ಪಕ್ಷ ಬುಟ್ಟು ಹೋಗುವಾಗ, ಪಕ್ಷಕ್ಕೆ ಬಂದಾಗ ಈಥರ ಒಳ್ಳೆ ಬೆಂಬಲ ಬೆಲೆ ಸಿಕ್ಕಿರತದೆ' ತುರೇಮಣೆ ವಿವರ ಕೊಟ್ರು.

'ಹಂಗಾರೆ ಜನಕ್ಕೆ ಸಿಕ್ಕದು ತೆಂಗಿನಕಾಯಿ ಚಿಪ್ಪು ಅನ್ನಿ!' ಅಂತ ನನ್ನ ಟೀಕೆ ಸೇರಿಸಿದೆ.

ಸಂಗತ

ಸದ್ದನ್ನೇ ನೆಚ್ಚಿದವರಿಗೆ ಮೌನದ ಹಂಗಿಲ್ಲ

ರಾಜಕಾರಣದಲ್ಲಿ ಭಾಷೆಯು ಇನ್ನಿಲ್ಲದಂತೆ ದುರ್ಬಳಕೆ ಆಗುತ್ತಿದೆ

• ರಾಜಕುಮಾರ ಕುಲಕರ್ಣಿ

ರಾಜ್ಯದಲ್ಲಿ ಲೋಕಸಭೆ ಚುನಾವಣೆಯ ಪ್ರಚಾರದ ಭರಾಟೆ ತಾರಕಕ್ಕೇರಿದೆ. ವಿವಿಧ ಪಕ್ಷಗಳ ಅಭ್ಯರ್ಥಿಗಳಿಂದ ಆರೋಪ, ಪ್ರತ್ಯಾರೋಪ, ವೈಯಕ್ತಿಕ ನಿಂದನೆ ಅವ್ಯಾಹತವಾಗಿ ಮುಂದುವರಿದಿವೆ. ರಾಜಕಾರಣದಲ್ಲಿ ಭಾಷೆ ಹೇಗೆ ದುರ್ಬಳಕೆಯಾಗುತ್ತದೆ ಎನ್ನುವುದಕ್ಕೆ ನಿದರ್ಶನವಾಗಿ ನಿಲ್ಲುತ್ತದೆ ಚುನಾವಣೆಯ ಸಂದರ್ಭ. ಬದುಕಿನ ಅಸ್ತಿತ್ವದ ಅರ್ಥವನ್ನು ಗ್ರಹಿಸುವ ಸಮರ್ಥ ಮಾಧ್ಯಮವಾಗಿರುವ ಭಾಷೆಯನ್ನು ವ್ಯತಿರಿಕ್ತ ಉದ್ದೇಶಗಳಿಗಾಗಿ ಬಳಸುತ್ತಿರುವ ಶಕ್ತಿಯಾಗಿ ರಾಜಕಾರಣವು ವಿಜೃಂಭಿಸುತ್ತಿದೆ.

ಸದ್ದನ್ನೇ ತುಂಬ ನೆಚ್ಚಿಕೊಂಡ ರಾಜಕಾರಣಕ್ಕೆ ಮೌನದ ಪರಿಚಯವಿಲ್ಲ ಎನ್ನುವ ಮಾತು ಸತ್ಯಕ್ಕೆ ಹತ್ತಿರವಾಗಿದೆ. ಚುನಾವಣಾ ಪ್ರಚಾರದ ಸಂದರ್ಭದಲ್ಲಿ ರಾಜಕಾರಣಿಗಳಿಂದ ಮಾತಿನ ವಾಗ್ಝರಿ ಹರಿಯುತ್ತದೆ. ತಮ್ಮ ಮಾತಿನ ವಾಗ್ಬಾಣಗಳಿಂದ ಎದುರಾಳಿಗಳ ಚಾರಿತ್ರ್ಯ ಹರಣಗೊಳಿಸುತ್ತಾರೆ. ಪ್ರತಿಸ್ಪರ್ಧಿಗಳ ತೇಜೋವಧೆಗಾಗಿ ಸಾರ್ವಜನಿಕ ವೇದಿಕೆಗಳಲ್ಲಿ ಮಾತ್ರವಲ್ಲದೆ ಫೇಸ್‌ಬುಕ್ ಮತ್ತು ವಾಟ್ಸ್‌ಆ್ಯಪ್‌ನಂತಹ ಸಾಮಾಜಿಕ ಜಾಲತಾಣಗಳಲ್ಲಿಯೂ ರಾಜಕಾರಣಿಗಳಿಂದ ಭಾಷೆಯ ದುರ್ಬಳಕೆಯಾಗುತ್ತಿದೆ. ಜೊತೆಗೆ ಕೊಟ್ಟ ಮಾತಿನಂತೆ ನಡೆದುಕೊಳ್ಳದ ರಾಜಕಾರಣಿಗಳು ಭಾಷೆಯನ್ನು ಭ್ರಷ್ಟವಾಗಿಸುತ್ತಿದ್ದಾರೆ.

ಯಾವ ಮಾರಕಾಸ್ತ್ರಗಳಿಲ್ಲದೆ ರಾಜಕಾರಣವು ಹಿಂಸೆಯನ್ನು ಭಾಷೆಯ ಮೂಲಕ ಹರಡುತ್ತಿದೆ. ಹಿಂಸೆಗೆ ಕುಮ್ಮಕ್ಕು ನೀಡುವಂತಹ ಪದಗಳು ಪುಂಖಾನುಪುಂಖವಾಗಿ ಬಳಕೆಯಾಗುತ್ತಿವೆ. ಹೊಡಿ, ಬಡಿ, ಕಡಿ, ಕತ್ತರಿಸು, ತುಂಡರಿಸು ಎಂಬಂತಹ ಪದಗಳನ್ನು ರಾಜಕಾರಣಿಗಳು ಎಗ್ಗಿಲ್ಲದೆ ಬಳಸುತ್ತಾರೆ. ಭಾಷೆಯನ್ನು ದ್ವೇಷ ಸಾಧನೆಯ ವಾಹಕವಾಗಿ ಬಳಸುತ್ತಿರುವವರಲ್ಲಿ ರಾಜಕಾರಣಿಗಳ ಸಂಖ್ಯೆ ಅಧಿಕವಾಗಿದೆ. ಹಿಂಸೆಗೆ ಪ್ರಚೋದನೆ ನೀಡುವಂತಹ ಪದಗಳನ್ನು ಸಾರ್ವಜನಿಕ ವೇದಿಕೆಗಳಲ್ಲಿ ನೇತಾರರು ಬಳಸುತ್ತಿರುವುದರಿಂದ ನವಪೀಳಿಗೆಯಲ್ಲಿ ಭಾಷೆ ಎನ್ನುವುದು ದ್ವೇಷ ಬಿತ್ತುವ ಸಾಧನ ಎನ್ನುವ ಮನೋಭಾವ ಬಲವಾಗುತ್ತಿದೆ.

ರಾಜಕಾರಣವು ಭಾಷೆ ದುರ್ಬಳಕೆಯ ವಿಷಯದಲ್ಲಿ ಸುತ್ತಲಿನ ಪರಿಸರವನ್ನೂ ಪ್ರಭಾವಿಸುತ್ತಿದೆ. ವಿಶ್ವವಿದ್ಯಾಲಯಗಳ ಸೆನೆಟ್, ಸಿಂಡಿಕೇಟ್‌ನಂತಹ ಅಕಡೆಮಿಕ್ ವಲಯಗಳಿಗೂ ಅದು ವ್ಯಾಪಿಸಿದೆ. ಸಾಹಿತ್ಯ ಪರಿಷತ್ತಿನಂತಹ ಪ್ರಾತಿನಿಧಿಕ ಸಂಸ್ಥೆಯ ಚುನಾವಣೆಗೂ ರಾಜಕಾರಣದ ಕಳೆ ಆವರಿಸಿದೆ. ಲೇಖಕರು, ಕಲಾವಿದರು, ಸಾಹಿತಿಗಳು ಸಹ ರಾಜಕಾರಣಿಗಳಂತೆ ಅನ್ಯರ ಅಪಮಾನ, ತೇಜೋವಧೆಗೆ ಕಾರಣವಾಗುವ ಸನ್ನಿವೇಶಗಳು ಮೇಲಿಂದ ಮೇಲೆ ಘಟಿಸುತ್ತಿವೆ. ಇವರು ರಾಜಕಾರಣದ ಭಾಷೆಯನ್ನೇ ಬಳಸುತ್ತ ಭಾಷೆಯನ್ನು ಕ್ರೂರ ಬೈಗುಳವನ್ನಾಗಿಸುತ್ತಿರುವುದು ಭಾಷೆಯೊಂದರ ಬಹುದೊಡ್ಡ ದುರಂತವಾಗಿದೆ.

ಉತ್ತರರಾಮ ಚರಿತದಲ್ಲಿ ಭವಭೂತಿ 'ಮಾತು' ಕುರಿತು ಹೇಳಿದ್ದು ಹೀಗಿದೆ- 'ನಿತ್ಯದ ಬಳಕೆಯ ಸಜ್ಜನರ ನುಡಿಗಳಲ್ಲಿ ಅರ್ಥವನ್ನು ಅನುಸರಿಸಿ ಪದಗಳು ಹೊರಬರುತ್ತವೆ. ಆದರೆ ಹಿರಿಯರಾದ ಮಹಾಮಹಿಮರ ಮಾತುಗಳಲ್ಲಿ ಮಾತನ್ನೇ ಅರ್ಥವು ಹಿಂಬಾಲಿಸುತ್ತದೆ'. ಬಸವಣ್ಣನವರು 'ನುಡಿದರೆ ಮುತ್ತಿನ ಹಾರದಂತಿರಬೇಕು, ಮಾಣಿಕ್ಯದ ದೀಪ್ತಿಯಂತಿರಬೇಕು' ಎಂದು ಮಾತನ್ನು ಮುತ್ತು ಮತ್ತು ಮಾಣಿಕ್ಯಕ್ಕೆ ಹೋಲಿಸಿದ್ದಾರೆ. ಅನುಭಾವಿಗಳು ಹೇಳಿದಂತೆ ಮಾತಿಗೆ ಅಥವಾ ಭಾಷೆಗೆ ಒಂದು ಘನತೆ ತಂದುಕೊಡುವ ಬದಲು ರಾಜಕಾರಣಿಗಳು ಭಾಷೆಯ ಘನತೆಯನ್ನೇ ಹಾಳುಗೆಡವುತ್ತಿದ್ದಾರೆ.

ರಾಜಕಾರಣಿಗಳು ಭಾಷೆಯನ್ನು ಮಾತಿನಲ್ಲಿ ಮಾತ್ರ ಅಲ್ಲದೆ ಬರವಣಿಗೆಯಲ್ಲೂ ದುರ್ಬಳಕೆ ಮಾಡುತ್ತಿದ್ದಾರೆ. ರಾಜಕೀಯ ಬದುಕಿನ ಸಂಧ್ಯಾಕಾಲದಲ್ಲಿ ಆತ್ಮಚರಿತ್ರೆಯ ಬರವಣಿಗೆಗೆ ಕೈಹಾಕುವ ರಾಜಕಾರಣಿಗಳ ಸಂಖ್ಯೆ ಬಹಳಷ್ಟಿದೆ. ಪುಸ್ತಕಗಳ ಓದಿನಿಂದ ದೂರವೇ ಇರುವವರು ಅದುಹೇಗೆ ಭಾಷೆಯನ್ನು ಬರವಣಿಗೆಗೆ ಒಗ್ಗಿಸಿಕೊಳ್ಳುವರು ಎನ್ನುವ ಪ್ರಶ್ನೆ ಎದುರಾಗುತ್ತದೆ. ಇಂಥ ಕೆಲಸಕ್ಕೆಂದೇ ಬಾಡಿಗೆ ಬರಹಗಾರರು ಅಧಿಕ ಸಂಖ್ಯೆಯಲ್ಲಿರುವಾಗ ರಾಜಕಾರಣಿಗಳಿಗೆ ಬರವಣಿಗೆಯ ಕೆಲಸ ಸಲೀಸಾಗುತ್ತಿದೆ. ರಾಜಕಾರಣಿಯೊಬ್ಬರ ಆತ್ಮಕಥೆ ಪ್ರಕಟವಾದರೆ ವಿರೋಧಿಗಳ ತೇಜೋವಧೆಗೆ ವೇದಿಕೆ ನಿರ್ಮಾಣ ಆದಂತೆ. ಹಿಂದೆಲ್ಲ ರಾಜಕೀಯ ನಾಯಕರ ಆತ್ಮಚರಿತ್ರೆಯಲ್ಲಿ ಒಂದು ಕಾಲದ ಸಾಮಾಜಿಕ ಬದುಕು, ಸ್ವಾತಂತ್ರ್ಯ ಹೋರಾಟ, ಭಾಷಾ ಚಳವಳಿಗಳು ಅನಾವರಣಗೊಳ್ಳುತ್ತಿದ್ದವು. ಆತ್ಮಚರಿತ್ರೆ ಎನ್ನುವುದು ನಾಡಿನ ಮತ್ತು ಭಾಷೆಯ ಚರಿತ್ರೆಯಾಗಿರುತ್ತಿತ್ತು. ಇಂದು ವೈಯಕ್ತಿಕ ಹಿತಾಸಕ್ತಿ ಮುನ್ನೆಲೆಗೆ ಬಂದು ನಾಡಿನ ಹಿರಿಮೆ ಹಿನ್ನೆಲೆಗೆ ಸರಿದಿರುತ್ತದೆ.



ಭಾಷೆಯನ್ನು ದ್ವೇಷದ ಮಾಧ್ಯಮವಾಗಿ ಪರಿವರ್ತಿಸಿರುವ ರಾಜಕಾರಣಿಗಳಿಗೆ ಸಾಹಿತ್ಯದ ಸಾಂಗತ್ಯ ಪ್ರಾಪ್ತ ಆಗಬೇಕಿದೆ. ಸಾಹಿತ್ಯದ ಓದಿನ ಮೂಲಕವೇ ನಮ್ಮ ರಾಜಕೀಯ ನಾಯಕರು ಪ್ರೀತಿ ಮತ್ತು ಅಂತಃಕರಣ ತುಂಬಿರುವ ಭಾಷೆಯನ್ನು ಕಲಿಯಬೇಕಿದೆ. ನೊಬೆಲ್ ಪ್ರಶಸ್ತಿ ಪುರಸ್ಕೃತ ಕವಿ ಜೋಸೆಫ್ ಬ್ರಾಡ್‌ಸ್ಕಿ, ಸಾಹಿತ್ಯದಲ್ಲಿ ಭಾಷೆ ಬಳಕೆಯಾಗುವುದಿಲ್ಲ, ಸೃಷ್ಟಿ ಆಗುತ್ತದೆ ಎಂದಿದ್ದಾರೆ. ಭಾಷೆಯನ್ನು ಸದಾಕಾಲ ಆರೋಪ, ಪ್ರತ್ಯಾರೋಪಕ್ಕಾಗಿ ಬಳಸುತ್ತಿರುವ ರಾಜಕಾರಣಿಗಳಿಗೆ ಸಾಹಿತ್ಯದಲ್ಲಿ ಸೃಷ್ಟಿಯಾಗುವ ಭಾಷೆಯ ಪರಿಚಯವಾಗಬೇಕು. 'ಜೀವನಕ್ಕೆ ಧನ್ಯತೆಯನ್ನು ತಂದು ಕೊಡಬಹುದಾದಂಥ ಮೌಲ್ಯಗಳನ್ನೇ ಕಳೆದುಕೊಂಡು ಅಮಾನವೀಯವಾಗುತ್ತ ನಡೆದ ನಮ್ಮ ಜಗತ್ತಿನಲ್ಲಿ ಹಣಕ್ಕಾಗಿ ಅಧಿಕಾರವನ್ನು, ಅಧಿಕಾರಕ್ಕಾಗಿ ಹಣವನ್ನು ಹೀಗೆ ಒಂದು ಇನ್ನೊಂದನ್ನು ಬೆನ್ನಟ್ಟುವಂಥ ಆತ್ಮಹೀನವೂ ಅರ್ಥಶೂನ್ಯವೂ ಆದ ಕ್ರಿಯೆಯಲ್ಲಿ ತೊಡಗಿಕೊಂಡಿರುವ ನಮ್ಮನ್ನು ಆಗೀಗಲಾದರೂ ಮನುಷ್ಯರನ್ನಾಗಿ ಚೇತರಿಸುವ ಬಲ ಬಹುಶಃ ನಮ್ಮ ಸಾಹಿತ್ಯ ಮತ್ತು ಕಲೆಗಳಿಗಷ್ಟೇ ಇದೆಯೇನೋ' ಎಂದಿರುವ ಯಶವಂತ ಚಿತ್ತಾಲರ ಮಾತು ಇಂದಿನ ರಾಜಕಾರಣಕ್ಕೆ ಹೆಚ್ಚು ಅನ್ವಯಿಸುತ್ತದೆ.

ವಾಚಕರ ವಾಣಿ

ಮತದಾನ: ಪರ್ಯಾಯ ಮಾರ್ಗ ಕಲ್ಪಿಸುವುದಿಲ್ಲವೇಕೆ?

ನಗರ ಪ್ರದೇಶಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಮತದಾನದ ಪ್ರಮಾಣ ಕಡಿಮೆಯಾಗಿರುವುದು ನಾವೆಲ್ಲಾ ಗಮನಿಸುತ್ತಿರುವ ಸಂಗತಿ. ವಿದ್ಯಾವಂತ ಮತದಾರರು ವೋಟು ಹಾಕಲು ಬರುವುದಿಲ್ಲ ಎಂಬುದನ್ನು ಅಸ್ತ್ರವಾಗಿಸಿಕೊಳ್ಳುವ ಅನೇಕರು, ಅಂತಹವರನ್ನು ಮಾಧ್ಯಮಗಳು, ಸಾಮಾಜಿಕ ಜಾಲತಾಣಗಳ ಮೂಲಕ ಟೀಕಿಸುವುದು, ಗೇಲಿ ಮಾಡುವುದನ್ನು ನೋಡುತ್ತಿರುತ್ತೇವೆ. ಸಾಮಾನ್ಯವಾಗಿ ಹೆಚ್ಚಿನವರಿಗೆ ವೋಟು ಹಾಕಬೇಕೆನ್ನುವ ಜವಾಬ್ದಾರಿ ಇದ್ದೇ ಇರುತ್ತದೆ. ಆದರೆ ಮತದಾನದ ನಿಖರ ದಿನ ಗೊತ್ತಾಗುವುದು ವೇಳಾಪಟ್ಟಿ ಪ್ರಕಟವಾದ ಮೇಲೆಯೇ. ಪ್ರವಾಸಕ್ಕೆ ಅಥವಾ ತಮ್ಮೂರಿಗೆ ಹೋಗಲು ಕೆಲ ತಿಂಗಳ ಹಿಂದೆಯೇ ಅವರು ಟಿಕೆಟ್ ಮುಂಗಡ ಬುಕಿಂಗ್ ಮಾಡಿದ್ದರೆ ಅದನ್ನು ರದ್ದುಪಡಿಸಿ ನಷ್ಟ ಮಾಡಿಕೊಳ್ಳಲು ಸಾಧ್ಯವೇ? ಕೆಲವರ ವೋಟು ಬೇರೆ ಊರಲ್ಲಿ ಇದ್ದರೆ ಅದಕ್ಕಾಗಿ ಪ್ರಯಾಣದ ಖರ್ಚು ಭರಿಸುವಷ್ಟು ಶಕ್ತಿ ಎಲ್ಲರಿಗೂ ಇರುತ್ತದೆಯೇ? ಮನೆಗಳಲ್ಲಿ ಯಾವುದೋ ಸಮಾರಂಭ ಅದೇ ದಿನದಂದು ಬೇರೆ ಊರಲ್ಲಿ ಮುಂಚಿತವಾಗಿಯೇ ನಿರ್ಧಾರವಾಗಿದ್ದರೆ ಸಂಬಂಧಿಕರಲ್ಲಿ ಅನೇಕರ ವೋಟು ತಪ್ಪುತ್ತದೆ. ಇವಲ್ಲದೆ ವೈಯಕ್ತಿಕವಾಗಿ ಸಾವಿರಾರು ಕಾರಣಗಳು ಇದ್ದೇ ಇರುತ್ತವೆ.

ಮತದಾನದ ಒಂದು ದಿನ ರಜೆ ಕೊಟ್ಟಾಕ್ಷಣ ಇಂತಹ ಎಲ್ಲ ಸಮಸ್ಯೆಗಳಿಗೂ ಪರಿಹಾರ ಸಿಗುತ್ತದೆ, ಜನರೆಲ್ಲಾ ಓಡೋಡಿ ಮತಗಟ್ಟೆಗೆ ಬರುತ್ತಾರೆ ಎಂದು ಸರ್ಕಾರ ಭಾವಿಸುವುದು ಹಾಸ್ಯಾಸ್ಪದವೇ ಸರಿ. ಇದನ್ನು ತಪ್ಪಿಸಲು ಸರ್ಕಾರವು ಪರ್ಯಾಯ ಕ್ರಮಗಳನ್ನು ಕೈಗೊಳ್ಳಲು ಮನಸ್ಸು ಮಾಡುವುದಿಲ್ಲವೇಕೆ? ಈಗಿರುವ ಅಂಚೆ ಮತದಾನವು ಚುನಾವಣಾ ಕರ್ತವ್ಯದಲ್ಲಿ ತೊಡಗಿರುವವರಿಗೆ ಮಾತ್ರ. ಮನೆಗೆ ಬರುವ ಮತಯಂತ್ರ ವ್ಯವಸ್ಥೆ 85 ವರ್ಷ ಮೀರಿದವರು, ಅಂಗವಿಕಲರಿಗೆ ಅಷ್ಟೇ. ಇತರ ಮತದಾರರಿಗೂ ಆನ್‌ಲೈನ್ ಅಥವಾ ಅಂಚೆಯ ಮೂಲಕ ಮತದಾನ ಮಾಡಲು ಅವಕಾಶ ಕಲ್ಪಿಸುವುದು ಒಳಿತಲ್ಲವೇ? ಇದರಲ್ಲಿ ಮೋಸ ನಡೆಯಬಹುದು ಎಂದು ಕೊಂಕು ತೆಗೆಯುವ ಬದಲು, ಮೋಸ ತಪ್ಪಿಸಲು ಏನು ಮಾಡಬಹುದು ಎಂದು ಯೋಚಿಸಬೇಕು. ಆನ್‌ಲೈನ್‌ನಲ್ಲಿ ಏನೆಲ್ಲಾ ಮಾಡಲು ಸಾಧ್ಯವಾಗಿರುವ ಈ ಯುಗದಲ್ಲಿ ಮತದಾನಕ್ಕೆ ವ್ಯವಸ್ಥೆ ಮಾಡುವುದು ಅಷ್ಟೊಂದು ಕಷ್ಟವೇ?

ವೇದಾ ಆಠವಳೆ, ಬೆಂಗಳೂರು

ರೈಲು ಪ್ರಯಾಣ, ಶ್ರೀಸಾಮಾನ್ಯ ಹೈರಾಣ

ಅನಿವಾರ್ಯ ಕೆಲಸದ ನಿಮಿತ್ತ ಇತ್ತೀಚೆಗೆ ತಡರಾತ್ರಿಯಲ್ಲಿ ನಮ್ಮೂರು ಮುರ್ಡೇಶ್ವರದಿಂದ ಉಡುಪಿಗೆ ಪ್ರಯಾಣ ಬೆಳೆಸಬೇಕಾಯಿತು. ನೇತ್ರಾವತಿ ಎಕ್ಸ್‌ಪ್ರೆಸ್‌ಗೆ ಸಾಮಾನ್ಯ ಬೋಗಿಯ ಟಿಕೆಟ್ ಪಡೆದು ರೈಲನ್ನು ಹತ್ತಿದಾಗ, ಅಲ್ಲಿನ ಪರಿಸ್ಥಿತಿ ನೋಡಿ ಒಂದು ಕ್ಷಣ ಗಾಬರಿಯಾಯಿತು. ಅಲ್ಲಿದ್ದ ಎಲ್ಲ ಆಸನಗಳೂ ಸಂಪೂರ್ಣ ಭರ್ತಿಯಾಗಿದ್ದವಲ್ಲದೆ ಓಡಾಡುವ ಜಾಗದಲ್ಲಿಯೇ ಹಲವರು ಮಲಗಿದ್ದರು. ಇನ್ನು ಕೆಲವರು ಕುಳಿತಿದ್ದರು. ಉಸಿರುಗಟ್ಟಿಸುವ ಪರಿಸ್ಥಿತಿ ಇದ್ದರೂ ಅನ್ಯ ದಾರಿ ಇಲ್ಲದೆ ನಿಂತುಕೊಂಡೇ ಪ್ರಯಾಣಿಸಬೇಕಾಯಿತು.

ಅಂದೇ ವಾಪಸ್ ಬರಬೇಕಾಗಿದ್ದರಿಂದ ಮಧ್ಯಾಹ್ನ ಉಡುಪಿಯಿಂದ 3.50ರ ಮತ್ಸ್ಯಗಂಧ ಎಕ್ಸ್‌ಪ್ರೆಸ್ ರೈಲು ಹತ್ತಿದೆ. ನನ್ನ ದುರದೃಷ್ಟಕ್ಕೆ ಮತ್ತದೇ ಪರಿಸ್ಥಿತಿ ಎದುರಾಯಿತು. ನಿಂತುಕೊಳ್ಳಲೂ ಸರಿಯಾದ ಜಾಗವಿರದೆ ಪರದಾಡಿಕೊಂಡು ಪ್ರಯಾಣ ಮುಗಿಸಬೇಕಾಯಿತು. ನಾವು ಯುವಕರು ಹೇಗೋ ಪ್ರಯಾಣಿಸಿದೆವು. ಆದರೆ, ನಮ್ಮ ಪಕ್ಕದಲ್ಲಿಯೇ ಕೆಲವು ಹಿರಿಯ ನಾಗರಿಕರು ಕೈಯಲ್ಲಿ ಭಾರದ ಬ್ಯಾಗ್‌ಗಳನ್ನು ಹಿಡಿದುಕೊಂಡು ಗಂಟೆಗಟ್ಟಲೆ ನಿಂತುಕೊಂಡೇ ಇದ್ದದ್ದು, ಅದನ್ನು ನಾವು ಅಸಹಾಯಕರಾಗಿ ನೋಡಬೇಕಾಗಿ ಬಂದದ್ದು ವಿಪರ್ಯಾಸವೇ ಸರಿ. ರೈಲ್ವೆ ಅಧಿಕಾರಿಗಳು ಇನ್ನಾದರೂ ಇದನ್ನು ಬರೀ ಸಮಸ್ಯೆಯಾಗಿ ನೋಡದೆ ಸವಾಲಾಗಿ ಸ್ವೀಕರಿಸಿ ಪರಿಹಾರ ಕಂಡುಹಿಡಿಯಲಿ.

ಯೋಗೇಶ್ ಆನಂದ ಹರಿಕಂತ್ರ, ಮುರ್ಡೇಶ್ವರ

ಅವರು ಮಹಿಳೆಯರನ್ನು ಅವಮಾನಿಸುವವರಲ್ಲ..!

ಗ್ಯಾರಂಟಿ ಯೋಜನೆಗಳಿಂದ ಹಳ್ಳಿಗಳ ಹೆಣ್ಣುಮಕ್ಕಳು ದಾರಿ ತಪ್ಪಿದ್ದಾರೆ ಎಂದು ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಹೇಳಿರುವುದಾಗಿ ವರದಿಯಾಗಿದೆ. ಆದರೆ ಕುಮಾರಸ್ವಾಮಿ ಎಂದಿಗೂ ಮಹಿಳೆಯರನ್ನು ಅವಮಾನಿಸುವವರಲ್ಲ. ತೆನೆ ಹೊತ್ತ ಮಹಿಳೆಯನ್ನೇ ತಮ್ಮ ಪಕ್ಷದ ಗುರುತಾಗಿ ಹೊಂದಿದ್ದಾರೆ. ತೆನೆಯು ಆಕೆಗೆ ಭಾರವಾಗುತ್ತದೆ ಎಂದು ಮನಗಂಡು ಈಚೆಗಷ್ಟೇ ಆಕೆಯ ತಲೆಯ ಮೇಲಿನಿಂದ ತೆನೆಯನ್ನು ಇಳಿಸಿ, ಕೈಗೆ ಹಗುರವಾದ ಕಮಲದ ಹೂವನ್ನು ಕೊಟ್ಟಿದ್ದಾರೆ.

ಗ್ಯಾರಂಟಿ ಯೋಜನೆಗಳಿಂದ ಹಳ್ಳಿಗಳ ಹೆಣ್ಣುಮಕ್ಕಳು ದಾರಿ ತಪ್ಪಿದ್ದಾರೆ ಎಂದು ಅವರು ಹೇಳಿದ್ದರ ಅರ್ಥ, ಆ ಯೋಜನೆಗಳ ಫಲಾನುಭವಿಗಳಾಗುವ ಸಲುವಾಗಿ ಹೆಣ್ಣುಮಕ್ಕಳು ತಮ್ಮ ಆಧಾರ್ ಕಾರ್ಡುಗಳನ್ನು ಬ್ಯಾಂಕ್ ಖಾತೆಗಳಿಗೆ ಲಿಂಕ್ ಮಾಡಿಸಲು ಪಟ್ಟಣದ ಬ್ಯಾಂಕುಗಳಿಗೆ ತೆರಳುವಾಗ, ಬ್ಯಾಂಕಿನ ದಾರಿ ಗೊತ್ತಾಗದೆ ಬೇರೆ ದಾರಿಗೆ ಹೋಗಿ ಪರದಾಡುತ್ತಿದ್ದಾರೆ ಎಂದು ಇರಬೇಕು, ಅಷ್ಟೆ!

ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

ಮಳೆನೀರು ಸಂಗ್ರಹಕ್ಕೆ ಇರಲಿ ಆದ್ಯತೆ

ಉತ್ತಮವಾಗಿ ಮಳೆ ಬಿದ್ದ ವರ್ಷ ರಾಜ್ಯದ ಕೆರೆಗಳಲ್ಲಿ ನೀರನ್ನು ಸಂಗ್ರಹಿಸದಿರುವುದು, ಬಿದ್ದಲ್ಲೇ ಹಿಂಗಿಸದಿರುವುದು ಇಂದಿನ ಜಲಕ್ಷಾಮಕ್ಕೆ ಪ್ರಮುಖ ಕಾರಣ. ಹೊಲ ಮತ್ತು ಕಾಡುಗಳಲ್ಲಿ ನೀರು ಸಂಗ್ರಹಿಸಲು ಬದುಗಳನ್ನು ನಿರ್ಮಿಸದಿರುವುದು, ನಗರ ಪ್ರದೇಶಗಳ ನೆಲವನ್ನು ಕಾಂಕ್ರೀಟ್ ಮತ್ತು ಡಾಂಬರ್‌ನಿಂದ ಪೂರ್ಣವಾಗಿ ಮುಚ್ಚುವುದು ಕೂಡ ಅಂತರ್ಜಲ ಪಾತಾಳ ಸೇರಲು ಕಾರಣವಾಗಿವೆ. ಹಾಗಾಗಿ, ಬಿದ್ದ ಮಳೆನೀರು ರಭಸವಾಗಿ ಹಳ್ಳ ಕೊಳ್ಳಗಳ ಮೂಲಕ ಹರಿದು ಸಾಗರ ಸೇರುತ್ತಿದೆ.

ರಾಜ್ಯದಲ್ಲಿ ಯಾವುದೇ ಪಕ್ಷದ ನೇತೃತ್ವದ ಸರ್ಕಾರ ಇದ್ದರೂ ನೀರಾವರಿಗೆ ಆದ್ಯತೆ ನೀಡದೇಹೋದರೆ ಮುಂದಿನ ದಿನಗಳಲ್ಲಿ ಈ ಬಾರಿಯಂತೆ ಪದೇಪದೇ ಬರದ ದವಡೆಗೆ ಸಿಲುಕುವುದು ಸಾಮಾನ್ಯ ಸಂಗತಿಯಾಗುತ್ತದೆ. ನೀರು ಸಂಗ್ರಹ ಮತ್ತು ಕೆರೆಗೆ ನೀರು ತುಂಬಿಸುವ ಕೆಲಸವನ್ನು ನೆರೆಯ ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳು ಅತ್ಯಂತ ಯಶಸ್ವಿಯಾಗಿ ಅನುಷ್ಠಾನಗೊಳಿಸಿವೆ. ನಮ್ಮ ರಾಜ್ಯ ಸರ್ಕಾರ ಕೂಡ ಈ ದಿಸೆಯಲ್ಲಿ ಕಾರ್ಯಕ್ರಮ ರೂಪಿಸಬೇಕು. ಅತ್ಯಂತ ಶಿಸ್ತಿನಿಂದ ಆದ್ಯತೆಯ ಕೆಲಸವಾಗಿ ಪರಿಗಣಿಸಬೇಕು.

ಎಂ.ಜಿ.ರಂಗಸ್ವಾಮಿ, ಹಿರಿಯೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಣಾಳಿಕೆ: ಭರವಸೆ ಭರಪೂರ

ಈ ಲೋಕಸಭಾ ಚುನಾವಣೆಗೆ ದೇಶದ ಎರಡು ಪ್ರಮುಖ ರಾಷ್ಟ್ರೀಯ ಪಕ್ಷಗಳು ತಮ್ಮ ಪ್ರಣಾಳಿಕೆಗಳನ್ನು ಬಿಡುಗಡೆ ಮಾಡಿವೆ. ಆಡಳಿತಾರೂಢ ಬಿಜೆಪಿಯು ತನ್ನ ನೇತೃತ್ವದ ಸರ್ಕಾರದ ಕಾರ್ಯಕ್ರಮಗಳನ್ನು ಮುಂದುವರಿಸುವುದಾಗಿ ಹೇಳಿದೆ. ಇನ್ನೊಂದೆಡೆ ಪ್ರಮುಖ ವಿರೋಧ ಪಕ್ಷ ಕಾಂಗ್ರೆಸ್, ಸರ್ಕಾರದ ನೀತಿಗಳ ವಿರುದ್ಧ ತಾನು ಮಾಡಿದ್ದ ಆರೋಪಗಳಿಗೇ ಪ್ರಣಾಳಿಕೆಯ ರೂಪ ನೀಡಿದೆ. ಆ ನೀತಿಗಳಲ್ಲಿ ಏನೆಲ್ಲಾ ಬದಲಾವಣೆ ತರುತ್ತೇವೆ ಎಂಬುದನ್ನು ವಿವರಿಸಿದೆ

ಬಿಜೆಪಿಯದ್ದು ‘ಮೋದಿ ಗ್ಯಾರಂಟಿ’

ಬಿಜೆಪಿ ತನ್ನ ಪ್ರಣಾಳಿಕೆಗೆ ‘ಸಂಕಲ್ಪ ಪತ್ರ’ ಎಂದು ಹೆಸರಿಟ್ಟಿದೆ. ಈ ಸಂಕಲ್ಪ ಪತ್ರದಲ್ಲಿ ನೀಡಿರುವ ಭರವಸೆಗಳನ್ನು ‘ಮೋದಿಯವರ ಗ್ಯಾರಂಟಿಗಳು’ ಎಂದು ಕರೆಯಲಾಗಿದೆ. ಸಂಕಲ್ಪ ಪತ್ರದಲ್ಲಿ ಬಿಜೆಪಿ ಯಾವುದೇ ಹೊಸ ಘೋಷಣೆಗಳನ್ನು ಮಾಡಿಲ್ಲ. ಬದಲಿಗೆ ತನ್ನ ಆಡಳಿತಾವಧಿಯಲ್ಲಿ ಜಾರಿಗೆ ತಂದಿದ್ದ ಜನಪ್ರಿಯ ಯೋಜನೆಗಳನ್ನೇ ಮುಂದುವರಿಸುವುದಾಗಿ ಭರವಸೆ ನೀಡಿದೆ. ಜತೆಗೆ ಅಂತಹ ಯೋಜನೆಗಳ ವ್ಯಾಪ್ತಿಯನ್ನು ವಿಸ್ತರಿಸುವುದಾಗಿ ಹೇಳಿದೆ.

ದೇಶದ ಬಡಜನರಿಗಾಗಿ ನಾವು ದುಡಿಯುತ್ತೇವೆ ಎಂದು ಹೇಳಿಕೊಂಡಿರುವ ಬಿಜೆಪಿಯು, ಬಡವರಿಗಾಗಿ ಹಲವು ಯೋಜನೆಗಳನ್ನು ಮುಂದುವರಿಸುವುದಾಗಿ ಹೇಳಿದೆ. ಕೈಗೆಟಕುವ ದರದಲ್ಲಿ ಮನೆಗಳನ್ನು ಹೊಂದಲು ಯೋಜನೆ ರೂಪಿಸುತ್ತೇವೆ, ಇದಕ್ಕಾಗಿ ರೇರಾ ಕಾಯ್ದೆಯಲ್ಲಿ ಅಗತ್ಯ ಬದಲಾವಣೆ ಮಾಡಿಕೊಳ್ಳುತ್ತೇವೆ. ಜನ ಸಾಮಾನ್ಯರ ಬದುಕನ್ನು ಸುಲಭವಾಗಿಸಲು ಉಚಿತ ವಿದ್ಯುತ್ (ಸೋಲಾರ್ ವಿದ್ಯುತ್ ಉತ್ಪಾದನಾ ಘಟಕ ಅಳವಡಿಕೆ) ಒದಗಿಸುತ್ತೇವೆ, ಓಡಾಟಕ್ಕೆ ಅನುಕೂಲವಾಗುವಂತೆ ಮೆಟ್ರೊ, ರೈಲು ಸೇವೆಗಳನ್ನು ವಿಸ್ತರಿಸುತ್ತೇವೆ ಎಂದು ಬಿಜೆಪಿ ತನ್ನ ಸಂಕಲ್ಪ ಪತ್ರದಲ್ಲಿ ಹೇಳಿಕೊಂಡಿದೆ.

ಉದ್ಯೋಗಾವಕಾಶ ಮತ್ತು ಉದ್ಯಮಶೀಲತೆಯನ್ನು ಹೆಚ್ಚಿಸಲು ಕೌಶಲ ಅಭಿವೃದ್ಧಿ ಕಾರ್ಯಕ್ರಮವನ್ನು ವಿಸ್ತರಿಸುತ್ತೇವೆ. ಕೃಷಿ, ತಯಾರಿಕೆ ಮತ್ತು ಸೇವಾ ವಲಯಗಳಿಗೆ ಅಗತ್ಯವಿರುವ ಕೌಶಲಭರಿತ ಉದ್ಯೋಗಿಗಳನ್ನು ಒದಗಿಸಲು ಅಗತ್ಯ ಕಾರ್ಯಕ್ರಮಗಳನ್ನು ರೂಪಿಸುತ್ತೇವೆ. ಭಾರತವನ್ನು ವಿಶ್ವದ ಆಟೊಮೊಬೈಲ್ ತಯಾರಿಕಾ ಕೇಂದ್ರ ಮತ್ತು ವಿದ್ಯುತ್ ಚಾಲಿತ ವಾಹನಗಳ ತಯಾರಿಕಾ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುತ್ತೇವೆ. ಭಾರತವನ್ನು ಎಲೆಕ್ಟ್ರಾನಿಕ್ ಸಾಧನಗಳ ತಯಾರಿಕಾ ಕೇಂದ್ರವನ್ನಾಗಿ, ಜಾಗತಿಕ ಎಂಜಿನಿಯರಿಂಗ್ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುತ್ತೇವೆ. ಈ ಮೂಲಕ ದೇಶದಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸುತ್ತೇವೆ ಎಂದು ಸಂಕಲ್ಪ ಪತ್ರದಲ್ಲಿ ವಿವರಿಸಲಾಗಿದೆ.

ಇದರ ಹೊರತಾಗಿ ರಾಷ್ಟ್ರೀಯ ಜಲಜೀವನ ಅಭಿಯಾನ, ಉಜ್ವಲ ಯೋಜನೆ, ಹೆದ್ದಾರಿ ನಿರ್ಮಾಣ ಯೋಜನೆಗಳನ್ನು ಮುಂದುವರಿಸುವುದಾಗಿ ಸಂಕಲ್ಪ ಪತ್ರದಲ್ಲಿ ಹೇಳಿದೆ. ‘ಮೈ ಭಾರತ್’ ಕಾರ್ಯಕ್ರಮದ ಅಡಿಯಲ್ಲಿ ಕೋಟಿಗೂ ಹೆಚ್ಚು ಯುವಕರಿಗೆ ತರಬೇತಿ ನೀಡಲಾಗುತ್ತದೆ. ಸರ್ಕಾರದ ಕಾರ್ಯಕ್ರಮಗಳ ಫಲಾನುಭವಿಗಳಾಗುವುದು ಹೇಗೆ ಮತ್ತು ಇತರರನ್ನು ಅವುಗಳಲ್ಲಿ ಒಳಗೊಳ್ಳುವುದು ಹೇಗೆ ಎಂಬುದನ್ನು ತಿಳಿಸಿಕೊಡಲಾಗುತ್ತದೆ. ಹಿರಿಯ ನಾಗರಿಕರಿಗೆ ಸಾಮಾಜಿಕ ಭದ್ರತೆ ಮತ್ತು ತೀರ್ಥಯಾತ್ರೆಗೆ ಕಾರ್ಯಕ್ರಮ ರೂಪಿಸಲಾಗುತ್ತದೆ ಎಂದು ‘ಮೋದಿಯವರ ಗ್ಯಾರಂಟಿ’ಯಲ್ಲಿ ವಿವರಿಸಲಾಗಿದೆ.



ರೈತ ಕಲ್ಯಾಣ

- ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಹೆಚ್ಚಳ
- ರೈತರಿಗೆ ವಾರ್ಷಿಕ ₹6,000 ಕೃಷಿ ಸಮ್ಮಾನ ನಿಧಿ ಯೋಜನೆ ಮುಂದುವರಿಕೆ
- ಬೆಳೆ ವಿಮೆ ಯೋಜನೆ ಬಲವರ್ಧನೆ
- ಕೃಷಿ ಉತ್ಪನ್ನಗಳ ಸಂಗ್ರಹ ಮತ್ತು ಸಾಗಣೆಗೆ ಅನುಕೂಲವಾಗುವಂತೆ ಮೂಲಸೌಕರ್ಯ ಅಭಿವೃದ್ಧಿ

ಆರೋಗ್ಯ ಮತ್ತು ಆಹಾರ

- ₹5 ಲಕ್ಷದವರೆಗೆ ಉಚಿತ ಆರೋಗ್ಯ ಸೇವೆ ಒದಗಿಸುವ ಆಯುಷ್ಮಾನ್ ಭಾರತ್ ಯೋಜನೆಯನ್ನು ಮುಂದುವರಿಸುತ್ತೇವೆ. ಹಿರಿಯ ನಾಗರಿಕರಿಗೂ ಈ ಯೋಜನೆ ವಿಸ್ತರಿಸುತ್ತೇವೆ. ಯೋಜನೆ ಅಡಿ ಚಿಕಿತ್ಸೆ ಪಡೆಯಬಹುದಾದ ಆರೋಗ್ಯ ಕೇಂದ್ರಗಳ ವ್ಯಾಪ್ತಿಯನ್ನು ಹೆಚ್ಚಿಸುತ್ತೇವೆ
- 80 ಕೋಟಿ ಜನರಿಗೆ ಉಚಿತವಾಗಿ ಪಡಿತರ ಒದಗಿಸುವ ಯೋಜನೆಯನ್ನು ಐದು ವರ್ಷಗಳವರೆಗೆ ವಿಸ್ತರಿಸುತ್ತೇವೆ
- ಆಹಾರ ಪದಾರ್ಥಗಳ ಬೆಲೆ ಏರಿಕೆಯಾಗುವುದನ್ನು ಈಗ ಹೇಗೆ ತಡೆಗಟ್ಟಿದ್ದೇವೊ, ಮುಂದೆಯೂ ಹಾಗೆಯೇ ತಡೆಗಟ್ಟುತ್ತೇವೆ. ಇದಕ್ಕಾಗಿ ಬೆಲೆ ಏರಿಕೆ ತಡೆ ನಿಧಿಯನ್ನು ಹೆಚ್ಚಿಸುತ್ತೇವೆ

ಉದ್ಯೋಗ

- ಮುದ್ರಾ ಯೋಜನೆ ಅಡಿ ತರುಣ ವರ್ಗದ ಉದ್ಯಮಿಗಳು ಈಗಾಗಲೇ ಸಾಲ ಪಡೆದು ಅದನ್ನು ತೀರಿಸಿದ್ದರೆ, ಎರಡನೇ ಸಾಲದ ಮೊತ್ತವನ್ನು ₹20 ಲಕ್ಷದವರೆಗೆ ಹೆಚ್ಚಿಸುತ್ತೇವೆ
- ದೇಶದ ಜನರಲ್ಲಿ ಉದ್ಯೋಗಾವಕಾಶ ಮತ್ತು ಸ್ವಯಂ ಉದ್ಯೋಗಾವಕಾಶದ ಸಾಮರ್ಥ್ಯವನ್ನು ಹೆಚ್ಚಿಸಲು ನಮ್ಮ ಪಕ್ಷವು ಬದ್ಧವಾಗಿರಲಿದೆ
- ಉದ್ಯೋಗಾವಕಾಶ ಹೆಚ್ಚಿಸಲು ಕೌಶಲ ಅಭಿವೃದ್ಧಿಯಂತಹ ಕಾರ್ಯಕ್ರಮದ ವ್ಯಾಪ್ತಿಯನ್ನು ವಿಸ್ತರಿಸುತ್ತೇವೆ
- ಭಾರತವನ್ನು ಜಾಗತಿಕ ತಯಾರಿಕಾ ಕೇಂದ್ರವಾಗಿ ಅಭಿವೃದ್ಧಿಪಡಿಸಿ, ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತೇವೆ
- ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳ ಮೂಲಕ ಅಪಾರ ಪ್ರಮಾಣದ ಉದ್ಯೋಗಗಳನ್ನು ಸೃಷ್ಟಿಸುತ್ತೇವೆ
- ಕಾಲಕಾಲಕ್ಕೆ ಸರ್ಕಾರಿ ಹುದ್ದೆಗಳಿಗೆ ನೇಮಕಾತಿ ನಡೆಸುತ್ತೇವೆ. ರಾಜ್ಯಮಟ್ಟದಲ್ಲೂ ಅಂತಹ ನೇಮಕಾತಿ ನಡೆಸುವಂತೆ ಪ್ರೋತ್ಸಾಹಿಸುತ್ತೇವೆ

ತೆರಿಗೆ ಮತ್ತಿತರ ವಿನಾಯಿತಿ

- ಪ್ರಾಮಾಣಿಕವಾಗಿ ತೆರಿಗೆ ಕಟ್ಟುವವರನ್ನು ಗೌರವಿಸುತ್ತೇವೆ
- ನಮ್ಮ ಆರ್ಥಿಕತೆಗೆ ಅಗತ್ಯವಾದ ರೀತಿಯಲ್ಲಿ ನೇರ ಮತ್ತು ಪರೋಕ್ಷ ತೆರಿಗೆ ನೀತಿಯಲ್ಲಿ ಬದಲಾವಣೆ ತರುತ್ತೇವೆ

ಕಾಂಗ್ರೆಸ್‌ನದ್ದು ‘ನ್ಯಾಯ’ದ ಭರವಸೆ

ರೈತ ಕಲ್ಯಾಣ

- ಸ್ವಾಮಿನಾಥನ್ ವರದಿಯ ಶಿಫಾರಸಿನಂತೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನೀಡುತ್ತೇವೆ. ಜೊತೆಗೆ, ಎಂಎಸ್‌ಪಿಗೆ ಕಾನೂನಾತ್ಮಕ ಖಾತರಿಯನ್ನೂ ನೀಡುತ್ತೇವೆ
- ಗ್ರಾಮ ಹಾಗೂ ಪುಟ್ಟ ನಗರಗಳಲ್ಲಿ ರೈತರೇ ತಮ್ಮ ಬೆಳೆಗಳನ್ನು ಮಾರುವಂಥ ಸಣ್ಣ ಮಾರುಕಟ್ಟೆಗಳ ಸ್ಥಾಪನೆ

ಆರೋಗ್ಯ ಮತ್ತು ಆಹಾರ

- ದೇಶದ ಎಲ್ಲರಿಗೂ ₹25 ಲಕ್ಷದವರೆಗೆ ನಗದುರಹಿತ (ಕ್ಯಾಶ್‌ಲೆಸ್) ಆರೋಗ್ಯ ವಿಮೆ. ಈ ಯೋಜನೆಯ ವ್ಯಾಪ್ತಿಗೆ ಖಾಸಗಿ ಆಸ್ಪತ್ರೆ, ಎನ್‌ಜಿಒಗಳು ನಡೆಸುವ ಆರೋಗ್ಯ ಕೇಂದ್ರಗಳನ್ನೂ ಒಳಗೊಳ್ಳಲು ಕ್ರಮ ಕೈಗೊಳ್ಳಲಾಗುವುದು
- 12ನೇ ತರಗತಿವರೆಗೂ ಬಿಸಿಯೂಟ ಯೋಜನೆ ವಿಸ್ತರಣೆ

ಉದ್ಯೋಗ

- ನಿರುದ್ಯೋಗದ ಹೊರೆಯನ್ನು ತಗ್ಗಿಸುವ ಮೊದಲ ಹಂತವಾಗಿ, ಎಲ್ಲ ಶೈಕ್ಷಣಿಕ ಸಾಲಗಳ ಮನ್ನಾ (ಬಾಕಿ ಅಸಲು ಮತ್ತು ಬಡ್ಡಿಗೆ ಮಾತ್ರ)
- ಪದವೀಧರರಿಗೆ ಸರ್ಕಾರಿ ಕಚೇರಿಗಳಲ್ಲಿ ಒಂದು ವರ್ಷದ ವೃತ್ತಿ ತರಬೇತಿ (ಅಪ್ರೆಂಟಿಶಿಪ್) ನೀಡಲಾಗುವುದು. ಈ ಅವಧಿಯಲ್ಲಿ ಅವರಿಗೆ ₹1 ಲಕ್ಷ ಅಪ್ರೆಂಟಿಸ್‌ಶಿಪ್ ವೇತನ ನೀಡಲಾಗುವುದು
- ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸರ್ಕಾರಿ ಉದ್ಯಮ ಸಂಸ್ಥೆಗಳಲ್ಲಿ ಖಾಲಿ ಇರುವ 30 ಲಕ್ಷ ಹುದ್ದೆಗಳ ಭರ್ತಿ. ಜೊತೆಗೆ ರಾಜ್ಯ ಸರ್ಕಾರಗಳ ಅಡಿಯಲ್ಲಿ ಬರುವ ಪಂಚಾಯಿತಿ, ಪುರಸಭೆಗಳಲ್ಲಿ ಇರುವ ಖಾಲಿ ಹುದ್ದೆಗಳ ಭರ್ತಿಗೆ ಕ್ರಮ
- ಉದ್ಯೋಗ ಖಾತ್ರಿಯ ದಿನದ ಕೂಲಿಯನ್ನು ₹400ಕ್ಕೆ ಹೆಚ್ಚಿಸಲಾಗುವುದು. ನಗರ ಉದ್ಯೋಗ ಯೋಜನೆಯಡಿಯಲ್ಲಿ ನಗರದಲ್ಲಿ ವಾಸಿಸುವ ಬಡವರಿಗೂ ಕೆಲಸದ ಗ್ಯಾರಂಟಿ ನೀಡಲಾಗುವುದು
- 2,500ಕ್ಕಿಂತ ಹೆಚ್ಚು ಜನಸಂಖ್ಯೆ ಗ್ರಾಮಗಳಲ್ಲಿ ಎರಡನೇ ಆಶಾ ಕಾರ್ಯಕರ್ತೆಯನ್ನು ನೇಮಕ ಮಾಡಲಾಗುವುದು
- ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆಯನ್ನು ದ್ವಿಗುಣ ಮಾಡಲಾಗುವುದು. ಈ ಮೂಲಕ 14 ಲಕ್ಷ ಉದ್ಯೋಗದ ಸೃಷ್ಟಿ

ತೆರಿಗೆ ಮತ್ತಿತರ ವಿನಾಯಿತಿ

- ಆದಾಯ ತೆರಿಗೆ ಪಾವತಿದಾರರಿಗೆ ಅಲ್ಪಾವಧಿ ಮತ್ತು ದೀರ್ಘಾವಧಿಯಲ್ಲಿ ಹೊರೆಯಾಗದ ಹಾಗೆ ಆದಾಯ ತೆರಿಗೆ ನೀತಿಯನ್ನು ಮಾರ್ಪಡಿಸಲಾಗುವುದು
- ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಹೂಡಿಕೆ ಮತ್ತು ಕಾರ್ಯನಿರ್ವಹಣೆಗೆ ತೊಡಕಾಗಿರುವ ‘ಏಂಜಲ್ ಟ್ಯಾಕ್ಸ್’ನಂತಹ ಸುಲಿಗೆ ಸ್ವರೂಪದ ತೆರಿಗೆಗಳನ್ನು ತೆಗೆದುಹಾಕಲಾಗುವುದು
- ಜಿಎಸ್‌ಟಿಯನ್ನು ಸಂಪೂರ್ಣವಾಗಿ ಮಾರ್ಪಡಿಸಲಾಗುವುದು. ಅತ್ಯಂತ ಕಡಿಮೆ ದರದ ಜಿಎಸ್‌ಟಿ ವಿಧಿಸಲಾಗುವುದು. ಒಂದು ನಿಗದಿತ ಮೊತ್ತದವರೆಗೆ ಜಿಎಸ್‌ಟಿ ಪಾವತಿದಾರರ ನಿರ್ವಹಣೆಯನ್ನು ರಾಜ್ಯಗಳ ವ್ಯಾಪ್ತಿಗೆ ನೀಡಲಾಗುವುದು. ಜಿಎಸ್‌ಟಿಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯಗಳ ಮಧ್ಯೆ ಅಧಿಕಾರ ಹಂಚಿಕೆ ಮಾಡಲಾಗುವುದು



ತಿನ್ನುವ ಅನ್ನದಿಂದ ಹಿಡಿದು ತೊಡುವ ತೊಡುಗೆಯವರೆಗೆ ನಡೆದ ಪರ-ವಿರೋಧದ ಚರ್ಚೆಗಳು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜಟಾಪಟಿ, ಭಾರತವು ಫೆಡರಲ್ ವ್ಯವಸ್ಥೆಯದ್ದು ಅಥವಾ ಯೂನಿಯನ್ ವ್ಯವಸ್ಥೆಯದ್ದು ಎನ್ನುವ ಚರ್ಚೆ, ಕೇಂದ್ರ ಸರ್ಕಾರ ಹಾಗೂ ಕೊಲಿಜಿಯಂ ನಡುವಣ ತಿಕ್ಕಾಟ, ಮಾಧ್ಯಮ ಸ್ವಾತಂತ್ರದ ಹರಣವಾಗಿದೆ ಎಂಬುದರ ಚರ್ಚೆ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲಾಗುತ್ತಿದೆ ಎನ್ನುವ ಹೋರಾಟ... ಹೀಗೆ ಕಳೆದ 10 ವರ್ಷಗಳಲ್ಲಿ ಹಲವು ವಿಷಯ-ವಿಚಾರಗಳು ಚರ್ಚಿಸಲ್ಪಟ್ಟಿವೆ. ಕಾಂಗ್ರೆಸ್ ತನ್ನ ‘ನ್ಯಾಯ ಪತ್ರ’ದಲ್ಲಿ ಈ ಎಲ್ಲದರ ಕುರಿತು ಚರ್ಚಿಸಿದೆ ಮತ್ತು ಅಧಿಕಾರಕ್ಕೆ ಬಂದರೆ, ಇಂಥ ವಿಷಯಗಳ ಕುರಿತು ತನ್ನ ಐದು ವರ್ಷದ ಯೋಜನೆ ಏನಾಗಿರಲಿದೆ ಎಂಬುದನ್ನು ಹೇಳಿದೆ.

‘ಪ್ರಜಾಸತ್ತಾತ್ಮಕ ಸಂಸ್ಥೆಗಳ ಮೇಲಿನ ಜನರ ನಂಬಿಕೆಗಳನ್ನು ಮರುಸ್ಥಾಪಿಸಲಾಗುವುದು’ ಎಂದು ಕಾಂಗ್ರೆಸ್ ಹೇಳಿದೆ. ಜನರ ಖಾಸಗಿತನಕ್ಕೆ ಧಕ್ಕೆ ತರುವ ಎಲ್ಲ ಕಾನೂನುಗಳನ್ನು ಪರಿಶೀಲಿಸಲಾಗುವುದು. ಆಹಾರ, ತೊಡುಗೆ, ಪ್ರಯಾಣ, ಪ್ರೇಮ ಮತ್ತು ವಿವಾಹ... ಹೀಗೆ ಯಾವ ವಿಷಯದಲ್ಲಿಯೂ ಸರ್ಕಾರವು ಮಧ್ಯ ಪ್ರವೇಶಿಸುವುದಿಲ್ಲ ಎಂದು ಭರವಸೆ ನೀಡಿದೆ.

ಪೊಲೀಸರು, ತನಿಖಾ ಸಂಸ್ಥೆಗಳು, ಗೂಢಚಾರಿ ಸಂಸ್ಥೆಗಳು ಸ್ವಾಯತ್ತವಾಗಿ ಹಾಗೂ ಕಾನೂನಿಗನುಸಾರವಾಗಿ ಕೆಲಸ ಮಾಡುವಂತಾಗುತ್ತವೆ ಎನ್ನುವ ಭರವಸೆ ನೀಡುತ್ತೇವೆ ಎಂದು ಕಾಂಗ್ರೆಸ್ ಹೇಳಿದೆ. ಅಪರಾಧ ಪ್ರಕರಣಗಳಲ್ಲಿ ಆರೋಪಿಗಳನ್ನು ಅಸಾಧಾರಣ ಸಂದರ್ಭದಲ್ಲಿ ಮಾತ್ರ ಜೈಲಿಗೆ ಕಳುಹಿಸಲು ಅವಕಾಶ ಇರುವಂತೆ ಕಾನೂನು ರೂಪಿಸಲಾಗುವುದು ಎಂದು ಕಾಂಗ್ರೆಸ್ ಹೇಳಿದೆ.

ರಾಷ್ಟ್ರೀಯ ನ್ಯಾಯಾಂಗ ಸಮಿತಿಯನ್ನು ರಚಿಸಲಾಗುವುದು. ಈ ಸಮಿತಿಯು ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳನ್ನು ಆಯ್ಕೆ ಮಾಡುವ ಹಾಗೂ ನೇಮಕ ಮಾಡುವ ಕೆಲಸ ಮಾಡಲಿದೆ. ಸಾಂವಿಧಾನಿಕ ನ್ಯಾಯಾಲಯ ಹಾಗೂ ಮೇಲ್ಮನವಿ ನ್ಯಾಯಾಲಯ ಎಂದು ಸುಪ್ರೀಂ ಕೋರ್ಟ್ ಅನ್ನು ಎರಡು ಭಾಗಗಳಾಗಿ ಮಾಡಲಾಗುವುದು ಎಂದು ಕಾಂಗ್ರೆಸ್ ಹೇಳಿದೆ. ತೆರಿಗೆ ಆದಾಯದಲ್ಲಿ ರಾಜ್ಯಗಳ ಪಾಲನ್ನು ನಿರಾಕರಿಸುವುದಿಲ್ಲ. ಬಿಜೆಪಿ/ಎನ್‌ಡಿಎ ಸರ್ಕಾರದ ‘ಸೆಸ್’ರಾಜ್ ಅನ್ನು ಅಂತ್ಯಗೊಳಿಸಲಾಗುವುದು. ರಾಜ್ಯ ಸರ್ಕಾರಗಳಿಂದ ಶೇ 5ರಷ್ಟು ಮಾತ್ರವೇ ಕೇಂದ್ರ ಸೆಸ್ ಹಾಗೂ ಹೆಚ್ಚುವರಿ ಶುಲ್ಕವನ್ನು ಪಡೆದುಕೊಳ್ಳಲಾಗುವುದು ಎಂದು ಕಾಂಗ್ರೆಸ್ ಹೇಳಿದೆ.

ಆಧಾರ: ಬಿಜೆಪಿ ಮತ್ತು ಕಾಂಗ್ರೆಸ್‌ನ ಪ್ರಣಾಳಿಕೆಗಳು

ರಾಮಾಯಣ ಸಿನಿಮಾಗೆ ಯಶ್ ಬಂಡವಾಳ

ಬಾಲಿವುಡ್‌ನ ಬಹುನಿರೀಕ್ಷಿತ ಸಿನಿಮಾ ‘ರಾಮಾಯಣ’ದ ಚಿತ್ರೀಕರಣ ಪ್ರಾರಂಭವಾಗಿದ್ದು, ಇದೇ ಸಂದರ್ಭದಲ್ಲಿ ಚಿತ್ರತಂಡ ಹೊಸ ಸುದ್ದಿ ನೀಡಿದೆ. ‘ರಾಮಾಯಣ’ ಚಿತ್ರಕ್ಕಾಗಿ ರಾಕಿಂಗ್ ಸ್ಟಾರ್ ಯಶ್ ಹಾಗೂ ನಮಿತ್ ಮಲ್ಹೋತ್ರಾ ಕೈ ಜೋಡಿಸಿದ್ದಾರೆ.

‘ದಂಗಲ್’ ಸಿನಿಮಾ ಖ್ಯಾತಿಯ ನಿರ್ದೇಶಕ ನಿತೀಶ್ ತಿವಾರಿ ‘ರಾಮಾಯಣ’ ಸಿನಿಮಾವನ್ನು ಬಹಳ ಅದ್ದೂರಿಯಾಗಿ ದೃಶ್ಯರೂಪಕ್ಕೆ ಇಳಿಸುವುದಕ್ಕೆ ಸಜ್ಜಾಗಿದ್ದಾರೆ. ಬಹುಕೋಟಿ ವೆಚ್ಚದಲ್ಲಿ ಈ ಚಿತ್ರ ನಿರ್ಮಾಣವಾಗಲಿದ್ದು, ಚಿತ್ರದಲ್ಲಿ ಯಶ್ ಕೂಡಾ ನಟಿಸಲಿದ್ದಾರೆ ಎನ್ನುವ ಗಾಳಿಸುದ್ದಿ ಇತ್ತು. ಆದರೆ ಯಶ್ ಈ ಸಿನಿಮಾ ನಿರ್ಮಾಣ ಮಾಡಲಿದ್ದಾರೆ ಎನ್ನುವುದನ್ನು ಚಿತ್ರತಂಡವೇ ಘೋಷಿಸಿದೆ. ಯಶ್ ಒಡೆತನದ ಮಾನ್‌ಸ್ಟರ್‌ಮೈಂಡ್ ಕ್ರಿಯೇಷನ್ ಹಾಗೂ ನಮಿತ್ ಮಲ್ಹೋತ್ರಾ ಸಾರಥ್ಯದ ಪ್ರೈಮ್ ಫೋಕಸ್ ಸ್ಟುಡಿಯೊ ‘ರಾಮಾಯಣ’ ಸಿನಿಮಾವನ್ನು ನಿರ್ಮಿಸುತ್ತಿದೆ.

ತಮ್ಮ ಮುಂದಿನ ಚಿತ್ರ, ಗೀತು ಮೋಹನ್‌ದಾಸ್ ನಿರ್ದೇಶನದ ‘ಟಾಕ್ಸಿಕ್’ ಸಿನಿಮಾವನ್ನೂ ಮಾನ್‌ಸ್ಟರ್‌ಮೈಂಡ್ ಕ್ರಿಯೇಷನ್‌ನಡಿ ನಿರ್ಮಾಣ ಮಾಡುತ್ತಿದ್ದಾರೆ ಯಶ್. ಕೆವಿಎನ್ ಪ್ರೊಡಕ್ಷನ್ಸ್ ಜೊತೆಗೆ ಮಾನ್‌ಸ್ಟರ್‌ಮೈಂಡ್ ಕೂಡ ‘ಟಾಕ್ಸಿಕ್’ ಸಿನಿಮಾದ ನಿರ್ಮಾಣದಲ್ಲಿ ಪಾಲುದಾರಿಕೆ ಹೊಂದಿದೆ. ಇದೇ ಬ್ಯಾನರ್‌ನಡಿ ‘ರಾಮಾಯಣ’ ಸಿನಿಮಾಗೂ ಯಶ್ ಬಂಡವಾಳ ಹೂಡುತ್ತಿದ್ದಾರೆ.

‘ರಾಮಾಯಣ ನಮ್ಮ ಜೀವನದ ಭಾಗವಾಗಿದೆ. ಅದರ ಬಗ್ಗೆ ಎಲ್ಲವನ್ನೂ ತಿಳಿದುಕೊಂಡಿದ್ದೇವೆ ಎಂದುಕೊಂಡರೂ, ಪ್ರತಿ ಬಾರಿ ರಾಮಾಯಣದೊಳಗೆ ಹೊಕ್ಕಾಗ ಹೊಸ ಜ್ಞಾನ, ಭಿನ್ನವಾದ ದೃಷ್ಟಿಕೋನ ಲಭಿಸುತ್ತದೆ. ಈ ಕಾಲಾತೀತ ಮಹಾಕಾವ್ಯವನ್ನು ಅದ್ದೂರಿಯಾಗಿ ಬೆಳ್ಳಿತೆರೆಗೆ ತರುವುದು ನಮ್ಮ ಉದ್ದೇಶ’ ಎಂದಿದ್ದಾರೆ ಯಶ್.

ನಮಿತ್ ಮಲ್ಹೋತ್ರ ಮತ್ತು ಯಶ್

ಶುರುವಾಯ್ತು ಗುದ್ದಾಂಗುದ್ದಿ!

ನಟ ಡಾಲಿ ಧನಂಜಯ ನಟನೆಯ ‘ಉತ್ತರಕಾಂಡ’ ಸಿನಿಮಾದ ಮೊದಲ ಭಾಗದ ಚಿತ್ರೀಕರಣ ಸೋಮವಾರದಿಂದ(ಏ.15) ಆರಂಭವಾಗಿದೆ. ವಿಜಯಪುರದಲ್ಲಿ ಮೊದಲ ಹಂತದಲ್ಲಿ 15 ದಿನಗಳ ಚಿತ್ರೀಕರಣ ನಡೆಯಲಿದೆ ಎಂದು ತಿಳಿಸಿದೆ ಚಿತ್ರತಂಡ.

ರೋಹಿತ್ ಪದಕಿ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಸಿನಿಮಾದ ಮುಹೂರ್ತ 2022ರ ನವೆಂಬರ್‌ನಲ್ಲಿ ನಡೆದಿತ್ತು. ‘ಇನ್ ಮ್ಯಾಲಿಂದ ಫುಲ್ ಗುದ್ದಾಂಗುದ್ದಿ!’ ಎಂಬ ಅಡಿಬರಹ ಹೊತ್ತ ಈ ಚಿತ್ರದ ಕಥೆ ಉತ್ತರ ಕರ್ನಾಟಕದ ಹಿನ್ನೆಲೆಯಲ್ಲಿದ್ದು, ಜೊತೆಗೆ ಅದೇ ಭಾಗದ ಭಾಷೆಯ ಸೊಗಡಿನಲ್ಲಿ ಈ ಸಿನಿಮಾ ನಡೆಯಲಿದೆ. ಈ ಎಲ್ಲ ವಿಷಯಗಳ ಸಂಶೋಧನೆ ಮತ್ತು ಸಿದ್ಧತೆಯ ಕಾರಣದಿಂದಾಗಿ ಹಾಗೂ ಕೆಲ ಅನಿವಾರ್ಯ ಸಂದರ್ಭಗಳು ಎದುರಾದ ಕಾರಣ ಚಿತ್ರ ಸೆಟ್ಟೇರುವುದಕ್ಕೆ ಕೊಂಚ ವಿಳಂಬವಾಗಿದೆ ಎಂದಿದೆ ಚಿತ್ರತಂಡ. ಚಿತ್ರದಲ್ಲಿ ‘ಗಬ್ರು ಸತ್ಯ’ ಎಂಬ ಪಾತ್ರದಲ್ಲಿ ಧನಂಜಯ ಕಾಣಿಸಿಕೊಳ್ಳಲಿದ್ದಾರೆ.

ಧನಂಜಯ

‘ಈ ಸಿನಿಮಾಗೆ ಸಾಕಷ್ಟು ಪೂರ್ವಸಿದ್ಧತೆಯ ಅಗತ್ಯವಿತ್ತು. ಜೊತೆಗೆ ಚಿತ್ರಕಥೆಯ ಸಿದ್ಧತೆ ಮತ್ತು ಅದನ್ನು ಕಾರ್ಯರೂಪಕ್ಕೆ ತರಲು ಹೆಚ್ಚಿನ ಸಮಯ ತೆಗೆದುಕೊಂಡಿತು. ಶಿವರಾಜ್‌ಕುಮಾರ್ ಹಾಗೂ ಧನಂಜಯ ಅವರು ಈ ಸಿನಿಮಾದಲ್ಲಿ ಮುಖ್ಯಭೂಮಿಕೆಯಲ್ಲಿದ್ದು, ಇವರಿಬ್ಬರ ಕಾಂಬಿನೇಷನ್‌ನ ಮೇಲೆ ಇರುವ ಜನರ ನಿರೀಕ್ಷೆಯು ನಮ್ಮ ಜವಾಬ್ದಾರಿಯನ್ನು ಇಮ್ಮಡಿಗೊಳಿಸಿದೆ. ಫ್ಯಾನ್ಸ್‌ಗಳಿಗೆ ಒಂದು ಅತ್ಯದ್ಭುತ ಸಿನಿಮಾ ನೀಡಲು ನಾವು ಸಜ್ಜಾಗಿದ್ದೇವೆ’ ಎಂದಿದ್ದಾರೆ ರೋಹಿತ್ ಪದಕಿ. ಚಿತ್ರದಲ್ಲಿ ದೊಡ್ಡ ತಾರಾಬಳಗವೇ ಇದ್ದು, ಈ ವಾರದಲ್ಲೇ ಇವರೆಲ್ಲರನ್ನೂ ಪರಿಚಯಿಸಲಿದೆ ಚಿತ್ರತಂಡ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪಕ್ಷಕ್ಕೆ ರಾಜೀನಾಮೆ ನೀಡುತ್ತಿದ್ದಾರೆ ಎಂಬಂಥ ಪೋಸ್ಟ್‌ಗಳು ಹರಿದಾಡುತ್ತಿವೆ. ರಾಹುಲ್ ಅವರು ತಮ್ಮ ರಾಜೀನಾಮೆ ಪತ್ರವನ್ನು ಓದುತ್ತಿದ್ದಾರೆ ಎಂದು ಹೇಳಲಾಗಿರುವ ವಿಡಿಯೊಗಳನ್ನೂ ಪೋಸ್ಟ್‌ನೊಂದಿಗೆ ಅಂಟಿಸಲಾಗುತ್ತಿದೆ. ‘ನಾನು ಕಾಂಗ್ರೆಸ್‌ಗೆ ರಾಜೀನಾಮೆ ನೀಡುತ್ತಿದ್ದೇನೆ. ಚುನಾವಣೆಗಾಗಿ ಹಿಂದೂ ಎಂದು ನನ್ನನ್ನು ನಾನೇ ಬಿಂಬಿಸಿಕೊಂಡು ಸಾಕಾಗಿದೆ. ನಾನು ಅನ್ಯಾಯ ಯಾತ್ರೆ ಮಾಡಿ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ್ದೇನೆ. ಆದರೆ, ಮೋದಿ ಅವರು ಭ್ರಷ್ಟರನ್ನು ಜೈಲಿಗೆ ಅಟ್ಟುತ್ತಿದ್ದಾರೆ. ಅವರ ನಾಯತ್ವದಲ್ಲಿ ನಾವು ಭ್ರಷ್ಟರನ್ನು ಜೈಲಿಗೆ ಕಳುಹಿಸುತ್ತಲೇ ಇರಬೇಕಾಗುತ್ತದೆ. ಅದಕ್ಕಾಗಿ ನಾನು ನನ್ನ ಅಜ್ಜನ ಮನೆ ಇಟಲಿಗೆ ಹೋಗುತ್ತೇನೆ’ ಎಂದು ರಾಹುಲ್ ಅವರು ಹೇಳುತ್ತಿರುವಂತೆ ವಿಡಿಯೊದಲ್ಲಿ ಧ್ವನಿ ಇದೆ. ಆದರೆ, ಇದು ಸುಳ್ಳು ಸುದ್ದಿ.

ರಾಹುಲ್ ಗಾಂಧಿ ಅವರು ಕೇರಳದ ವಯನಾಡ್‌ನಿಂದ ತಮ್ಮ ನಾಮಪತ್ರ ಸಲ್ಲಿಸುತ್ತಿರುವ ವಿಡಿಯೊ ಇದಾಗಿದೆ. ಈ ವಿಡಿಯೊವನ್ನು ಹಲವು ಮಾಧ್ಯಮಗಳು ಹಂಚಿಕೊಂಡಿವೆ. ಕಾಂಗ್ರೆಸ್ ಕೂಡ ತನ್ನ ಖಾತೆಗಳಲ್ಲಿ ಪೂರ್ತಿ ವಿಡಿಯೊವನ್ನು ಹಂಚಿಕೊಂಡಿದೆ. ಇಲ್ಲೆಲ್ಲೂ ರಾಹುಲ್ ಅವರು ರಾಜೀನಾಮೆ ನೀಡುತ್ತಿದ್ದೇನೆ ಎಂದು ಹೇಳಿಲ್ಲ. ಡೀಪ್‌ಫೇಕ್ ಅನ್ನು ಪತ್ತೆ ಹಚ್ಚುವ ವಿವಿಧ ತಂತ್ರಜ್ಞಾನದ ಮೂಲಕ ವಿಡಿಯೊದಲ್ಲಿನ ಧ್ವನಿಯನ್ನು ಪತ್ತೆ ಹಚ್ಚಲಾಯಿತು. ಈ ಪರೀಕ್ಷೆಯಲ್ಲಿ, ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊದಲ್ಲಿನ ರಾಹುಲ್ ಅವರ ಧ್ವನಿಯು ಕೃತಕ ಬುದ್ಧಿಮತ್ತೆಯಿಂದ ಸೃಷ್ಟಿಸಲಾಗಿದೆ ಎಂಬುದು ಪತ್ತೆಯಾಯಿತು. ಆದ್ದರಿಂದ, ರಾಹುಲ್ ಅವರು ರಾಜೀನಾಮೆ ಪತ್ರ ಓದುತ್ತಿದ್ದಾರೆ ಎಂಬುದು ಸುಳ್ಳು ಸುದ್ದಿ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ನುಡಿ ಬೆಳಗು

ಮಧುರಾನುಭೂತಿ



ಪಿ. ಚಂದ್ರಿಕಾ

ಕೃಷ್ಣ ಗೋಕುಲವನ್ನು ಬಿಟ್ಟು ದ್ವಾರಕೆಗೆ ಹೊರಟ. ಅವನಿಗೋ ರಾಜಕಾರ್ಯ. ಅವನ ಕೊಳಲ ಧ್ವನಿಗೆ ಮೈಮರೆತಿದ್ದ ಗೋಕುಲದ ಪ್ರತಿ ಮನೆಯಲ್ಲೂ ಶೋಕಾಚರಣೆ. ಯಶೋದೆಯಂತೂ ಕೃಷ್ಣನಿಲ್ಲದ ಗೋಕುಲವನ್ನು ಇನ್ನೂ ಜೀರ್ಣಿಸಿಕೊಳ್ಳಲಾಗದೆ ಒದ್ದಾಡುತ್ತಿದ್ದಳು. ಗೋಪಿಕೆಯರು ಎಲ್ಲಿಂದಲೋ ಕಲ್ಲು ಬಂದು ಬಿದ್ದರೂ ಕೃಷ್ಣಾ ಎಂದು ಹುಡುಕಿ ಹೊರಟು, ಅವನನ್ನು ಕಾಣದೆ, ಕಲ್ಲು ತೂರಿದ ತುಂಟ ಮಕ್ಕಳನ್ನು ಹೊಡೆಯುತ್ತಿದ್ದರು.

ಆಗ ಯಶೋದೆಗೆ ಒಬ್ಬ ಗೋಪಿಕೆ ಇಡೀ ಗೋಕುಲ ದುಃಖದಲ್ಲಿ ಮುಳುಗಿದೆ, ಆದರೆ ರಾಧೆಯೊಬ್ಬಳು ಸಂತೋಷದಿಂದ ಇದ್ದಾಳೆ ಎನ್ನುವ ಸುದ್ದಿಯನ್ನು ಮುಟ್ಟಿಸುತ್ತಾಳೆ. ಅದನ್ನು ಕೇಳಿ ಯಶೋದೆ, ‘ಇದು ಸಾಧ್ಯವೇ ಇಲ್ಲ. ಎಲ್ಲರಿಗಿಂತ ಹೆಚ್ಚು ಕೃಷ್ಣನನ್ನು ಹಚ್ಚಿಕೊಂಡಿದ್ದು ರಾಧೆಯೇ. ಹಾಗಿದ್ದೂ ಅವಳು ಸಂತೋಷದಿಂದ ಇರಲು ಹೇಗೆ ಸಾಧ್ಯ?’ ಎನ್ನುತ್ತಾ ರಾಧೆಯನ್ನು ನೋಡಲು ಬರುತ್ತಾಳೆ. ನಿಜ ರಾಧೆ ಅತ್ಯಂತ ಸಂತೋಷಭರಿತಳಾಗಿದ್ದಾಳೆ. ಯಶೋದೆ ರಾಧೆಯನ್ನು ಪ್ರಶ್ನಿಸುತ್ತಾಳೆ, ‘ಕೃಷ್ಣನಿಲ್ಲದ ಗೋಕುಲದಲ್ಲಿ ನೀನು ಸಂತಸದಿಂದ ಇರಲು ಹೇಗೆ ಸಾಧ್ಯ?’ ಎಂದು. ಕ್ಷಣಕಾಲ ಗಂಭೀರಳಾದ ರಾಧೆ ಕೇಳುತ್ತಾಳೆ, ‘ಯಾರು ಹೇಳಿದ್ದು ಕೃಷ್ಣ ಗೋಕುಲದಲ್ಲಿ ಇಲ್ಲವೆಂದು?’ ಯಶೋದೆ, ‘ನಾವೆಲ್ಲಾ ಅವನು ಊರು ಬಿಟ್ಟಿದ್ದನ್ನು ನೋಡಿದ್ದೇವೆ. ಅಲ್ಲಲ್ಲ ನಾವೇ ಅವನನ್ನು ಕಳಿಸಿದ್ದೇವೆ. ಹಾಗಿದ್ದು ಇದೆಂಥಾ ಪ್ರಶ್ನೆ ರಾಧೆ?’ ಎನ್ನುತ್ತಾಳೆ.

ಯಮುನೆಯ ದಡದಲ್ಲಿ ಕೃಷ್ಣನ ಪಾದವನ್ನು ತಾಕಿದ ಮರಳಲ್ಲಿ ಅವನ ಕಾಲಿನ ಬಿಸುಪಿದೆ, ಅವನ ಪಾದ ತೊಳೆದ ಯಮುನೆ ಧನ್ಯತೆಯನ್ನುಳಿಸಿಕೊಂಡಿದ್ದಾಳೆ, ಈ ತಮಾಲ ವೃಕ್ಷವಿದೆಯಲ್ಲಾ ಇದಕ್ಕೆ ಹಾಕಿರುವ ಉಯ್ಯಾಲೆ ಅವನ ಕೈಗಳ ಸ್ಪರ್ಶಕ್ಕೆ ಪುಳಕಿತವಾಗಿದೆ... ನನಗೆ ಕಣ್ಣು ಹಾಯಿಸಿದ ಕಡೆಯೆಲ್ಲಾ ಕೃಷ್ಣನೇ ಕಾಣುತ್ತಿದ್ದಾನೆ’ ಎನ್ನುತ್ತಾಳೆ. ಅವಳ ಮಾತಿಗೆ ಯಶೋದೆ, ‘ಅಯ್ಯೋ ಹುಚ್ಚಮ್ಮಾ ಭ್ರಮೆಯಲ್ಲಿ ಬದುಕುತ್ತಿದ್ದೀಯಲ್ಲಾ? ಕೃಷ್ಣ ನಮ್ಮನ್ನು ಬಿಟ್ಟುಹೋಗಿದ್ದಾನೆ’ ಎನ್ನುತ್ತಾಳೆ.

‘ಅಮ್ಮಾ ಯಶೋದೆ, ಕೃಷ್ಣ ನನಗೆ ಉಸಿರಿನ ಕಣಕಣದಲ್ಲೂ ಗೋಚರಿಸುತ್ತಿದ್ದಾನೆ. ಅವನೆಲ್ಲೋ ಇದ್ದಾನೆ ಎಂದುಕೊಂಡು ನಾನೇಕೆ ದುಃಖಿಸಲಿ? ಅವನ ಲಕ್ಷ್ಯವನ್ನು ತಲುಪಲು ಅಡ್ಡಿಮಾಡಲು ನನಗೇನು ಅಧಿಕಾರ? ನನ್ನದೇನಿದ್ದರೂ ಪ್ರೀತಿ ಮಾತ್ರ. ನನ್ನ ಒಳಜಗತ್ತಿನಲ್ಲಿ ಅವನನ್ನು ಇರಿಸಿಕೊಂಡುಬಿಟ್ಟರೆ ದುಃಖ ಇರುವುದಿಲ್ಲ’ ಎನ್ನುತ್ತಾಳೆ.

ಯಶೋದೆಗೆ ಈ ಮಾತು ನಿಜ ಅನ್ನಿಸುತ್ತದೆ. ಆದರೆ ತನಗೇಕೆ ರಾಧೆಯಷ್ಟು ನಿರಾಳವಾಗಿ ಇರಲು ಸಾಧ್ಯವಾಗುತ್ತಿಲ್ಲ ಎನ್ನುವ ಪ್ರಶ್ನೆ ಕಾಡಿ ಕೇಳುತ್ತಾಳೆ, ‘ನಿಜ ಹೇಳು ರಾಧೆ ನಿನ್ನ ಹಾಗಿರಲು ನಾನೇನು ಮಾಡಲಿ?’ ನಕ್ಕ ರಾಧೆ, ‘ಕಳೆದುಕೊಂಡದ್ದರ ಬಗ್ಗೆ ದುಃಖ ಬೇಡ, ಪಡೆದುಕೊಂಡ ಒಳ್ಳೆಯದನ್ನು ಮಾತ್ರ ಧ್ಯಾನಿಸು. ಕೃಷ್ಣ ನಿನ್ನ ಮಗ. ಈ ಪ್ರೀತಿ ಸಾಧನೆಗೆ ಅಡ್ಡಿಯಾಗಬಾರದು’ ಎಂದಳು. ಮಿಂಚಿನಂತೆ ಆ ವಾಕ್ಯ ಯಶೋದೆಯ ಕಣ್ಣನ್ನು ತೆರೆಸಿತು, ‘ಕೃಷ್ಣ ನನ್ನ ಪಾಲಿಗೆ ಎಂಥಾ ಮಧುರಾನುಭೂತಿ, ಅದಕ್ಕಾಗೆ ನನ್ನ ಬಳಿ ಅವನು ಬಂದಿದ್ದ ಎನ್ನುವುದನ್ನು ನಾನೇಕೆ ಮರೆತೆ?’ ಎಂದು, ರಾಧೆಯನ್ನು ಬಿಗಿದಪ್ಪಿ, ‘ಮಗೂ ನಿನ್ನ ಸಂತಸ ಈಗ ನನ್ನದೂ ಆಯಿತು’ ಎಂದಳು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಏಪ್ರಿಲ್ 16, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ಅಷ್ಟಮಿ ಗಂ. 13-25 ನಕ್ಷತ್ರ: ಪುಷ್ಯ ಗಂ. 29-16 ಯೋಗ: ಧೃತಿ ಗಂ. 23-16 ಕರಣ: ಬವ ಗಂ. 13-25, ಮೇಷ ಮಾಸದ 03 ನೇ ದಿನ, ಮಳೆನಕ್ಷತ್ರ: ಅಶ್ವಿನಿ 1. ರಾಹುಕಾಲ : ಮಧ್ಯಾಹ್ನ 03-00 - 04-30, ಸೂರ್ಯೋದಯ : 06-20 ಸೂರ್ಯಾಸ್ತ : 06-40
ಮುಸ್ಲಿಂ ದಿನಾಂಕ : 06 ಶವ್ವಾಲ್ , ದಿನ ವಿಶೇಷ : ಅನ್ನಪೂರ್ಣ ಪೂಜಾ
ಅದೃಷ್ಟ ಸಂಖ್ಯೆ : 5, 9

ಮೇಷ : ಕೀಲು ನೋವು, ವಾತದಂಥ ಕಾಯಿಲೆಯಿಂದ ಬಳಲುತ್ತಿರುವವರು ಆರೋಗ್ಯದ ಮೇಲೆ ವಿಶೇಷ ಕಾಳಜಿ ಇಡಿ. ಚಿತ್ರಕಲೆಯಲ್ಲಿ ಅಥವಾ ಪರ್ಯೇತರ ವಿಷಯದಲ್ಲಿ ಮಗ್ನರಾಗುವಂತೆ ಪ್ರೇರೇಪಣೆ ದೊರೆಯಲಿದೆ.

ವೃಷಭ: ವ್ಯಾಪಾರ ವ್ಯವಹಾರಗಳನ್ನು ಮಾಡುತ್ತಿರುವವರಿಗೆ ವ್ಯಾಪ್ತಿಯನ್ನು ವಿದೇಶಕ್ಕೆ ಪಸರಿಸುವ ಯೋಚನೆ ಮಾಡಬಹುದು. ಹಣ್ಣು, ತರಕಾರಿ ಮಾರಾಟಗಾರರಿಗೆ ಲಾಭ ನಷ್ಟಗಳ ಮಿಶ್ರ ಫಲ ಅನುಭವವಾಗಬಹುದು.

ಮಿಥುನ: ಹೆಚ್ಚಿನ ಕಡೆ ಜಗಳವನ್ನು ತಣಿಸಲು ಪ್ರಯೋಜನವಾಗುವ ಹಾಸ್ಯ ಪ್ರವೃತ್ತಿಯು ಇಂದು ನಿಮ್ಮ ಕೈ ಬಿಡುವ ಸಾಧ್ಯತೆ ಇದೆ. ಸಹೋದರ ಸಹೋದರಿಯರ ಬೇಜವಾಬ್ದಾರಿಯಿಂದ ಬೇಸರ ಪಟ್ಟುಕೊಳ್ಳುವಿರಿ.

ಕರ್ಕಾಟಕ: ಸಹೋದ್ಯೋಗಿಗಳೊಂದಿಗೆ ಆತ್ಮೀಯ ನಡೆ ಮತ್ತು ನುಡಿ ಮನಸ್ತಾಪಗಳನ್ನು ದೂರಮಾಡಲಿದೆ. ವಿವಾದಾತ್ಮಕ ವಿಷಯಗಳ ಕುರಿತು ಚರ್ಚಿಸುವುದು ಉಚಿತವಲ್ಲ. ಹೊಸ ಕಾರ್ಯ ಕೈಗೊಳ್ಳಲು ಸಕಾಲ.

ಸಿಂಹ: ಪರಿಶ್ರಮದ ಜೊತೆ ಅಧಿಕ ಸಮಯವನ್ನು ವೃತ್ತಿಯ ಕೆಲಸಕ್ಕೆ ಮೀಸಲಿಡಿ. ಪ್ರೇಮವಿವಾಹಕ್ಕಾಗಿ ಕಾಯುತ್ತಿರುವವರು ಸ್ವಲ್ಪ ದಿನ ಕಾಯಬೇಕಾಗಬಹುದು. ಮನೆಯ ಸಮೀಪದ ಶಿವಾಲಯಕ್ಕೆ ಭೇಟಿ ನೀಡಿ.

ಕನ್ಯಾ: ನಿವೇಶನ ಖರೀದಿ ಹಾಗೂ ಕಟ್ಟಡ ನಿರ್ಮಾಣದಂಥ ಕೆಲಸಗಳಿಗೆ ಪೂರಕ ವಾತಾವರಣ ದೊರೆಯಲಿದೆ. ವಾಹನ ಚಲಾಯಿಸುವಾಗ ಎಚ್ಚರಿಕೆ ಅತ್ಯಗತ್ಯ. ಕುಟುಂಬದ ಅಭಿವೃದ್ಧಿಯಲ್ಲಿ ಅವಿರತ ಪ್ರಯತ್ನ ಫಲಕಾರಿಯಾಗುವುದು.

ತುಲಾ: ನಿಲುವು ನಿಮಗೆ ಸರಿಯಾಗಿದೆ ಎಂದು ಅನಿಸಿದಲ್ಲಿ ನಿಮ್ಮ ಮೇಲೆ ನಿಮಗೆ ಅಚಲ ನಂಬಿಕೆ ಇರಲಿ. ಕುಟುಂಬದಲ್ಲಿ ಸಣ್ಣ ಪುಟ್ಟ ಕಲಹಗಳಾಗುವ ಸಾಧ್ಯತೆ ಇದೆ. ಕೊಡು ಕೊಳ್ಳುವಿಕೆ ವ್ಯವಹಾರಗಳು ಹೆಚ್ಚಲಿವೆ.

ವೃಶ್ಚಿಕ: ಈ ದಿನ ನಿಮ್ಮ ಯೋಜನೆಗಳ ಕುರಿತು ಸ್ಪಷ್ಟ ಮಾಹಿತಿಗಳನ್ನು ಕಲೆಹಾಕಿರುವುದರಿಂದ ಮಾರ್ಗ ಮಧ್ಯ ಇರುವ ಅಡೆತಡೆಗಳು ನಿವಾರಣೆಯಾಗಲಿವೆ. ಸಕಾರಾತ್ಮಕ ಚಿಂತನೆಗಳನ್ನು ಮೈಗೂಡಿಸಿಕೊಳ್ಳಿ.

ಧನು: ತೀರ್ಥಯಾತ್ರೆಗಳನ್ನು ಮಾಡಬೇಕೆಂದುಕೊಂಡವರು ಆ ಬಗ್ಗೆ ಯೋಚಿಸಲು ಇದು ಪ್ರಶಸ್ತ ಸಮಯ. ಚಿತ್ರಕಾರರು, ಬರಹಗಾರರಂಥ ಕ್ರಿಯಾತ್ಮಕ ಕೆಲಸಗಳಲ್ಲಿ ಇರುವವರಿಗೆ ಉತ್ತಮ ಅವಕಾಶಗಳು ಸಿಗಲಿವೆ.

ಮಕರ: ವಿದೇಶಿ ವ್ಯವಹಾರಗಳನ್ನು ಹೊಂದಿರುವಂಥವರು ಲಾಭವನ್ನು ಅಪೇಕ್ಷಿಸಬಹುದು. ದಾಂಪತ್ಯದಲ್ಲಿ ಉಂಟಾದ ಭಿನ್ನಾಭಿಪ್ರಾಯಗಳು ಸರಿಯಾದ ಮಾತುಕತೆಯಿಂದ ದೂರವಾಗಿ ಸಂಬಂಧ ಉತ್ತಮಗೊಳ್ಳಲಿದೆ.

ಕುಂಭ: ಮಗಳು ಹಾಗು ತತ್ಸಬಂಧಿ ಕುಟುಂಬ ವರ್ಗದವರಿಗೆ ಉತ್ತಮ ಹಾರೈಕೆಗಳ ಅಗತ್ಯವಿರುವುದರಿಂದ ಅದನ್ನು ನಡೆಸಿಕೊಡಿ. ನಿಮ್ಮ ಮೇಲಿದ್ದ ಸಂಶಯದ ಮನೋಭಾವ ನಿವಾರಣೆಯಾಗುವುದು.

ಮೀನ: ಯಾವ ವಿಷಯದಲ್ಲಿ ಹಿಂದುಳಿದಿರುವಿರಿ ಎಂದು ಕಂಡುಕೊಂಡು ತಜ್ಞರಿಂದ ಅದಕ್ಕೆ ಪರಿಹಾರ ಕಂಡುಕೊಳ್ಳಿರಿ. ತಪ್ಪು ಮಾಡುವುದು ಮಕ್ಕಳ ಸ್ವಾಭಾವಿಕ ಗುಣವೆಂಬುವುದು ಅರಿತು ಅವರನ್ನು ಕ್ಷಮಿಸಿ.

ಪದಬಂಧ 5652

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಚಾರನ ಒಳ್ಳೆಯ ನಡತೆ (4)
3.ಮರದ ಹತ್ತಿರ ಕಾಣಿಸಿದ ಹೆಣ್ಣುದುಂಬಿ (3)
4.ಭವ್ಯವಾದ ಆಕೃತಿ (4)
6.ಅಡಿಯಲ್ಲೇ ತೋರಿದ ಆತುರ! (4)
7.ಇದು ಸ್ವಭಾವಸಿದ್ಧವಾದುದು (3)
8.ಕೊನೆಗಿದ್ದ ಪತಿಯ ಸಲ್ಲದ ವ್ಯವಹಾರ! (4)
11.ಸೂತ್ರದ ಬೊಂಬೆಯನ್ನು ಆಡಿಸುವವನು (4)
13.ತಿಳಿವಳಿಕೆ ಇಲ್ಲದವ ಮರಕ್ಕೊರಗಿದ್ದಾನೆ (3)
14.ಗೌರವಕ್ಕೆ ಪಾತ್ರನಾದವನು (4)

ಮೇಲಿಂದ ಕೆಳಕ್ಕೆ
1.ಮಧ್ಯರಾತ್ರಿಯನ್ನು ಹೀಗೆ ಹೇಳಿ (4)
2.ಸೂರ್ಯನ ಇನ್ನೊಂದು ಹೆಸರು (2)
3.ಮಣ ಭಾರ ಹೊತ್ತು ಚಕ್ರಾಕಾರವಾಗಿ ಸುತ್ತುವುದು! (3)
5.ಸದಭಿಪ್ರಾಯ ಸಂಪಾದನೆಗಾಗಿ ಕೊಡುವ ಹಣ (3)
6.ಅನುಜ ಹಿಡಿದಿರುವ ಆಡು (2)
7.ಸರತಿ ಸಾಲಿನಲ್ಲಿರುವ ಹೆಂಡತಿ (2)
8.ಗೋಡೆಗಳಲ್ಲಿ ಗಾಳಿಯಾಡಲು ಬಿಟ್ಟಿರುವ ಜಾಗ (3)
9.ಉಪಾಯದಿಂದ ಹಾಕಿದ ಬುನಾದಿ (4)
10.ಚರವಲ್ಲದುದು ವರ ಕೊನೆಗಿದ್ದಾಗ ಕಂಡಿದೆ (3)
12.ಮತ ಹಾಕಿದಾಗ ಆವರಿಸಿದ ಕತ್ತಲು (2)

■	■	1			2	■	■	■
3			■	■	4			5
	■		■	■	■	■	■	
	■		■	■	6			
■	■	■	7			■	■	■
8				■	■	9	■	10
	■	■	■	■	■		■	
11			12	■	■	13		
■	■	■	14				■	■

5651ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರತಿಗಾಮಿ 2.ಪ್ರವೇಶ
4.ಪದವಿ 6.ಉದರ
7.ಸಮೂಹಗಾನ 10.ಸಾರಣೆ
11.ಬಣ್ಣನೆ 13.ಪರೋಕ್ಷ
14.ನಾರುಮಡಿ

ಮೇಲಿಂದ ಕೆಳಕ್ಕೆ:
1.ಪ್ರತಾಪ 2.ಪ್ರಖರ
3.ಶತಮೂರ್ಖ 5.ವಿಲಾಸ
6.ಉದಾಹರಣೆ
8.ನವಾಬ 9.ಸಮಾರೋಪ
10.ಸಾಪೇಕ್ಷ 12.ನೆಗಡಿ

ಸುಡೊಕು 6037

				7			4	
		4	6	2	8			9
7				1				
						6	7	
6		1	7		2			4
								1
9				6		5		
	3	6	2		5			7
8		5		4			6	3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6036 ಸುಡೊಕು

4	8	1	6	9	7	5	2	3
6	7	5	3	2	4	9	1	8
3	9	2	1	8	5	4	7	6
9	6	4	8	1	3	2	5	7
7	5	3	4	6	2	1	8	9
2	1	8	7	5	9	3	6	4
1	2	7	9	4	6	8	3	5
5	3	9	2	7	8	6	4	1
8	4	6	5	3	1	7	9	2

ಮೊದಲ ಮತದ ಸಂಭ್ರಮ

ವೇದಾವತಿ ಕಾಳಹಸ್ತಿಮಠ, ಲಿಂಗಸುಗೂರು

ಆನ್‌ಲೈನ್ ಮೂಲಕ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಿಕೊಂಡಿರುವೆ. ರಾಷ್ಟ್ರದ ಭದ್ರತೆಗೆ ನಿಲ್ಲುವ, ಅಭಿವೃದ್ಧಿ ಮಾಡುವ ನಾಯಕನನ್ನು ಆಯ್ಕೆ ಮಾಡುವ ಹೊಣೆ ನನ್ನದಾಗಿದೆ. ಮೇ 7ರ ಮತದಾನ ದಿನಕ್ಕೆ ಕಾಯುತ್ತಿರುವೆ. ಮತದಾನದ ದಿನ ಸಮೀಪಿಸಿದಂತೆ ನನ್ನಲ್ಲಿ ಕುತೂಹಲ ಹೆಚ್ಚುತ್ತಿದೆ.

ರಮೇಶ ಪೂಜಾರಿ, ಜಾಲಹಳ್ಳಿ (ರಾಯಚೂರು ಜಿಲ್ಲೆ)

ಧಾರವಾಡ ನಗರದ ಕಿಟೆಲ್ ಕಾಲೇಜಿನಲ್ಲಿ ಬಿಎ ಓದುತ್ತಿರುವೆ. ಇದೇ ಮೊದಲ ಬಾರಿಗೆ ಮತದಾನ ಮಾಡುವ ಅವಕಾಶ ಬಂದೊದಗಿದೆ. ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ನನ್ನ ಹಕ್ಕು ಚಲಾಯಿಸಲು ತುಂಬಾ ಹೆಮ್ಮೆಯಾಗುತ್ತಿದೆ. ದೇಶದಲ್ಲಿ ಶ್ರೀಮಂತರು, ಬಡವರು, ಮಹಿಳೆಯರು, ಪುರುಷರು ಎಲ್ಲರಿಗೂ ಒಂದೇ ಬಗೆಯ ಮತಮೌಲ್ಯ ಇದೆ. ಸುಳ್ಳು ಹೇಳುವ ನಾಯಕರಿಗೆ ನನ್ನ ಮತ ಕೊಡಲಾರೆ.

ಮತ ಆಮಿಷ: ಆಯೋಗದ ವಶ

₹48.97 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹79.87 ಕೋಟಿ
ಮದ್ಯ	₹160.71 ಕೋಟಿ (1.42 ಕೋಟಿ ಲೀ)
ಮಾದಕವಸ್ತು	₹10.28 ಕೋಟಿ (459 ಕೆ.ಜಿ.)
ಚಿನ್ನ	₹56.86 ಕೋಟಿ (107.40 ಕೆ.ಜಿ.)
ಬೆಳ್ಳಿ	₹1.13 ಕೋಟಿ (296.79 ಕೆ.ಜಿ.)

‘ಮೋದಿ ಅಲೆಗೆ ಕಾಂಗ್ರೆಸ್ ಕಂಗಾಲು

‘ಹತ್ತು ತಿಂಗಳಲ್ಲಿ ಕಾಂಗ್ರೆಸ್ ಸರ್ಕಾರದಿಂದ ಒಂದೇ ಒಂದು ಅಭಿವೃದ್ಧಿ ಕೆಲಸ ಆಗಿದ್ದರೆ ಹೇಳಲಿ. ಆರ್ಥಿಕತೆ ಅಧೋಗತಿಗೆ ಇಳಿದಿದೆ. ಸರ್ಕಾರದ ಚುಕ್ಕಾಣಿ ಹಿಡಿದಿರುವವರು ತಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳಲು ಕೇಂದ್ರದ ಮೇಲೆ ಗೂಬೆ ಕೂರಿಸುತ್ತಿದ್ದಾರೆ. ಜನ ಮೋದಿ ಮೇಲೆ ಇಟ್ಟಿರುವ ವಿಶ್ವಾಸ ನೋಡಿ ಗಾಬರಿಯಾಗಿರುವ ಕಾಂಗ್ರೆಸ್ ನಾಯಕರು ಮೋದಿ ಅಲೆಯೂ ಇಲ್ಲ ಯಾವ ಅಲೆಯೂ ಇಲ್ಲ ಎಂದು ಬಡಬಡಿಸುತ್ತಿದ್ದಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು. ‘ಪ್ರಜಾವಾಣಿ’ಗೆ ಅವರು ನೀಡಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ.

ಪ್ರಜಾವಾಣಿ ಸಂದರ್ಶನ

ಬಿ.ವೈ.ವಿಜಯೇಂದ್ರ

• ಎಸ್.ರವಿಪ್ರಕಾಶ್

• **ರಾಜ್ಯದಲ್ಲಿ ಎಲ್ಲ 28 ಸ್ಥಾನಗಳನ್ನೂ ಗೆಲ್ಲುತ್ತೇವೆ ಎನ್ನುತ್ತೀರಲ್ಲ, ಇದು ಅತಿಯಾದ ವಿಶ್ವಾಸವಲ್ಲವೇ?**

ಈ ಚುನಾವಣೆಯಲ್ಲಿ ಮೋದಿ ಸರ್ಕಾರದ ಸಾಧನೆಯೇ ಮಹತ್ವದ ಅಂಶ. ಹಲವು ಕ್ಷೇತ್ರಗಳಲ್ಲಿ ಜನರಿಗೆ ಅಭ್ಯರ್ಥಿಗಳ ಹೆಸರೇ ಗೊತ್ತಿಲ್ಲ. ಅವರೂ ಮೋದಿ ಮತ್ತು ಕಮಲದ ಚಿಹ್ನೆಗೆ ಮತ ಹಾಕುವುದಾಗಿ ಹೇಳುತ್ತಿದ್ದಾರೆ. ತೀರಾ ಗ್ರಾಮೀಣ ಪ್ರದೇಶದ ಸಾಮಾನ್ಯ ಮತದಾರನೂ ಮೋದಿ ಮತ್ತೊಮ್ಮೆ ಪ್ರಧಾನಿ ಆಗಬೇಕು ಎಂಬ ಮಾತು ಹೇಳುತ್ತಾನೆ. 28 ಸ್ಥಾನ ಗೆಲ್ಲುತ್ತೇವೆ ಎಂಬುದು ಉತ್ಪ್ರೇಕ್ಷೆಯಲ್ಲ. ಮೊದಲ ಹಂತದ 14 ಕ್ಷೇತ್ರಗಳಲ್ಲಿ ಎರಡು ಕಡೆ ಕೊಂಚ ಸಮಸ್ಯೆ ಇದೆ. ಆ ಎರಡೂ ಸೇರಿ 14 ಕ್ಷೇತ್ರಗಳಲ್ಲೂ ಗೆಲ್ಲುತ್ತೇವೆ. ಇಂತಹ ವಾತಾವರಣದಿಂದಾಗಿ ಕಾಂಗ್ರೆಸ್ ನಾಯಕರು ಗಾಬರಿಗೆ ಒಳಗಾಗಿದ್ದಾರೆ. ಮೋದಿ ಅಲೆ ಕಾಣುತ್ತಿಲ್ಲ ಎಂದು ಒಮ್ಮೆ ಹೇಳುತ್ತಾರೆ. ವರುಣದಲ್ಲಿ ಲೀಡ್ ಕೊಡದಿದ್ದರೆ ತಾವು ಮುಖ್ಯಮಂತ್ರಿ ಆಗಿ ಮುಂದುವರೆಯುವುದೇ ಕಷ್ಟ ಎಂದು ಗೋಗರೆಯುತ್ತಾರೆ.

• **‘ಗ್ಯಾರಂಟಿ’ಗಳು ಅತಿ ಹೆಚ್ಚು ಸ್ಥಾನಗಳನ್ನು ತಂದುಕೊಡುತ್ತವೆ ಎಂಬ ಗ್ಯಾರಂಟಿ ಕಾಂಗ್ರೆಸ್ ನಾಯಕರಲ್ಲಿ ಇದ್ದಂತಿದೆ?**

ಕೆಲವು ತಿಂಗಳುಗಳ ಹಿಂದೆ ಕಾಂಗ್ರೆಸ್ ನಾಯಕರಲ್ಲಿ 18 ರಿಂದ 20 ಸ್ಥಾನಗಳನ್ನು ಗೆಲ್ಲುತ್ತೇವೆ ಎಂಬ ವಿಶ್ವಾಸವಿತ್ತು. ಆದರೆ, 3-4 ತಿಂಗಳಿಂದ ಈಚೆಗೆ ಅವರಿಗೆ ವಾಸ್ತವ ಸ್ಥಿತಿ ಗೊತ್ತಾಗಿದೆ. ಗ್ಯಾರಂಟಿ ಕೈ ಹಿಡಿಯುವುದಿಲ್ಲ ಎಂಬುದು ಅರಿವಿಗೆ ಬಂದ ಬಳಿಕ ಅವರು ಕಂಗಾಲಾಗಿದ್ದಾರೆ. ಜನ ಮೋದಿಯವರ ಬಗ್ಗೆ ಹುಚ್ಚೆದ್ದು ಕುಣಿಯುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ, ಜನಸಾಮಾನ್ಯರ ಬದುಕನ್ನು ಬದಲಿಸುವ ಮೋದಿಯವರ ಮಹತ್ವದ ಯೋಜನೆಗಳು ಮತ್ತು ಭ್ರಷ್ಟಾಚಾರರಹಿತ ಆಡಳಿತ.

‘ಕರ್ನಾಟಕದ ಸಮಗ್ರ ಅಭಿವೃದ್ಧಿ ನಮ್ಮ ಗುರಿ’

• **ಮತ್ತೆ ಎನ್‌ಡಿಎ ಅಧಿಕಾರಕ್ಕೆ ಬಂದರೆ ರಾಜ್ಯಕ್ಕೆ ಸಿಗುವುದೇನು?**

ಬೆಂಗಳೂರು ಅಭಿವೃದ್ಧಿಯ ಭಾರಕ್ಕೆ ಕುಸಿಯುತ್ತಿದೆ. ಹೀಗಾಗಿ ಕರ್ನಾಟಕದ ಪ್ರತಿಯೊಂದು ನಗರ, ಜಿಲ್ಲೆ, ತಾಲ್ಲೂಕು ಬೆಳವಣಿಗೆ ಹೊಂದಬೇಕು. ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿ ಹೆಚ್ಚಿನ ಪ್ರಮಾಣದಲ್ಲಿ ಆಗಬೇಕು. ರಾಜ್ಯದ ಆರ್ಥಿಕ ಬೆಳವಣಿಗೆ ದೇಶದಲ್ಲೇ ಅಗ್ರಸ್ಥಾನದಲ್ಲಿರಬೇಕು. ಇದಕ್ಕಾಗಿ ಐ.ಟಿ, ಬಿ.ಟಿ ಅಲ್ಲದೇ ಪ್ರವಾಸೋದ್ಯಮ, ಕೃಷಿ, ಔಷಧ, ರಸಗೊಬ್ಬರ ಕ್ಷೇತ್ರಗಳಲ್ಲಿ ವಿಪುಲ ಅವಕಾಶಗಳಿವೆ. ಇದರ ಪ್ರಯೋಜನ ರಾಜ್ಯದ ಜನರಿಗೆ ಸಿಗಬೇಕು. ಜನರ ಜೀವನ ಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇವೆ. ನಿರುದ್ಯೋಗ ನಿವಾರಣೆ ಜತೆ ರಾಜ್ಯದ ಜನರ ಜೀವನ ಸುಧಾರಣೆ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತೇವೆ.

• **ಹಲವು ಕ್ಷೇತ್ರಗಳಲ್ಲಿ ಬಿಜೆಪಿ ಮುಖಂಡರ ಮಧ್ಯೆ ಇರುವ ಅಸಮಾಧಾನ ಫಲಿತಾಂಶದ ಮೇಲೆ ಪ್ರತಿಕೂಲ ಪರಿಣಾಮ ಬೀರುವುದಿಲ್ಲವೇ?**

ಈ ಬಾರಿ ಪ್ರತಿ ಕ್ಷೇತ್ರಕ್ಕೂ 6 ರಿಂದ 7 ಮಂದಿ ಟಿಕೆಟ್ ಆಕಾಂಕ್ಷಿಗಳು ಇದ್ದರು. ಟಿಕೆಟ್ ಸಿಗದವರಿಗೆ ಅಸಮಾಧಾನ ಆಗಿರುವುದು ನಿಜ. ಆದರೆ, ಟಿಕೆಟ್ ಹಂಚಿಕೆ ತೀರ್ಮಾನ ನನ್ನ ಕೈಯಲ್ಲಾಗಲಿ, ಯಡಿಯೂರಪ್ಪ ಅವರ ಕೈಯಲ್ಲಾಗಲೀ ಇರಲಿಲ್ಲ. ವರಿಷ್ಠರೇ ತೀರ್ಮಾನ ಮಾಡಿದ್ದು. ಕೇವಲ ನಮ್ಮ ಮಾತು ಕೇಳಿಕೊಂಡು ಟಿಕೆಟ್ ಹಂಚಿಕೆ ಮಾಡುವ ವ್ಯವಸ್ಥೆ ನಮ್ಮ ಪಕ್ಷದಲ್ಲಿ ಇಲ್ಲ. ರಾಜ್ಯದ ವಿಚಾರದಲ್ಲಿ ನಮ್ಮ ವರಿಷ್ಠರು ಹೆಚ್ಚು ಎಚ್ಚರಿಕೆಯಿಂದಲೇ ತೀರ್ಮಾನ ಮಾಡಿದ್ದಾರೆ.

• **ಟಿಕೆಟ್ ಸಿಗದೇ ಇರುವುದಕ್ಕೆ ಈಶ್ವರಪ್ಪ ಮತ್ತು ಬಸನಗೌಡ ಯತ್ನಾಳ ನಿಮ್ಮನ್ನೇ ಗುರಿಯಾಗಿಸಿದ್ದಾರೆ?**

ನಮ್ಮನ್ನು ಟೀಕೆ ಮಾಡುವುದರಿಂದ ಪಕ್ಷಕ್ಕೆ ಹೆಚ್ಚು ಸ್ಥಾನಗಳನ್ನು ತಂದುಕೊಡುತ್ತದೆ ಮತ್ತು ಒಳ್ಳೆಯದಾಗುತ್ತದೆ ಎಂದಾದರೆ ಹಾಗೇ ಮಾಡಲಿ. ಆದರೆ, ನಮ್ಮ ಉದ್ದೇಶ ಮೋದಿಯವರು ಮತ್ತೊಮ್ಮೆ 400 ಸ್ಥಾನಗಳೊಂದಿಗೆ ಪ್ರಧಾನಿ ಆಗಬೇಕು ಎನ್ನುವುದು. ಅದಕ್ಕೆ ಕರ್ನಾಟಕದಿಂದ 28 ಸ್ಥಾನಗಳನ್ನು ಕಾಣಿಕೆಯಾಗಿ ನೀಡಬೇಕು. ಯತ್ನಾಳ ಅವರ ಉದ್ದೇಶವೂ ಅದೇ ಆಗಿರುತ್ತದೆ.

• **ಕೇಂದ್ರ ಸರ್ಕಾರ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದೆ ಎಂಬ ವಾದ ಕಾಂಗ್ರೆಸ್ ವಾದ ಬಿಜೆಪಿಗೆ ಹಿನ್ನಡೆ ಆಗುವುದಿಲ್ಲವೇ?**

ರಾಷ್ಟ್ರ ಮಟ್ಟದಲ್ಲಿ ಯಾವುದೇ ವಿಚಾರದಲ್ಲಿ ಬಿಜೆಪಿಯನ್ನು ಎದುರಿಸುವ ಸಾಮರ್ಥ್ಯವೂ ಕಾಂಗ್ರೆಸ್‌ಗೆ ಇಲ್ಲ. ಹೀಗಾಗಿ ಅವರು ಅನುದಾನ ಕೊಡುತ್ತಿಲ್ಲ, ತೆರಿಗೆ ಪಾಲು ಕಡಿಮೆ ಆಗಿದೆ ಎಂಬ ವಿಷಯ ಮುನ್ನೆಲೆಗೆ ತಂದು ಪದೇ ಪದೇ ಹೇಳಿ ಜನರನ್ನು ನಂಬಿಸುವ ಪ್ರಯತ್ನ ಮಾಡುತ್ತಿದ್ದಾರೆ. ಬರ ಪರಿಹಾರಕ್ಕಾಗಿ ಹಣ ಕೊಡುವುದು ತಾಂತ್ರಿಕ ಕಾರಣಕ್ಕೆ ತಡವಾಗಿರುವುದು ನಿಜ. ಕರ್ನಾಟಕ ಮಾತ್ರವಲ್ಲ; ಎಲ್ಲ ರಾಜ್ಯಗಳಿಗೂ ಅದೇ ರೀತಿ ಆಗಿದೆ. ಬರದ ವಿಚಾರದಲ್ಲಿ ರಾಜ್ಯ ಸರ್ಕಾರ ತನ್ನ ಜವಾಬ್ದಾರಿ ಸರಿಯಾಗಿ ನಿರ್ವಹಿಸದೇ ಗೂಬೆ ಕೂರಿಸುವ ಕೆಲಸ ಮಾಡುತ್ತಿದೆ. ನಮ್ಮ ಅವಧಿಯಲ್ಲಿ ಭೀಕರ ಪ್ರವಾಹ ಬಂದ ಸಂದರ್ಭದಲ್ಲಿ ದೊಡ್ಡ ಪ್ರಮಾಣದಲ್ಲಿ ಪರಿಹಾರ ಕೊಟ್ಟಿದ್ದೇವೆ. ಇವರು ಹೆಕ್ಟೇರ್‌ಗೆ ₹2,000 ಪರಿಹಾರ ಕೊಟ್ಟರೆ, ನಮ್ಮ ಸರ್ಕಾರ ₹24,000 ಕೊಟ್ಟಿತ್ತು. ❖

‘ಪಿ.ಎಂ ಏಕಚಕ್ರಾಧಿಪತಿಯೂ ಅಲ್ಲ, ಸಿ.ಎಂ ಮಾಂಡಲೀಕನೂ ಅಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮದು ಒಕ್ಕೂಟ ವ್ಯವಸ್ಥೆಯ ಪ್ರಜಾಪ್ರಭುತ್ವ. ಇಲ್ಲಿ ಪ್ರಧಾನ ಮಂತ್ರಿ ಏಕಚಕ್ರಾಧಿಪತಿಯೂ ಅಲ್ಲ, ಮುಖ್ಯಮಂತ್ರಿ ಮಾಂಡಲೀಕನೂ ಅಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಮೈಸೂರಿನಲ್ಲಿ ಭಾನುವಾರ ನಡೆದ ಬಿಜೆಪಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ್ದ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ, ‘ಕೇವಲ 6 ಕೋಟಿ ಜನತೆಯ ಮುಖ್ಯಮಂತ್ರಿ 150 ಕೋಟಿ ಜನತೆಯ ಪ್ರಧಾನಿ ಬಗ್ಗೆ ಹಗುರವಾಗಿ ಮಾತನಾಡುತ್ತಾರೆ’ ಎಂದು ಸಿದ್ದರಾಮಯ್ಯ ಹೆಸರು ಪ್ರಸ್ತಾಪಿಸದೇ ಹರಿಹಾಯ್ದಿದ್ದರು.

ಅದಕ್ಕೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ, ‘ನೂರು ಕೋಟಿ ಜನರ ಪ್ರತಿನಿಧಿಯಾಗಿರುವ ಪ್ರಧಾನಿಯವರನ್ನು ಆರು ಕೋಟಿ ಜನರ ಪ್ರತಿನಿಧಿಯಾದ ಮುಖ್ಯಮಂತ್ರಿ ಪ್ರಶ್ನೆ ಮಾಡಬಾರದು ಎಂಬ ನಿಮ್ಮ ಮಾತು ನನ್ನಲ್ಲಿ ಅತ್ಯಾಶ್ಚರ್ಯ ಮಾತ್ರವಲ್ಲ, ಕನಿಕರವನ್ನೂ ಉಂಟು ಮಾಡಿದೆ. ಇಷ್ಟು ವರ್ಷಗಳ ಕಾಲ ಒಂದು ಪ್ರಾದೇಶಿಕ ಪಕ್ಷವನ್ನು ಮುನ್ನಡೆಸುತ್ತಾ ಬಂದ ನೀವು, ನಿರಂತರವಾಗಿ ಕೇಂದ್ರ ಸರ್ಕಾರ ಮತ್ತು ಪ್ರಧಾನಿಯವರನ್ನು ಟೀಕಿಸುತ್ತಾ ಬಂದವರು. ಇದೀಗ ಈ ಇಳಿವಯಸ್ಸಿನಲ್ಲಿ ಈ ಬಗೆಯ ಶರಣಾಗತಿಯ ಸ್ಥಿತಿ ಯಾಕೆ ಬಂತು’ ಎಂದೂ ದೇವೇಗೌಡ ಅವರನ್ನು ಪ್ರಶ್ನಿಸಿದ್ದಾರೆ.

‘ಪ್ರಧಾನ ಮಂತ್ರಿ ಮತ್ತು ಮುಖ್ಯಮಂತ್ರಿ ಇಬ್ಬರೂ ಅವರವರ ಸ್ಥಾನಮಾನದಲ್ಲಿ ಸಮಾನರು. ಎರಡೂ ಪದವಿಗಳು ಸಮಾನವಾದುವು, ವಯಸ್ಸಿನ ಹಿರಿ-ಕಿರಿತನಗಳು ಪದವಿಗಳಿಗೆ ಅನ್ವಯ ಆಗುವುದಿಲ್ಲ. ಅತಿ ಸಣ್ಣ ವಯಸ್ಸಿಗೆ ಪ್ರಧಾನಿಯಾದ ರಾಜೀವ್ ಗಾಂಧಿ ಇದ್ದಾಗಲೂ ಅವರಿಗಿಂತ ಹಿರಿಯರಾದ ಮುಖ್ಯಮಂತ್ರಿಗಳಿದ್ದರು. ಆಗಲೂ ಪರಸ್ಪರ ಟೀಕೆ-ಟಿಪ್ಪಣಿಗಳು ವಿನಿಮಯ ಆಗುತ್ತಿದ್ದವು. ಈ ಹಿಂದಿನ ಪ್ರಧಾನಿಗಳನ್ನು ನೀವು ಯಾವ ಯಾವ ರೀತಿಯಲ್ಲಿ ಪ್ರಶ್ನಿಸಿದ್ದೀರಿ, ದೂರಿದ್ದೀರಿ, ಕೆಣಕಿದ್ದೀರಿ ಎನ್ನುವ ಪಟ್ಟಿಯನ್ನು ನಾನು ಕೊಡಬಲ್ಲೆ’ ಎಂದಿದ್ದಾರೆ.

‘ಈಶ್ವರಪ್ಪ ವಿರುದ್ಧ ಶಿಸ್ತುಕ್ರಮ’

ಪ್ರಜಾವಾಣಿ ವಾರ್ತೆ

ಹೊಳೆನರಸೀಪುರ (ಹಾಸನ ಜಿಲ್ಲೆ): ‘ಕೆ.ಎಸ್.ಈಶ್ವರಪ್ಪ ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುತ್ತೇವೆ. ಕ್ಷೇತ್ರದ ಮತದಾರರೂ ಅವರ ವಿರುದ್ಧ ಕ್ರಮ ಕೈಗೊಳ್ಳುತ್ತಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಪಟ್ಟಣದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಈಶ್ವರಪ್ಪ ಎಷ್ಟೆಷ್ಟು ಮಾತಾಡುತ್ತಾರೋ ಅಷ್ಟು ದುಪ್ಪಟ್ಟು ಮತಗಳು ಬಿಜೆಪಿ ಅಭ್ಯರ್ಥಿ ಬಿ.ವೈ.ರಾಘವೇಂದ್ರ ಅವರಿಗೆ ದೊರಕುತ್ತವೆ. ಈಶ್ವರಪ್ಪ ಅವರ ಪುಗಸಟ್ಟೆ ಮಾತುಗಳನ್ನು ಜನ ಗಮನಿಸುತ್ತಾರೆ’ ಎಂದು ಪ್ರತಿಪಾದಿಸಿದರು.

‘ಸಚಿವರಾಗಿ, ಉಪ ಮುಖ್ಯಮಂತ್ರಿಯಾಗಿ ಕೆ.ಎಸ್. ಈಶ್ವರಪ್ಪ ಶಿವಮೊಗ್ಗ ಜಿಲ್ಲೆಗೆ ಏನು ಕೊಡುಗೆ ಕೊಟ್ಟಿದ್ದಾರೆ? ಬಿ.ವೈ. ರಾಘವೇಂದ್ರ ಸಂಸದರಾಗಿ ಮಾಡಿದ ಅಭಿವೃದ್ಧಿ ಕಾರ್ಯಗಳು, ಬಿ.ಎಸ್. ಯಡಿಯೂರಪ್ಪ ಅವರ ಅವಧಿಯಲ್ಲಿ ಆಗಿರುವ ಕೆಲಸದ ಕುರಿತು ಜಿಲ್ಲೆಯ ಮನೆಮನೆಯಲ್ಲೂ ಜನ ಮಾತಾಡುತ್ತಿದ್ದಾರೆ. ಈಶ್ವರಪ್ಪ ಅವರಿಂದ ಕಲಿಯಬೇಕಾದ ಅವಶ್ಯಕತೆ ಇಲ್ಲ’ ಎಂದರು.

‘ರಾಘವೇಂದ್ರ ಅವರು 2 ಲಕ್ಷ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ. ಈಶ್ವರಪ್ಪನವರಿಗೆ ಜನ ಪಾಠ ಕಲಿಸುತ್ತಾರೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಕಾಂಗ್ರೆಸ್‌ನವರು ಅಬ್ಬರದ ಪ್ರಚಾರ ಮಾಡುತ್ತಿದ್ದಾರೆ. ಆದರೆ, ಮತದಾರರು ಬದಲಾವಣೆ ಬಯಸುತ್ತಿದ್ದು, ಜನಾನುರಾಗಿ ಡಾ.ಸಿ.ಎನ್. ಮಂಜುನಾಥ ಅವರನ್ನು ಗೆಲ್ಲಿಸಲು ನಿರ್ಧರಿಸಿದ್ದಾರೆ. ಅದಕ್ಕಾಗಿಯೇ ಡಿ.ಕೆ. ಶಿವಕುಮಾರ್ ಹಾಗೂ ಸುರೇಶ್ ಅವರು ಗಾಬರಿಯಾಗಿ ಸಿ.ಎನ್. ಮಂಜುನಾಥ ಎನ್ನುವ ಹೆಸರಿನವರನ್ನು ಕರೆತಂದು ಚುನಾವಣೆಗೆ ನಿಲ್ಲಿಸಿದ್ದಾರೆ’ ಎಂದು ಹೇಳಿದರು.

‘ಎಚ್.ಡಿ.ಕುಮಾರಸ್ವಾಮಿ ಅವರ ಹೇಳಿಕೆಯ ಬಗ್ಗೆ ಕಾಂಗ್ರೆಸ್ ಅಪಪ್ರಚಾರ ಮಾಡುತ್ತಿದೆ. ಕಾಂಗ್ರೆಸ್‌ನವರು ಹತಾಶರಾಗಿದ್ದಾರೆ. ಕುಮಾರಸ್ವಾಮಿ ಆರೋಗ್ಯ ಸರಿ ಇಲ್ಲ, ಅವರ ರಾಜಕೀಯ ಮುಗಿದೇ ಹೋಯಿತು. ಇನ್ನೇನಿದ್ದರೂ ನಾನೇ ಎನ್ನುವ ಭ್ರಮೆಯಲ್ಲಿದ್ದರು. ಕುಮಾರಸ್ವಾಮಿ ಮಂಡ್ಯದಿಂದ ಚುನಾವಣೆಗೆ ಸ್ಪರ್ಧಿಸಿದ್ದು, ಗೆಲುವು ಸಾಧಿಸಿ ಕೇಂದ್ರದಲ್ಲಿ ಸಚಿವರಾಗಲಿದ್ದಾರೆ. ನಂತರ ನಮ್ಮ ಅಸ್ತಿತ್ವ ಇರುವುದಿಲ್ಲ ಎಂಬ ಭಯ ಕಾಂಗ್ರೆಸಿಗರಿಗೆ ಕಾಡುತ್ತಿದೆ’ ಎಂದು ತಿರುಗೇಟು ನೀಡಿದರು.

‘ಏನೇ ವೈಮನಸ್ಸು ಇದ್ದರೂ, ದಿಂಗಾಲೇಶ್ವರ ಶ್ರೀಗಳು ಚರ್ಚೆ ನಡೆಸಿ ಪರಿಹರಿಸಿಕೊಳ್ಳಬೇಕು. ಇಂತಹ ಸಂದರ್ಭದಲ್ಲಿ ನಮ್ಮ ಜೊತೆಗೆ ಕೈಜೋಡಿಸಿ ಎಂದು ಮನವಿ ಮಾಡುತ್ತೇನೆ’ ಎಂದರು.

ಮೋದಿ ಚಿತ್ರ ಬಳಕೆ: ಬಿಜೆಪಿಯಿಂದ ದಾವೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಲೋಕಸಭೆ ಚುನಾವಣೆಯಲ್ಲಿ ಶಿವಮೊಗ್ಗ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿ ಆಗಿ ನಾಮಪತ್ರ ಸಲ್ಲಿಸಿರುವ ಕೆ.ಎಸ್.ಈಶ್ವರಪ್ಪ ಅವರು ಚುನಾವಣೆ ಪ್ರಚಾರದ ವೇಳೆ ಹಾಗೂ ಸಭೆಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಭಾವಚಿತ್ರ ಬಳಕೆ ಮಾಡುವುದನ್ನು ನಿರ್ಬಂಧಿಸುವಂತೆ ಕೋರಿ ಬಿಜೆಪಿ ಜಿಲ್ಲಾ ಘಟಕವು ಇಲ್ಲಿನ ಸಿವಿಲ್ ನ್ಯಾಯಾಲಯದಲ್ಲಿ ಸೋಮವಾರ ದಾವೆ ಹೂಡಿದೆ.

ಬಿಜೆಪಿಯ ಅಧಿಕೃತ ಅಭ್ಯರ್ಥಿಗೆ ಮಾತ್ರ ಪ್ರಧಾನಿ ನರೇಂದ್ರ ಮೋದಿ ಅವರ ಭಾವಚಿತ್ರ ಬಳಸಲು ಅವಕಾಶವಿದೆ. ಬೇರೆಯವರು ಬಳಕೆ ಮಾಡಿದರೆ ಅದು ಪ್ರಜಾಪ್ರತಿನಿಧಿ ಕಾಯ್ದೆಯ ಸೆಕ್ಷನ್- 29ರ ಉಲ್ಲಂಘನೆಯಾಗುತ್ತದೆ. ಹೀಗಾಗಿ ಕೆ.ಎಸ್. ಈಶ್ವರಪ್ಪ ಚುನಾವಣೆ ಪ್ರಚಾರ ಸಭೆಯ ವೇದಿಕೆಗಳಲ್ಲಿ ನರೇಂದ್ರ ಮೋದಿ ಭಾವಚಿತ್ರ ಮಾತ್ರವಲ್ಲ ಹೆಸರು ಬಳಕೆ ಮಾಡಿ ಮತ ಕೇಳುವುದಕ್ಕೂ ತಡೆಯಾಜ್ಞೆ ನೀಡುವಂತೆ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಟಿ.ಡಿ. ಮೇಘರಾಜ್ ದಾವೆಯಲ್ಲಿ ಕೋರಿದ್ದಾರೆ.

ಬಿಜೆಪಿ ಪರವಾಗಿ ವಕೀಲ ಕೆ. ಬಸಪ್ಪಗೌಡ ನ್ಯಾಯಾಲಯಕ್ಕೆ ಹಾಜರಾಗಿದ್ದರು. ಮೋದಿ ಭಾವಚಿತ್ರ ಬಳಕೆ ಸಂಬಂಧ ಈಶ್ವರಪ್ಪ ಈ ಮೊದಲೇ ಕೇವಿಯಟ್ ಸಲ್ಲಿಸಿದ್ದು, ನ್ಯಾಯಾಲಯ ಮಂಗಳವಾರ ವಿಚಾರಣೆ ಕೈಗೆತ್ತಿಕೊಳ್ಳಲಿದೆ ಎಂದು ತಿಳಿದುಬಂದಿದೆ.

‘ಡಿ.ಕೆ.ಶಿ ಆತ್ಮಹತ್ಯೆ ಮಾಡಿಕೊಂಡರೆ ₹50 ಕೋಟಿ’

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ‘ರೈತರ ವಿಚಾರದಲ್ಲಿ ಮಾತನಾಡಿದ ಸಚಿವ ಶಿವಾನಂದ ಪಾಟೀಲ ಆತ್ಮಹತ್ಯೆ ಮಾಡಿಕೊಂಡರೆ ನಾನು ₹5 ಕೋಟಿ ಪರಿಹಾರ ಕೊಡುವೆ. ಅವರ ಮಾತನ್ನು ಬೆಂಬಲಿಸಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆತ್ಮಹತ್ಯೆ ಮಾಡಿಕೊಂಡರೆ ₹50 ಕೋಟಿ ಕೊಡುವೆ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಪಟ್ಟಣದಲ್ಲಿ ಸೋಮವಾರ ಬಿಜೆಪಿ ಸಮಾವೇಶದಲ್ಲಿ ಮಾತನಾಡಿದ ಅವರು, ‘ಪರಿಹಾರಕ್ಕಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂದು ಸಚಿವ ಶಿವಾನಂದ ಅವರು ವಿಧಾನಸೌಧದಲ್ಲೇ ಹೇಳಿದ್ದಾರೆ. ನೀವು ಆತ್ಮಹತ್ಯೆ ಮಾಡಿಕೊಂಡು ತೋರಿಸಿ ಎಂದು ನಾನು ಆಗಲೂ ಹೇಳಿದ್ದೆ. ಈಗಲೂ ಹೇಳುತ್ತೇನೆ; ನಮ್ಮ ಬಳಿ ಹಣವಿಲ್ಲದಿದ್ದರೂ ಜನರಿಂದ ಪಟ್ಟಿ ಸಂಗ್ರಹಿಸಿ ನಿಮ್ಮ ಕುಟುಂಬಕ್ಕೆ ಕೊಡುವೆ’ ಎಂದರು.

ಬಿಜೆಪಿ ಮುಖಂಡ ಸಿ.ಟಿ. ರವಿ ಮಾತನಾಡಿ, ‘ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳ ಮೂಲಕ ಜನರನ್ನು ಹರಕೆಯ ಕುರಿ ಮಾಡುತ್ತಿದೆ. ಮುಂದೊಂದು ದಿನ ದೇಶವನ್ನೇ ಬಲಿ ಕೊಡುತ್ತದೆ’ ಎಂದರು.

ಕ್ಷೇತ್ರ ಸಮೀಕ್ಷೆ

ಹಿಂದುತ್ವ–ಗ್ಯಾರಂಟಿ ಮಧ್ಯೆ ಪೈಪೋಟಿ

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ 75.8%



ಕ್ಷೇತ್ರವನ್ನು ಕಾಡುವ ವಿಷಯಗಳು

- ಪ್ರವಾಸೋದ್ಯಮ ಹಾಗೂ ಮೀನುಗಾರಿಕಾ ಕ್ಷೇತ್ರದಲ್ಲಿ ಬೆಳೆಯುತ್ತಿರುವ ಉಡುಪಿ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ನಿರ್ಮಾಣವಾಗಬೇಕು
- ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಯಾಗಬೇಕು, ಐಟಿ ಕ್ಷೇತ್ರ ಅಭಿವೃದ್ಧಿಯಾಗಬೇಕು
- ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಡಿಕೆ, ಕಾಫಿ ಬೆಳೆಗಾರರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ, ಪರಿಸರ ಪ್ರವಾಸೋದ್ಯಮಕ್ಕೆ ಉತ್ತೇಜನ, ಭದ್ರಾ ಮೇಲ್ದಂಡೆ ಯೋಜನೆಗೆ ಅನುದಾನ ಬೇಕು





ಕೆ. ಜಯಪ್ರಕಾಶ್ ಹೆಗ್ಡೆ (ಕಾಂಗ್ರೆಸ್)

- ಮತದಾರರೊಂದಿಗೆ ನೇರವಾದ ಸಂಪರ್ಕ, ಅಭಿವೃದ್ಧಿ ಕಾರ್ಯಗಳು, ಸೌಮ್ಯ ವ್ಯಕ್ತಿತ್ವ
- ಈ ಹಿಂದೆ ಸಂಸದರಾಗಿದ್ದರಿಂದ ಉಡುಪಿ–ಚಿಕ್ಕಮಗಳೂರು ಎರಡೂ ಜಿಲ್ಲೆಯಲ್ಲಿ ಜನ ಸಂಪರ್ಕ
- ಚುನಾವಣೆಯಲ್ಲಿ ಸೋತ ಬಳಿಕ ಪಕ್ಷಾಂತರ ಮಾಡಿರುವುದು, ಆಗಾಗ ಪಕ್ಷ ಬದಲಾವಣೆ ಮಾಡುವುದು
- ಬೂತ್ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಸಂಘಟನೆ ಮಾಡುವುದು ಸಾಧ್ಯವಾಗದಿರುವುದು

ಕೋಟ ಶ್ರೀನಿವಾಸ ಪೂಜಾರಿ (ಬಿಜೆಪಿ)

- ಸರಳ ವ್ಯಕ್ತಿತ್ವ, ಉಡುಪಿಯಲ್ಲಿ ಜನರೊಟ್ಟಿಗೆ ಒಡನಾಟ, ತಳಮಟ್ಟದ ರಾಜಕೀಯದ ಅನುಭವ ಇರುವುದು
- ಹಿಂದುತ್ವ ಮತ್ತು ಮೋದಿ ಹೆಸರಿನಲ್ಲಿ ಮತ ಕೇಳುತ್ತಿರುವುದು, ಕಾರ್ಯಕರ್ತರ ಪಡೆ
- ವಿಧಾನಸಭೆ, ಲೋಕಸಭಾ ಚುನಾವಣೆಯಲ್ಲಿ ಒಮ್ಮೆಯೂ ಗೆಲುವು ಸಾಧಿಸದಿರುವುದು
- ಚಿಕ್ಕಮಗಳೂರು ಜಿಲ್ಲೆಯ ಮತದಾರರೊಂದಿಗೆ ನೇರವಾದ ಒಡನಾಟ ಇಲ್ಲದಿರುವುದು

• ಬಾಲಚಂದ್ರ ಎಚ್.
• ವಿಜಯಕುಮಾರ್ ಎಸ್.ಕೆ.

ಉಡುಪಿ/ಚಿಕ್ಕಮಗಳೂರು: ಕರಾವಳಿ ಹಾಗೂ ಮಲೆನಾಡಿನ ತಲಾ ನಾಲ್ಕು ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿರುವ ಉಡುಪಿ–ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಮಧ್ಯೆ ನೇರ ಹಣಾಹಣಿ ಏರ್ಪಟ್ಟಿದೆ.

ಉಡುಪಿ–ಚಿಕ್ಕಮಗಳೂರು

25 ವರ್ಷಗಳ ಹಿಂದೆ ಬ್ರಹ್ಮಾವರ ವಿಧಾನಸಭಾ ಕ್ಷೇತ್ರದಲ್ಲಿ ಎದುರಾಳಿಗಳಾಗಿದ್ದ ಕೆ.ಜಯಪ್ರಕಾಶ್ ಹೆಗ್ಡೆ ಹಾಗೂ ಕೋಟ ಶ್ರೀನಿವಾಸ ಪೂಜಾರಿ ಈಗ ಲೋಕಸಭೆ ಅಖಾಡದಲ್ಲಿ ಮುಖಾಮುಖಿಯಾಗಿದ್ದಾರೆ. ಈ ಚುನಾವಣೆ ‘ಸಜ್ಜನ’ರ ನಡುವಿನ ಕಾದಾಟ ಎಂದೇ ಬಿಂಬಿತವಾಗಿದೆ.

ಉಡುಪಿ ಜಿಲ್ಲೆಯ ಕಾಪು, ಕುಂದಾಪುರ, ಉಡುಪಿ, ಕಾರ್ಕಳ ಕ್ಷೇತ್ರದಲ್ಲಿ ಬಿಜೆಪಿ ಶಾಸಕರಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ, ಮೂಡಿಗೆರೆ, ಚಿಕ್ಕಮಗಳೂರು, ತರೀಕೆರೆ ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರಿದ್ದಾರೆ.

ಎಚ್ಚರಿಕೆಯ ನಡೆ: ಸತತ ಎರಡು ಬಾರಿ ಗೆದ್ದಿದ್ದ ಶೋಭಾ ಕರಂದ್ಲಾಜೆ ಈ ಬಾರಿಯೂ ಸ್ಪರ್ಧೆಗೆ ಒಲವು ತೋರಿದಾಗ ಭುಗಿಲೆದ್ದ ಕಾರ್ಯಕರ್ತರ ಅಸಮಾಧಾನವನ್ನು ತಣಿಸುವಲ್ಲಿ ಯಶಸ್ವಿಯಾಗಿರುವ ಬಿಜೆಪಿ, ಕೋಟ ಶ್ರೀನಿವಾಸ ಪೂಜಾರಿ ಅವರನ್ನು ಕಣಕ್ಕಿಳಿಸಿ ಎಚ್ಚರಿಕೆಯ ನಡೆ ಇಟ್ಟಿದೆ. ಸಿ.ಟಿ.ರವಿ ಬೆಂಬಲಿಗರನ್ನೂ ಸುಮ್ಮನಾಗಿಸಿದೆ. ಬಿಜೆಪಿ ದಾಳಕ್ಕೆ ಪ್ರತಿ ದಾಳವಾಗಿ ಕಾಂಗ್ರೆಸ್ ಕೂಡ ಬಿಜೆಪಿಯಲ್ಲಿದ್ದ ಕೆ.ಜಯಪ್ರಕಾಶ್ ಹೆಗ್ಡೆ ಅವರನ್ನೇ ಪಕ್ಷಕ್ಕೆ ಸೆಳೆದು ಟಿಕೆಟ್ ನೀಡಿದೆ.

ಹೆಗ್ಡೆ ಬಂಟ ಸಮುದಾಯದವರಾದರೆ, ಪೂಜಾರಿ ಬಿಲ್ಲವ ಸಮುದಾಯದವರು. ಇಬ್ಬರೂ ಉಡುಪಿ ಜಿಲ್ಲೆಯವರು. ಚಿಕ್ಕಮಗಳೂರು ಜಿಲ್ಲೆಯ ಮಟ್ಟಿಗೆ ಇಬ್ಬರೂ ‘ಹೊರಗಿನವರು’. ಇಬ್ಬರೂ ಅಭ್ಯರ್ಥಿಗಳು ಉತ್ತಮರೇ ಎಂಬ ಅಭಿಪ್ರಾಯ ಕ್ಷೇತ್ರದ ಬಹುತೇಕ ಕಡೆ ಕೇಳಿಬರುತ್ತಿದೆ.

ಪೂಜಾರಿ ಅವರು ‘ಹಿಂದುತ್ವ’ ಹಾಗೂ ‘ಮೋದಿ’ ಮುಖವನ್ನು ತೋರಿಸಿ ಮತಯಾಚಿಸುತ್ತಿದ್ದರೆ, ಹೆಗ್ಡೆ ತಾವು ಶಾಸಕ, ಸಚಿವ ಹಾಗೂ ಸಂಸದರಾಗಿದ್ದ ಅವಧಿಯಲ್ಲಿ ಮಾಡಿದ ಅಭಿವೃದ್ಧಿ ಕಾರ್ಯಗಳು ಹಾಗೂ ಕಾಂಗ್ರೆಸ್ ಗ್ಯಾರಂಟಿಗಳನ್ನು ಮುಂದಿಟ್ಟುಕೊಂಡು ಮತ ಕೇಳುತ್ತಿದ್ದಾರೆ. ಕ್ಷೇತ್ರದಲ್ಲಿ ಹಿಂದುತ್ವ ವರ್ಸಸ್ ಗ್ಯಾರಂಟಿಗಳ ಮಧ್ಯೆ ಹಣಾಹಣಿ ನಡೆಯುತ್ತಿರುವಂತೆ ಕಾಣುತ್ತಿದೆ.

ಜೆಡಿಎಸ್– ಬಿಜೆಪಿ ಮೈತ್ರಿ ಚಿಕ್ಕಮಗಳೂರಿನಲ್ಲಿ ಪರಿಣಾಮ ಬೀರುವ ಸಾಧ್ಯತೆ ಉಂಟು. ಕಾಂಗ್ರೆಸ್‌ಗೆ ಎಡಪಕ್ಷಗಳ ಬೆಂಬಲ ಪ್ಲಸ್ ಪಾಯಿಂಟ್.

ಯಾರ ಬಲೆಗೆ ಮೀನುಗಾರರು: ಉಡುಪಿ ಜಿಲ್ಲೆಯಲ್ಲಿ ಮೊಗವೀರ (ಮೀನುಗಾರರು) ಪ್ರಬಲ ಸಮುದಾಯ. ಶೋಭಾ ಕರಂದ್ಲಾಜೆ ಬದಲಾಗಿ ಮೊಗವೀರ ಸಮುದಾಯದ ಪ್ರಮೋದ್ ಮಧ್ವರಾಜ್‌ಗೆ ಟಿಕೆಟ್ ನೀಡುವಂತೆ ಈಚೆಗೆ ಪಟ್ಟು ಹಿಡಿದಿದ್ದ ಮೀನುಗಾರರ ಮುಖಂಡರು, ಶೋಭಾಗೆ ಟಿಕೆಟ್ ಕೈತಪ್ಪಿದ ಬಳಿಕ ತಟಸ್ಥರಾಗಿದ್ದು ಯಾರ ಕಡೆಗೆ ವಾಲುತ್ತಾರೆ ಎಂಬುದು ಕುತೂಹಲ. ಮತ್ತೊಂದೆಡೆ, ಬಿಜೆಪಿಯ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದ ಪ್ರಮೋದ್ ಮಧ್ವರಾಜ್‌ರನ್ನು ಲೋಕಸಭಾ ಕ್ಷೇತ್ರದ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷರನ್ನಾಗಿ ಮಾಡುವ ಮೂಲಕ ವರಿಷ್ಠರು ಬಂಡಾಯ ಶಮನ ಯತ್ನ ಮಾಡಿದ್ದಾರೆ. ಆದರೆ, ಅವರು ಒಳ ಏಟು ಕೊಟ್ಟರೆ ಬಿಜೆಪಿಗೆ ಅಡ್ಡಿಯಾಗಬಹುದು ಎಂಬ ಮಾತುಗಳು ಪಕ್ಷದ ಪಡಸಾಲೆಯಲ್ಲಿ ಕೇಳಿಬರುತ್ತಿವೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಲಿಂಗಾಯತ, ಒಕ್ಕಲಿಗ, ಪರಿಶಿಷ್ಟ ಜಾತಿ ಮತ್ತು ಪಂಗಡ, ಕುರುಬ, ಮುಸ್ಲಿಂ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಲಿಂಗಾಯತ ಮತದಾರರನ್ನು ಸೆಳೆಯಲು ಯಡಿಯೂರಪ್ಪ ಯತ್ನ ನಡೆಸಿದ್ದಾರೆ. ಒಕ್ಕಲಿಗರನ್ನು ಸಮಾಧಾನ ಮಾಡಲು ಸಿ.ಟಿ.ರವಿ ಬಗ್ಗೆಯೂ ಮೃದುತ್ವ ತೋರಿಸಿದ್ದಾರೆ. ಇತ್ತ ಕುರುಬ, ಒಕ್ಕಲಿಗರ ಮತ ಸೆಳೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಯತ್ನ ನಡೆಸಿದ್ದಾರೆ. ❖

ಒಳೇಟು ತಪ್ಪಿಸಿಕೊಂಡವರೇ ಜಯಶಾಲಿ!

• ಕೆ.ಓಂಕಾರ ಮೂರ್ತಿ

ಕೋಲಾರ: ‘ನಮ್ಮೂರಿಗೆ ಪ್ರಚಾರಕ್ಕೆ ಯಾರೂ ಬಂದಿಲ್ಲ. ಅಭ್ಯರ್ಥಿಗಳ ಮುಖವನ್ನೇ ನೋಡಿಲ್ಲ. ಹಿಂದೆ ಗೆದ್ದವರು ಅಭಿವೃದ್ಧಿ ಮಾಡಿಲ್ಲ; ಮುಂದೆ ಗೆಲ್ಲುವವರು ಅಭಿವೃದ್ಧಿ ಮಾಡುವ ಭರವಸೆ ಇಲ್ಲ’ ಎಂದು ಗೊಣಗುತ್ತಲೇ ಶ್ರೀನಿವಾಸಪುರ ತಾಲ್ಲೂಕಿನ ರಾಯಲ್ಪಾಡಿನ ರೈತ ಬಸಪ್ಪರೆಡ್ಡಿ ಬಿಸಿಲಿನ ಧಗೆಯಲ್ಲಿ ತಮ್ಮ ಮಾವಿನ ತೋಟದತ್ತ ಹೊರಟರು.

ಬಿಸಿಲು ಹೆಚ್ಚಿರುವುದರಿಂದ ಈ ಬಾರಿ ಮಾವಿನ ಫಸಲು ಹೇಗೋ ಏನೋ ಎಂಬ ಚಿಂತೆ ಅವರದ್ದು. ಮಾವು ಸಂಸ್ಕರಣಾ ಘಟಕ ಸ್ಥಾಪಿಸಲು ಯಾರಿಂದಲೂ ಸಾಧ್ಯವಾಗಿಲ್ಲ, ಇನ್ನು ಇವರ ಸಹವಾಸ ಯಾರಿಗೆ ಬೇಕು ಎಂಬ ಕೋಪ ಬೇರೆ.

ಏಷ್ಯಾದ ಎರಡನೇ ಅತಿ ದೊಡ್ಡ ಟೊಮೆಟೊ ಮಾರುಕಟ್ಟೆ ಎನಿಸಿರುವ ಕೋಲಾರದ ಎಪಿಎಂಸಿಗೆ ಹೋಗಿ ಚುನಾವಣೆ ಪ್ರಸ್ತಾಪ ಮಾಡಿದರೆ ರೈತರು, ವರ್ತಕರು ಗರಂ ಆಗುತ್ತಾರೆ. ‘ಟೊಮೆಟೊ ಮಾರುಕಟ್ಟೆ ಕಿಷ್ಕಿಂಧೆ ಆಗಿದೆ. 30 ವರ್ಷದಿಂದ ಮಾರುಕಟ್ಟೆಗೆ ಜಾಗ ಕಲ್ಪಿಸಲು ಯೋಗ್ಯತೆ ಇಲ್ಲದ ಪಕ್ಷಗಳ ಹೆಸರೆತ್ತಬೇಡಿ’ ಎನ್ನುತ್ತಲೇ ಟೊಮೆಟೊ ಹರಾಜಿನತ್ತ ಚಿತ್ತ ಹರಿಸಿದರು.

ಯಾವುದೇ ಹಳ್ಳಿಗೆ ಹೋಗಿ ಯಾರನ್ನೇ ಮಾತನಾಡಿಸಿದರೂ ಒಂದಿಲ್ಲೊಂದು ಸಮಸ್ಯೆ ಎತ್ತಿ

ಬಿಜೆಪಿಗೆ ಅನಾಥ ಭಾವ!

ಲೋಕಸಭೆ ಚುನಾವಣೆ ಇತಿಹಾಸದಲ್ಲಿ 2019ರಲ್ಲಿ ಮೊಟ್ಟಮೊದಲ ಬಾರಿ ಕೋಲಾರ ಮೀಸಲು ಕ್ಷೇತ್ರ ಗೆದ್ದುಕೊಂಡಿದ್ದ ಬಿಜೆಪಿಗೆ ಈ ಬಾರಿ ಟಿಕೆಟ್ ಕೈತಪ್ಪಿರುವುದು ಕ್ಷೇತ್ರದ ಕಾರ್ಯಕರ್ತರಲ್ಲಿ ಅನಾಥ ಭಾವ ಮೂಡಿಸಿದಂತಿದೆ.

ಕೋಲಾರ

ರಾಜಕೀಯ ಪಕ್ಷಗಳನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಪರಸ್ಪರ ವಾಗ್ದಾಳಿ, ನಿಂದನೆ, ಪಕ್ಷದೊಳಗಿನ ಗೊಂದಲದಿಂದ ಈ ಬಾರಿಯ ಕ್ಷೇತ್ರದ ಅಭಿವೃದ್ಧಿ ವಿಚಾರ ತೆರೆಯ ಮರೆಗೆ ಸರಿದಿದೆ.

ಕ್ಷೇತ್ರದ ಮತದಾರರು ಮೂರೂ ಪಕ್ಷಗಳಲ್ಲಿನ ಕಿತ್ತಾಟದ ಬಗ್ಗೆಯೇ ಹೆಚ್ಚು ಚರ್ಚೆಯಲ್ಲಿ ತೊಡಗಿದ್ದಾರೆ. ಸಚಿವ ಕೆ.ಎಚ್.ಮುನಿಯಪ್ಪ ಕೋಪ ಹಾಗೂ ಬಿಜೆಪಿ ಮುಖಂಡರ ಮನಸ್ತಾಪ ಚರ್ಚೆಯ ಮುಖ್ಯ ವಸ್ತು. ಹೆಚ್ಚಿನವರಿಗೆ ಕ್ಷೇತ್ರದ ಅಭ್ಯರ್ಥಿಗಳ ಹೆಸರು, ಅವರ ಮುಖ ಪರಿಚಯವೇ ಇಲ್ಲ!

ಕಾಂಗ್ರೆಸ್ ಅಭ್ಯರ್ಥಿ ಘೋಷಣೆ ವಿಚಾರ, ಬಣ ಜಗಳ, ಶಾಸಕರ ರಾಜೀನಾಮೆ ಪ್ರಹಸನ ಸದ್ದು ಮಾಡಿತು. ಎರಡೂ ಬಣಗಳ ಸಹವಾಸವೇ ಬೇಡವೆಂದು ಮೂರನೇ ಅಭ್ಯರ್ಥಿಗೆ ಟಿಕೆಟ್ ನೀಡಿದರೂ ಅಸಮಾಧಾನಕ್ಕೆ ತೆರೆ ಬಿದ್ದಿಲ್ಲ.

ಇನ್ನು ಕೋಲಾರ ಕ್ಷೇತ್ರವನ್ನು ಜೆಡಿಎಸ್‌ಗೆ ಪಡೆದುಕೊಳ್ಳಲು ಎಚ್.ಡಿ.ಕುಮಾರಸ್ವಾಮಿ ಸಾಹಸ ಮಾಡಬೇಕಾಯಿತು. ಕಳೆದ ಬಾರಿ ಗೆದ್ದಿದ್ದ ಕ್ಷೇತ್ರವನ್ನೇ ಬಿಜೆಪಿ ತ್ಯಾಗ ಮಾಡಿತು. ಬಿಜೆಪಿಯೊಳಗಿನ ಮನಸ್ತಾಪ, ಹಾಲಿ ಸಂಸದ ಎಸ್.ಮುನಿಸ್ವಾಮಿ ಮೇಲೆ ಪಕ್ಷದ ಕೆಲ ಮುಖಂಡರಿಗೆ ಇರುವ ಕೋಪ ಇನ್ನೂ ಶಮನಗೊಂಡಿಲ್ಲ. ಎಷ್ಟೇ ಹೋರಾಟ ನಡೆಸಿದರೂ ತಮ್ಮ ಅಳಿಯ ಚಿಕ್ಕಪೆದ್ದಣ್ಣ ಅವರಿಗೆ ಟಿಕೆಟ್ ಕೊಡಿಸಲಾಗದ ಮುನಿಯಪ್ಪ ಅಸಮಾಧಾನ ಕಾಂಗ್ರೆಸ್ ಅಭ್ಯರ್ಥಿ ಕೆ.ವಿ.ಗೌತಮ್ ಅವರಿಗೆ ಯಾವ ರೀತಿ ಒಳೇಟು ನೀಡಬಹುದು? ಜೆಡಿಎಸ್ ಅಭ್ಯರ್ಥಿ ಎಂ.ಮಲ್ಲೇಶ್ ಬಾಬು ಅವರಿಗೆ ಕ್ಷೇತ್ರದ ಟಿಕೆಟ್ ಬಿಟ್ಟುಕೊಟ್ಟಿರುವುದರಿಂದ ಮುಂದೆ ತಮ್ಮ ಅಸ್ಮಿತೆಗೆ ಎಲ್ಲಿ ಧಕ್ಕೆ ಉಂಟಾಗಬಹುದೆಂಬ ಆತಂಕದಲ್ಲಿರುವ 2028ರ ವಿಧಾನಸಭೆ ಚುನಾವಣೆಯ ಬಿಜೆಪಿ ಟಿಕೆಟ್ ಆಕಾಂಕ್ಷಿಗಳು ಯಾವ ರೀತಿ ಒಳೇಟು ನೀಡಬಹುದು ಎಂಬ ಚರ್ಚೆ ಚಾಲ್ತಿಯಲ್ಲಿದೆ.

ಕ್ಷೇತ್ರದಲ್ಲಿ ಮಹಿಳಾ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಒಳೇಟು ತಪ್ಪಿಸಿಕೊಂಡು, ಜಾತಿ ಲೆಕ್ಕಾಚಾರದಲ್ಲಿ ಯಶಸ್ಸು ಕಂಡು, ಮಹಿಳಾ ಮತದಾರರ ಮನಗೆಲ್ಲುವವರೇ ಕ್ಷೇತ್ರದ ಮುಂದಿನ ಸಂಸದರು! ❖

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ 77.15%



ಕ್ಷೇತ್ರವನ್ನು ಕಾಡುವ ವಿಷಯಗಳು

- ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆ ಅನುಷ್ಠಾನ ವಿಳಂಬ
- ಎಪಿಎಂಸಿ ಮಾರುಕಟ್ಟೆಗೆ ಜಾಗದ ಸಮಸ್ಯೆ
- ಸರ್ಕಾರಿ ವೈದ್ಯಕೀಯ, ಎಂಜಿನಿಯರ್ ಕಾಲೇಜು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಇಲ್ಲದಿರುವುದು
- ಕೆ.ಸಿ.ವ್ಯಾಲಿ ಮೂರನೇ ಹಂತದ ಶುದ್ಧೀಕರಣಕ್ಕೆ ನಿರ್ಲಕ್ಷ್ಯ



ಕೆ.ವಿ.ಗೌತಮ್ (ಕಾಂಗ್ರೆಸ್)

- ನುಡಿದಂತೆ ನಡೆದಿರುವ ಕಾಂಗ್ರೆಸ್ ಎಲ್ಲಾ ಗ್ಯಾರಂಟಿ ಜಾರಿ ಮಾಡಿದೆ. ಕೇಂದ್ರದಲ್ಲಿ 10 ವರ್ಷ ಆಡಳಿತ ನಡೆಸಿರುವ ಬಿಜೆಪಿ ಭರವಸೆ ಒಂದಾದರೂ ಈಡೇರಿದೆಯೇ? ಜನರನ್ನೇ ಕೇಳಿ
- ಜಿಲ್ಲೆಯ ಕಾಂಗ್ರೆಸ್‌ನಲ್ಲಿ ಉದ್ಭವಿಸಿರುವ ಎರಡೂ ಬಣಗಳಿಗೆ ಸೇರದವರು
- ಕಾಂಗ್ರೆಸ್ ಪಕ್ಷದಲ್ಲಿ ಸಂಘಟನೆಯಲ್ಲಿ ತೊಡಗಿಸಿಕೊಂಡ ಅನುಭವ
- ಕೋಲಾರ ಕ್ಷೇತ್ರದ ಹೊರಗಿನವರು ಎಂಬ ವಿಚಾರ
- ಜಿಲ್ಲಾ ಕಾಂಗ್ರೆಸ್‌ನ ಎರಡೂ ಬಣಗಳ ಮುಖಂಡರನ್ನು ಒಟ್ಟುಗೂಡಿಸುವಲ್ಲಿ ವಿಫಲ

ಎಂ.ಮಲ್ಲೇಶ್ ಬಾಬು (ಜೆಡಿಎಸ್)

- ಜನರಿಗೆ ಬೇಕಿರುವುದು ಉದ್ಯೋಗ; ಕಾಂಗ್ರೆಸ್‌ನ ಗ್ಯಾರಂಟಿ ಅಲ್ಲ. ಉದ್ಯೋಗ ಸಿಕ್ಕರೆ ನೆಮ್ಮದಿಯಿಂದ ದುಡಿದು ತಿನ್ನುತ್ತಾರೆ. ಮೋದಿ ಮತ್ತೊಮ್ಮೆ ಪ್ರಧಾನಿ ಆಗಬೇಕು
- ಬಂಗಾರಪೇಟೆ ವಿಧಾನಸಭೆ ಕ್ಷೇತ್ರದಲ್ಲಿ 2 ಬಾರಿ ಸ್ಪರ್ಧಿಸಿದ ಅನುಭವ ಹಾಗೂ ಸ್ಥಳೀಯ
- ತಾಯಿ ಮಂಗಮ್ಮ ಜಿ.ಪಂ ಅಧ್ಯಕ್ಷೆ ಆಗಿ ಕಾರ್ಯನಿರ್ವಹಿಸಿದ ಅನುಭವದ ಬಲ
- ಬಿಜೆಪಿ ಮುಖಂಡರಲ್ಲಿ ಮನಸ್ತಾಪ, ಅವರನ್ನು ವಿಶ್ವಾಸಕ್ಕೆ ಪಡೆಯಲು ಪರದಾಟ
- ಜೆಡಿಎಸ್–ಬಿಜೆಪಿ ಕಾರ್ಯಕರ್ತರನ್ನು ಒಂದುಗೂಡಿಸುವಲ್ಲಿ ವಿಫಲ

‘ಉಬ್ಬಿಸಿದ ಜಿಡಿಪಿ’ಯ ಲಾಭ–ನಷ್ಟ

ಜಿಡಿಪಿ ಲೆಕ್ಕಾಚಾರದಲ್ಲಿ ಭಾರತವು ವಿಶ್ವದ ಐದನೇ ಅತ್ಯಂತ ದೊಡ್ಡ ಆರ್ಥಿಕತೆ. ಕೇಂದ್ರ ಸರ್ಕಾರವು ನೀಡುವ ಜಿಡಿಪಿ ಅಂಕಿ–ಅಂಶಗಳ ಲೆಕ್ಕಾಚಾರದಲ್ಲಿ ಭಾರತಕ್ಕೆ ಅಂತಹ ಸ್ಥಾನ ದೊರೆತಿದೆ. ಆದರೆ ಭಾರತದ ಜಿಡಿಪಿ ನಿಜಕ್ಕೂ ಅಷ್ಟು ಪ್ರಗತಿ ಸಾಧಿಸಿದೆಯೇ ಎಂಬ ಪ್ರಶ್ನೆ ಇರಿಸಿದರೆ ಬಹುತೇಕ ಅರ್ಥಶಾಸ್ತ್ರಜ್ಞರು, ಇಲ್ಲ ಎಂದೇ ಉತ್ತರಿಸುತ್ತಾರೆ. ಕೇಂದ್ರ ಸರ್ಕಾರವು ಜಿಡಿಪಿ ಮತ್ತು ಜಿಡಿಪಿ ಬೆಳವಣಿಗೆಯನ್ನು ‘ಉಬ್ಬಿಸಿ’ ಲೆಕ್ಕಹಾಕುತ್ತಿದೆ ಎನ್ನುತ್ತಾರೆ. ಇದು ಅರ್ಥಶಾಸ್ತ್ರಜ್ಞರಿಗೆ ಬಿಟ್ಟ ವಿಚಾರ. ಜಿಡಿಪಿ ಬೆಳವಣಿಗೆ ಈ ಲೋಕಸಭಾ ಚುನಾವಣೆಯಲ್ಲಿ ಮತದಾನವನ್ನು ಪ್ರಭಾವಿಸುತ್ತದೆಯೇ ಎಂಬ ಪ್ರಶ್ನೆ ಹಾಕಿಕೊಂಡರೆ, ಹಲವು ಹಂತಗಳಲ್ಲಿ ಪ್ರಭಾವ ಬೀರುತ್ತದೆ ಎಂಬ ಉತ್ತರ ದೊರೆಯುತ್ತದೆ. ಜಿಡಿಪಿಗೆ ಸಂಬಂಧಿಸಿದ ವಿಚಾರಗಳು ಆಡಳಿತಾರೂಢ ಪಕ್ಷದ ಪರವಾಗಿಯೂ ಕೆಲಸ ಮಾಡುತ್ತವೆ ಮತ್ತು ವಿರುದ್ಧವಾಗಿಯೂ ಕೆಲಸ ಮಾಡುತ್ತವೆ

• ಜಯಸಿಂಹ ಆರ್.

ಜಿಡಿಪಿ ಏರಿಕೆ ಲೆಕ್ಕಾಚಾರ ಬದಲು



ವರ್ಷ	ಮೂಲ ಜಿಡಿಪಿ ಬೆಳವಣಿಗೆ ದರ	ಬದಲಿಸಿದ ನಂತರದ ಅಂದಾಜು
2001	4.8%	4.8%
2002	3.8%	3.8%
2003	7.9%	7.9%
2004	7.9%	7.9%
2005	9.3%	7.9%
2006	9.3%	8.1%
2007	9.8%	7.7%
2008	3.9%	3.1%
2009	8.5%	7.9%
2010	10.3%	8.5%
2011	6.6%	5.2%
2012	5.5%	5.5%
2013	6.4%	6.4%
2014	7.4%	7.4%
2015	8.2%	8%
2016	7.1%	8.2%
2017	6.6%	7.2%

ಕೇಂದ್ರ ಸರ್ಕಾರದ ಲೆಕ್ಕಾಚಾರಗಳ ಪ್ರಕಾರ 2023–24ನೇ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿಯು (ಒಟ್ಟು ದೇಶೀಯ ಉತ್ಪಾದನೆ), 2022–23ನೇ ಸಾಲಿಗೆ ಹೋಲಿಸಿದರೆ ಶೇ 7.6ರಷ್ಟು ಬೆಳವಣಿಗೆ ಸಾಧಿಸಿತ್ತು. ಅದು ಆ ಅವಧಿಯಲ್ಲಿ ವಿಶ್ವದ ಬಹುತೇಕ ಎಲ್ಲಾ ಆರ್ಥಿಕತೆಗಳಿಗಿಂತ ಹೆಚ್ಚಿನ ಬೆಳವಣಿಗೆ ದರ. ನಮ್ಮ ಆರ್ಥಿಕತೆ ವಿಶ್ವದ ಬೇರೆಲ್ಲಾ ದೇಶಗಳ ಆರ್ಥಿಕತೆಗಿಂತ ಉತ್ತಮ ಸ್ಥಿತಿಯಲ್ಲಿದೆ. ದೇಶವು ಪ್ರಗತಿಯತ್ತ ಸಾಗುತ್ತಿದೆ ಎಂದು ಆಡಳಿತಾರೂಢ ಬಿಜೆಪಿಯ ನಾಯಕರು ಪದೇ–ಪದೇ ಹೇಳುತ್ತಲೇ ಇದ್ದಾರೆ. ಕೇಂದ್ರ ಸರ್ಕಾರವು ಈ ಬಾರಿಯ ಬಜೆಟ್ ಅಧಿವೇಶನದಲ್ಲಿ ಹೊರಡಿಸಿದ ಶ್ವೇತಪತ್ರದಲ್ಲೂ ಈ ವಿಚಾರಗಳನ್ನು ಉಲ್ಲೇಖಿಸಿತ್ತು. ಈಗ ಲೋಕಸಭಾ ಚುನಾವಣೆಯ ಪ್ರಚಾರದಲ್ಲೂ ಬಿಜೆಪಿ ನಾಯಕರು ಈ ಮಾತುಗಳನ್ನು ಆಡುತ್ತಿದ್ದಾರೆ. ಹೀಗಾಗಿ ಈ ವಿಚಾರವು ಮತದಾನವನ್ನು ಪ್ರಭಾವಿಸುತ್ತದೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ.

ಸರ್ಕಾರವು ಹೇಳುತ್ತಿರುವ ಈ ಅಂಕಿಅಂಶಗಳನ್ನು ಅರ್ಥಶಾಸ್ತ್ರಜ್ಞರು ಅನುಮಾನದಿಂದಲೇ ನೋಡುತ್ತಾರೆ. ಏಕೆಂದರೆ ಜಿಡಿಪಿ ಲೆಕ್ಕಾಚಾರ ವಿಧಾನ ಮತ್ತು ಸೂತ್ರಗಳನ್ನು 2015ರಲ್ಲಿ ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರವು ಬದಲಾಯಿಸಿತ್ತು. ಈ ವಿಧಾನವನ್ನು ಬದಲಾಯಿಸಿದ್ದು ಮಾತ್ರವಲ್ಲ, ಅದರ ಜತೆಯಲ್ಲಿ ಅದಕ್ಕೂ ಹಿಂದಿನ 15 ವರ್ಷಗಳ ಜಿಡಿಪಿ ಬೆಳವಣಿಗೆ ದರವನ್ನು ಮರುಲೆಕ್ಕಾಚಾರ ಮಾಡಿತು. ಯುಪಿಎ ಅವಧಿಯ ಜಿಡಿಪಿ ಬೆಳವಣಿಗೆ ದರವನ್ನು ಕಡಿಮೆ ಮಾಡಿತು. ಈ ಬಗ್ಗೆ ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದರೂ, ಅದು ಹೆಚ್ಚು ಸದ್ದು ಮಾಡಲಿಲ್ಲ.

ಈ ಮೊದಲು ಕೇಂದ್ರ ಸರ್ಕಾರದ್ದೇ ಸಂಸ್ಥೆಗಳು ಒದಗಿಸುತ್ತಿದ್ದ ವಾರ್ಷಿಕ ಕೈಗಾರಿಕಾ ಸಮೀಕ್ಷೆ ವರದಿ ದತ್ತಾಂಶಗಳು, ಕಂಪನಿ ಖಾತಾ ದತ್ತಾಂಶಗಳನ್ನು ಆಧರಿಸಿ ದೇಶದ ಜಿಡಿಪಿಯನ್ನು ಲೆಕ್ಕಹಾಕಲಾಗುತ್ತಿತ್ತು. ಆದರೆ ಬದಲಾದ ವಿಧಾನದಲ್ಲಿ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಒದಗಿಸುವ ಸುಮಾರು 6 ಲಕ್ಷ ಕಂಪನಿಗಳ ಹಣಕಾಸು ದತ್ತಾಂಶಗಳನ್ನು ಆಧರಿಸಿ ಜಿಡಿಪಿಯನ್ನು ಲೆಕ್ಕಹಾಕಲಾಗುತ್ತಿದೆ. ಇದು ದೇಶದ ಆರ್ಥಿಕತೆಯ ಪೂರ್ಣ ಚಿತ್ರಣ ನೀಡುವುದಿಲ್ಲ. ಜತೆಗೆ ನೈಜ ಬೆಲೆಗಿಂತ ಮೌಲ್ಯವರ್ಧಿತ ಬೆಲೆಯನ್ನು ಪರಿಗಣಿಸುವುದರಿಂದ ಜಿಡಿಪಿ ತೀವ್ರಮಟ್ಟದಲ್ಲಿ ಏರಿಕೆಯಾದಂತೆ ಕಾಣುತ್ತದೆ. ಆದರೆ ವಾಸ್ತವದಲ್ಲಿ, ಸರ್ಕಾರ ಹೇಳುತ್ತಿರುವುದಕ್ಕಿಂತ ಅರ್ಧದಷ್ಟು ಕಡಿಮೆ ಮಟ್ಟದಲ್ಲಿ ಜಿಡಿಪಿ ಬೆಳವಣಿಗೆ ಕಾಣುತ್ತಿದೆ. ಜಿಡಿಪಿ ಬೆಳವಣಿಗೆಯನ್ನು ಸರ್ಕಾರವು ಉಬ್ಬಿಸಿ ಹೇಳುತ್ತಿದೆ ಎಂದು ಅರ್ಥಶಾಸ್ತ್ರಜ್ಞ ಅರವಿಂದ ಸುಬ್ರಮಣಿಯನ್ ಹೇಳಿದ್ದಾರೆ.

ಆದರೆ ಜಿಡಿಪಿ ಲೆಕ್ಕಾಚಾರದ ಈ ಸಂಕೀರ್ಣತೆಯನ್ನು ಸಾಮಾನ್ಯ ಮತದಾರರಿಗೆ ವಿವರಿಸಿ ಹೇಳುವವರು ಯಾರು? ಸಾಮಾನ್ಯ ಮತದಾರರನ್ನು ಪ್ರಶ್ನಿಸಿದರೆ ದೇಶದ ಜಿಡಿಪಿ ಏರಿಕೆಯಾಗುತ್ತಿದೆ. ಭಾರತವು ವಿಶ್ವದ ಐದನೇ ದೊಡ್ಡ ಆರ್ಥಿಕತೆಯಾಗಿದೆ ಎಂದು ಹೇಳುತ್ತಾರೆ. ಸರ್ಕಾರ ಹೇಳುವ ಈ ಮಾತು ಮಾಧ್ಯಮಗಳು ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಮತದಾರರವರೆಗೆ ತಲುಪುತ್ತಿದೆ. ಸ್ಮಾರ್ಟ್‌ಫೋನ್ ಬಳಕೆ ಹೆಚ್ಚಿರುವ ಮತ್ತು ಇನ್ನೂ ವಿದ್ಯಾಭ್ಯಾಸದ ಹಂತದಲ್ಲಿರುವ ಮೊದಲ ಬಾರಿಯ ಮತದಾರರು ಇವನ್ನು ನಂಬುವ ಸಾಧ್ಯತೆ ಹೆಚ್ಚೇ ಇದೆ. ಈ ಮತದಾರರು ಜಿಡಿಪಿ ಪ್ರಗತಿ ಸಾಧಿಸುತ್ತಿದೆ ಎಂದೇ ಭಾವಿಸಿ ಮತವನ್ನು ನಿರ್ಣಯಿಸುವ ಸಾಧ್ಯತೆ ಅತ್ಯಧಿಕವಾಗಿರುತ್ತದೆ. ಜಿಡಿಪಿ ಪ್ರಗತಿ ಸಾಧಿಸುತ್ತಿದೆ ಎಂಬ ಸರ್ಕಾರದ ಘೋಷಣೆಗಳು ಮತ್ತು ವರದಿಗಳು ಇಷ್ಟರಮಟ್ಟಿಗೆ ಅದರ ಪರವಾಗಿ ಮತದಾನವನ್ನು ಪ್ರಭಾವಿಸುತ್ತದೆ.

ಜಿಡಿಪಿ ಬೆಳವಣಿಗೆಯಾಗುತ್ತಿದೆಯೇ ಇಲ್ಲವೇ ಎಂಬುದನ್ನು ಹಸಿವಿನ ಸೂಚ್ಯಂಕ, ಜನರ ಜೀವನಮಟ್ಟ ಮತ್ತು ಉದ್ಯೋಗ ಸೃಷ್ಟಿಯು ಸೂಚಿಸುತ್ತದೆ. ಜಿಡಿಪಿ ಹೆಚ್ಚಾಗಿದ್ದರೆ ಹಸಿವಿನ ಸೂಚ್ಯಂಕದಲ್ಲಿ ದೇಶದ ಸ್ಥಿತಿ ಸುಧಾರಿಸಬೇಕು, ಜನರ ಜೀವನಮಟ್ಟ ಸುಧಾರಿಸಬೇಕು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಸೃಷ್ಟಿಯಾಗಬೇಕು. ಆದರೆ ಈ ಯಾವುವೂ ವಾಸ್ತವದಲ್ಲಿ ಜಿಡಿಪಿ ಬೆಳವಣಿಗೆಯ ದರದೊಂದಿಗೆ ತಾಳೆಯಾಗುತ್ತಿಲ್ಲ. ಅಂದರೆ ಜಿಡಿಪಿ ಬೆಳವಣಿಗೆ ದರದಲ್ಲಿ ಸಮಸ್ಯೆ ಇದೆ ಎಂಬುದನ್ನು ಇದು ಸೂಚಿಸುತ್ತದೆ. ಈ ಸರ್ಕಾರದ ಅವಧಿಯಲ್ಲಿ ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತವು 107ರಿಂದ 111ನೇ ಸ್ಥಾನಕ್ಕೆ ಕುಸಿದಿದೆ. ದೇಶದ ಜನರಿಗೆ ಪೌಷ್ಟಿಕಾಂಶಯುಕ್ತ ಆಹಾರ ದೊರೆಯುತ್ತಿಲ್ಲ ಎಂಬುದನ್ನು ಇದು ಸೂಚಿಸುತ್ತದೆ. ಅದೇ ರೀತಿ ಭಾರತದ ವಿದ್ಯಾವಂತ ಯುವಜನರಲ್ಲಿ ಶೇ 67ರಷ್ಟು ಮಂದಿ ನಿರುದ್ಯೋಗಿಗಳಾಗಿದ್ದಾರೆ ಎಂದು ಈಚೆಗಷ್ಟೇ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ ತನ್ನ ವರದಿಯಲ್ಲಿ ಹೇಳಿತ್ತು. ಜಿಡಿಪಿ ಉತ್ತಮ ಮಟ್ಟದಲ್ಲಿ ಪ್ರಗತಿ ಸಾಧಿಸಿದ್ದರೆ, ಉದ್ಯೋಗ ಸೃಷ್ಟಿಯಾಗಬೇಕಿತ್ತಲ್ಲವೇ? ಬದಲಿಗೆ ದೇಶದಲ್ಲಿ ನಿರುದ್ಯೋಗದ ಪ್ರಮಾಣ ಹೆಚ್ಚಾಗಿದೆ. ಈ ಎಲ್ಲಾ ಅಂಶಗಳು ಪ್ರಸಕ್ತ ಸರ್ಕಾರದ ವಿರುದ್ಧ ಚುನಾವಣೆಯಲ್ಲಿ ಪ್ರಭಾವ ಬೀರುವ ಸಾಧ್ಯತೆ ಅತ್ಯಧಿಕವಾಗಿರುತ್ತದೆ.

ಜಿಡಿಪಿ ಏರಿಕೆಯಾಗಿದೆ ಎಂದು ನಂಬಿ ಮತದಾನ ಮಾಡುವವರ ಪ್ರಮಾಣ ಕಡಿಮೆ ಇದ್ದರೆ, ಆರ್ಥಿಕತೆಯ ಕುಂಠಿತ ಪ್ರಗತಿಯ ಪರಿಣಾಮಗಳನ್ನು ಎದುರಿಸುತ್ತಿರುವವರ ಪ್ರಮಾಣ ಅತ್ಯಧಿಕ. ಆ ಬಹುಜನರು ತಮ್ಮ ಮತನಿರ್ಣಯ ಮಾಡುವಾಗ ಬೆಲೆ ಏರಿಕೆ, ಆಹಾರ ಲಭ್ಯತೆ, ಆರೋಗ್ಯ ಸೇವೆ, ನಿರುದ್ಯೋಗ ಮೊದಲಾದ ಅಂಶಗಳನ್ನು ಪರಿಗಣಿಸುವ ಸಾಧ್ಯತೆ ಇದ್ದೇ ಇರುತ್ತದೆ. ಅವು ಮತದಾನದ ದಿಕ್ಕನ್ನು ಬದಲಿಸಬಹುದು. ❖

ಪ್ರಚಾರ

ಗೃಹ ಸಚಿವ ಅಮಿತ್ ಶಾ ಅವರು ಮಣಿಪುರದ ಇಂಫಾಲ್‌ನಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡರು. ಮಣಿಪುರ ಮುಖ್ಯಮಂತ್ರಿ ಬೀರೇನ್ ಸಿಂಗ್ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಮೋದಿ–ರಾಹುಲ್ ಮಾತಿನ ಸಮರ

ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಕೇರಳದ ತಿರುವನಂತಪುರ ಮತ್ತು ತ್ರಿಶ್ಶೂರ್‌ನಲ್ಲಿ ಪ್ರಚಾರ ಸಭೆಗಳಲ್ಲಿ ಪಾಲ್ಗೊಂಡರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ತಾವು ಪ್ರತಿನಿಧಿಸುತ್ತಿರುವ ವಯನಾಡ್ ಕ್ಷೇತ್ರದಲ್ಲಿ ರೋಡ್ ಶೋ ನಡೆಸಿದರು

‘ಸಾಂವಿಧಾನಿಕ ಸಂಸ್ಥೆಗಳು ಪ್ರಧಾನಿ ಮೋದಿ ಸ್ವಂತ ಆಸ್ತಿಯಲ್ಲ’



ರಾಹುಲ್ ಗಾಂಧಿ

ವಯನಾಡ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ‘ದೇಶದ ಸಾಂವಿಧಾನಿಕ ಸಂಸ್ಥೆಗಳು ಮೋದಿ ಅವರ ಸ್ವಂತ ಆಸ್ತಿಯಲ್ಲ. ಅವುಗಳು ಭಾರತದ ಪ್ರತಿಯೊಬ್ಬ ಪ್ರಜೆಗೂ ಸೇರಿದ್ದು’ ಎಂದು ಹೇಳಿದ್ದಾರೆ.

ಕೇಂದ್ರದ ಆಡಳಿತಾರೂಢ ಬಿಜೆಪಿಯು ದೇಶದ ಎಲ್ಲಾ ಸಾಂವಿಧಾನಿಕ ಸಂಸ್ಥೆಗಳನ್ನು ತನ್ನ ಕೈವಶಮಾಡಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದ ರಾಹುಲ್, ಮುಂಬರುವ ಲೋಕಸಭಾ ಚುನಾವಣೆಯು ಸಂವಿಧಾನವನ್ನು ರಕ್ಷಿಸಲು ಬಯಸುವವರು ಮತ್ತು ಅದನ್ನು ನಾಶಮಾಡಲು ಹೊರಟಿರುವವರ ನಡುವಣ ಹೋರಾಟವಾಗಿದೆ ಎಂದರು. ವಯನಾಡ್ ಕ್ಷೇತ್ರದ ವೆಳ್ಳಮುಂಡದಲ್ಲಿ ರೋಡ್ ಶೋ ನಡೆಸಿದ ಅವರು, ಚುನಾವಣಾ ಆಯೋಗ, ನ್ಯಾಯಾಂಗ, ಸಿಬಿಐ, ಇ.ಡಿ, ಆದಾಯ ತೆರಿಗೆ ಇಲಾಖೆ ಅಲ್ಲದೆ ಸರ್ಕಾರದ ಇತರ ಉನ್ನತ ಹುದ್ದೆಗಳಲ್ಲಿ ತಮ್ಮವರನ್ನು ನೇಮಿಸಿಕೊಳ್ಳುವ ಮೂಲಕ ಆರ್‌ಎಸ್‌ಎಸ್‌ನ-ವರು ಇಡೀ ವ್ಯವಸ್ಥೆಯನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

‘ಅಮೇಠಿ ಕ್ಷೇತ್ರ ಉಳಿಸಲಾಗದೆ ಕೇರಳಕ್ಕೆ ಬಂದ ಕಾಂಗ್ರೆಸ್‌ನ ಯುವರಾಜ’

ನರೇಂದ್ರ ಮೋದಿ

ತಿರುವನಂತಪುರ/ ತ್ರಿಶ್ಶೂರ್ (ಪಿಟಿಐ): ಕಾಂಗ್ರೆಸ್ ಮತ್ತು ಸಿಪಿಎಂ ವಿರುದ್ಧ ಹರಿಹಾಯ್ದ ಪ್ರಧಾನಿ ನರೇಂದ್ರ ಮೋದಿ ಅವರು, ‘ಉತ್ತರ ಪ್ರದೇಶದ ತನ್ನ ಕುಟುಂಬದ ಕ್ಷೇತ್ರವನ್ನು (ಅಮೇಠಿ) ಉಳಿಸಿಕೊಳ್ಳಲಾಗದ ಕಾಂಗ್ರೆಸ್‌ನ ‘ಯುವರಾಜ’, ಮತ ಗಳಿಕೆಗಾಗಿ ಕೇರಳಕ್ಕೆ ಬಂದಿದ್ದಾರೆ’ ಎಂದು ವ್ಯಂಗ್ಯವಾಡಿದರು.

ಆಲತ್ತೂರು ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಕುನ್ನಂ-ಕುಳಂನಲ್ಲಿ ಪ್ರಚಾರ ಸಭೆಯಲ್ಲಿ ಪಾಲ್ಗೊಂಡ ಅವರು, ಆಡಳಿತಾರೂಢ ಎಡರಂಗವು ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ದೂರಿದರು.

‘ಬಡವರು, ಕೂಲಿಕಾರ್ಮಿಕರು, ಮಹಿಳೆಯರು ಮತ್ತು ವಿದೇಶಗಳಿಂದ ಮರಳಿ ಬಂದವರು ಕೇರಳದ 300 ರಷ್ಟು ಸಹಕಾರಿ ಬ್ಯಾಂಕ್‌ಗಳಲ್ಲಿ ಸುಮಾರು ₹ 1 ಲಕ್ಷ ಕೋಟಿ ಮೊತ್ತವನ್ನು ಠೇವಣಿಯಾಗಿ ಇಟ್ಟಿದ್ದಾರೆ. ಸಿಪಿಎಂ ಭ್ರಷ್ಟಾಚಾರದಿಂದ ಆ ಹಣಕ್ಕೆ ಕಂಟಕ ಎದುರಾಗಿದೆ’ ಎಂದು ಆರೋಪಿಸಿದರು.

‘ಕಾಂಗ್ರೆಸ್ ಮತ್ತು ಎಸ್‌ಡಿಪಿಐ ಮಧ್ಯೆ ಒಳ ಒಪ್ಪಂದ ನಡೆದಿದೆ’ ಎಂದು ಪ್ರಧಾನಿ ಟೀಕಿಸಿದರು.

ನಗದು ಸೇರಿ ₹4,650 ಕೋಟಿ ವಶ

ನವದೆಹಲಿ (ಪಿಟಿಐ): ಚುನಾವಣಾ ಆಯೋಗವು ದೇಶದಾದ್ಯಂತ ಮಾರ್ಚ್ 1 ರಿಂದ ಇದುವರೆಗೆ ನಗದು ಸೇರಿದಂತೆ ₹ 4,650 ಕೋಟಿ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದೆ. ಇದರಲ್ಲಿ ಶೇ 45 ರಷ್ಟು ಅಂದರೆ ₹ 2,069 ಕೋಟಿ ಮೌಲ್ಯದ ಮಾದಕ ವಸ್ತುಗಳು ಸೇರಿವೆ.

ಮಾರ್ಚ್ 1 ರಿಂದ ವಶಪಡಿಸಿಕೊಂ-ಡಿರುವ ಮೊತ್ತವು 2019 ರ ಲೋಕಸಭಾ ಚುನಾವಣೆ ಸಮಯದಲ್ಲಿ ವಶಪಡಿಸಿ-ಕೊಂಡಿದ್ದ ₹ 3,475 ಕೋಟಿ ಮೊತ್ತವನ್ನು ಮೀರಿದೆ ಎಂದು ಆಯೋಗವು ತಿಳಿಸಿದೆ.

ಲೋಕಸಭಾ ಚುನಾವಣೆಯ ದಿನಾಂಕವನ್ನು ಮಾರ್ಚ್ 16 ರಂದು ಘೋಷಿಸಲಾಗಿತ್ತು. ಮೊದಲ ಹಂತದ ಮತದಾನ ಏಪ್ರಿಲ್ 19 ರಂದು ಮತ್ತು ಏಳನೇ ಹಾಗೂ ಕೊನೆಯ ಹಂತದ ಮತದಾನ ಜೂನ್ 1 ರಂದು ನಡೆಯಲಿದೆ.

ಜಪ್ತಿ: ಏನು, ಎಷ್ಟು?

₹ **100** ಕೋಟಿ
ಪ್ರತಿದಿನದ ಸರಾಸರಿ ವಶ (ಮಾರ್ಚ್1ರ ಬಳಿಕ)

₹ **395** ಕೋಟಿ
ನಗದು

₹ **489** ಕೋಟಿ
ಮೌಲ್ಯದ ಮದ್ಯ

₹ **2,069** ಕೋಟಿ
ಮೌಲ್ಯದ ಮಾದಕ ವಸ್ತುಗಳು

ರಾಹುಲ್ ಗಾಂಧಿ ಹೆಲಿಕಾಪ್ಟರ್ ತಪಾಸಣೆ

ನೀಲಗಿರಿ (ತಮಿಳುನಾಡು) (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪ್ರಯಾಣಿಸಿದ ಹೆಲಿಕಾಪ್ಟರ್ ಅನ್ನು ಚುನಾವಣಾ ಅಧಿಕಾರಿಗಳು ಸೋಮವಾರ ತಪಾಸಣೆ ನಡೆಸಿದರು.

ರಾಹುಲ್ ಅವರು ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಳ್ಳಲು ಕೇರಳದ ವಯನಾಡ್‌ಗೆ ಪ್ರಯಾಣಿ-ಸಬೇಕಿದ್ದ ಹೆಲಿಕಾಪ್ಟರ್ ಅನ್ನು ಫ್ಲೈಯಿಂಗ್ ಸ್ಕ್ವಾಡ್ ಅಧಿಕಾರಿಗಳು ಇಲ್ಲಿ ತಪಾಸಣೆಗೆ ಒಳಪಡಿಸಿದರು ಎಂದು ಪೊಲೀಸರು ತಿಳಿಸಿದರು.

ಹೆಲಿಕಾಪ್ಟರ್ ತಪಾಸಣೆ ನಡೆಸುವುದು ಒಳ್ಳೆಯದೇ. ಪ್ರಧಾನಿ ಮತ್ತು ಗೃಹ ಸಚಿವರು ಪ್ರಯಾಣಿಸುವ ಹೆಲಿಕಾಪ್ಟರ್‌ಗಳನ್ನೂ ತಪಾಸಣೆಗೆ ಒಳಪಡಿಸಲಿ
ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಬಿಜೆಪಿ ನಾಯಕರ ಹೆಲಿಕಾಪ್ಟರ್ ತಪಾಸಣೆ ನಡೆಸಿ-ಮಮತಾ (ಕೂಚ್‌ಬಿಹಾರ್ ವರದಿ): ಬಿಜೆಪಿ ನಾಯಕರು ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಳ್ಳಲು ಬಳಸುವ ಹೆಲಿಕಾಪ್ಟರ್‌ಗಳನ್ನು ತಪಾಸಣೆಗೆ ಒಳಪಡಿಸುವಂತೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳಿಗೆ ಸವಾಲು ಹಾಕಿದ್ದಾರೆ.

ಟಿಎಂಸಿ ಮುಖಂಡ ಅಭಿಷೇಕ್ ಬ್ಯಾನರ್ಜಿ ಅವರು ಪ್ರಯಾಣಿಸಿದ ಹೆಲಿಕಾಪ್ಟರ್ ಅನ್ನು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ತಪಾಸಣೆಗೆ ಒಳಪಡಿಸಿದ್ದು, ವಿವಾದಕ್ಕೆ ಕಾರಣವಾಗಿತ್ತು.

ಸಂಘರ್ಷಪೀಡಿತ ಮಣಿಪುರದಲ್ಲಿ ಮತ್ತೆ ಹಿಂಸಾಚಾರದ ಘಟನೆ

ಮತದಾನ ಬಹಿಷ್ಕಾರ: ಕುಕಿ ಸಂಘಟನೆಗಳ ನಿರ್ಧಾರ

ಔಟರ್ ಮಣಿಪುರ ಲೋಕಸಭಾ ಕ್ಷೇತ್ರವನ್ನು ಇದುವರೆಗೆ ಆರು ನಾಗಾ ಮತ್ತು ಐವರು ಕುಕಿ ಮುಖಂಡರು ಪ್ರತಿನಿಧಿಸಿದ್ದಾರೆ. ಈ ಬಾರಿ ಕುಕಿಗಳು ಚುನಾವಣೆ ಬಹಿಷ್ಕರಿಸಿರುವುದರಿಂದ ಕಣದಲ್ಲಿ ನಾಗಾಗಳೇ ಇದ್ದಾರೆ. ಔಟರ್ ಮಣಿಪುರದ ಎಂಟು ಲಕ್ಷ ಮತದಾರರ ಪೈಕಿ ನಾಗಾ ಮತದಾರರ ಸಂಖ್ಯೆ 4.61ಲಕ್ಷ ಮತ್ತು ಕುಕಿ ಮತದಾರರ ಸಂಖ್ಯೆ 3.21ಲಕ್ಷ ಆಗಿದೆ

ಚುರಚಂದಪುರ (ಪಿಟಿಐ): ಸಂಘರ್ಷಪೀಡಿತ ಮಣಿಪುರದಲ್ಲಿ ಮತ್ತೆ ಹಿಂಸಾಚಾರದ ಘಟನೆಗಳು ನಡೆದಿದ್ದು, ಅದರ ಬೆನ್ನಲ್ಲೇ ‘ನ್ಯಾಯ ಇಲ್ಲದಿದ್ದರೆ, ಮತ ಇಲ್ಲ’ ಎಂದು ಘೋಷಿಸಿರುವ ಕುಕಿ ಸಂಘಟನೆಗಳು ಮತದಾನ ಬಹಿಷ್ಕರಿಸುವುದಾಗಿ ತಿಳಿಸಿವೆ.

ಪೂರ್ವ ಇಂಫಾಲ್‌ನಲ್ಲಿ ಶನಿವಾರ ಎರಡು ಶಸ್ತ್ರಸಜ್ಜಿತ ಗುಂಪುಗಳ ನಡುವೆ ಗುಂಡಿನ ಚಕಮಕಿ ನಡೆದಿದ್ದು, ಅದರಲ್ಲಿ ಇಬ್ಬರು ಸಾವಿಗೀಡಾಗಿದ್ದಾರೆ. ತೆಂಗ್‌ನೌಪಾಲ್ ಜಿಲ್ಲೆಯಲ್ಲಿ ಶುಕ್ರವಾರ ಹಳ್ಳಿಯ ಶಸ್ತ್ರಸಜ್ಜಿತ ಸ್ವಯಂಸೇವಕರು ಮತ್ತು ಅಪರಿಚಿತರ ಮಧ್ಯೆ ನಡೆದ ಗುಂಡಿನ ಚಕಮಕಿಯಲ್ಲಿ ಮೂವರು ಗಾಯಗೊಂಡಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ತಾವು ಯಾವುದೇ ಅಭ್ಯರ್ಥಿಯನ್ನು ಕಣಕ್ಕಿಳಿಸದೆ ಚುನಾವಣೆಯನ್ನು ಬಹಿಷ್ಕರಿಸುವುದಾಗಿ ಈ ಹಿಂದೆಯೇ ಕುಕಿಗಳು ಘೋಷಿಸಿದ್ದರು.

ಪತ್ರಕರ್ತರು, ಸಾಮಾಜಿಕ ಕಾರ್ಯಕರ್ತರು, ಮಾಜಿ ಸಂಸದರಾದ ಕಿಮ್ ಗಾಂಗ್ಟೆ ಮತ್ತು ದೆಹಲಿಯ ಕುಕಿ ಝೋಮಿ ಹಮರ್ ಮಹಿಳಾ ವೇದಿಕೆಗಳನ್ನು ಒಳಗೊಂಡ ಕುಕಿ ಮಹಿಳೆಯರ ಸಂಘಟನೆಯಾದ ‘ಗ್ಲೋಬಲ್ ಕುಕಿ ಝೋಮಿ ಹಮರ್ ವುಮೆನ್ ಕಮ್ಯುನಿಟಿ’ಯು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರಿಗೆ ಪತ್ರ ಬರೆಯುವ ಮೂಲಕ ಬಹಿಷ್ಕಾರದ ನಿರ್ಧಾರ ತಿಳಿಸಿದ್ದರು.

ಅವುಗಳ ಜತೆಗೆ ಈಗ ಕುಕಿ ನ್ಯಾಷನಲ್ ಅಸೆಂಬ್ಲಿ ಮತ್ತು ಕುಕಿ ಇನ್ಪಿ ಸಂಘಟನೆಗಳು ಕೂಡಾ ಧ್ವನಿಗೂಡಿಸಿವೆ.

‘ನಾವು ನಮ್ಮ ಅಸಂತೃಪ್ತಿಯನ್ನು ನಾಯಕರಿಗೆ ತಿಳಿಸಿದ್ದೇವೆ. ಪಾಕಿಸ್ತಾನ, ಚೀನಾದ ಬೆದರಿಕೆಗಳನ್ನು ತಡೆಯುವಷ್ಟು ಮತ್ತು ಅವಕ್ಕೆ ಎದಿರೇಟು ಕೊಡುವಷ್ಟು ಸಮರ್ಥವಾಗಿರುವ ಭಾರತದ ಸೇನೆ, ಉಗ್ರರಿಂದ ಮುಗ್ಧ ಪ್ರಜೆಗಳನ್ನು ರಕ್ಷಿಸುವಲ್ಲಿ ಸೋತಿರುವುದರಿಂದ ನಮಗೆ ನಿರಾಶೆಯಾಗಿದೆ. ಇದರಿಂದಾಗಿ ಭಾರತೀಯ ಸಂವಿಧಾನದಲ್ಲಿ ಮತ್ತು ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ಎನ್ನುವ ಹೇಳಿಕೆಯಲ್ಲಿ ನಮಗೆ ನಂಬಿಕೆ ನಶಿಸಿದೆ’ ಎಂದು ಕುಕಿ ನ್ಯಾಷನಲ್ ಅಸೆಂಬ್ಲಿಯ ವಕ್ತಾರ ಮಾಂಗ್‌ಬೊಯ್ ಹೋಕಿಪ್ ಹೇಳಿದ್ದಾರೆ.

ಕುಕಿ ಇನ್ಪಿ ಸಂಘಟನೆಯು ಮತದಾನವನ್ನು ಬಹಿಷ್ಕರಿಸಿ ಭಾನುವಾರ ನಿರ್ಣಯ ಕೈಗೊಂಡಿವೆ. ಮಣಿಪುರದಲ್ಲಿ ಏಪ್ರಿಲ್ 19 ಮತ್ತು ಏಪ್ರಿಲ್ 26ರಂದು ಎರಡು ಹಂತದಲ್ಲಿ ಮತದಾನ ನಡೆಯಲಿದೆ. ರಾಜ್ಯದಲ್ಲಿ ಮೊದಲ ಬಾರಿಗೆ ಸೋಮವಾರ ಅಮಿತ್ ಶಾ ರ‍್ಯಾಲಿ ನಡೆಸಿದರು. ರಾಜ್ಯದಲ್ಲಿ ಹೆಚ್ಚು ಮತದಾನವಾಗುವ ಪರಂಪರೆಯಿದ್ದು, 2019ರ ಚುನಾವಣೆಯಲ್ಲಿ ಶೇ 82ಕ್ಕಿಂತ ಹೆಚ್ಚು ಮತದಾನ ದಾಖಲಾಗಿತ್ತು.

ನಿರಾಶ್ರಿತರ ಶಿಬಿರದಲ್ಲಿ ಮಹಿಳೆಯೊಬ್ಬರು ತಮ್ಮ ಮಗುವಿನೊಂದಿಗಿರುವುದು –ಪಿಟಿಐ ಚಿತ್ರ

‘ಮಣಿಪುರದಲ್ಲಿ ಶಾಂತಿ ಸ್ಥಾಪನೆಯೇ ಆದ್ಯತೆ’

ಇಂಫಾಲ್ (ಪಿಟಿಐ): ಜನಾಂಗೀಯ ಹಿಂಸಾಚಾರದಿಂದ ಕೂಡಿರುವ ಮಣಿಪುರದಲ್ಲಿ ಎಲ್ಲ ಸಮುದಾಯಗಳನ್ನು ಜತೆಗೆ ಕೊಂಡೊಯ್ಯುವ ಮೂಲಕ ಶಾಂತಿ ಸ್ಥಾಪಿಸುವುದು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಆದ್ಯತೆಯಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಸೋಮವಾರ ಹೇಳಿದ್ದಾರೆ.

ಇಂಫಾಲ್‌ನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ‘ಲೋಕಸಭಾ ಚುನಾವಣೆಯು ಮಣಿಪುರವನ್ನು ಒಡೆಯಲು ಯತ್ನಿ-ಸುತ್ತಿರುವ ಶಕ್ತಿಗಳು ಮತ್ತು ಅದನ್ನು ಒಗ್ಗಟ್ಟಾಗಿಯೇ ಇಡಲು ಪ್ರಯತ್ನಿಸುತ್ತಿರುವ-ವರ ನಡುವೆ ನಡೆಯುತ್ತಿದೆ’ ಎಂದಿದ್ದಾರೆ.

ಚುಟುಕು

ಎಎಪಿಯಿಂದ 200 ‘ಸಂಕಲ್ಪ ಸಭೆ’

ನವದೆಹಲಿ (ಪಿಟಿಐ): ಮುಖ್ಯಮಂತ್ರಿ ಕೇಜ್ರಿವಾಲ್ ಬಂಧನದ ವಿರುದ್ಧ ಜನರ ಬೆಂಬಲ ಪಡೆಯಲು ರಾಷ್ಟ್ರ ರಾಜಧಾನಿಯ ನಾಲ್ಕು ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಎಎಪಿಯು 200 ‘ಸಂಕಲ್ಪ ಸಭೆ’ಗಳನ್ನು ನಡೆಸಲಿದೆ ಎಂದು ಪಕ್ಷದ ಮುಖಂಡ ಗೋಪಾಲ್ ರಾಯ್ ಸೋಮವಾರ ತಿಳಿಸಿದ್ದಾರೆ.

ದೆಹಲಿಯ 40 ವಿಧಾನಸಭಾ ಕ್ಷೇತ್ರಗಳಲ್ಲಿ ನಡೆಯುವ ‘ಸಂಕಲ್ಪ ಸಭೆ’ಗಳಲ್ಲಿ ಪಕ್ಷದ ಹಿರಿಯ ನಾಯಕರು ಮತ್ತು ಮಂತ್ರಿಗಳು ಭಾಗವಹಿಸಲಿದ್ದಾರೆ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

ಕಾಂಗ್ರೆಸ್ ಪ್ರಚಾರ ಗೀತೆ ಬಿಡುಗಡೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷವು ಲೋಕಸಭಾ ಚುನಾವಣೆಗಾಗಿ ತನ್ನ ಪ್ರಚಾರ ಗೀತೆಯನ್ನು ಸೋಮವಾರ ಬಿಡುಗಡೆ ಮಾಡಿದೆ. ಮಹಿಳೆಯರು, ಯುವಜನತೆ, ರೈತರು ಮತ್ತು ಕಾರ್ಮಿಕರಿಗಾಗಿ ‘ನ್ಯಾಯ’ ಎನ್ನುವ ಪರಿಕಲ್ಪನೆ-ಯನ್ನು ಆಧರಿಸಿ ಪ್ರಚಾರ ಗೀತೆ ರೂಪಿಸಲಾಗಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಮತ್ತು ವಕ್ತಾರರಾದ ಸುಪ್ರಿಯಾ ಶ್ರೀನೇತ್ ಪಕ್ಷದ ಕೇಂದ್ರ ಕಚೇರಿಯಲ್ಲಿ ಪ್ರಚಾರ ಗೀತೆಯನ್ನು ಬಿಡುಗಡೆ ಮಾಡಿದರು.

‘ಕಾಂಗ್ರೆಸ್ ಪಕ್ಷವು ಭರವಸೆ ನೀಡಿರುವ ನ್ಯಾಯದ ಐದು ಸ್ತಂಭಗಳನ್ನು ಆಧರಿಸಿ ನಮ್ಮ ಪ್ರಚಾರ ನಡೆಯಲಿದೆ. ಜನರನ್ನು ಮಾತನಾಡಿಸಿ, ಅವರ ಕನಸು, ಆಸೆಗಳನ್ನು ಗಮನದಲ್ಲಿಟ್ಟುಕೊಂಡು ನ್ಯಾಯದ ಸ್ತಂಭಗಳನ್ನು ರೂಪಿಸಿದ್ದೇವೆ. ಮೋದಿ ಅವರು ಜನರನ್ನು ವಂಚಿಸಿದ ಪ್ರತಿ ವಿಷಯದ ಬಗ್ಗೆಯೂ ನಾವು ಮಾತನಾಡುತ್ತೇವೆ’ ಎಂದು ಸುಪ್ರಿಯಾ ತಿಳಿಸಿದ್ದಾರೆ.

ಜಿಗಿ–ನೆಗೆದಾಟ

ಬಿಜೆಡಿ ಮಾಜಿ ಸಂಸದ ಬಿಜೆಪಿಗೆ

ನವದೆಹಲಿ (ಪಿಟಿಐ): ಬಿಜು ಜನತಾ ದಳದ (ಬಿಜೆಡಿ) ಮಾಜಿ ಸಂಸದ ಪ್ರಭಾಸ್ ಕುಮಾರ್ ಸಿಂಗ್ ಅವರು ಸೋಮವಾರ ಬಿಜೆಪಿ ಸೇರಿದರು.

‘ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವವನ್ನು ಮೆಚ್ಚಿಕೊಂಡು ಬಿಜೆಪಿ ಸೇರಲು ನಿರ್ಧರಿಸಿದ್ದೇನೆ. ಬಿಜೆಡಿಯಲ್ಲಿ ಯಾವುದೇ ‘ಗೌರವ ಮತ್ತು ಸ್ವಾಭಿಮಾನ’ ಇಲ್ಲ’ ಎಂದು ಈ ಹಿಂದೆ ಒಡಿಶಾದ ಬರ್ಗಢ್ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಪ್ರಭಾಸ್, ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ವಿಶ್ವದ ಅತಿದೊಡ್ಡ ರಾಜಕೀಯ ಪಕ್ಷವನ್ನು ಸೇರುತ್ತಿರುವ ಈ ಕ್ಷಣ ನನಗೆ ವಿಶೇಷವಾದುದು’ ಎಂದು ಅವರು ಹೇಳಿದರು.

ಎಂಥಾ ಮಾತು!

ಪ್ರಧಾನಿ ಮೋದಿ ಅವರ ‘ಗ್ಯಾರಂಟಿ’ಗಳೆಲ್ಲವೂ ಸುಳ್ಳು. ಅವರು ಕೊಟ್ಟಿರುವ ಯಾವುದೇ ಭರವಸೆಯೂ ಈಡೇರಿಲ್ಲ. ಬೆಲೆಯೇರಿಕೆ ನಿಯಂತ್ರಿಸಲು ಬಿಜೆಪಿ ಪ್ರಯತ್ನವನ್ನೇ ಮಾಡಿಲ್ಲ. ಮುಂಬರುವ ಲೋಕಸಭಾ ಚುನಾವಣೆಯು ‘ಇಂಡಿಯಾ’ ಮೈತ್ರಿಕೂಟವನ್ನು ಬೆಂಬಲಿಸಲು ಮತ್ತು ಮೂಲಭೂತ ಹಕ್ಕುಗಳು ಹಾಗೂ ಪ್ರಜಾಪ್ರಭುತ್ವದ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಜನರಿಗೆ ಲಭಿಸುವ ಒಂದು ಅವಕಾಶವಾಗಿದೆ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಬಿಜೆಪಿ ಪ್ರಣಾಳಿಕೆಯು ದೇಶವನ್ನು ಅಭಿವೃದ್ಧಿಯತ್ತ ಮುನ್ನಡೆಸುವ ನೀಲನಕ್ಷೆಯಾಗಿದೆ. ವಿರೋಧ ಪಕ್ಷಗಳ ಮೈತ್ರಿಕೂಟದಲ್ಲಿರುವವರು ಪ್ರತ್ಯೇಕ ಪ್ರಣಾಳಿಕೆ ಬಿಡುಗಡೆ ಮಾಡಿದ್ದಾರೆ. ಈ ವಿಚಾರದಲ್ಲಿ ಒಗ್ಗಟ್ಟು ತೋರಿಸಲು ಆಗದವರು, ದೇಶದ ಅಭಿವೃದ್ಧಿಗೆ ಏನು ಮಾಡಲು ಸಾಧ್ಯ? ಅವರಿಗೆ (ಇಂಡಿಯಾ ಮೈತ್ರಿಕೂಟಕ್ಕೆ) ಜನರ ಹಿತ ಬೇಕಾಗಿಲ್ಲ. ತಮ್ಮ ಹಾಗೂ ಕುಟುಂಬದವರ ಬಗ್ಗೆ ಮಾತ್ರ ಕಾಳಜಿ ವಹಿಸುತ್ತಾರೆ

ಜೆ.ಪಿ.ನಡ್ಡಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

ಕ್ಷೇತ್ರ ಮಹಾತ್ಮೆ

ಆಳಪ್ಪುಳ (ಕೇರಳ)

‘ಪೂರ್ವದ ವೆನಿಸ್’ ಎಂದೇ ಪ್ರಸಿದ್ಧವಾಗಿರುವ ಕೇರಳದ ಆಳಪ್ಪುಳ ಲೋಕಸಭಾ ಕ್ಷೇತ್ರವು ಈ ಬಾರಿ ತ್ರಿಕೋನ ಸ್ಪರ್ಧೆಗೆ ಅಣಿಯಾಗಿದೆ. ಕಾಂಗ್ರೆಸ್ ಈ ಬಾರಿ ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನಾ) ಕೆ.ಸಿ. ವೇಣುಗೋಪಾಲ್ ಅವರನ್ನು ಕಣಕ್ಕಿಳಿಸಿದರೆ, ಸಿಪಿಎಂ ಕಳೆದ ಬಾರಿ ಇಲ್ಲಿಂದ ಗೆದ್ದಿದ್ದ ಎ.ಎಂ. ಆರಿಫ್ ಅವರನ್ನೇ ಮತ್ತೆ ಅಖಾಡಕ್ಕಿಳಿಸಿದೆ. ಬಿಜೆಪಿಯು ಪಕ್ಷದ ಪ್ರಮುಖ ನಾಯಕಿ ಶೋಭಾ ಸುರೇಂದ್ರನ್ ಅವರನ್ನು ಸ್ಪರ್ಧಿಯಾಗಿಸಿದೆ. ಮೂರೂ ಪಕ್ಷಗಳು ಪ್ರಬಲ ಅಭ್ಯರ್ಥಿಗಳನ್ನೇ ಅಖಾಡಕ್ಕಿಳಿಸಿ-ರುವುದರಿಂದ ಕಣವು ಕುತೂಹಲ ಕೆರಳಿಸಿದೆ. ಸಿಪಿಎಂ ನೇತೃತ್ವದ ಎಲ್‌ಡಿಎಫ್ ಮೈತ್ರಿಕೂಟ ಮತ್ತು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟಗಳ ಅಭ್ಯರ್ಥಿಗಳಿಗೆ ಈ ಹಿಂದೆ ಒಲಿದ ಇತಿಹಾಸ ಈ ಕ್ಷೇತ್ರಕ್ಕಿದೆ. ಹಿನ್ನೀರು, ಸಮುದ್ರ ದಂಡೆ, ಹುರಿ ಹಗ್ಗ ಉದ್ಯಮಕ್ಕೆ ಪ್ರಸಿದ್ಧ-ವಾಗಿರುವ ಈ ಕ್ಷೇತ್ರದಲ್ಲಿ ಅಭಿವೃದ್ಧಿ ವಿಚಾರವೇ ಪ್ರಮುಖ ಚುನಾವಣಾ ವಿಷಯವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ವೈಫಲ್ಯಗಳನ್ನು ಜನರ ಮುಂದಿಡಲು ವೇಣುಗೋಪಾಲ್ ಅವರು ಪ್ರಯತ್ನಿಸಿದರೆ, ಸಿಪಿಎಂ ಅಭ್ಯರ್ಥಿಯು ರಾಜ್ಯದ ಆಡಳಿತಾರೂಢ ಪಕ್ಷದ ಅಭಿವೃದ್ಧಿ ಕಾರ್ಯಗಳನ್ನು ಜನರೆದುರು ತೆರೆದಿಡುತ್ತಿದ್ದಾರೆ. ರಾಜಸ್ಥಾನದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ವೇಣುಗೋಪಾಲ್ ಅವರನ್ನು ಗೆಲ್ಲಿಸಿದರೆ ಬಿಜೆಪಿಗೆ ರಾಜ್ಯಸಭೆಯ ಒಂದು ಸೀಟನ್ನು ದಾನವಾಗಿ ಕೊಟ್ಟಂತೆ ಎಂದು ಸಿಪಿಎಂ ಹೇಳುತ್ತಿದೆ. 2019ರಲ್ಲಿ ಎ.ಎಂ. ಆರಿಫ್ ಅವರು 10,485 ಮತಗಳ ಅಂತರದಿಂದ ಕಾಂಗ್ರೆಸ್‌ನ ಶಾನಿಮೋಳ್ ಉಸ್ಮಾನ್ ಅವರನ್ನು ಪರಾಭವಗೊಳಿಸಿದ್ದರು. ಶೋಭಾ ಸುರೇಂದ್ರನ್ ಅವರು ಬಿಜೆಪಿ ಮಹಿಳಾ ಮೋರ್ಚಾದ ರಾಜ್ಯ ಘಟಕದ ಅಧ್ಯಕ್ಷೆಯಾಗಿಯೂ ಕಾರ್ಯನಿ-ರ್ವಹಿಸಿದ್ದರು.

ಮುಖಾಮುಖಿ

ಈರೋಡ್ (ತಮಿಳುನಾಡು)

ಆತ್ರಲ್ ಅಶೋಕ್ ಕುಮಾರ್
(ಎಐಎಡಿಎಂಕೆ)

₹538 ಕೋಟಿ ಮೌಲ್ಯದ ಆಸ್ತಿ ಹೊಂದಿರುವ ತಮಿಳುನಾಡಿನ ಉದ್ಯಮಿ ಆತ್ರಲ್ ಅಶೋಕ್ ಕುಮಾರ್ ಅವರನ್ನು ಎಐಎಡಿಎಂಕೆ ಈರೋಡ್ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಸಿದೆ. ತಂತ್ರಜ್ಞಾನ ಕ್ಷೇತ್ರದ ಬೃಹತ್ ಸಂಸ್ಥೆಗಳಾದ ಇಂಟೆಲ್ ಮತ್ತು ಮೈಕ್ರೊಸಾಫ್ಟ್‌ನಲ್ಲಿ ಅಶೋಕ್ ಅವರು ಕೆಲಸ ನಿರ್ವಹಿಸಿದ್ದರು. 13 ವರ್ಷ ಅಮೆರಿಕದಲ್ಲಿದ್ದ ಇವರು 2005ರಲ್ಲಿ ಭಾರತಕ್ಕೆ ಮರಳಿದ್ದರು. ಇವರು ಶಿಕ್ಷಣ ಸಂಸ್ಥೆಯನ್ನೂ ಸ್ಥಾಪಿಸಿದ್ದಾರೆ. ಅಶೋಕ್ ಅವರು 2021ರಲ್ಲಿ ಆತ್ರಲ್ ಫೌಂಡೇಶನ್ ಸ್ಥಾಪಿಸಿ, ಅದರ ಅಧೀನದಲ್ಲಿ ಕಡಿಮೆ ದರಕ್ಕೆ ಆಹಾರ ನೀಡುವ ಕ್ಯಾಂಟೀನ್‌ಗಳನ್ನು ಈರೋಡ್ ಸುತ್ತ ಮುತ್ತ ಆರಂಭಿಸಿದ್ದರು. ಅಶೋಕ್ ಅವರ ತಾಯಿ ಕೆ.ಎಸ್. ಸೌಂದರಮ್ ಅವರು ಎಐಎಡಿಎಂಕೆಯ ಸಂಸದೆಯಾಗಿದ್ದರು. ಅಶೋಕ್, 2023ರಲ್ಲಿ ಬಿಜೆಪಿ ತೊರೆದು ಎಐಎಡಿಎಂಕೆಗೆ ಸೇರಿದ್ದರು. ಇವರ ಅತ್ತೆ ಸಿ. ಸರಸ್ವತಿ ಅವರು ಬಿಜೆಪಿ ಶಾಸಕಿಯಾಗಿದ್ದಾರೆ.

v/s

ಕೆ.ಇ. ಪ್ರಕಾಶ್
(ಡಿಎಂಕೆ)

ಅತ್ಯಂತ ಶ್ರೀಮಂತ ಅಭ್ಯರ್ಥಿ ಆತ್ರಲ್ ಅಶೋಕ್ ಕುಮಾರ್ ಅವರನ್ನು ಮಣಿಸಲು ಆಡಳಿತಾರೂಢ ಡಿಎಂಕೆಯು ಪಕ್ಷದ ಯುವ ಘಟಕದ ಉಪ ಕಾರ್ಯದರ್ಶಿ ಕೆ.ಇ. ಪ್ರಕಾಶ್ ಅವರನ್ನು ಅಖಾಡಕ್ಕಿಳಿಸಿದೆ. ಇವರ ತಂದೆ ಕೆ.ಎಸ್. ಈಶ್ವರ ಮೂರ್ತಿ ಅವರು ಡಿಎಂಕೆಯ ಹಿರಿಯ ಮುಖಂಡರಾಗಿದ್ದಾರೆ. ಉದ್ಯಮಿ ಹಾಗೂ ರಾಜಕಾರಣಿಯಾಗಿರುವ ಪ್ರಕಾಶ್ ಅವರು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಪುತ್ರ ಉದಯನಿಧಿ ಸ್ಟಾಲಿನ್ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದಾರೆ. ಪಕ್ಷದ ಯುವ ಘಟಕದಲ್ಲಿ ಕಾರ್ಯನಿರ್ವಹಿಸಿರುವ ಅನುಭವ ಮತ್ತು ಸ್ಥಳೀಯವಾಗಿ ಪರಿಚಿತರಾಗಿರುವುದರಿಂದ ಮತ ದಾರರು ಇವರ ಕೈಬಿಡಲಾರರು ಎಂಬ ವಿಶ್ವಾಸ ಡಿಎಂಕೆ ಮುಖಂಡ ರದ್ದಾಗಿದೆ. ಆಡಳಿತಾರೂಢ ಪಕ್ಷದ ಅಭಿವೃದ್ಧಿ ಕಾರ್ಯಗಳು ಗೆಲುವಿಗೆ ಮೆಟ್ಟಿಲಾಗಬಹುದೆಂಬ ಭರವಸೆಯಲ್ಲಿ ಪ್ರಕಾಶ್ ಅವರು ಲೋಕಸಭಾ ಚುನಾವಣೆಯಲ್ಲಿ ಮೊದಲ ಬಾರಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ.

ಗ್ಯಾರಂಟಿ ಯೋಜನೆಗಳಿಂದ ಮಹಿಳೆಯರು ದಾರಿ ತಪ್ಪಿದ್ದಾರೆ ಎಂಬ ಹೇಳಿಕೆಗೆ ಡಿ.ಕೆ. ಶಿವಕುಮಾರ್ ಅಸಮಾಧಾನ

‘ಮಹಿಳಾ ಕುಲಕ್ಕೆ ಕಪ್ಪು ಚುಕ್ಕೆ ಇಟ್ಟ ಎಚ್‌ಡಿಕೆ’

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಬೆಳಗಾವಿ: ‘ಗ್ಯಾರಂಟಿ ಯೋಜನೆಗಳಿಂದ ಮಹಿಳೆಯರು ದಾರಿ ತಪ್ಪಿದ್ದಾರೆ ಎನ್ನುವ ಮೂಲಕ ಎಚ್‌.ಡಿ.ಕುಮಾರಸ್ವಾಮಿ ರಾಜ್ಯದ ಮಹಿಳಾ ಕುಲಕ್ಕೆ ಕಪ್ಪುಚುಕ್ಕೆ ಇಟ್ಟಿದ್ದಾರೆ. ವನಿತೆಯರು ತಕ್ಷಣವೇ ಅವರ ವಿರುದ್ಧ ದೊಡ್ಡ ಹೋರಾಟ ಆರಂಭಿಸಬೇಕು’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘1.20 ಕೋಟಿ ಹೆಣ್ಣುಮಕ್ಕಳು ಗೃಹಲಕ್ಷ್ಮಿ ಮತ್ತು 1.50 ಲಕ್ಷ ಕುಟುಂಬದವರು ಗೃಹಜ್ಯೋತಿ ಬಳಸುತ್ತಾರೆ. ಈ ಎಲ್ಲ ಕುಟುಂಬಗಳ ಹೆಣ್ಣುಮಕ್ಕಳಿಗೂ ಕುಮಾರಸ್ವಾಮಿ ಅವಮಾನಿಸಿದ್ದಾರೆ. ಈಗ ಕ್ಷಮಾಪಣೆ ಕೇಳುವೆ, ವಿಷಾದಿಸುವೆ ಎನ್ನುತ್ತಾನೆ ಆ ಮನುಷ್ಯ. ಆ ಪುಣ್ಯಾತ್ಮನ ಯಾವ ಮಾತನ್ನೂ ನಾನು ಕೇಳಲು ಸಿದ್ಧನಿಲ್ಲ. ಮಹಿಳೆಯರೂ ಕ್ಷಮಿಸುವುದಿಲ್ಲ’ ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

ಪ್ರಣಾಳಿಕೆಗೆ ಬಿಟ್ಟು ಅಭಿವೃದ್ಧಿ ಹೇಳಿ: ‘ಬಿಜೆಪಿಯವರಿಗೆ ಪ್ರಣಾಳಿಕೆ ಬಿಡುಗಡೆ ಮಾಡುವ ನೈತಿಕತೆಯೇ ಇಲ್ಲ. 10 ವರ್ಷ ಆಡಳಿತದಲ್ಲಿ ಏನೂ ಮಾಡಲಿಲ್ಲ. ಉದ್ಯೋಗ ಸೃಷ್ಟಿಸಲಿಲ್ಲ, ₹15 ಲಕ್ಷ ಬಡವರಿಗೆ ಬರಲಿಲ್ಲ, ರೈತರ ಆದಾಯ ದ್ವಿಗುಣ ಮಾಡಲಿಲ್ಲ, ಹೀಗೆಲ್ಲ ಇರುವಾಗ ಯಾವ ಮುಖ ಇಟ್ಟುಕೊಂಡು ಮತ್ತೊಂದು ಪ್ರಣಾಳಿಕೆ ಬಿಡುಗಡೆ ಮಾಡುತ್ತೀರಿ’ ಎಂದರು.

‘ರಾಜ್ಯದಲ್ಲಿ ಮೋದಿ ಗಾಳಿ ಇಲ್ಲ. ಇದ್ದಿದ್ದರೆ 14 ಹೊಸ ಮುಖಗಳಿಗೆ ಏಕೆ ಟಿಕೆಟ್ ನೀಡಿದರು? ಹಾಲಿ ಸಂಸದರು, ಪಕ್ಷದ ದೊಡ್ಡ ನಾಯಕರೆಲ್ಲ ಎಲ್ಲಿ ಹೋದರು? ಯಾವ ಗಾಳಿಗೆ ಹಾರಿ ಹೋದರು’ ಎಂದೂ ಪ್ರಶ್ನಿಸಿದರು.

‘ಸರ್ಕಾರ ನಾವೇ ರಚಿಸುತ್ತೇವೆ ಕ್ಷೇತ್ರದಲ್ಲಿ ಅಭ್ಯರ್ಥಿ ಬದಲಿಸಲ್ಲ. ದಿಂಗಾಲೇಶ್ವರ ಸ್ವಾಮೀಜಿ ಧರ್ಮ ಪ್ರಚಾರಕರು. ಅವರು ಏನು ಮಾಡುವುದಕ್ಕೂ ಸ್ವತಂತ್ರ ಇದ್ದಾರೆ’ ಎಂದರು.

ಎಚ್‌ಡಿಕೆ ಮಹಿಳೆಯರನ್ನು ಅವಮಾನಿಸಿಲ್ಲ

ಬೆಂಗಳೂರು: ಎಚ್‌.ಡಿ.ಕುಮಾರಸ್ವಾಮಿ ಅವರ ಮಾತಿನಲ್ಲಿ ಮಹಿಳೆಯರನ್ನು ಅವಮಾನಿಸುವ ಭಾವನೆ ಇರಲಿಲ್ಲ. ಕಾಂಗ್ರೆಸ್‌ನವರು ತಿರುಚಿ ಚುನಾವಣಾ ವಿಷಯವಾಗಿಸಿಕೊಂಡಿದ್ದಾರೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

‘ಜೆಡಿಎಸ್ ಪಕ್ಷದ ಚಿಹ್ನೆ ತೆನೆ ಹೊತ್ತ ಮಹಿಳೆಯಾಗಿದೆ’ ಎಂದು ಹೇಳಿದ ಅವರು, ‘ಚುನಾವಣೆಯಲ್ಲಿ ಇದು ಅನಗತ್ಯವಾಗಿ ಚರ್ಚೆಯ ವಿಷಯವಾಗಬಾರದು ಎಂಬ ಕಾರಣಕ್ಕೆ ಕುಮಾರಸ್ವಾಮಿ ವಿಷಾದ ವ್ಯಕ್ತಪಡಿಸಿದ್ದಾರೆ’ ಎಂದು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

‘ಕುಮಾರಸ್ವಾಮಿ ಅವರ ಕುರಿತು ಯಾರೋ ಸಣ್ಣಪುಟ್ಟವರು, ದಾರಿಯಲ್ಲಿ ಹೋಗುವವರು ಗೋಬ್ಯಾಕ್ ಎಂದರೆ ಏನೂ ಪರಿಣಾಮ ಬೀರುವುದಿಲ್ಲ. ಮಂಡ್ಯಕ್ಕೆ ಕುಮಾರಣ್ಣ, ದೇಶಕ್ಕೆ ಮೋದಿ ಎಂಬುದೇ ಮಂಡ್ಯದಲ್ಲಿ ನಮ್ಮ ಘೋಷಣೆ’ ಎಂದರು.

ತಾಯಂದಿರಿಗೆ ನೋವಾಗಿದ್ದರೆ ವಿಷಾದಿಸುವೆ: ಎಚ್‌ಡಿಕೆ


ಎಚ್‌.ಡಿ. ಕುಮಾರಸ್ವಾಮಿ

ಬೆಂಗಳೂರು: ‘ಯಾವುದೇ ಮಹಿಳೆಯರನ್ನೂ ನಾನು ಅವಮಾನಿಸಿಲ್ಲ. ಆದರೂ, ನನ್ನ ಹೇಳಿಕೆಯಿಂದ ರಾಜ್ಯದ ತಾಯಂದಿರಿಗೆ ನೋವಾಗಿದ್ದರೆ ವಿಷಾದ ವ್ಯಕ್ತಪಡಿಸುವೆ’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌. ಡಿ. ಕುಮಾರಸ್ವಾಮಿ ಹೇಳಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನಾನು ಚುನಾವಣಾ ಪ್ರಚಾರ ಸಭೆಯಲ್ಲಿ ಗ್ಯಾರಂಟಿ ಯೋಜನೆಗಳ ಕುರಿತು ಮಾತನಾಡಿದ್ದೇನೆಯೇ ಹೊರತು ಮಹಿಳೆಯರನ್ನು ಅವಮಾನ ಮಾಡಿಲ್ಲ. ಗ್ಯಾರಂಟಿ ಯೋಜನೆಗಳಿಗೆ ಮಾರುಹೋಗಿ ಮಹಿಳೆಯರು ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕಿದ್ದರಿಂದ ರಾಜ್ಯದ ಸಂಪತ್ತಿನ ಲೂಟಿ ಮತ್ತು ಸಾಲದ ಹೊರೆ ಹೆಚ್ಚಳ ಆಗಿರುವ ಕುರಿತು ಎಚ್ಚರಿಸಿದ್ದೆ. ಅದನ್ನು ತಪ್ಪಾಗಿ ಬಿಂಬಿಸಲಾಗಿದೆ’ ಎಂದರು.

‘ಮಹಿಳೆಯರ ಕುರಿತು ಎಲ್ಲಿಯೂ ಅವಮಾನಕರ ಪದಗಳನ್ನು ಬಳಸಿಲ್ಲ. ತಾಯಂದಿರು ಎಂಬ ಗೌರವಸೂಚಕ ಪದವನ್ನು ಬಳಸಿಯೇ ಮಾತನಾಡಿದ್ದೇನೆ. ದಾರಿ ತಪ್ಪಿದ್ದಾರೆ ಎಂಬುದು ಅಶ್ಲೀಲ ಪದವಲ್ಲ. ಮನೆಯಲ್ಲಿ ಮಕ್ಕಳಿಗೆ ದಾರಿ ತಪ್ಪಬೇಡಿ ಎಂದು ಹೇಳುವುದಿಲ್ಲವೇ? ಅದು ಹೇಗೆ ತಪ್ಪಾಗುತ್ತದೆ’ ಎಂದು ಕೇಳಿದರು.

'ಇತ್ತೀಚೆಗೆ ಏನಾದರೂ ವಿಷಯ ಸಿಕ್ಕಿದ ತಕ್ಷಣ ಗೋ ಬ್ಯಾಕ್ ಎಂದು ಪ್ರತಿಭಟನೆ ನಡೆಸುತ್ತಾರೆ. ತಪ್ಪು ಮಾಡದೇ ಇರುವವರು ನಿಮ್ಮ ಗೋ ಬ್ಯಾಕ್‌ಗೆ ಹೆದರಿಕೊಂಡು ಕೂರುತ್ತಾರಾ' ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

‘ಸ್ವಯಂಪ್ರೇರಣೆಯಿಂದ ಪ್ರಕರಣ ದಾಖಲಿಸಿಕೊಂಡು ನೋಟಿಸ್ ಜಾರಿ ಮಾಡುವುದಾಗಿ ಮಹಿಳಾ ಆಯೋಗ ಹೇಳಿದೆ. ನೋಟಿಸ್ ಬರಲಿ ಉತ್ತರ ಕೊಡುತ್ತೇನೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಮಹಿಳೆಯರ ಬಗ್ಗೆ ಗೌರವವಿದೆ’

‘ಎಚ್‌.ಡಿ.ಕುಮಾರಸ್ವಾಮಿ ಅವರಿಗೆ ಮಹಿಳೆಯರ ಬಗ್ಗೆ ಗೌರವವಿದೆ. ಆದರೆ, ಅವರ ಹೇಳಿಕೆಯನ್ನು ತಿರುಚಿ ಕಾಂಗ್ರೆಸ್ ಅಪಪ್ರಚಾರ ಮಾಡುತ್ತಿದೆ. ನೂರಕ್ಕೆ ನೂರು ಸುಳ್ಳು ಹೇಳಿ ಸತ್ಯ ಮಾಡುವ ಚಾಳಿ ಕಾಂಗ್ರೆಸ್‌ನದು’ ಎಂದು ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಶೋಭಾ ಕರಂದ್ಲಾಜೆ ವಾಗ್ದಾಳಿ ನಡೆಸಿದರು.

‘ಕಾಂಗ್ರೆಸ್‌ಗೆ ಚುನಾವಣೆಗೆ ಒಂದು ವಿಷಯ ಬೇಕಿತ್ತು. ಏನೂ ಸಿಗದಿದ್ದಾಗ ಇಂತಹ ವಿಚಾರಗಳನ್ನು ತಿರುಗಿಸಿ– ಮುರುಗಿಸಿ ಬೇಕಾಬಿಟ್ಟಿ ಹೇಳಿಕೆ ನೀಡುತ್ತಿದೆ’ ಎಂದರು.

ಸುದ್ದಿ 2 ನಿಮಿಷ

ಎದೆ ನೋವು: ಚಿಕಿತ್ಸೆ ಪಡೆದ ಸಚಿವ ಜಮೀರ್

ಚಿತ್ರದುರ್ಗ: ಚುನಾವಣಾ ಪ್ರಚಾರಕ್ಕೆಂದು ಇಲ್ಲಿಗೆ ಬಂದಿದ್ದ ವಸತಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಖಾತೆ ಸಚಿವ ಜಮೀರ್ ಅಹಮದ್ ಖಾನ್ ಅವರಿಗೆ ದಿಢೀರ್ ಎದೆ ನೋವು ಕಾಣಿಸಿಕೊಂಡಿದ್ದರಿಂದ ಇಲ್ಲಿನ ಬಸವೇಶ್ವರ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಸೋಮವಾರ ಚಿಕಿತ್ಸೆ ಪಡೆದರು.

ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಜಮೀರ್ ಆರೋಗ್ಯ ಪರೀಕ್ಷಿಸಲಾಗಿದ್ದು, ಇಸಿಜಿ, ಇಕೊ, ರಕ್ತ ಪರೀಕ್ಷೆ ನಡೆಸಲಾಯಿತು.

ಆರೋಗ್ಯ ಸ್ಥಿರವಾಗಿರುವುದನ್ನು ಖಚಿತಪಡಿಸಿದ ಹೃದ್ರೋಗ ತಜ್ಞರು, ವಿಶ್ರಾಂತಿಗೆ ಸಲಹೆ ನೀಡಿ ಆಸ್ಪತ್ರೆಯಿಂದ ಕಳಿಸಿದರು.

ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಬಿ.ಎನ್.ಚಂದ್ರಪ್ಪ ಪರ ಮತಯಾಚನೆಗೆ ಜಮೀರ್ ಆಗಮಿಸಿದ್ದರು. ಪ್ರಚಾರ ಸಭೆಗೆ ತೆರಳುವ ಮುನ್ನವೇ ಜಮೀರ್ ಆರೋಗ್ಯದಲ್ಲಿ ಏರುಪೇರು ಉಂಟಾಗಿತ್ತು. ಆಸ್ಪತ್ರೆಗೆ ಧಾವಿಸಿದ ಸಚಿವರಿಗೆ 1 ಗಂಟೆಗೂ ಹೆಚ್ಚು ಕಾಲ ವೈದ್ಯಕೀಯ ಪರೀಕ್ಷೆ ನಡೆಸಲಾಯಿತು.

‘ಬೆಳಿಗ್ಗೆ ವಡೆ ತಿಂದಿದ್ದೆ. ಆ್ಯಸಿಡಿಟಿ ಸಮಸ್ಯೆಯಿಂದ ಎದೆನೋವು ಕಾಣಿಸಿಕೊಂಡಿತ್ತು. ಮುನ್ನೆಚ್ಚರಿಕೆಯ ಕ್ರಮವಾಗಿ ಆಸ್ಪತ್ರೆಗೆ ಧಾವಿಸಿದ್ದೆ. ವೈದ್ಯರ ಸಲಹೆ ಪಡೆದಿದ್ದು, ಪ್ರಚಾರ ಕಾರ್ಯದಲ್ಲಿ ಪಾಲ್ಗೊಳ್ಳುವೆ’ ಎಂದು ಸಚಿವ ಜಮೀರ್ ಅವರು ಸುದ್ದಿಗಾರರಿಗೆ ತಿಳಿಸಿದರು.

ಮತದಾನದ ದಿನ ಹೋಮ್ ಸ್ಟೇ, ರೆಸಾರ್ಟ್ ಬುಕ್ಕಿಂಗ್ ಬೇಡ

ಚಿಕ್ಕಮಗಳೂರು: ಮತದಾನದ ದಿನ ಸಿಗುವ ರಜೆಯಂದು ಜಿಲ್ಲೆಯ ಪ್ರವಾಸಿ ತಾಣಗಳಲ್ಲಿ ಉಳಿದ ಕಾಲ ಕಳೆಯಲು ಜನ ಯೋಚಿಸಿದ್ದರೆ ಅದಕ್ಕೆ ಅವಕಾಶ ಇಲ್ಲ. ಜಿಲ್ಲೆಯ ಹೋಮ್ ಸ್ಟೇ ಮತ್ತು ರೆಸಾರ್ಟ್‌ಗಳಲ್ಲಿ ಬುಕ್ಕಿಂಗ್ ಸ್ವೀಕರಿಸದಂತೆ ಜಿಲ್ಲಾಧಿಕಾರಿ ಸೂಚನೆ ನೀಡಿದ್ದಾರೆ.

ಏ.26ರಂದು (ಶುಕ್ರವಾರ) ರಾಜ್ಯದಲ್ಲಿ ಮೊದಲ ಹಂತದಲ್ಲಿ ಚುನಾವಣೆ ನಡೆಯಲಿದ್ದು, ಅಂದು ಎಲ್ಲಾ ಸರ್ಕಾರಿ ಮತ್ತು ಖಾಸಗಿ ಉದ್ಯೋಗಿಗಳಿಗೆ ರಜೆ ಸಿಗಲಿದೆ. ಶನಿವಾರ ಮತ್ತು ಭಾನುವಾರ ಸೇರಿದರೆ ಮೂರು ದಿನಗಳ ರಜೆ ಸಿಗಲಿದೆ. ಈ ಸಂದರ್ಭದಲ್ಲಿ ಮತದಾನ ಮಾಡದೆ ಪ್ರವಾಸ ತೆರಳಲು ಯೋಚಿಸಿದರೆ ಅದಕ್ಕೆ ಅವಕಾಶ ಆಗದಂತೆ ಜಿಲ್ಲಾಡಳಿತ ಕ್ರಮ ಕೈಗೊಂಡಿದೆ.

‘ಏ.25 ಮತ್ತು 26ರಂದು ಎರಡು ದಿನ ಬುಕ್ಕಿಂಗ್ ಸ್ವೀಕರಿಸಬಾರದೆಂದು ರೆಸಾರ್ಟ್‌ಗಳಿಗೆ ಸೂಚಿಸಲಾಗಿದೆ. ಮತದಾನದಿಂದ ಯಾರೂ ದೂರ ಉಳಿಯಬಾರದು ಎಂಬ ಕಾರಣಕ್ಕೆ ಈ ಕ್ರಮ ಕೈಗೊಳ್ಳಲಾಗಿದೆ’ ಎಂದು ಜಿಲ್ಲಾಧಿಕಾರಿ ಮೀನಾ ನಾಗರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘26ರಂದು ಚುನಾವಣೆ ನಡೆಯುವ ಜಿಲ್ಲೆಯವರಾಗಿದ್ದರೆ, ಅದರಲ್ಲೂ ಬೆಂಗಳೂರಿನ ಮತದಾರರಾಗಿದ್ದರೆ ಗುರುತಿನ ಚೀಟಿ ನೋಡಿ ಬುಕ್ಕಿಂಗ್ ನಿರಾಕರಿಸಲಾಗುವುದು. ಮತದಾನ ಪ್ರಮಾಣ ಹೆಚ್ಚಳಕ್ಕೆ ಸಹಕಾರ ನೀಡಲಾಗುವುದು’ ಎಂದು ಹೋಮ್ ಸ್ಟೇಗಳ ಮಾಲೀಕರ ಸಂಘದ ಅಧ್ಯಕ್ಷ ಎನ್.ಆರ್.ತೇಜಸ್ವಿ ‘ಪ್ರಜಾವಾಣಿ’ಗೆ ತಿಳಿಸಿದರು.

ಎಚ್‌ಡಿಕೆ ವಿರುದ್ಧ ಕಾಂಗ್ರೆಸ್ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರಾಮೀಣ ಭಾಗದ ಹೆಣ್ಣುಮಕ್ಕಳನ್ನು ಅವಹೇಳನ ಮಾಡಿರುವ ಜೆಡಿಎಸ್ ಮುಖಂಡ ಎಚ್‌.ಡಿ. ಕುಮಾರಸ್ವಾಮಿ ಮತ್ತು ಚುನಾವಣಾ ಪ್ರಚಾರ ಸಮಾವೇಶದಲ್ಲಿ ಧರ್ಮ, ರಾಮಮಂದಿರ ವಿಚಾರವನ್ನು ಪ್ರಸ್ತಾಪಿಸಿದ ಕಾರಣಕ್ಕೆ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು’ ಎಂದು ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ದೂರು ನೀಡಿದೆ.

ಮುಖ್ಯ ಚುನಾವಣಾಧಿಕಾರಿಗೆ ದೂರು ನೀಡಿದ ಬಳಿಕ ಮಾತನಾಡಿದ ಕಾಂಗ್ರೆಸ್‌ನ ಮಾಜಿ ಸಂಸದ ವಿ.ಎಸ್. ಉಗ್ರಪ್ಪ, ‘ಕುಮಾರಸ್ವಾಮಿ ಮಹಿಳೆಯರ ಬಗ್ಗೆ ಲಘುವಾಗಿ ಮಾತನಾಡಿದ್ದಾರೆ. ಕ್ಷಮೆ ಯಾಚಿಸುವ ಮೂಲಕ ಅವರು ತಮ್ಮ ತಪ್ಪು ಒಪ್ಪಿಕೊಂಡಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಯೋಗಕ್ಕೆ ದೂರು ನೀಡಲಾಗಿದೆ’ ಎಂದರು.

‘ಮೈಸೂರಿನಲ್ಲಿ ಭಾನುವಾರ ನಡೆದ ಬಿಜೆಪಿ ಚುನಾವಣಾ ಪ್ರಚಾರದಲ್ಲಿ ಧರ್ಮ, ರಾಮಮಂದಿರ ವಿಚಾರವನ್ನು ಪ್ರಧಾನಿ ನರೇಂದ್ರ ಮೋದಿ ಪ್ರಸ್ತಾಪಿಸಿ, ದೇಶ ಒಡೆಯುವ ದುರುದ್ದೇಶದಿಂದ ತುಕ್ಡೆ ಗ್ಯಾಂಗ್‌ನೊಂದಿಗೆ ಕಾಂಗ್ರೆಸ್ ಅಲೆದಾಡುತ್ತಿದೆ ಎಂದಿದ್ದಾರೆ. ಆ ಮೂಲಕ, ಕೋಮು ಭಾವನೆ ಪ್ರಚೋದಿಸಿದ್ದಾರೆ. ಮೋದಿ ವಿರುದ್ಧವೂ ಆಯೋಗಕ್ಕೆ ದೂರು ನೀಡಲಾಗಿದೆ’ ಎಂದರು.

‘ದಿಂಗಾಲೇಶ್ವರ ಶ್ರೀ ಬ್ಲ್ಯಾಕ್‌ಮೇಲ್ ಪರಿಣತ’

ಧಾರವಾಡದಿಂದ ಸ್ಪರ್ಧಿಸಿದ ಸ್ವಾಮೀಜಿ ವಿರುದ್ಧ ಸಾಹಿತಿ ಸೂಳಿಬಾವಿ ಕಿಡಿ

ಪ್ರಜಾವಾಣಿ ವಾರ್ತೆ

ಗದಗ: ‘ದಿಂಗಾಲೇಶ್ವರ ಸ್ವಾಮೀಜಿ ರಾಜಕಾರಣಿಗಳಂತೆ ತಂತ್ರ– ಕುತಂತ್ರ ಮಾಡುವುದರಲ್ಲಿ ಎತ್ತಿದ ಕೈ. ಬ್ಲಾಕ್‌ಮೇಲ್ ಮಾಡುವುದರಲ್ಲೂ ನಿಸ್ಸೀಮ. ಅವರು ಮಠವನ್ನು ತ್ಯಜಿಸಿ, ವ್ಯಕ್ತಿತ್ವಕ್ಕೆ ಅನುಸಾರ ರಾಜಕೀಯ ಪಕ್ಷಕ್ಕೆ ಸೇರಬೇಕು. ಇಲ್ಲದಿದ್ದರೆ, ಅವರನ್ನು ಭಕ್ತರೇ ತ್ಯಜಿಸುವರು’ ಎಂದು ಸಾಹಿತಿ ಬಸವರಾಜ ಸೂಳಿಬಾವಿ ತಿಳಿಸಿದರು.

‘ಧಾರವಾಡ ಲೋಕಸಭಾ ಕ್ಷೇತ್ರದಿಂದ ಪಕ್ಷೇತರರಾಗಿ ಸ್ಪರ್ಧಿಸುವುದಾಗಿ ಹೇಳುವ ದಿಂಗಾಲೇಶ್ವರ ಸ್ವಾಮೀಜಿ ತಮ್ಮ ಹೋರಾಟ ಪ್ರಲ್ಹಾದ ಜೋಶಿ ವಿರುದ್ಧವೇ ಹೊರತು ಬಿಜೆಪಿ ವಿರುದ್ಧವಲ್ಲ ಎನ್ನುತ್ತಾರೆ. ಜೋಶಿ ಅವರಿಂದ ಲಿಂಗಾಯತರಿಗೆ ಅನ್ಯಾಯವಾಗಿದೆ ಎನ್ನುತ್ತಾರೆ. ಆದರೆ, ಯಾವ ಸ್ವರೂಪದ್ದು ಎಂಬುದನ್ನು ಸ್ಪಷ್ಟಪಡಿಸಲ್ಲ’ ಎಂದು ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ನಿಜಾರ್ಥದಲ್ಲಿ ಹಿಂದೂ ಧರ್ಮದೊಳಗೆ ಎಲ್ಲ ಧರ್ಮಗಳನ್ನು ಆಪೋಶನ ಮಾಡುವ ಪ್ರಯತ್ನವನ್ನು ಬಿಜೆಪಿ ನಿರಂತರವಾಗಿ ಮಾಡುತ್ತಿದೆ. ರಾಜ್ಯದಲ್ಲಿ ಪ್ರತ್ಯೇಕ ಲಿಂಗಾಯತ ಧರ್ಮದ ಹೋರಾಟ ನಡೆದಾಗ ಇದೇ ಕಾರಣಕ್ಕೆ ಬಿಜೆಪಿ ಅದನ್ನು ಬೆಂಬಲಿಸಲಿಲ್ಲ. ಅಷ್ಟೇ ಏಕೆ, ದಿಂಗಾಲೇಶ್ವರ ಸ್ವಾಮೀಜಿ ಕೂಡ ಇದನ್ನು ವಿರೋಧಿಸಿದ್ದರು. ಇದೇ ಮೊದಲಬಾರಿಗೆ ಅವರ ಬಾಯಿಯಿಂದ ಲಿಂಗಾಯತ ಎಂಬ ಪದ ಹೊರ ಬಂದಿದೆ’ ಎಂದು ಅವರು ತಿಳಿಸಿದರು.

‘ದಿಂಗಾಲೇಶ್ವರ ಸ್ವಾಮೀಜಿ ಮೂರು ಸಾವಿರ ಮಠಕ್ಕೆ ಪೀಠಾಧೀಶರಾಗಲು ಹೊರಟಿದ್ದರು. ಹುಬ್ಬಳ್ಳಿಯ ರಾಜಕಾರಣಿಗಳು ಇದನ್ನು ವಿರೋಧಿಸಿದ್ದರು. ಅವರಲ್ಲಿ ಜೋಶಿ ಕೂಡ ಒಬ್ಬರು. ಆಗ ವಿರೋಧಿಸಿದವರ ವಿರುದ್ಧ ಸ್ಪರ್ಧೆ ಮಾಡುವುದು ಇವರ ಈಗಿನ ಉದ್ದೇಶ’ ಎಂದರು.

‘ಸ್ವಾಮಿತ್ವಕ್ಕೆ ಬೇರೆ ಅರ್ಥ ಇದೆ. ಆದರೆ, ಸ್ವಾಮಿ ಅನ್ನಿಸಿಕೊಳ್ಳುವ ಯಾವ ಅರ್ಹತೆಯೂ ಇವರಿಗೆ ಇಲ್ಲ’ ಎಂದರು.

‘ಸ್ಪರ್ಧಿಸದಂತೆ ಸ್ವಾಮೀಜಿಗೆ ಮನವಿ’

ಹುಬ್ಬಳ್ಳಿ: 'ಧಾರವಾಡ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಯದಂತೆ ಶಿರಹಟ್ಟಿ ಭಾವೈಕ್ಯ ಪೀಠದ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಅವರಿಗೆ ಮತ್ತೊಮ್ಮೆ ಮನವಿ ಮಾಡುವೆ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಇಲ್ಲಿ ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕ್ಷೇತ್ರದ ಜನ ಪಕ್ಷದ ಅಭ್ಯರ್ಥಿ ಪ್ರಲ್ಹಾದ ಜೋಶಿ ಪರ ಇದ್ದಾರೆ. ಅವರ ವಿರುದ್ಧ ಸ್ಪರ್ಧಿಸುವ ದುಸ್ಸಾಹಸಕ್ಕೆ ಸ್ವಾಮೀಜಿ ಕೈಹಾಕಬಾರದು. ಯಾವುದೇ ಕಾರಣಕ್ಕೂ ಸ್ಪರ್ಧಿಸದಂತೆ ಅವರನ್ನು ಕೋರುವೆ. ಮುಂದೆ ಏನು ತೀರ್ಮಾನ ಕೈಗೊಳ್ಳುತ್ತಾರೆ ನೋಡೋಣ' ಎಂದರು.

‘ಮಹಿಳೆಯರ ಪಾದ ಮುಟ್ಟಿ ಎಚ್‌ಡಿಕೆ ಕ್ಷಮೆ ಕೇಳಬೇಕು’

ಪ್ರಜಾವಾಣಿ ವಾರ್ತೆ

ಎಚ್‌.ಕೆ.ಪಾಟೀಲ

ಗದಗ: ‘ಗ್ಯಾರಂಟಿಗಳಿಂದ ಹಳ್ಳಿಗಳ ಹೆಣ್ಣುಮಕ್ಕಳು ದಾರಿ ತಪ್ಪಿದ್ದಾರೆ’ಎಂಬ ಹೇಳಿಕೆ ನೀಡಿ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ.ಕುಮಾರಸ್ವಾಮಿ ದೊಡ್ಡ ಪ್ರಮಾದ ಮಾಡಿದ್ದಾರೆ. ಅವರು ತಕ್ಷಣವೇ ಮಹಿಳೆಯ ಪಾದ ಮುಟ್ಟಿ ಕ್ಷಮೆ ಕೇಳಬೇಕು. ಇಲ್ಲವಾದರೆ, ಮುಂದಿನ ದಿನಗಳಲ್ಲಿ ದೊಡ್ಡ ದುರಂತ ಎದುರಿಸಬೇಕಾಗುತ್ತದೆ’ ಎಂದು ಸಚಿವ ಎಚ್‌. ಕೆ.ಪಾಟೀಲ ಎಚ್ಚರಿಕೆ ನೀಡಿದರು.

‘ಕಾಂಗ್ರೆಸ್‌ನವರು ಹೇಳಿಕೆ ತಿರುಚಿ ರಾಜಕೀಯ ಮಾಡುತ್ತಿದ್ದಾರೆ ಎಂಬ ಅವರ ಆರೋಪ ಸತ್ಯಕ್ಕೆ ದೂರವಾದುದು. ಇವತ್ತಿನ ದಿನಗಳಲ್ಲಿ ಹಿಟ್ ಆ್ಯಂಡ್ ರನ್ ಆಟ ನಡೆಯುವುದಿಲ್ಲ. ಅವರ ಹೇಳಿಕೆ ರೆಕಾರ್ಡ್ ಆಗಿದೆ. ಅದನ್ನು ನಾವು ತಿರುಚುವುದು ಎಲ್ಲಿಂದ ಬಂತು’ ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನಿಸಿದರು.

‘ಮಾಜಿ ಮುಖ್ಯಮಂತ್ರಿಯೊಬ್ಬರು ಮಹಿಳೆಯರ ಬಗ್ಗೆ ಆಡಿರುವ ಅಗೌರವದ ಮಾತುಗಳು ರಾಜಕೀಯ ಕ್ಷೇತ್ರದ ಅತ್ಯಂತ ಅವಮಾನಕರ ಹೇಳಿಕೆ’ ಎಂದು ಖಂಡಿಸಿದರು.

‘ಗ್ಯಾರಂಟಿ ಯೋಜನೆಗಳ ಯಶಸ್ಸು ಬಿಜೆಪಿ ಮತ್ತು ಜೆಡಿಎಸ್ ನಾಯಕರಿಗೆ ಆತಂಕ ತಂದೊಡ್ಡಿದೆ. ಮಹಿಳೆಯರು ನಮಗೆ ಮತ ಹಾಕುವುದಿಲ್ಲ ಎಂಬ ಭಾವನೆ ಆವರಿಸಿಕೊಂಡಿದೆ. ಈ ಕಾರಣಕ್ಕಾಗಿ ಅವರು ಮಹಿಳೆಯರನ್ನು ಅಪಹಾಸ್ಯ ಮಾಡಿದ್ದಾರೆ. ಮತ್ತೊಬ್ಬರು ಬೆಳಗಾವಿಯಲ್ಲಿ ಮಹಿಳಾ ಸಚಿವರ ಬಗ್ಗೆ ಕೆಟ್ಟದಾಗಿ ಮಾತನಾಡಿದ್ದಾರೆ. ಮಹಿಳೆಯನ್ನು ಅಪಹಾಸ್ಯ ಮಾಡುವುದು, ಚಾರಿತ್ರ್ಯದ ಬಗ್ಗೆ ಲಘು ಮಾತು ಆಡುವುದು ಸರಿಯಲ್ಲ’ ಎಂದು ಅವರು ಹೇಳಿದ್ದಾರೆ.

ಮಹಿಳೆಯರ ಅವಹೇಳನ: ಸುರ್ಜೇವಾಲಾ, ಶಾಮನೂರು ವಿರುದ್ಧ ದೂರು

ಬೆಂಗಳೂರು: ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಮಹಿಳೆಯರನ್ನು ಅವಹೇಳನ ಮಾಡಿರುವ ಆರೋಪದಡಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಮತ್ತು ಶಾಸಕ ಶಾಮನೂರು ಶಿವಶಂಕರಪ್ಪ ವಿರುದ್ಧ ಕ್ರಮ ಜರುಗಿಸುವಂತೆ ಅಖಿಲ ಭಾರತ ಕಾರ್ಮಿಕ ಹಿತರಕ್ಷಣಾ ವೇದಿಕೆ ರಾಜ್ಯ ಮಹಿಳಾ ಆಯೋಗಕ್ಕೆ ದೂರು ನೀಡಿದೆ.

‘ಚಿತ್ರನಟಿ ಹೇಮಮಾಲಿನಿ ಅವರಿಗೆ ಬಿಜೆಪಿ ಟಿಕೆಟ್ ಪ್ರಕಟಿಸಿದಾಗ ಅಶ್ಲೀಲವಾಗಿ ಟೀಕಿಸಿದ್ದ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಮತ್ತು ಮಹಿಳೆಯರು ಅಡುಗೆ ಮನೆಗೆ ಸೀಮಿತ ಆಗಿರಬೇಕು ಎಂಬರ್ಥದಲ್ಲಿ ಮಾತನಾಡಿರುವ ಶಾಮನೂರು ಶಿವಶಂಕರಪ್ಪ ಅವರಿಂದ ಮಹಿಳೆಯರ ಘನತೆಗೆ ಧಕ್ಕೆಯಾಗಿದೆ’ ಎಂದು ವೇದಿಕೆಯ ಅಧ್ಯಕ್ಷೆ ಆರ್. ಗಿರಿಜಮ್ಮ ಮತ್ತಿತರರು ಸೋಮವಾರ ಸಲ್ಲಿಸಿರುವ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಮಹಿಳೆಯರ ಘನತೆಯನ್ನು ರಕ್ಷಿಸಬೇಕಾದ ಶಾಸಕರು, ಸಂಸದರೇ ಈ ರೀತಿ ನಡೆದುಕೊಂಡಿರುವುದು ಸರಿಯಲ್ಲ. ಸುರ್ಜೇವಾಲಾ ಅವರು ಹೇಮಮಾಲಿನಿ ಅವರ ಕುರಿತು ಅತ್ಯಂತ ಕೀಳು ಅಭಿರುಚಿಯ ಮಾತನಾಡಿದ್ದರು. ಶಾಮನೂರು ಶಿವಶಂಕರಪ್ಪ ಮಹಿಳಾ ದ್ವೇಷಿ ಮನೋಭಾವವನ್ನು ತಮ್ಮ ಹೇಳಿಕೆ ಮೂಲಕ ಪ್ರಕಟಿಸಿದ್ದರು. ಇಬ್ಬರ ವಿರುದ್ಧವೂ ಕ್ರಮ ಜರುಗಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಪತಿಗಿಂತ ಪತ್ನಿಯೇ ಶ್ರೀಮಂತೆ

₹32.84 ಕೋಟಿ
ಒಟ್ಟು ಆಸ್ತಿಯ ಮೌಲ್ಯ

ಗಾಯತ್ರಿ ಸಿದ್ದೇಶ್ವರ

ದಾವಣಗೆರೆ: ದಾವಣಗೆರೆ ಲೋಕಸಭೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರ ಆಸ್ತಿಯು ಪತಿಗಿಂತ ಹೆಚ್ಚು ಇದೆ. ಇವರ ಬಳಿ ₹2.38 ಕೋಟಿ ಮೌಲ್ಯದ 3.50 ಕೆ.ಜಿ. ಚಿನ್ನ ಹಾಗೂ 5.50 ಕೆ.ಜಿ. ಬೆಳ್ಳಿ ಇದ್ದು, ಸ್ವಂತ ವಾಹನವಿಲ್ಲ. ಪತಿಯ ಬಳಿ 212 ಗ್ರಾಂ ಚಿನ್ನ, 37 ಕೆ.ಜಿ. ಬೆಳ್ಳಿ ಇದೆ. ಗಾಯತ್ರಿ ಅವರಿಗೆ ₹ 5.89 ಲಕ್ಷ ಸಾಲವಿದೆ. ಸಿದ್ದೇಶ್ವರ ಅವರ ಆಸ್ತಿ 5 ವರ್ಷಗಳಲ್ಲಿ ಹೆಚ್ಚಾಗಿದ್ದು, 2019ರಲ್ಲಿ ₹19.39 ಕೋಟಿ ಘೋಷಿಸಿಕೊಂಡಿದ್ದರು. ಅವರ ಪತಿ ಜಿ.ಎಂ. ಸಿದ್ದೇಶ್ವರ ಅವರ ಆಸ್ತಿಯ ಮೌಲ್ಯ ₹26.62 ಕೋಟಿ ಇದೆ.

ಆನಂದಸ್ವಾಮಿ 3 ಕಾರು, 1 ಬೈಕ್ ಮಾಲೀಕ

ಒಟ್ಟು ಆಸ್ತಿಯ ಮೌಲ್ಯ
₹57 ಕೋಟಿ
ಪತ್ನಿ: ದೀಪಾ ಗಡ್ಡದೇವರಮಠ ₹56.52 ಲಕ್ಷ

ಆನಂದಸ್ವಾಮಿ ಗಡ್ಡದೇವರಮಠ

ಹಾವೇರಿ: ಮೊದಲ ಸಲ ಲೋಕಸಭೆ ಚುನಾವಣೆಗೆ ಸ್ಪರ್ಧಿಸುತ್ತಿರುವ ಕಾಂಗ್ರೆಸ್ ಅಭ್ಯರ್ಥಿ ಆನಂದಸ್ವಾಮಿ ಗಡ್ಡದೇವರಮಠ ಅವರ ಒಟ್ಟು ಆಸ್ತಿ ಮೌಲ್ಯ ₹57 ಕೋಟಿ. ಆನಂದಸ್ವಾಮಿ ಮತ್ತು ಪತ್ನಿ ಬಳಿ ಒಟ್ಟು ₹37 ಕೋಟಿ ಸ್ಥಿರಾಸ್ತಿ ಹಾಗೂ ₹20 ಕೋಟಿ ಚರಾಸ್ತಿ ಇದೆ. ಒಂದು ಹೊಂಡಾ ಸಿಟಿ ಕಾರು, ಇನ್ನೋವಾ ಕ್ರಿಸ್ಟಾ, ಇನ್ನೋವಾ ಹೈಬ್ರಿಡ್ ಹಾಗೂ ಒಂದು ಬೈಕ್ ಸೇರಿ ₹50.54 ಲಕ್ಷ ಮೌಲ್ಯದ ವಾಹನಗಳಿವೆ. ಇವರು ಮಾಜಿ ಶಾಸಕ ಜಿ.ಎಸ್.ಗಡ್ಡದೇವರಮಠ ಅವರ ಪುತ್ರ.

ಅಣ್ಣಾಸಾಹೇಬ ಪತ್ನಿ ಆಸ್ತಿಯಲ್ಲಿ ಭಾರಿ ಇಳಿಕೆ

ಒಟ್ಟು ಆಸ್ತಿಯ ಮೌಲ್ಯ
₹21.62 ಕೋಟಿ
ಪತ್ನಿ: ಶಶಿಕಲಾ ಜೊಲ್ಲೆ ₹39.04 ಕೋಟಿ

ಅಣ್ಣಾಸಾಹೇಬ ಜೊಲ್ಲೆ

ಚಿಕ್ಕೋಡಿ: ಚಿಕ್ಕೋಡಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅಣ್ಣಾಸಾಹೇಬ ಜೊಲ್ಲೆ ಅವರ ಒಟ್ಟು ಆಸ್ತಿ ₹21.62 ಕೋಟಿ. ಕಳೆದ ವರ್ಷಕ್ಕೆ ಹೋಲಿಸಿದರೆ ₹85 ಲಕ್ಷ ಹೆಚ್ಚಾಗಿದೆ. ಆದರೆ, ಅವರ ಪತ್ನಿ, ಶಾಸಕಿ ಶಶಿಕಲಾ ಜೊಲ್ಲೆ ಅವರ ಆಸ್ತಿ ₹39.04 ಕೋಟಿ ಕಡಿಮೆ ಆಗಿದೆ. ಕಳೆದ ವರ್ಷದ ವಿಧಾನಸಭಾ ಚುನಾವಣೆ ವೇಳೆ ಶಶಿಕಲಾ ಒಟ್ಟು ₹68.58 ಕೋಟಿ ಮೌಲ್ಯದ ಆಸ್ತಿ ಹೊಂದಿದ್ದರು. ಈಗ ಅವರ ಪತಿ ಸಲ್ಲಿಸಿದ ಅಫಿಡವಿಟ್‌ನಲ್ಲಿ ₹29.54 ಕೋಟಿ ಮಾತ್ರವಿದೆ.

ಸಚಿವೆ ಪುತ್ರನಿಗೆ ವಾಹನವಿಲ್ಲ

ಒಟ್ಟು ಆಸ್ತಿಯ ಮೌಲ್ಯ
₹13.63 ಕೋಟಿ
ಪತ್ನಿ: ಹಿತ ₹23.55 ಲಕ್ಷ

ಮೃಣಾಲ್ ಹೆಬ್ಬಾಳಕರ

ಬೆಳಗಾವಿ: ಸಚಿವೆ ಲಕ್ಷ್ಮಿ ಹೆಬ್ಬಾಳಕರ ಪುತ್ರ, ಕಾಂಗ್ರೆಸ್ ಅಭ್ಯರ್ಥಿ ಮೃಣಾಲ್ ಹೆಬ್ಬಾಳಕರ ಬಳಿ ₹13.63 ಕೋಟಿ ಮೌಲ್ಯದ ಆಸ್ತಿಯಿದೆ. ₹10.01 ಕೋಟಿ ಮೌಲ್ಯದ ಚರಾಸ್ತಿ, ₹3.62 ಕೋಟಿ ಸ್ಥಿರಾಸ್ತಿ ಇದೆ. ₹4.20 ಕೋಟಿ ಮೌಲ್ಯದ ಶೇರ್‌ಗಳಿವೆ. ₹6.16 ಕೋಟಿ ಸಾಲ ಮಾಡಿರುವ ಅವರ ಬಳಿ ವಾಹನವಿಲ್ಲ.

ಗೀತಾ ಶಿವರಾಜಕುಮಾರ್ ಆಸ್ತಿ ಮೌಲ್ಯ ₹40.04 ಕೋಟಿ

ಒಟ್ಟು ಆಸ್ತಿಯ ಮೌಲ್ಯ
₹40.04 ಕೋಟಿ
ಪತಿ: ಶಿವರಾಜ್‌ಕುಮಾರ್ ₹49 ಕೋಟಿ

ಗೀತಾ ಶಿವರಾಜಕುಮಾರ್

ಶಿವಮೊಗ್ಗ: ಶಿವಮೊಗ್ಗ ಕ್ಷೇತ್ರದಿಂದ ಸ್ಪರ್ಧಿಸಲು ಕಾಂಗ್ರೆಸ್ ಅಭ್ಯರ್ಥಿಯಾಗಿ ಸೋಮವಾರ ನಾಮಪತ್ರ ಸಲ್ಲಿಸಿರುವ ಗೀತಾ ಶಿವರಾಜಕುಮಾರ್ ಅವರ ಒಟ್ಟು ಆಸ್ತಿಯ ಮೌಲ್ಯ ₹40.04 ಕೋಟಿ.

ಪತಿ ಶಿವರಾಜಕುಮಾರ್ ಆಸ್ತಿಯ ಮೌಲ್ಯ ₹49 ಕೋಟಿ. ಪತಿ–ಪತ್ನಿ ಇಬ್ಬರ ಒಟ್ಟು ಆಸ್ತಿಯ ಮೌಲ್ಯ ₹89.04 ಕೋಟಿ. ಗೀತಾ ಶಿವರಾಜಕುಮಾರ್ ಬಳಿ ₹3.50 ಕೋಟಿ ಮೌಲ್ಯದ 11.54 ಕೆ.ಜಿ. ಚಿನ್ನ ಹಾಗೂ ವಜ್ರದ ಆಭರಣಗಳು ಇವೆ.

ಜಗದೀಶ ಶೆಟ್ಟರ್, ಪತ್ನಿ ಬಳಿ ವಾಹನವಿಲ್ಲ

ಒಟ್ಟು ಆಸ್ತಿಯ ಮೌಲ್ಯ
₹13.51 ಕೋಟಿ
ಪತ್ನಿ: ಶಿಲ್ಪಾ ₹92.10 ಲಕ್ಷ

ಜಗದೀಶ ಶೆಟ್ಟರ್

ಬೆಳಗಾವಿ: ಬೆಳಗಾವಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಜಗದೀಶ ಶೆಟ್ಟರ್ ಅವರ ಆಸ್ತಿಯಲ್ಲಿ ಕಳೆದ ಒಂದು ವರ್ಷದಲ್ಲಿ ಹೆಚ್ಚೇನೂ ವ್ಯತ್ಯಾಸ ಕಂಡು ಬಂದಿಲ್ಲ. ಕಳೆದ ಬಾರಿ ಅವರ ಇಡೀ ಕುಟುಂಬದ ಆಸ್ತಿ ₹13.51 ಕೋಟಿ ಎಂದು ತೋರಿಸಿದ್ದರು. ಈ ಸಲ ₹13.82 ಕೋಟಿ ತೋರಿಸಿದ್ದಾರೆ. ತಮ್ಮ ಬಳಿ ₹12.45 ಕೋಟಿ, ಪತ್ನಿ ಶಿಲ್ಪಾ ಬಳಿ ₹92.10 ಲಕ್ಷದ ಆಸ್ತಿ ಇದೆ. ಪತಿ ಪತ್ನಿ ಶ್ರೀಮಂತರಾದರೂ ಇಬ್ಬರ ಬಳಿಯೂ ವಾಹನವಿಲ್ಲ.

ಪತ್ನಿ ಆಸ್ತಿಯೇ ಹೆಚ್ಚು

ಒಟ್ಟು ಆಸ್ತಿಯ ಮೌಲ್ಯ
₹13.99 ಕೋಟಿ
ಪತ್ನಿ: ಸ್ವಾತಿ ₹8.53 ಕೋಟಿ

ಪ್ರೊ.ರಾಜು ಆಲಗೂರ

ವಿಜಯಪುರ: ವಿಜಯಪುರ ಮೀಸಲು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪ್ರೊ. ರಾಜು ಆಲಗೂರ ಅವರಿಗಿಂತ ಅವರ ಪತ್ನಿ ಆಸ್ತಿಯೇ ಹೆಚ್ಚಿದೆ. ರಾಜು ಆಲಗೂರ ಅವರ ವೈಯಕ್ತಿಕ ಆಸ್ತಿ ₹ 5.46 ಕೋಟಿ.

ನಾಗಠಾಣ ಕ್ಷೇತ್ರದಿಂದ ಈ ಹಿಂದೆ ಎರಡು ಬಾರಿ ಶಾಸಕರಾಗಿದ್ದ ಆಲಗೂರ ಅವರು, ಮೊದಲ ಬಾರಿಗೆ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದಾರೆ.

ವರ್ಷದೊಳಗೆ ₹2 ಕೋಟಿಗೆ ಏರಿದ ಆಸ್ತಿ ಮೌಲ್ಯ

ಒಟ್ಟು ಆಸ್ತಿಯ ಮೌಲ್ಯ
₹13.97 ಕೋಟಿ
ಪತ್ನಿ: ಜ್ಯೋತಿ ಜೋಶಿ ₹6.8 ಕೋಟಿ

ಪ್ರಲ್ಹಾದ ಜೋಶಿ

ಧಾರವಾಡ: ಬಿಜೆಪಿಯಿಂದ ಲೋಕಸಭಾ ಚುನಾವಣೆಗೆ ಐದನೇ ಬಾರಿಗೆ ಸ್ಪರ್ಧಿಸಿರುವ ಸಚಿವ ಪ್ರಲ್ಹಾದ ಜೋಶಿ ಅವರು ₹ 13.97 ಕೋಟಿ ಮೌಲ್ಯದ ಆಸ್ತಿ ಹೊಂದಿದ್ದಾರೆ. ಸತತ ನಾಲ್ಕು ಬಾರಿ ಸಂಸದರಾಗಿ ಆಯ್ಕೆಯಾದ ಅವರಿಗೆ ಸ್ವಂತ ವಾಹನ ಇಲ್ಲ. ಜೋಶಿ ಅವರ ಬಳಿ 184 ಗ್ರಾಂ ಚಿನ್ನ 5 ಕೆ.ಜಿ ಬೆಳ್ಳಿ, ಅವರ ಪತ್ನಿ ಬಳಿ 500 ಗ್ರಾಂ ಚಿನ್ನ, 2 ಕೆ.ಜಿ ಬೆಳ್ಳಿ ಇದೆ. ಜೋಶಿ ಅವರ ಹೆಸರಿನಲ್ಲಿ ₹ 6.63 ಕೋಟಿ ಮತ್ತು ಪತ್ನಿ ಹೆಸರಿನಲ್ಲಿ ₹1.37 ಕೋಟಿ ಸಾಲ ಇದೆ. 2019ರ ಲೋಕಸಭಾ ಚುನಾವಣೆಯಲ್ಲಿ ಸಲ್ಲಿಸಿದ್ದ ಪ್ರಮಾಣ ಪತ್ರದಲ್ಲಿ ಜೋಶಿ ಅವರ ಒಟ್ಟು ಆಸ್ತಿ ಮೌಲ್ಯ ₹10.34 ಕೋಟಿ ಘೋಷಿಸಿಕೊಂಡಿದ್ದರು. ಈ ಸ್ಥಿರಾಸ್ತಿ ಮೌಲ್ಯ₹ 8.09 ಕೋಟಿ ಇತ್ತು. ಈ ಬಾರಿ ಸ್ಥಿರಾಸ್ತಿ ಮೌಲ್ಯ ₹ 11.24 ಕೋಟಿ ಘೋಷಿಸಿಕೊಂಡಿದ್ದಾರೆ.

ಆಸ್ತಿ ಐದು ಪಟ್ಟು ಹೆಚ್ಚಳ

ಒಟ್ಟು ಆಸ್ತಿಯ ಮೌಲ್ಯ
₹51.06 ಕೋಟಿ
ಪತ್ನಿ: ಚನ್ನಮ್ಮ ₹1.32 ಕೋಟಿ


ಬಸವರಾಜ ಬೊಮ್ಮಾಯಿ

ಹಾವೇರಿ: ಮಾಜಿ ಮುಖ್ಯಮಂತ್ರಿ, ಹಾಲಿ ಶಾಸಕ ಬಸವರಾಜ ಬೊಮ್ಮಾಯಿ ಅವರು 2018ರ ವಿಧಾನಸಭಾ ಚುನಾವಣೆಯಲ್ಲಿ ₹10.19 ಕೋಟಿ ಮೌಲ್ಯದ ಆಸ್ತಿ ಘೋಷಿಸಿಕೊಂಡಿದ್ದರು. ಈ ಬಾರಿ ಬೊಮ್ಮಾಯಿ, ಪತ್ನಿ ಚನ್ನಮ್ಮ ಹಾಗೂ ಮಗಳು ಅದಿತಿ ಹೆಸರಲ್ಲಿ ಒಟ್ಟು ₹53.91 ಕೋಟಿ ಮೌಲ್ಯದ ಆಸ್ತಿ ಘೋಷಿಸಿದ್ದಾರೆ. 6 ವರ್ಷಗಳಲ್ಲಿ ಬಸವರಾಜ ಬೊಮ್ಮಾಯಿ ಕುಟುಂಬದ ಆಸ್ತಿ 5 ಪಟ್ಟು ಹೆಚ್ಚಾಗಿದೆ. ವಿಶೇಷವೆಂದರೆ ಬೊಮ್ಮಾಯಿ ಬಳಿ ಯಾವುದೇ ಸ್ವಂತ ವಾಹನವಿಲ್ಲ.

ಖೂಬಾಗಿಲ್ಲ ಸ್ವಂತ ಮನೆ

ಒಟ್ಟು ಆಸ್ತಿಯ ಮೌಲ್ಯ
₹3.88 ಕೋಟಿ
ಪತ್ನಿ: ಶೀಲಾ ಖೂಬಾ ₹1.96 ಕೋಟಿ

ಭಗವಂತ ಖೂಬಾ

ಬೀದರ್: ಎರಡು ಸಲ ಬೀದರ್ ಕ್ಷೇತ್ರದಿಂದ ಸಂಸದರಾಗಿರುವ ಕೇಂದ್ರ ಸಚಿವ ಭಗವಂತ ಖೂಬಾ ಅವರಿಗೆ ಸ್ವಂತ ಮನೆ ಇಲ್ಲ. ಆದರೆ, ಅವರ ಪತ್ನಿ ಶೀಲಾ ಖೂಬಾ ಅವರ ಹೆಸರಲ್ಲಿ ಬೀದರ್‌ನಲ್ಲಿ ₹ 30 ಲಕ್ಷ ಮೌಲ್ಯದ 80X60 ಅಡಿ ಅಳತೆಯ ಮನೆ ಇದೆ. ಖೂಬಾ ಅವರು ಬೀದರ್‌ನ ಎಸ್‌ಬಿಐ ಬ್ಯಾಂಕ್‌ನಲ್ಲಿ ₹ 9.09 ಲಕ್ಷ ವೈಯಕ್ತಿಕ ಸಾಲ ಪಡೆದಿದ್ದಾರೆ. ಖೂಬಾ ಬಳಿ ಒಂದು ಟೊಯೊಟಾ ಇನ್ನೋವಾ ಕಾರು, ಒಂದು ಬೈಕ್ ಇದೆ.

‘ಕುಟುಂಬ ರಾಜಕಾರಣ: ಮೋದಿ ಮೌನ ವಹಿಸಿದ್ದೇಕೆ?’

ಬೆಂಗಳೂರು: ‘ಮೈಸೂರಿನಲ್ಲಿ ಭಾನುವಾರ ನಡೆದ ಬಿಜೆಪಿ ಚುನಾವಣಾ ಸಮಾವೇಶದಲ್ಲಿ ಕುಟುಂಬ ರಾಜಕಾರಣದ ಬಗ್ಗೆ ನರೇಂದ್ರ ಮೋದಿ ಮೌನ ವಹಿಸಿದ್ದು ಏಕೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಮೋದಿ ಪದೇ ಪದೇ ಕುಟುಂಬ ರಾಜಕಾರಣದ ಬಗ್ಗೆ ಮಾತನಾಡುತ್ತಾರೆ. ಆದರೆ, ಮೈಸೂರಿನಲ್ಲಿ ವೇದಿಕೆ ಮೇಲೆ ಎಚ್‌. ಡಿ. ದೇವೇಗೌಡ ಮತ್ತು ಯಡಿಯೂರಪ್ಪ ಇದ್ದರು. ಹೀಗಾಗಿ ಅವರು ಕುಟುಂಬ ರಾಜಕಾರಣದ ಬಗ್ಗೆ ಮಾತನಾಡಿಲ್ಲ’ ಎಂದು ವ್ಯಂಗ್ಯವಾಡಿದರು.

‘ಮೋದಿ ತಮಗೆ ಬೇಕಾದಾಗ ಕುಟುಂಬ ರಾಜಕಾರಣದ ಬೆಂಬಲ ಪಡೆಯುತ್ತಾರೆ. ಬೇಡದೆ ಇದ್ದಾಗ ತೆಗಳುತ್ತಾರೆ’ ಎಂದ ಅವರು, ‘ಕಾಂಗ್ರೆಸ್ ಗ್ಯಾರಂಟಿ ಮತ್ತು ಮೋದಿ ಗ್ಯಾರಂಟಿಯನ್ನು ಹೋಲಿಕೆ ಮಾಡಲು ಸಾಧ್ಯವಿಲ್ಲ’ ಎಂದರು.

‘ಬಿಜೆಪಿ ಪ್ರಣಾಳಿಕೆಯಲ್ಲಿ ಮೋದಿ ಕಿ ಗ್ಯಾರಂಟಿ ಎಂದಿದ್ದಾರೆ. ಬಿಜೆಪಿಯಲ್ಲಿ ವ್ಯಕ್ತಿ ಪೂಜೆ ಪರಾಕಾಷ್ಠೆ ತಲುಪಿದೆ. ಮೋದಿಯವರನ್ನು ಮತ್ತೆ ಪ್ರಧಾನಿ ಮಾಡಲು ಮತ ಹಾಕಿ ಎಂದು ಬಿಜೆಪಿಯವರು ಕೇಳುತ್ತಿದ್ದಾರೆ. ಇದರ ಪರಿಣಾಮವಾಗಿ ಮೋದಿ ಕೂಡ ತಮ್ಮ ಬಗ್ಗೆಯೇ ಮಾತನಾಡುತ್ತಾರೆ. ಇದು ಆತ್ಮರತಿಯ ಅತಿರೇಕದ ಭ್ರಮೆ’ ಎಂದರು.

‘ಮಹಿಳೆಯರ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವ ಕುಮಾರಸ್ವಾಮಿ, ವಿಷಾದ ವ್ಯಕ್ತಪಡಿಸಿದರೆ ಸಾಕಾಗಲ್ಲ, ಮಹಿಳೆಯರಲ್ಲಿ ಕ್ಷಮೆ ಕೇಳಬೇಕು’ ಎಂದು ಆಗ್ರಹಿಸಿದರು.

‘ಪಂಚಮಸಾಲಿ ದೊರೆಯದ ಪ್ರಾತಿನಿಧ್ಯ’

ಪ್ರಜಾವಾಣಿ ವಾರ್ತೆ

ದಾವಣಗೆರೆ: ಲೋಕಸಭಾ ಚುನಾವಣೆಯ ಟಿಕೆಟ್ ಹಂಚಿಕೆಯಲ್ಲಿ ವೀರಶೈವ ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ಪ್ರಾತಿನಿಧ್ಯ ದೊರೆತಿಲ್ಲ ಎಂಬ ಕಾರಣದಿಂದ ಅಸಮಾಧಾನಗೊಂಡಿರುವ ಹರಿಹರದ ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿ ಅವರೊಂದಿಗೆ ಸಮುದಾಯದ ಮುಖಂಡರು ಭಾನುವಾರ ಸಭೆ ನಡೆಸಿದರು.

ಪ್ರಮುಖ ಪಕ್ಷಗಳು ಪಂಚಮಸಾಲಿ ಸಮುದಾಯವನ್ನು ಮತ ಬ್ಯಾಂಕ್ ಆಗಿ ಬಳಸಿಕೊಳ್ಳುತ್ತಿವೆ. ಟಿಕೆಟ್ ಹಂಚಿಕೆಯಲ್ಲಿ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಿಲ್ಲ ಎಂದು ಸ್ವಾಮೀಜಿ ವಿವಿಧ ಪಕ್ಷಗಳ ಮುಖಂಡರ ವಿರುದ್ಧ ಅಸಮಾಧಾನಗೊಂಡಿದ್ದರು. ಇದು ಲೋಕಸಭಾ ಚುನಾವಣೆ ಫಲಿತಾಂಶದ ಮೇಲೆ ಪರಿಣಾಮ ಬೀರಬಹುದು ಎಂಬ ಕಾರಣಕ್ಕೆ ಬಿಜೆಪಿಯ ಕೇಂದ್ರ ಮುಖಂಡರು ಸ್ವಾಮೀಜಿ ಮನವೊಲಿಸುವ ಪ್ರಯತ್ನ ನಡೆಸಿದ್ದರು. ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ಹರಿಹರದ ಪೀಠದಲ್ಲಿ ವಚನಾನಂದ ಸ್ವಾಮೀಜಿ ನೇತೃತ್ವದಲ್ಲಿ ಅವರೊಂದಿಗೆ ಈ ಸಭೆ ನಡೆಸಲಾಯಿತು.

ವೀರಶೈವ ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ರಾಜಕೀಯ ಪ್ರಾತಿನಿಧ್ಯ ನೀಡುವಲ್ಲಿ ಆಗಿರುವ ಅನ್ಯಾಯದ ಕುರಿತು ಸ್ವಾಮೀಜಿ ತಳೆದಿರುವ ನಿಲುವಿಗೆ ಮುಖಂಡರು ಬೆಂಬಲ ನೀಡಿದರು. ‘ಈ ನಿಟ್ಟಿನಲ್ಲಿ ನಮ್ಮ ನಿರ್ಧಾರವೇ ಅಂತಿಮ ಎಂಬ ತೀರ್ಮಾನಕ್ಕೆ ಎಲ್ಲ ಮುಖಂಡರೂ ಬದ್ಧರಾಗಿದ್ದಾರೆ’ ಎಂದು ವಚನಾನಂದ ಸ್ವಾಮೀಜಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ರಾಜಕೀಯ ಪ್ರಾತಿನಿಧ್ಯದ ವಿಷಯದಲ್ಲಿ ಸಮುದಾಯಕ್ಕೆ ಅನ್ಯಾಯ ಆಗಿರುವುದು ನಿಜ. ಈ ಬಗ್ಗೆ ಸ್ವಾಮೀಜಿ ತಾಳುವ ನಿಲುವನ್ನು ಎಲ್ಲರೂ ಬೆಂಬಲಿಸೋಣ ಎಂಬ ನಿರ್ಧಾರ ಕೈಗೊಳ್ಳಲಾಯಿತು. ಚುನಾವಣೆಯಲ್ಲಿ ಸಮುದಾಯದ ಅಭ್ಯರ್ಥಿಗಳು ಸ್ಪರ್ಧಿಸಿರುವ ಕಡೆ ಅವರನ್ನು ಪಕ್ಷಾತೀತವಾಗಿ ಬೆಂಬಲಿಸುವ ತೀರ್ಮಾನ ಕೈಗೊಳ್ಳಲಾಯಿತು’ ಎಂದರು.

ರಾಜ್ಯದ 16 ಜಿಲ್ಲೆಗಳಲ್ಲಿ ಪಂಚಮಸಾಲಿ ಸಮುದಾಯದ ಜಿಲ್ಲಾ ಹಾಗೂ ತಾಲ್ಲೂಕು ಘಟಕಗಳ ಪದಾಧಿಕಾರಿಗಳು, ಯುವ ಘಟಕ, ಮಹಿಳಾ ಘಟಕ, ಹರ ಘಟಕ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ಸ್ವಾಮೀಜಿ ಸಭೆ ನಡೆಸಿದರು. ಬಿಜೆಪಿಯ ಪ್ರಮುಖ ನಾಯಕರು ವಿಡಿಯೊ ಸಂವಾದದ ಮೂಲಕವೂ ಭಾಗವಹಿಸಿದ್ದರು.

‘ಸಮುದಾಯದ ಮುಖಂಡರೊಂದಿಗೆ ಸಭೆ ನಡೆಸಿರುವ ಹಿನ್ನೆಲೆಯಲ್ಲಿ ಮಂಗಳವಾರ ಬಿಜೆಪಿಯ ಪ್ರಮುಖ ನಾಯಕರು ಮತ್ತೆ ಮಾತುಕತೆಗೆ ಒಪ್ಪಿದ್ದಾರೆ. ಬೆಂಗಳೂರಿನಲ್ಲಿ ಈ ಬಗ್ಗೆ ಮತ್ತೊಂದು ಸುತ್ತಿನ ಮಾತುಕತೆ ನಡೆಯಲಿದೆ. ಅಲ್ಲಿ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತೇವೆ’ ಎಂದು ಸ್ವಾಮೀಜಿ ತಿಳಿಸಿದರು.

ಸೋಮಣ್ಣ ಸೋತರೆ ಹೇಗೆ ಮುಖ ತೋರಿಸಲಿ: ಎಚ್‌.ಡಿ. ದೇವೇಗೌಡ

ಪ್ರಜಾವಾಣಿ ವಾರ್ತೆ

ಕೊರಟಗೆರೆ (ತುಮಕೂರು): ‘ತುಮಕೂರು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ ಏನಾದರೂ ಸೋತರೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹೇಗೆ ಮುಖ ತೋರಿಸಲಿ’ ಎಂದು ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಕೇಳಿದರು.

ಪಟ್ಟಣದಲ್ಲಿ ಸೋಮವಾರ ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, ‘ಸೋಮಣ್ಣ ಸೋತರೆ ಮೋದಿ ಮುಂದೆ ನಿಂತು ಕಾವೇರಿ ನೀರಿನ ಬಗ್ಗೆ ಅನ್ಯಾಯ ಸರಿಪಡಿಸಿ ಎಂದು ಕೇಳುವ ಯೋಗ್ಯತೆ ನನಗೆ ಇರಲ್ಲ’ ಎಂದು ಕಳವಳ ವ್ಯಕ್ತಪಡಿಸಿದರು.

‘ರಾಜ್ಯ ಕಾಂಗ್ರೆಸ್ ಸರ್ಕಾರ ಕಾವೇರಿ ನದಿ ನೀರನ್ನು ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್‌ಗೆ ಒತ್ತೆ ಇಟ್ಟಿದೆ. ಇದರ ವಿರುದ್ಧ ಹೋರಾಟ ಮಾಡಲು ನಮಗೆ ಶಕ್ತಿ ಬೇಕಿದೆ. ಕಾವೇರಿ ವಿಚಾರದಲ್ಲಿ ನಾನು ಮೋದಿ ಅವರನ್ನು ನಂಬಿದ್ದೇನೆ’ ಎಂದರು.

‘ದೇವೇಗೌಡರಿಗೆ 91 ವರ್ಷ ವಯಸ್ಸಾಯ್ತು ಅನ್ನೋ ಭಾವನೆ ಇಟ್ಟುಕೊಳ್ಳಬೇಡಿ. ಮತ್ತೆ ಕಾವೇರಿ ನೀರಿಗಾಗಿ ಹೋರಾಟ ಆರಂಭಿಸುತ್ತೇನೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಹಿಳೆಯರ ಬಗ್ಗೆಕುಮಾರಸ್ವಾಮಿ ಕೀಳಾಗಿ ಮಾತನಾಡಿಲ್ಲ. ಇದೆಲ್ಲ ಕಾಂಗ್ರೆಸ್‌ನವರ ಚಿತಾವಣೆ ಎಂದು ತಾಲ್ಲೂಕಿನ ಊರ್ಡಿಗೆರೆಯ ಪ್ರಚಾರ ಸಭೆಯಲ್ಲಿ ಸ್ಪಷ್ಟಪಡಿಸಿದರು.

‘ಡಿಕೆಶಿ ಒಕ್ಕಲಿಗರ ನಾಯಕರಲ್ಲ, ಕನಕಪುರ ನಾಯಕ’

ಬೆಂಗಳೂರು: ‘ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಒಕ್ಕಲಿಗ ನಾಯಕರೇ ಅಲ್ಲ. ಅವರು ಯಾವಾಗ ಒಕ್ಕಲಿಗ ನಾಯಕರಾಗಿದ್ದರು. ಒಕ್ಕಲಿಗ ಸಮುದಾಯಕ್ಕೆ ಅವರ ಕೊಡುಗೆ ಏನು’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ‘ಕನಕಪುರ ಹೊರತುಪಡಿಸಿದರೆ ಬೇರೆಲ್ಲೂ ಅವರು ನಾಯಕರಲ್ಲ. ಕಾಂಗ್ರೆಸ್‌ನಲ್ಲಿ ಒಕ್ಕಲಿಗ ನಾಯಕರೇ ಇಲ್ಲ, ಜೆಡಿಎಸ್ ಮತ್ತು ಬಿಜೆಪಿಯಲ್ಲಿ ಮಾತ್ರ ಹೆಚ್ಚಿನ ಸಂಖ್ಯೆಯಲ್ಲಿ ಒಕ್ಕಲಿಗ ನಾಯಕರಿದ್ದಾರೆ’ ಎಂದರು.

‘ನಾನು ಈಗ ವಿರೋಧಪಕ್ಷದ ನಾಯಕ. 10 ವರ್ಷಗಳ ಹಿಂದೆಯೇ ಡಿಸಿಎಂ ಆಗಿದ್ದೆ. ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಐದು ವರ್ಷದ ಮೊದಲೇ ಡಿಸಿಎಂ ಆಗಿದ್ದರು’ ಎಂದರು.

ಸುಪ್ರೀಂ ಕೋರ್ಟ್ ಸಿಜೆಐಗೆ ಬರೆದ ಪತ್ರದಲ್ಲಿ ನಿವೃತ್ತ ನ್ಯಾಯಮೂರ್ತಿಗಳ ಕಳವಳ

ನ್ಯಾಯಾಂಗದ ಬಲ ಕುಂದಿಸುವ ಯತ್ನ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಅವರಿಗೆ ಪತ್ರ ಬರೆದಿರುವ 21 ಮಂದಿ ನಿವೃತ್ತ ನ್ಯಾಯಮೂರ್ತಿಗಳು, 'ಒತ್ತಡ ಹೇರುವ, ತಪ್ಪು ಮಾಹಿತಿ ಹರಡುವ ಮತ್ತು ಸಾರ್ವಜನಿಕವಾಗಿ ಅಗೌರವ ತೋರುವ ಮೂಲಕ ಕೆಲವು ಗುಂಪುಗಳು ನ್ಯಾಯಾಂಗದ ಬಲ ಕುಗ್ಗಿಸುವ ಯತ್ನ' ನಡೆಸಿವೆ ಎಂದು ಹೇಳಿದ್ದಾರೆ.

ಈ ಟೀಕಾಕಾರರು ಸೀಮಿತ ದೃಷ್ಟಿಕೋನದ ರಾಜಕೀಯ ಹಿತಾಸಕ್ತಿಯಿಂದ, ವೈಯಕ್ತಿಕ ಲಾಭಕ್ಕಾಗಿ ಹೀಗೆ ಮಾಡುತ್ತಿದ್ದಾರೆ. ಇವರು ನ್ಯಾಯಾಂಗ ವ್ಯವಸ್ಥೆಯಲ್ಲಿ ಸಾರ್ವಜನಿಕರು ಇರಿಸಿರುವ ನಂಬಿಕೆಯನ್ನು ಹಾಳುಮಾಡಲು ಯತ್ನಿಸುತ್ತಿದ್ದಾರೆ ಎಂದು ಕೂಡ ಪತ್ರದಲ್ಲಿ ಆರೋಪಿಸಲಾಗಿದೆ.

ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗಳ ನಿವೃತ್ತ ನ್ಯಾಯಮೂರ್ತಿಗಳು ಈ ಪತ್ರ ಬರೆದಿದ್ದಾರೆ. ಆದರೆ, ತಾವು ಈ ಪತ್ರ ಬರೆದಿದ್ದಕ್ಕೆ ನಿರ್ದಿಷ್ಟವಾಗಿ ಯಾವ ಘಟನೆಗಳು ಕಾರಣ ಎಂಬುದನ್ನು ಅವರು ಉಲ್ಲೇಖಿಸಿಲ್ಲ. ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಕೆಲವು ಪ್ರಕರಣಗಳಲ್ಲಿ ಕೈಗೊಂಡ ಕ್ರಮಗಳ ವಿಚಾರವಾಗಿ ಬಿಜೆಪಿ ಹಾಗೂ ವಿರೋಧ ಪಕ್ಷಗಳ ನಡುವೆ ಆರೋಪ–ಪ್ರತ್ಯಾರೋಪ ನಡೆಯುತ್ತಿರುವ ಹೊತ್ತಿನಲ್ಲಿ ಈ ಪತ್ರ ಬರೆದಿದ್ದಾರೆ.

ಪ್ರಧಾನಿ ಅಭಿಯಾನದ ಭಾಗ: ಕಾಂಗ್ರೆಸ್

ನವದೆಹಲಿ (ಪಿಟಿಐ): ಸಿಜೆಐಗೆ ಬರೆದಿರುವ ಪತ್ರವು, ನ್ಯಾಯಾಂಗವನ್ನು ಬೆದರಿಸುವ ಉದ್ದೇಶದಿಂದ ಪ್ರಧಾನಿಯವರು ನಡೆಸಿರುವ ಅಭಿಯಾನದ ಒಂದು ಭಾಗ ಎಂದು ಕಾಂಗ್ರೆಸ್ ಪ್ರತಿಕ್ರಿಯಿಸಿದೆ.

ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಅತಿದೊಡ್ಡ ಬೆದರಿಕೆ ಬಂದಿರುವುದು ಬಿಜೆಪಿಯ ಕಡೆಯಿಂದ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಅವರು ಈ ಪತ್ರದ ಕುರಿತು ಕೇಳಿದ ಪ್ರಶ್ನೆಗೆ ಉತ್ತರವಾಗಿ ಹೇಳಿದರು.

'ಪತ್ರ ಬರೆದವರ ಪಟ್ಟಿಯಲ್ಲಿರುವ ನಾಲ್ಕನೆಯ ಹೆಸರನ್ನು ಗಮನಿಸಿ. ಇದು ಇಡೀ ಪತ್ರದ ಉದ್ದೇಶವನ್ನು ಹೇಳುತ್ತದೆ' ಎಂದು ರಮೇಶ್ ಅವರು ನ್ಯಾಯಮೂರ್ತಿ ಎಂ.ಆರ್. ಶಾ ಅವರ ಹೆಸರು ಉಲ್ಲೇಖಿಸದೆ ಹೇಳಿದರು.

'ಭಾರತದ ಅತಿದೊಡ್ಡ ಹಗರಣವಾಗಿರುವ ಚುನಾವಣಾ ಬಾಂಡ್ ಯೋಜನೆಯನ್ನು ಟೀಕಿಸಿದ, ಮಣಿಪುರದಲ್ಲಿ ಸಾಂವಿಧಾನಿಕ ವ್ಯವಸ್ಥೆ ಕುಸಿದಿದೆ ಎಂದು ಹೇಳಿದ ನ್ಯಾಯಾಂಗವನ್ನು ಗುರಿಯಾಗಿಸಿಕೊಳ್ಳಲಾಗಿದೆ' ಎಂದು ರಮೇಶ್ ದೂರಿದರು.

'ಮೋದಿಯವರ ಜೊತೆ ಸ್ನೇಹದಿಂದಿರುವ 21 ಮಂದಿ ನಿವೃತ್ತ ನ್ಯಾಯಮೂರ್ತಿಗಳ ಪತ್ರವನ್ನು ಮೋದಿಯವರ ಜೊತೆ ಸ್ನೇಹದಿಂದಿರುವ 600 ಮಂದಿ ವಕೀಲರು ಬರೆದ ಪತ್ರದ ಜೊತೆಯೇ ಗಮನಿಸಬೇಕು' ಎಂದು ರಮೇಶ್ ಹೇಳಿದರು.

ನ್ಯಾಯಮೂರ್ತಿಗಳಾದ (ನಿವೃತ್ತ) ದೀಪಕ್ ವರ್ಮ, ಕೃಷ್ಣ ಮುರಾರಿ, ದಿನೇಶ್ ಮಾಹೇಶ್ವರಿ, ಎಂ.ಆರ್. ಶಾ ಅವರು ಪತ್ರ ಬರೆದವರಲ್ಲಿ ಸೇರಿದ್ದಾರೆ.

ಈ ಗುಂಪುಗಳು ಕಪಟತನದ ದಾರಿ ಹಿಡಿದು, ನ್ಯಾಯಮೂರ್ತಿಗಳು ಹಾಗೂ ನ್ಯಾಯಾಲಯಗಳ ಘನತೆಗೆ ಚ್ಯುತಿ ತರುವಂತೆ ಮಾತುಗಳನ್ನಾಡಿ, ನ್ಯಾಯಾಂಗದ ಮೇಲೆ ಪ್ರಭಾವ ಬೀರುವ ಸ್ಪಷ್ಟ ಯತ್ನವನ್ನು ನಡೆಸಿವೆ ಎಂದು ಪತ್ರದಲ್ಲಿ ವಿವರಿಸಲಾಗಿದೆ.

'ಇಂತಹ ಕೃತ್ಯಗಳು ನ್ಯಾಯಾಂಗದ ಪಾವಿತ್ರ್ಯತೆಗೆ ಅಗೌರವ ತೋರುವುದಷ್ಟೇ ಅಲ್ಲದೆ, ನಿಷ್ಪಕ್ಷಪಾತ ಧೋರಣೆ ಹಾಗೂ ನ್ಯಾಯಸಮ್ಮತ ನಿಲುವಿನ ತತ್ವಕ್ಕೆ ನೇರವಾದ ಸವಾಲು ಒಡ್ಡುತ್ತವೆ' ಎಂದು ಹೇಳಲಾಗಿದೆ.

'ತಮ್ಮ ದೃಷ್ಟಿಕೋನಕ್ಕೆ ಅನುಗುಣವಾಗಿ ಇರುವ ಆದೇಶಗಳನ್ನು ಪ್ರಶಂಸಿಸುವುದು, ಅನುಗುಣವಾಗಿ ಇಲ್ಲದ ಆದೇಶಗಳನ್ನು ತೀವ್ರವಾಗಿ ಟೀಕಿಸುವುದು ನ್ಯಾಯಾಂಗದ ಪರಿಶೀಲನೆ ಹಾಗೂ ಕಾನೂನಿಗೆ ಅನುಗುಣವಾದ ಆಡಳಿತ ಎಂಬ ತತ್ವವನ್ನೇ ದುರ್ಬಲಗೊಳಿಸುವಂಥದ್ದು' ಎಂದು ಪತ್ರದಲ್ಲಿ ಬರೆಯಲಾಗಿದೆ.

'ಜೈಲಿನಿಂದಲೇ ಎಎಪಿ ಆಡಳಿತ'

ಸಚಿವರ ಜೊತೆ ಸಭೆ ನಡೆಸಲು ಮುಖ್ಯಮಂತ್ರಿ ನಿರ್ಧಾರ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದಿಂದ ಬಂಧನ ಕ್ಕೊಳಗಾಗಿರುವ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು, ಪ್ರತಿ ವಾರ ಇಬ್ಬರು ಸಚಿವರನ್ನು ಜೈಲಿಗೆ ಕರೆಸಿಕೊಂಡು ಅವರ ಇಲಾಖೆಯಲ್ಲಿನ ಬೆಳವಣಿಗೆಗಳ ಬಗ್ಗೆ ಪರಿಶೀಲನೆ ನಡೆಸಲಿದ್ದಾರೆ ಎಂದು ಎಎಪಿಯ ರಾಜ್ಯಸಭೆ ಸದಸ್ಯ ಸಂದೀಪ್ ಪಾಠಕ್ ತಿಳಿಸಿದ್ದಾರೆ.

ತಿಹಾರ್ ಜೈಲಿನಲ್ಲಿರುವ ಅರವಿಂದ ಕೇಜ್ರಿವಾಲ್ ಅವರನ್ನು ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರೊಂದಿಗೆ ಸಂಸದ ಪಾಠಕ್ ಅವರೂ ಭೇಟಿ ಮಾಡಿ ಈ ಬಗ್ಗೆ ಚರ್ಚಿಸಿದರು.

ಆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮುಂದಿನ ದಿನಗಳಲ್ಲಿ ವಿವಿಧ ಇಲಾಖೆಯಲ್ಲಿ ಯಾವೆಲ್ಲಾ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ ಎಂಬ ಬಗ್ಗೆ ತಿಳಿಯಲು ಸಚಿವರ ಜೊತೆ ಸಭೆ ನಡೆಸಲು ಮುಖ್ಯಮಂತ್ರಿ ನಿರ್ಧರಿಸಿದ್ದಾರೆ. ಮುಂದಿನ ವಾರದಿಂದ ಪ್ರತಿ ವಾರ ಇಬ್ಬರು ಸಚಿವರನ್ನು ಜೈಲಿಗೆ ಕರೆಸಿಕೊಂಡು ಇಲಾಖೆಯಲ್ಲಿನ ಅಭಿವೃದ್ಧಿ ಬಗ್ಗೆ ಚರ್ಚಿಸಲಿದ್ದಾರೆ. ಜೊತೆಗೆ ಯಾವೆಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು ಎಂಬ ಬಗ್ಗೆ ಸಲಹೆ ಮತ್ತು ಸೂಚನೆಗಳನ್ನು ಮುಖ್ಯಮಂತ್ರಿಗಳು ನೀಡಲಿದ್ದಾರೆ' ಎಂದು ತಿಳಿಸಿದರು.

ಇದಕ್ಕೆ ಅಗತ್ಯವಿರುವ ಕಾನೂನು ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುವುದು. ಈ ಮೂಲಕ ಸಮಂಜಸವಾದ ಮಾದರಿಯಲ್ಲಿ ಜೈಲಿನಿಂದಲೇ ಸರ್ಕಾರ ಕಾರ್ಯ ನಿರ್ವಹಿಸಲಿದೆ. ಶಾಸಕರು ಜನರ ಬಳಿಗೆ ತೆರಳಿ, ಅವರ ಸಮಸ್ಯೆಗಳು ಮತ್ತು ಕುಂದುಕೊರತೆಗಳನ್ನು ಆಲಿಸಬೇಕು. ಜನರು ಎದುರಿಸುತ್ತಿರುವ ಯಾವುದೇ ಸಮಸ್ಯೆಗಳನ್ನು ಬಗೆಹರಿಸಲು ಶಾಸಕರು ಮುಂದಾಗಬೇಕು. ತಮ್ಮ ಅನುಪಸ್ಥಿತಿ ಜನರಿಗೆ ಕಾಡದಂತೆ ಶಾಸಕರು ಹೆಚ್ಚು ಸಕ್ರಿಯವಾಗಿ ಕೆಲಸ ಮಾಡಬೇಕು ಎಂದು ಕೇಜ್ರಿವಾಲ್ ಸೂಚಿಸಿದ್ದಾರೆ.

'ರಾಜಕೀಯಕ್ಕೆ ಸಂಬಂಧಿಸಿದ ದಾಖಲೆಗಳಿಗೆ ಸಹಿ ಹಾಕುವಂತಿಲ್ಲ'

ದೆಹಲಿ ಅಬಕಾರಿ ನೀತಿ ಹಗರಣದ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದಿಂದ (ಇ.ಡಿ) ಮಾರ್ಚ್ 21ರಂದು ಬಂಧನವಾಗಿರುವ ಕೇಜ್ರಿವಾಲ್ ಅವರನ್ನು ತಿಹಾರ್ ಕಾರಾಗೃಹದಲ್ಲಿಡಲಾಗಿದೆ. ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ. ನ್ಯಾಯಾಂಗ ಬಂಧನದಲ್ಲಿರುವ ವ್ಯಕ್ತಿಯು ರಾಜಕೀಯಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳಿಗೆ ಸಹಿ ಹಾಕುವಂತಿಲ್ಲ ಎಂಬ ನಿಯಮವಿದೆ.

ಈ ಕುರಿತು ಪಿಟಿಐ ಸುದ್ದಿ ಸಂಸ್ಥೆಯ ಸಂಪಾದಕರ ಜೊತೆಗಿನ ಸಂವಾದದಲ್ಲಿ ಪ್ರತಿಕ್ರಿಯಿಸಿದ ಡಿಜಿ (ಕಾರಾಗೃಹ) ಸಂಜಯ್ ಬನಿವಾಲ್, 'ನ್ಯಾಯಾಂಗ ಬಂಧನದಲ್ಲಿರುವ ವ್ಯಕ್ತಿಯು ಕಾನೂನು ಪತ್ರಗಳು ಅಥವಾ ದೂರಿನ ಪ್ರತಿಗಳು ಮತ್ತು ರಾಜಕೀಯೇತರ ವಿಚಾರಕ್ಕೆ ಸಂಬಂಧಿಸಿದ ದಾಖಲೆಗಳಿಗೆ ಸಹಿ ಹಾಕಬಹುದು. ಅಥವಾ ಕುಟುಂಬಸ್ಥರಿಗೆ ಬರೆದ ಪತ್ರ ಮತ್ತು ಆಸ್ತಿಗೆ ಸಂಬಂಧಿಸಿದ ಪತ್ರಗಳಿಗೆ ಮಾತ್ರ ಸಹಿಹಾಕಬಹುದಾಗಿದೆ' ಎಂದರು.

ಸಂಕ್ಷಿಪ್ತ ಸುದ್ದಿ

ಅಂಗವಿಕಲರಿಗೆ ಮೀಸಲು: ಪ್ರತಿಕ್ರಿಯೆ ಕೇಳಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಜಿಲ್ಲಾ ನ್ಯಾಯಾಲಯಗಳ ನೇಮಕಾತಿಯಲ್ಲಿ ಅಂಗವಿಕಲರಿಗೆ ಶೇಕಡ 4ರಷ್ಟು ಮೀಸಲಾತಿ ಒದಗಿಸುವಂತೆ ಕೋರಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಕುರಿತು ಪ್ರತಿಕ್ರಿಯೆ ನೀಡುವಂತೆ ಸುಪ್ರೀಂ ಕೋರ್ಟ್ ಕೇಂದ್ರ, ರಾಜ್ಯ, ಕೇಂದ್ರಾಡಳಿತ ಪ್ರದೇಶ ಸರ್ಕಾರಗಳು ಹಾಗೂ ಎಲ್ಲ ಹೈಕೋರ್ಟ್‌ಗಳಿಗೆ ಸೂಚಿಸಿದೆ.

ನ್ಯಾಯಾಂಗ ಅಧಿಕಾರಿಗಳ ನೇಮಕಾತಿಯಲ್ಲಿ ಅಂಗವಿಕಲರಿಗೆ ಕಾನೂನಿಗೆ ಅನುಗುಣವಾಗಿ ಅವಕಾಶಗಳು ಸಿಗುತ್ತಿಲ್ಲ ಎಂದು ಅರ್ಜಿದಾರರ ಪರ ವಕೀಲರು ಪೀಠಕ್ಕೆ ತಿಳಿಸಿದರು.

ರೈಲಿನಲ್ಲಿ ಪ್ರಯಾಣಿಕನಿಗೆ ಕಚ್ಚಿದ ಹಾವು

ಕೊಟ್ಟಾಯಂ (ಪಿಟಿಐ): ಮಧುರೈಗೆ ತೆರಳುತ್ತಿದ್ದ ರೈಲಿನಲ್ಲಿದ್ದ ಪ್ರಯಾಣಿಕ ಕಾರ್ತಿಕ್ ಎನ್ನುವವರಿಗೆ ಸೋಮವಾರ ಹಾವು ಕಚ್ಚಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮದುರೈ–ಗುರುವಾಯೂರು ಪ್ಯಾಸೆಂಜರ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಈ ರೀತಿ ಆಗಿದೆ. ಕಾರ್ತಿಕ್ ಅವರನ್ನು ಎಟ್ಟಮಾನೂರ್ ನಿಲ್ದಾಣದಲ್ಲಿ ರೈಲಿನಿಂದ ಇಳಿಸಿ ಆಸ್ಪತ್ರೆಗೆ ದಾಖಲಿಸಲಾಯಿತು.

ಕಾರ್ತಿಕ್ ಅವರು ಆರನೆಯ ಬೋಗಿಯಲ್ಲಿ ಇದ್ದರು. ಅವರು ಕುಳಿತಿದ್ದ ಸೀಟಿನ ಅಡಿಯಲ್ಲಿ ಇದ್ದ ಹಾವು ಕಚ್ಚಿದೆ. ಕಾರ್ತಿಕ್ ಅವರ ಸ್ಥಿತಿ ಸ್ಥಿರವಾಗಿದೆ ಎಂದು ರೈಲ್ವೆ ಪೊಲೀಸರು ಹೇಳಿದ್ದಾರೆ.

ಅಮರನಾಥ ಯಾತ್ರೆ: ಮುಂಗಡ ಬುಕಿಂಗ್ ಆರಂಭ

ಜಮ್ಮು(ಪಿಟಿಐ): ಅಮರನಾಥ ಯಾತ್ರೆಗೆ ತೆರಳುವ ಯಾತ್ರಾರ್ಥಿಗಳ ಮುಂಗಡ ನೋಂದಣಿ ಸೋಮವಾರದಿಂದ ಆರಂಭವಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಜನರು ಗೊತ್ತುಪಡಿಸಿದ ಬ್ಯಾಂಕ್ ಶಾಖೆಗಳಿಗೆ ತೆರಳಿ ಬುಕಿಂಗ್ ಮಾಡಿಸುತ್ತಿದ್ದಾರೆ.

ದೇಶದಾದ್ಯಂತ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ (ಪಿಎನ್‌ಬಿ) ಒಟ್ಟು 540 ಶಾಖೆಗಳಲ್ಲಿ ಮುಂಗಡ ಬುಕಿಂಗ್ ಪ್ರಕ್ರಿಯೆ ಆರಂಭಗೊಂಡಿದೆ.

ಅಮರನಾಥ ಯಾತ್ರೆಯು ಜೂನ್ 29ರಂದು ಆರಂಭವಾಗಿ, ಆಗಸ್ಟ್ 19ರಂದು ಮುಕ್ತಾಯಗೊಳ್ಳಲಿದೆ. ಒಟ್ಟು 52 ದಿನಗಳ ಕಾಲ ಯಾತ್ರೆ ನಡೆಯಲಿದೆ ಎಂದು ಶ್ರೀ ಅಮರನಾಥ ದೇಗುಲ ಮಂಡಳಿ (ಎಸ್‌ಎಎಸ್‌ಬಿ) ತಿಳಿಸಿದೆ.

13 ವರ್ಷಕ್ಕಿಂತ ಕೆಳಗಿನವರು ಹಾಗೂ 75 ವರ್ಷ ಮೇಲ್ಪಟ್ಟವರು ಮತ್ತು ಆರು ವಾರ ತುಂಬಿದ ಗರ್ಭಿಣಿಯರಿಗೆ ಯಾತ್ರೆಗೆ ತೆರಳಲು ಅನುಮತಿ ನೀಡುವುದಿಲ್ಲ.

ಕುಡಿಯುವ ನೀರು ತ್ವರಿತ ಕ್ರಮಕ್ಕೆ ರೈಲ್ವೆ ಸೂಚನೆ

ನವದೆಹಲಿ: ಈ ವರ್ಷದ ಬೇಸಿಗೆ ಅವಧಿಯಲ್ಲಿ ಹೆಚ್ಚು ಬಿಸಿಲಿನ ಝಳ ಇರುವ ಕಾರಣ ರೈಲು ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ಶುದ್ಧ ಕುಡಿಯುವ ನೀರು ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ರೈಲ್ವೆ ಇಲಾಖೆಯು ಎಲ್ಲಾ ವಲಯಗಳಿಗೆ ಸೂಚನೆ ನೀಡಿದೆ.

ನಿಲ್ದಾಣಗಳಲ್ಲಿ ನೀರನ್ನು ತಂಪಾಗಿಡುವ ಯಂತ್ರಗಳು ಕಾರ್ಯ ನಿರ್ವಹಿಸುತ್ತಿವೆಯೇ, ಪ್ರಯಾಣಿಕರಿಗೆ ಕುಡಿಯುವ ನೀರು ಕಲ್ಪಿಸಲು ಎಲ್ಲಾ ನಿಲ್ದಾಣಗಳಲ್ಲಿ ನೀರಿನ ಟ್ಯಾಂಕರ್‌ಗಳ ವ್ಯವಸ್ಥೆ ಮಾಡಲಾಗಿದೆಯೇ, ನಿಲ್ದಾಣದ ಪ್ಲಾಟ್‌ಫಾರಂಗಳಲ್ಲಿ ನೀರು ಬರುತ್ತಿದೆಯೇ ಎಂಬ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ರೈಲ್ವೆ ಇಲಾಖೆ ನಿರ್ದೇಶಿಸಿದೆ.

ಏ.24ರೊಳಗೆ ಪ್ರತಿಕ್ರಿಯೆ ನೀಡುವಂತೆ ಸುಪ್ರೀಂ ಕೋರ್ಟ್ ಸೂಚನೆ

ಕೇಜ್ರಿವಾಲ್ ಬಂಧನ: ಇ.ಡಿಗೆ ನೋಟಿಸ್

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ತಮ್ಮ ಬಂಧನ ಪ್ರಶ್ನಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಗೆ ಏಪ್ರಿಲ್ 24ರೊಳಗೆ ಪ್ರತಿಕ್ರಿಯೆ ನೀಡುವಂತೆ ಸುಪ್ರೀಂ ಕೋರ್ಟ್, ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಸೋಮವಾರ ಸೂಚಿಸಿದೆ. ಕೇಜ್ರಿವಾಲ್ ಪರವಾಗಿ ಮಧ್ಯಂತರ ಆದೇಶ ನೀಡಲು ಕೋರ್ಟ್ ಒಪ್ಪಿಲ್ಲ.

ತಮ್ಮನ್ನು ಬಂಧಿಸಿರುವ ಇ.ಡಿ ಕ್ರಮವನ್ನು ಎತ್ತಿಹಿಡಿದ ದೆಹಲಿ ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಾಂಕರ್ ಗುಪ್ತ ಅವರು ಇದ್ದ ವಿಭಾಗೀಯ ಪೀಠವು ಇ.ಡಿ.ಗೆ ನೋಟಿಸ್ ಜಾರಿಗೆ ಆದೇಶಿಸಿದೆ.

ಅರ್ಜಿಯ ವಿಚಾರಣೆಯನ್ನು ಪೀಠವು ಮುಂದಿನ ವಾರಕ್ಕೆ ನಿಗದಿ ಮಾಡಿದೆ. ಕೇಜ್ರಿವಾಲ್ ಪರವಾಗಿ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, 'ಕೋರ್ಟ್‌ನ ಆತ್ಮಸಾಕ್ಷಿಗೆ ಆಘಾತ ಉಂಟುಮಾಡುವ ಕೆಲವು ಸಂಗತಿಗಳನ್ನು ನಾನು ತಿಳಿಸಬೇಕಿದೆ' ಎಂದು ಪೀಠಕ್ಕೆ ಹೇಳಿದರು.

'ಇದು ಬಹಳ ಅಸಾಮಾನ್ಯ ಸಂಗತಿ' ಎಂದು ಹೇಳಿದ ಅವರು, ಲೋಕಸಭಾ ಚುನಾವಣೆಯ ನೀತಿ ಸಂಹಿತೆಯು ಜಾರಿಗೆ ಬಂದ ನಂತರದಲ್ಲಿ ಕೇಜ್ರಿವಾಲ್ ಅವರನ್ನು ಬಂಧಿಸಿದ ಕ್ರಮವನ್ನು ಪ್ರಶ್ನಿಸಿದರು. 'ಎಲ್ಲೆಡೆ ಆಯ್ದ ಕೆಲವು ಸಂಗತಿಗಳನ್ನು ಮಾತ್ರ ಸೋರಿಕೆ ಮಾಡಲಾಗುತ್ತಿದೆ. ಇದು ಎಲ್ಲರಲ್ಲಿಯೂ ತಪ್ಪು ಚಿತ್ರಣ ಮೂಡಿಸುತ್ತಿದೆ' ಎಂದರು.

ಅಬಕಾರಿ ಪ್ರಕರಣದಲ್ಲಿ ಸಿಬಿಐ ಮತ್ತು ಇ.ಡಿ ಎಂಟು ದೋಷಾರೋಪ ಪಟ್ಟಿಗಳನ್ನು ಸಲ್ಲಿಸಿವೆ. ಆದರೆ ಯಾವುದರಲ್ಲೂ ಕೇಜ್ರಿವಾಲ್ ಹೆಸರು ಇಲ್ಲ. 2022ರ ಸೆಪ್ಟೆಂಬರ್‌ನಿಂದ 2024ರ ಮಾರ್ಚ್‌ವರೆಗಿನ ಅವಧಿಯಲ್ಲಿ 15 ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ. ಅವು ಯಾವುದರಲ್ಲೂ ಕೇಜ್ರಿವಾಲ್ ಹೆಸರು ಇಲ್ಲ ಎಂದು ಸಿಂಘ್ವಿ ವಿವರಿಸಿದರು.

ಸಿಂಘ್ವಿ ಅವರು ವಾದವನ್ನು ಮುಂದುವರಿಸಿದಾಗ 'ನಿಮ್ಮ ವಾದವನ್ನು ಮುಂದಿನ ದಿನಕ್ಕಾಗಿ ಇಟ್ಟುಕೊಳ್ಳಿ' ಎಂದು ನ್ಯಾಯಮೂರ್ತಿ ಖನ್ನಾ ಸೂಚಿಸಿದರು. ಲೋಕಸಭೆಯ ಮೊದಲ ಹಂತದ ಮತದಾನವು ಏಪ್ರಿಲ್ 19ರಂದು ನಡೆಯಲಿದೆ ಎಂದು ಸಿಂಘ್ವಿ ಹೇಳಿದರು.

ಇಂತಹ ಪ್ರಕರಣಗಳಲ್ಲಿ ಚುನಾವಣೆಯನ್ನು ಉಲ್ಲೇಖಿಸಲು ಅವಕಾಶ ಇಲ್ಲ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು. 'ನೋಟಿಸ್ ಜಾರಿಗೆ ನಾವು ಆದೇಶಿಸಿದ ನಂತರ ನೀವು ವಾದ ಮಾಡಬಾರದಿತ್ತು' ಎಂದು ಹೇಳಿದ ಪೀಠವು, 'ನಮಗೆ ವಿಷಯಗಳು ಗೊತ್ತಿವೆ' ಎಂದು ತಿಳಿಸಿತು. ಕೇಜ್ರಿವಾಲ್ ಅವರು ಈಗ ತಿಹಾರ್ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿ ಇದ್ದಾರೆ.

ಬಂಧನ ಅವಧಿ ಏಪ್ರಿಲ್ 23ರವರೆಗೆ ವಿಸ್ತರಣೆ

ಅರವಿಂದ ಕೇಜ್ರಿವಾಲ್

ಅರವಿಂದ ಕೇಜ್ರಿವಾಲ್ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ಸಿಬಿಐ ಮತ್ತು ಇ.ಡಿ. ವಿಶೇಷ ನ್ಯಾಯಾಲಯವು ಏಪ್ರಿಲ್ 23ರವರೆಗೆ ವಿಸ್ತರಿಸಿದೆ.

ಕೇಜ್ರಿವಾಲ್ ಅವರನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಧೀಶೆ ಕಾವೇರಿ ಬವೇಜಾ ಅವರ ಮುಂದೆ ಹಾಜರುಪಡಿಸಲಾಗಿತ್ತು. ತನಿಖೆಯು ಮಹತ್ವದ ಹಂತದಲ್ಲಿ ಇದೆ ಎಂದು ಹೇಳಿದ ಇ.ಡಿ., ಇನ್ನೂ 14 ದಿನಗಳವರೆಗೆ ಕೇಜ್ರಿವಾಲ್ ಅವರ ಬಂಧನದ ಅವಧಿ ವಿಸ್ತರಿಸಬೇಕು ಎಂದು ಕೋರಿತು.

ಆದರೆ ಈ ಪ್ರಕರಣದ ಸಹ ಆರೋಪಿಗಳಾಗಿರುವ ಇತರ ಕೆಲವರ ನ್ಯಾಯಾಂಗ ಬಂಧನದ ಅವಧಿಯು ಏಪ್ರಿಲ್ 23ಕ್ಕೆ ಕೊನೆಗೊಳ್ಳಲಿದೆ ಎಂದು ಹೇಳಿದ ನ್ಯಾಯಾಧೀಶರು, ಕೇಜ್ರಿವಾಲ್ ಅವರ ಬಂಧನದ ಅವಧಿಯನ್ನು ಕೂಡ ಆ ದಿನಾಂಕದವರೆಗೆ ವಿಸ್ತರಿಸಿದರು.

ಸಿಬಿಐಗೆ ನೋಟಿಸ್: ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಹಗರಣದಲ್ಲಿ ಬಂಧನದಲ್ಲಿರುವ ಬಿಆರ್‌ಎಸ್ ಪಕ್ಷದ ನಾಯಕಿ ಕೆ. ಕವಿತಾ ಅವರು ಸಲ್ಲಿಸಿರುವ ಜಾಮೀನು ಅರ್ಜಿ ವಿಚಾರವಾಗಿ ಸಿಬಿಐಗೆ ನೋಟಿಸ್ ಜಾರಿಗೆ ನ್ಯಾಯಾಧೀಶೆ ಕಾವೇರಿ ಬವೇಜಾ ಆದೇಶಿಸಿದ್ದಾರೆ. ಕವಿತಾ ಅವರ ಅರ್ಜಿಗೆ ಸಂಬಂಧಿಸಿದಂತೆ ಏಪ್ರಿಲ್ 22ಕ್ಕೆ ಮೊದಲು ಪ್ರತಿಕ್ರಿಯೆ ಸಲ್ಲಿಸುವಂತೆ ಸಿಬಿಐಗೆ ಸೂಚಿಸಿದ್ದಾರೆ. ಕವಿತಾ ಅವರ ಬಂಧನದ ಅವಧಿಯನ್ನು ಏಪ್ರಿಲ್ 23ರವರೆಗೆ ವಿಸ್ತರಿಸಲಾಗಿದೆ.

ದೆಹಲಿ ಅಬಕಾರಿ ನೀತಿ: ಮತ್ತೊಬ್ಬರ ಬಂಧನ

ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಗೋವಾ ವಿಧಾನಸಭೆ ಚುನಾವಣೆ ವೇಳೆ ಎಎಪಿಗೆ ನಿಧಿಯನ್ನು ನಿರ್ವಹಿಸುತ್ತಿದ್ದ ಚನ್‌ಪ್ರೀತ್ ಸಿಂಗ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಸೋಮವಾರ ಬಂಧಿಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿಯಲ್ಲಿ ಅವರನ್ನು ಏ.12 ಬಂಧಿಸಿ, ಮರುದಿನ ವಿಶೇಷ ನ್ಯಾಯಾಲಯದ ಎದುರು ಹಾಜರುಪಡಿಸಲಾಗಿತ್ತು. ಕೋರ್ಟ್, ಸಿಂಗ್ ಅವರನ್ನು ಏ.18ರವರೆಗೆ ಇ.ಡಿ ವಶಕ್ಕೆ ನೀಡಿದೆ ಎಂದು ತಿಳಿಸಿವೆ.

ಈ ಮೂಲಕ ಪ್ರಕರಣದಲ್ಲಿ ಇದುವರೆಗೆ ಬಂಧಿಸಿದವರ ಸಂಖ್ಯೆ 17ಕ್ಕೆ ಏರಿದೆ. ಚನ್‌ಪ್ರೀತ್ ಸಿಂಗ್ ಅವರನ್ನು ಈ ಹಿಂದೆ ಇದೇ ಪ್ರಕರಣದಲ್ಲಿ ಸಿಬಿಐ ಸಹ ಬಂಧಿಸಿತ್ತು.

'2022ರ ವಿಧಾನಸಭೆ ಚುನಾವಣೆಯಲ್ಲಿ ಎಎಪಿ ಪರ ಪ್ರಚಾರ, ಸಮೀಕ್ಷೆ, ವಲಯ ನಿರ್ವಹಣೆ ಮಾಡುತ್ತಿದ್ದವರಿಗೆ ಚನ್‌ಪ್ರೀತ್ ಸಿಂಗ್ ಹಣ ನೀಡುವ ಜವಾಬ್ದಾರಿ ಹೊತ್ತಿದ್ದರು' ಎಂದು ಇ.ಡಿ ಕೋರ್ಟ್‌ಗೆ ತಿಳಿಸಿತ್ತು.

ಅಕ್ರಮವಾಗಿ ನಗದನ್ನು ವಿತರಿಸುತ್ತಿತ್ತು ಎನ್ನಲಾದ 'ಅಂಗಾಡಿಯಾ' ಸಂಸ್ಥೆಯ ಉದ್ಯೋಗಿಯೊಬ್ಬರು ಸಿಂಗ್ ಸೇರಿದಂತೆ ಅನೇಕರಿಗೆ ಅಪಾರ ಪ್ರಮಾಣದ ನಗದನ್ನು ನೀಡಿದ್ದರು. ಆಗಸ್ಟ್ 2021ರಿಂದ ಜನವರಿ 2022ರವರೆಗೆ ಸಿಂಗ್‌ಗೆ ₹17 ಕೋಟಿಯನ್ನು 18 ಕಂತುಗಳಲ್ಲಿ ನೀಡಿದ್ದರು ಎಂದು ಇ.ಡಿ ಆರೋಪಿಸಿದೆ.

ಕೇಜ್ರಿವಾಲ್ ಅವರನ್ನು ಉಗ್ರರಂತೆ ಪರಿಗಣನೆ: ಮಾನ್ ಆರೋಪ

ಸುದ್ದಿಗಾರರೊಂದಿಗೆ ಮಾತನಾಡಿದ ಭಗವಂತ್ ಮಾನ್ – ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಸೋಮವಾರ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ತಿಹಾರ್ ಜೈಲಿನಲ್ಲಿ ಭೇಟಿ ಮಾಡಿ ಫೋನಿನ ಮೂಲಕ ಮಾತುಕತೆ ನಡೆಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮಾನ್ ಅವರು, ಕೇಜ್ರಿವಾಲ್ ಅವರನ್ನು ಉಗ್ರರಂತೆ ಪರಿಗಣಿಸಲಾಗುತ್ತಿದೆ ಎಂದು ಆರೋಪಿಸಿದರು.

'ಕೇಜ್ರಿವಾಲ್ ಅವರೊಂದಿಗೆ ಅರ್ಧ ಗಂಟೆ ಮಾತನಾಡಿದೆವು. ಆದರೆ, ನಮ್ಮ ನಡುವೆ ಗಾಜಿನ ಗೋಡೆ ಅಡ್ಡ ಇತ್ತು. ಹೀಗಾಗಿ ಫೋನ್ ಕರೆ ಮೂಲಕ ಮಾತನಾಡಿದೆವು. ವಿರೋಧ ಪಕ್ಷಗಳ ಒಕ್ಕೂಟ 'ಇಂಡಿಯಾ' ಪರವಾಗಿ ದೇಶದ ವಿವಿಧೆಡೆ ಪ್ರಚಾರ ಮಾಡುವಂತೆ ಅವರು ಸೂಚಿಸಿದರು' ಎಂದು ಹೇಳಿದರು.

'ಕುಖ್ಯಾತ ಅಪರಾಧಿಗಳಿಗೆ ದೊರಕುವ ಸೌಲಭ್ಯಗಳೂ ಕೇಜ್ರಿವಾಲ್ ಅವರಿಗೆ ಸಿಗದಿರುವುದು ವಿಷಾದ. ಅವರು ಮಾಡಿರುವ ಅಪರಾಧವಾದರೂ ಏನು? ಶಾಲೆ, ಆಸ್ಪತ್ರೆ, ಮೊಹಲ್ಲಾ ಕ್ಲಿನಿಕ್‌ಗಳನ್ನು ಕಟ್ಟಿದ್ದು ಮತ್ತು ಜನರಿಗೆ ಉಚಿತ ವಿದ್ಯುತ್ ನೀಡಿರುವುದೇ?' ಎಂದು ಪ್ರಶ್ನಿಸಿದರು.

'ಕಾಂಗ್ರೆಸ್‌ನ ಹಿರಿಯ ನಾಯಕ ಪಿ.ಚಿದಂಬರಂ ಅವರು ಜೈಲಿನಲ್ಲಿದ್ದಾಗ ಸೋನಿಯಾ ಗಾಂಧಿ ಅವರು ಭೇಟಿಯಾಗುತ್ತಿದ್ದರು. ಆದರೆ ಇಂದು ನಮ್ಮ ಮಧ್ಯೆ ಗಾಜಿನ ಗೋಡೆ ಇತ್ತು. ಮೋದಿ ಅವರಿಗೆ ಏನು ಬೇಕಿದೆ? ಇದಕ್ಕೆ ಅವರು ಬೆಲೆ ತೆತ್ತೇ ತೆರುತ್ತಾರೆ. ಪಾರದರ್ಶಕ ರಾಜಕಾರಣ ಆರಂಭಿಸಿದ ಕೇಜ್ರಿವಾಲ್ ಅವರನ್ನು ಈ ರೀತಿ ನಡೆಸಿಕೊಳ್ಳಲಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂದೀಪ್ ಪಾಠಕ್, 'ಕೇಜ್ರಿವಾಲ್ ಅವರನ್ನು ಕಂಡು ಮಾನ್ ಕಣ್ಣೀರು ಹಾಕಿದರು' ಎಂದು ಹೇಳಿದರು.

'ಆರೋಗ್ಯ ಹೇಗಿದೆ ಎಂದು ಕೇಜ್ರಿವಾಲ್ ಅವರನ್ನು ಕೇಳಿದೆವು. ಅದಕ್ಕೆ ಅವರು, 'ಹೋರಾಡಲು ನಾನು ಸಿದ್ಧ. ನನ್ನ ಬಗ್ಗೆ ಚಿಂತೆ ಬೇಡ. ಜನರು ಏನು ಹೇಳುತ್ತಿದ್ದಾರೆ? ವಿದ್ಯುತ್ ಸಬ್ಸಿಡಿ ಮುಂದುವರಿದಿದೆಯೇ, ವಿದ್ಯುತ್ ಕಡಿತ ಆಗುತ್ತಿದೆಯೇ, ಸರ್ಕಾರಿ ಆಸ್ಪತ್ರೆ ಗಳಲ್ಲಿ ಉಚಿತ ಔಷಧ ಲಭ್ಯವಾಗುತ್ತಿದೆಯೇ?' ಎಂದು ಕೇಳಿದರು.

ಕಲಾ ಸಂಭ್ರಮ ಶಿಮ್ಲಾದಲ್ಲಿ ನಡೆದ ಹಿಮಾಚಲ ದಿನಾಚರಣೆ ಕಾರ್ಯಕ್ರಮದಲ್ಲಿ ಕಲಾವಿದರು ಜನಪದ ನೃತ್ಯವನ್ನು ಪ್ರದರ್ಶಿಸಿದರು – ಪಿಟಿಐ ಚಿತ್ರ

'ಸುಪ್ರೀಂ'ನಲ್ಲಿ ಮರು ಪರಿಶೀಲನಾ ಅರ್ಜಿ

ಚುನಾವಣಾ ಬಾಂಡ್

ನವದೆಹಲಿ (ಪಿಟಿಐ): ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಜಾರಿಗೆ ತಂದಿದ್ದ ಚುನಾವಣಾ ಬಾಂಡ್ ಯೋಜನೆಯನ್ನು ರದ್ದು ಮಾಡಿರುವ ನಿರ್ಧಾರವನ್ನು ಪುನರ್ ಪರಿಶೀಲಿಸುವಂತೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ.

ಚುನಾವಣಾ ಬಾಂಡ್ ಯೋಜನೆಯನ್ನು ಅಸಾಂವಿಧಾನಿಕ ಎಂದು ಹೇಳಿದ್ದ ಸುಪ್ರೀಂಕೋರ್ಟ್ ಕಳೆದ ಫೆ.15ರಂದು ರದ್ದು ಮಾಡಿತ್ತು.

ವಕೀಲ ಮ್ಯಾಥ್ಯೂ ಜೆ.ನೇದುಂಪರಾ ಅವರು ತೀರ್ಪು ಮರುಪರಿಶೀಲಿಸುವಂತೆ ಕೋರಿ ಅರ್ಜಿ ಸಲ್ಲಿಸಿದ್ದಾರೆ. 'ಯೋಜನೆ ವಿರುದ್ಧದ ಅರ್ಜಿಯನ್ನು ಪುರಸ್ಕರಿಸಿ ಯೋಜನೆ ರದ್ದು ಮಾಡುವ ಮೂಲಕ ತಾನು ಸಂಸತ್ತಿಗೆ ಪರ್ಯಾಯವಾಗಿ ಸಕ್ಷಮ ಪ್ರಾಧಿಕಾರದಂತೆ ಕಾರ್ಯನಿರ್ವಹಿಸುತ್ತಿದ್ದೇನೆ ಎಂಬುದನ್ನು ಸುಪ್ರೀಂ ಕೋರ್ಟ್ ಮರೆತಂತಿದೆ. ಈ ವಿಷಯವು ಸಂಪೂರ್ಣವಾಗಿ ಶಾಸನಸಭೆಯ ವ್ಯಾಪ್ತಿಗೆ ಒಳಪಟ್ಟಿದೆ' ಎಂದು ಅರ್ಜಿಯಲ್ಲಿ ಪ್ರತಿಪಾದಿಸಿದ್ದಾರೆ.

ಈ ವಿಷಯವು ವಿಚಾರಣೆಗೆ ಅರ್ಹವಾಗಿದೆಯೇ ಎಂಬುದನ್ನು ಗುರುತಿಸುವಲ್ಲಿಯೂ ಕೋರ್ಟ್ ವಿಫಲವಾಗಿದೆ ಎಂದೂ ಹೇಳಿದ್ದಾರೆ.

2018ರಲ್ಲಿ ಜಾರಿಗೆ ತಂದಿದ್ದ ಈ ಯೋಜನೆಯು ಸಂವಿಧಾನ ದತ್ತವಾದ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಮಾಹಿತಿ ಹಕ್ಕಿನ ಸ್ವಾತಂತ್ರ್ಯವನ್ನು ಉಲ್ಲಂಘಿಸುತ್ತದೆ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ನ್ಯಾಯಪೀಠ ಅಭಿಪ್ರಾಯ ಪಟ್ಟು, ಇದನ್ನು ರದ್ದು ಮಾಡಿತ್ತು.

ಮತದಾನಕ್ಕೆ ವಿಶೇಷ ಸೌಲಭ್ಯ: 'ಸುಪ್ರೀಂ' ನಿರಾಕರಣೆ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ನಡೆಯುತ್ತಿರುವ ಸಂಘರ್ಷದಿಂದಾಗಿ ಸ್ಥಳಾಂತರಗೊಂಡಿರುವ ಸುಮಾರು 18,000 ಜನರಿಗೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮತದಾನ ಮಾಡಲು ಸೌಲಭ್ಯ ಕಲ್ಪಿಸುವಂತೆ ಕೋರಿದ್ದ ಅರ್ಜಿ ವಿಚಾರಣೆಗೆ ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ಮಣಿಪುರದ ಎರಡು ಲೋಕಸಭಾ ಕ್ಷೇತ್ರಗಳಿಗೆ ಏ.19 ಮತ್ತು ಏ. 26ರಂದು ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ, ಮನೋಜ್ ಮಿಶ್ರಾ ಅವರನ್ನು ಒಳಗೊಂಡ ನ್ಯಾಯಪೀಠವು, 'ಈ ಸಮಯದಲ್ಲಿ ಕೋರ್ಟ್ ಮಧ್ಯಪ್ರವೇಶ ಮಾಡುವುದರಿಂದ ರಾಜ್ಯದಲ್ಲಿ ನಡೆಯುವ ಚುನಾವಣೆಗೆ ಅಡೆತಡೆಗಳು ಎದುರಾಗಬಹುದು. ಹೀಗಾಗಿ ಈ ಮಧ್ಯಪ್ರವೇಶ ಮಾಡಲು ಸಾಧ್ಯವಿಲ್ಲ' ಎಂದು ಅಭಿಪ್ರಾಯಪಟ್ಟಿತು.

ಸಂಘರ್ಷದಿಂದ ನಲುಗಿ ಸುಮಾರು 18,000 ಜನರು ಮಣಿಪುರದ ಹೊರಗೆ ನೆಲೆಸಿದ್ದಾರೆ. ಅವರೆಲ್ಲರೂ ಮತ ಹಾಕಲು ಬಯಸಿದ್ದಾರೆ. ಹೀಗಾಗಿ ವಿಶೇಷ ಮತಗಟ್ಟೆಗಳನ್ನು ಸ್ಥಾಪಿಸಿ ಮತದಾನಕ್ಕೆ ಅವಕಾಶ ಕಲ್ಪಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿತ್ತು.

ಮಣಿಪುರದಲ್ಲಿ 2023ರಿಂದ ಆರಂಭವಾಗಿರುವ ಸಂಘರ್ಷದಲ್ಲಿ ಸುಮಾರು 160ಕ್ಕೂ ಹೆಚ್ಚು ಜನರು ಮೃತಪಟ್ಟದ್ದಾರೆ. ನೂರಾರು ಜನರು ಗಾಯಗೊಂಡಿದ್ದಾರೆ.

ಸಲ್ಮಾನ್ ಖಾನ್ ಮನೆ ಬಳಿ ನಡೆದಿದ್ದ ಘಟನೆ

ಗುಂಡಿನ ದಾಳಿ ಕೃತ್ಯ: ಮೂವರ ವಿಚಾರಣೆ

ನಟ ಸಲ್ಮಾನ್ ಖಾನ್‌ರ ಮುಂಬೈನ ನಿವಾಸದ ಬಳಿ ಗುಂಡು ಹಾರಿಸಿದರು ಎನ್ನಲಾದ ಶಂಕಿತರು –ಪಿಟಿಐ ಚಿತ್ರ

ಮುಂಬೈ (ಪಿಟಿಐ): ಬಾಲಿವುಡ್ ನಟ ಸಲ್ಮಾನ್ ಖಾನ್ ನಿವಾಸದ ಬಳಿ ಇಬ್ಬರು ದುಷ್ಕರ್ಮಿಗಳು ಗುಂಡು ಹಾರಿಸಿದ್ದ ಕೃತ್ಯಕ್ಕೆ ಸಂಬಂಧಿಸಿದಂತೆ ಪೊಲೀಸರು ಮೂವರನ್ನು ತನಿಖೆಗೆ ಒಳಪಡಿಸಿದ್ದಾರೆ.

ಇಬ್ಬರು ದುಷ್ಕರ್ಮಿಗಳು ನಟ ಸಲ್ಮಾನ್ ಖಾನ್ ಅವರ ತೋಟದ ಮನೆ ಇರುವ ನವಿ ಮುಂಬೈನ ಪನ್ವೆಲ್‌ನಲ್ಲೇ ಬಾಡಿಗೆ ಮನೆಯಲ್ಲಿ ವಾಸವಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ.

ಈ ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಬಾಡಿಗೆ ಮನೆಯ ಮಾಲೀಕ, ಬೈಕ್‌ನ ಹಿಂದಿನ ಮಾಲೀಕ ಹಾಗೂ ಬೈಕ್ ಮಾರಾಟಕ್ಕೆ ನೆರವಾಗಿದ್ದ ಏಜೆಂಟ್‌ನನ್ನು ಈಗ ತನಿಖೆಗೆ ಒಳಪಡಿಸಿದ್ದಾರೆ.

ದಾಳಿಕೋರರು ಬಳಸಿದ್ದ ಬೈಕ್, ನಟನ ಮನೆಗೆ ಕೆಲವೇ ಕಿ.ಮೀ ದೂರದ ಮೌಂಟ್ ಮೇರಿ ಚರ್ಚ್ ಬಳಿ ಪತ್ತೆ ಆಗಿತ್ತು. ಬೈಕ್ ಮುಂಬೈನ ಪನ್ವೆಲ್ ವಲಯದ ನಿವಾಸಿಯೊಬ್ಬರ ಹೆಸರಲ್ಲಿ ನೋಂದಣಿಯಾಗಿತ್ತು.

ಆದರೆ, 'ಬೈಕ್ ಅನ್ನು ಈಚೆಗೆ ಬೇರೆಯವರಿಗೆ ಮಾರಾಟ ಮಾಡಿದ್ದೆ ಎಂದು ಮಾಲೀಕ ತಿಳಿಸಿದ್ದಾನೆ' ಎನ್ನಲಾಗಿದೆ.

ಭಾನುವಾರ ಬೆಳಗಿನ ಜಾವ ಬೈಕ್‌ನಲ್ಲಿ ಬಂದಿದ್ದ ಇಬ್ಬರು ಬಾಂದ್ರಾದಲ್ಲಿ ನಟನ ಮನೆಯಿರುವ ಗ್ಯಾಲಕ್ಸಿ ಅಪಾರ್ಟ್‌ಮೆಂಟ್ ಸಮೀಪ ನಾಲ್ಕು ಸುತ್ತು ಗುಂಡು ಹಾರಿಸಿ, ಪರಾರಿಯಾಗಿದ್ದರು. ಘಟನೆಯ ತನಿಖೆಗೆ ಪೊಲೀಸರ 12ಕ್ಕೂ ಹೆಚ್ಚು ತಂಡಗಳನ್ನು ರಚಿಸಲಾಗಿತ್ತು.

ತನಿಖೆ ಚುರುಕುಗೊಳಿಸಿದ್ದ ಪೊಲೀಸರಿಗೆ ಬೈಕ್, ಪನ್ವೆಲ್ ಪ್ರದೇಶದ ನಿವಾಸಿಯೊಬ್ಬರ ಹೆಸರಿನಲ್ಲಿ ನೋಂದಣಿ ಆಗಿರುವುದು ತಿಳಿದುಬಂತು. ಮಾಲೀಕನ ನೆಲೆ ಪತ್ತೆಹಚ್ಚಿದ ಅಪರಾಧ ನಿಗ್ರಹ ದಳದ ತಂಡ ವಿಚಾರಣೆಗೆ ಒಳಪಡಿಸಿತು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ದುಷ್ಕರ್ಮಿಗಳು ಚರ್ಚ್ ಬಳಿ ಬೈಕ್ ಬಿಟ್ಟು ಸ್ವಲ್ಪ ದೂರ ನಡೆದುಕೊಂಡು ಹೋಗಿದ್ದಾರೆ. ಬಳಿಕ ಆಟೊ ಮೂಲಕ ಬಾಂದ್ರಾ ರೈಲ್ವೆ ನಿಲ್ದಾಣ ತಲುಪಿರುವ ಸಾಧ್ಯತೆ ಇದೆ ಎಂದು ಪೊಲೀಸರು ಶಂಕಿಸಿದ್ದಾರೆ.

ಅಲ್ಲಿಂದ ರೈಲು ಹತ್ತಿರುವ ದುಷ್ಕರ್ಮಿಗಳು ನಂತರ ಸಾಂತಾಕ್ರೂಜ್ ನಿಲ್ದಾಣದಲ್ಲಿ ಇಳಿದಿದ್ದಾರೆ. ಅಲ್ಲಿಂದ ನಡೆದುಕೊಂಡು ಹೋಗಿರುವ ಸಾಧ್ಯತೆಗಳಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆಗೆ ಸಂಬಂಧ ಈ ವಲಯದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸುತ್ತಿದ್ದಾರೆ. 'ಈವರೆಗೆ ಯಾರನ್ನೂ ಬಂಧಿಸಿಲ್ಲ. ತನಿಖೆ ನಡೆಸಿದೆ' ಎಂದು ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು. ಅಪರಿಚಿತರ ವಿರುದ್ಧ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 307ರ ಅನ್ವಯ ಕೊಲೆ ಯತ್ನ ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಭರವಸೆಗಳಷ್ಟೇ, ಬದುಕು ಬದಲಾಗಲಿಲ್ಲ'

ದಿನ್‌ಹಾಟ, ಕೂಚ್ ಬಿಹಾರ್: ಸುಮಾರು 67 ವರ್ಷ ಅವರು ಎಲ್ಲೂ ಸಲ್ಲದವರಾಗಿದ್ದರು. ಭಾರತ ಮತ್ತು ಬಾಂಗ್ಲಾದೇಶ ನಡುವಿನ ಭೂ ವಿನಿಮಯ ಒಪ್ಪಂದದ 9 ವರ್ಷದ ಬಳಿಕ ಅವರಿಗೆ ಗುರುತು ಸಿಕ್ಕಿತು. ಆದರೆ, ಆ ನಂತರವು ಬದುಕಿನಲ್ಲಿ ಅಂತಹ ಪರಿವರ್ತನೆ ಕಾಣಿಸಲಿಲ್ಲ.

ಇದು, ಪಶ್ಚಿಮ ಬಂಗಾಳದ ಕೂಚ್ ಬಿಹಾರ್ ಜಿಲ್ಲೆಯ, ನೆರೆ ದೇಶದ ಭೂ ಪ್ರದೇಶಕ್ಕೆ ಹೊಂದಿಕೊಂಡಿರುವ ಮೂರು ಗ್ರಾಮಗಳಲ್ಲಿನ ನಿವಾಸಿಗಳ ಸ್ಥಿತಿ. ಭೂಮಿ ಮಾಲೀಕತ್ವದ ದಾಖಲೆ ಹೊಂದುವ ನಿವಾಸಿಗಳ ಕನಸು ಈಡೇರಿಲ್ಲ. ಭೂ ದಾಖಲೆ ನೀಡಲು ಇನ್ನು ಸರ್ವೇಯೇ ನಡೆದಿಲ್ಲ.

ಭೂ ಗಡಿ ಒಪ್ಪಂದದ ಅನುಸಾರ 'ಭಾರತದ' 111 ಪ್ರದೇಶ (ಸುಮಾರು 17,161 ಎಕರೆ) ಬಾಂಗ್ಲಾದೇಶದ ಸುಪರ್ದಿಗೆ ಹೋದರೆ, ಬಾಂಗ್ಲಾದೇಶದ 51 ಪ್ರದೇಶ (ಸುಮಾರು 7,110 ಎಕರೆ) ಭಾರತದ ಸುಪರ್ದಿಗೆ ಬಂದಿತು. ಸುಮಾರು 15,856 ಜನರು ಭಾರತದ ಜೊತೆಗೆ ಇರಲು ಬಯಸಿ, ಪೌರತ್ವ ಪಡೆದರು. ಬಾಂಗ್ಲಾದೇಶದ ಗಡಿಯಲ್ಲಿದ್ದ ಸುಮಾರು 921 ಜನರು ಭಾರತೀಯ ಪ್ರಜೆಗಳಾದರು.

ಆರಂಭದಲ್ಲಿ ತಾತ್ಕಾಲಿಕ ಶಿಬಿರಗಳಲ್ಲಿ ಇದ್ದರು. 2020ರಲ್ಲಿ 3 ಸಮುಚ್ಚಯಕ್ಕೆ ಸ್ಥಳಾಂತರಿಸಲಾಯಿತು. ಕೇಂದ್ರದ ನೆರವಿನಲ್ಲಿ ಪಶ್ಚಿಮ ಬಂಗಾಳ ಸರ್ಕಾರ ಇದನ್ನು ನಿರ್ಮಿಸಿತ್ತು. ವಸತಿಗಿಂತ ಜನರೇ ಹೆಚ್ಚಿದ್ದರಿಂದ ದಟ್ಟಣೆಯ ವಾತಾವರಣದಲ್ಲಿಯೇ ಜೀವನ ಸಾಗಿದೆ. ಕೂಚ್ ಬಿಹಾರ್‌ನಿಂದ 50 ಕಿ.ಮೀ. ದೂರದಲ್ಲಿರುವ ಈ ಗ್ರಾಮಗಳನ್ನು ರಾಜಕಾರಣಿಗಳು ಮರೆತಿದ್ದಾರೆ. ಸೂಕ್ತ ಭೂ ದಾಖಲೆ ಒದಗಿಸಬೇಕು ಎಂಬುದು ಇಲ್ಲಿನ ಜನರ ಬೇಡಿಕೆಯಾಗಿಯೇ ಉಳಿದಿದೆ.

ಮಥುರಾ: ಸಮೀಕ್ಷೆಗೆ ನೀಡಿದ್ದ ತಡೆ ವಿಸ್ತರಣೆ

ನವದೆಹಲಿ (ಪಿಟಿಐ): ಮಥುರಾದ ಶ್ರೀ ಕೃಷ್ಣ ಜನ್ಮಭೂಮಿ ದೇಗುಲಕ್ಕೆ ಹೊಂದಿಕೊಂಡಿರುವ ಶಾಹಿ ಈದ್ಗಾ ಮಸೀದಿಯ ಸಮೀಕ್ಷೆ ನಡೆಸುವಂತೆ ಅಲಹಾಬಾದ್ ಹೈಕೋರ್ಟ್ ನೀಡಿದ್ದ ಆದೇಶಕ್ಕೆ ವಿಧಿಸಿದ್ದ ತಡೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಿಸ್ತರಿಸಿದೆ.

'ವಿವಾದಕ್ಕೆ ಸಂಬಂಧಿಸಿ ಮಥುರಾ ನ್ಯಾಯಾಲಯದಲ್ಲಿ ಬಾಕಿ ಇರುವ ಎಲ್ಲ ಅರ್ಜಿಗಳನ್ನು ವರ್ಗಾಯಿಸುವಂತೆ 2023ರ ಮೇ 26ರಂದು ಹೈಕೋರ್ಟ್ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿ ಸೇರಿದಂತೆ ಮಸೀದಿಯ ಆಡಳಿತ ಮಂಡಳಿ ಸಲ್ಲಿಸಿದ್ದ ಎಲ್ಲ ಅರ್ಜಿಗಳನ್ನು ಆಗಸ್ಟ್ 5ರ ಬಳಿಕ ವಿಚಾರಣೆ ನಡೆಸುವುದಾಗಿ' ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ದೀಪಾಂಕರ್ ದತ್ತ ಅವರಿದ್ದ ನ್ಯಾಯಪೀಠವು ತಿಳಿಸಿದೆ.

ಕರ್ನಾಟಕ ಸರ್ಕಾರ

ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ

#542, 5ನೇ ಮಹಡಿ, 2ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು–560 001
ದೂ. 080–22353938, 22032561 ಮಿಂಚಂಚೆ : kmeagok@karnataka.gov.in,
ಜಾಲತಾಣ : www.kmea.karnataka.gov.in

ಕೆಎಂಇಎ 18 ಪ್ರೊಕ್ 2023 | ದಿನಾಂಕ: 10.04.2024

ಪ್ರಕಟಣೆ 2ನೇ ಕರೆ

ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ (ಕೆಎಂಇಎ)ವು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ ಇದರ ಅಡಿಯಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ, 1960ರ ಅನುಸಾರ ಸ್ಥಾಪಿತವಾದ ಸಂಸ್ಥೆಯಾಗಿದೆ. ಇದು ವಿವಿಧ ಸರ್ಕಾರಿ ಯೋಜನೆಗಳ ಮೌಲ್ಯಮಾಪನದಲ್ಲಿ ತೊಡಗಿಸಿಕೊಂಡಿದೆ ಮತ್ತು ಇದರ ಮೂಲಕ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಯೋಜನೆಗಳ ಉಪಯುಕ್ತತೆಗಳ ಕುರಿತು ಇಲಾಖೆಗೆ ಒಳನೋಟವನ್ನು ನೀಡುತ್ತದೆ.

ಕೆಎಂಇಎ ಯು ಒಂದು ವರ್ಷದ ಆರಂಭಿಕ ಅವಧಿಗೆ ಅಂದರೆ ತರಬೇತಿ ಅವಧಿಗೆ ತಿಂಗಳಿಗೆ ರೂ.47900ರಷ್ಟು ಕ್ರೋಢೀಕೃತ ವೇತನದಲ್ಲಿ ಗುತ್ತಿಗೆ ಆಧಾರದ ಮೇಲೆ ಸಂಶೋಧನಾ ಅಭ್ಯರ್ಥಿಗಳಾಗಿ ಕೆಲಸ ನಿರ್ವಹಿಸಲು ಸಮರ್ಥ ಮತ್ತು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ ಮತ್ತು ಅವರ ಕಾರ್ಯಕ್ಷಮತೆ ಮತ್ತು ಕಲಿಕೆಯ ಆಧಾರದ ಮೇಲೆ ಮೂರು ವರ್ಷಗಳವರೆಗೆ ಅವಧಿಯನ್ನು ವಿಸ್ತರಿಸಬಹುದಾಗಿದೆ.

ವಿದ್ಯಾರ್ಹತೆ: 1. ಹ್ಯೂಮಾನಿಟಿ ಯಲ್ಲಿ ಪಿ.ಹೆಚ್.ಡಿ (ಸಾಮಾಜಿಕ ಕೆಲಸ, ಸಮಾಜಶಾಸ್ತ್ರ ಮತ್ತು ಅರ್ಥಶಾಸ್ತ್ರ). 2. ನೈಸರ್ಗಿಕ ವಿಜ್ಞಾನ/ಕೃಷಿ ಮತ್ತು ಸಂಬಂಧಿತ ವಲಯದಲ್ಲಿ ಪಿ.ಹೆಚ್.ಡಿ. 3. ಶಿಕ್ಷಣದಲ್ಲಿ ಪಿಎಚ್.ಡಿ. 4. ಲಿಂಗ ಅಧ್ಯಯನ/ಸಾರ್ವಜನಿಕ ಆರೋಗ್ಯದಲ್ಲಿ ಪಿ.ಹೆಚ್.ಡಿ. 5. ಗ್ರಾಮೀಣ ಅಭಿವೃದ್ಧಿ/ಕಾನೂನು ವಿಷಯದಲ್ಲಿ ಪಿ.ಹೆಚ್.ಡಿ. 6. ಸಂಖ್ಯಾಶಾಸ್ತದಲ್ಲಿ ಪಿ.ಹೆಚ್.ಡಿ. 7. ಅನ್ವಯಿಕ ವಿಜ್ಞಾನದಲ್ಲಿ ಪಿ.ಹೆಚ್.ಡಿ. (ಸಿವಿಲ್ ಇಂಜಿನಿಯರಿಂಗ್/ ಜಲ ಸಂಪನ್ಮೂಲಗಳು/ಜಲಶಾಸ್ತ್ರ ಅಥವಾ ಸಂಬಂಧಿತ ವಿಷಯಗಳು).

ಅಪೇಕ್ಷಿತ ವಿದ್ಯಾರ್ಹತೆ: ಕಂಪ್ಯೂಟರ್ ಜ್ಞಾನ, ಟೈಪಿಂಗ್ ಕೌಶಲ್ಯ, ಕನ್ನಡ ಓದುವ ಮತ್ತು ಬರೆಯುವ ಜ್ಞಾನ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ಹುದ್ದೆಗಳ ಸಂಖ್ಯೆ: ಏಳು (ಪ್ರತೀ ವಿಭಾಗದಲ್ಲಿ ಒಂದು)

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 30/04/2024 ರವರೆಗೆ ವಿಸ್ತರಿಸಲಾಗಿದೆ.

ಹೆಚ್ಚಿನ ವಿವರಗಳು ಮತ್ತು ಅರ್ಜಿಗಾಗಿ ಕೆಎಂಇಎ ವೆಬ್‌ಸೈಟ್: https://kmea.karnataka.gov.in ಗೆ ಭೇಟಿ ನೀಡಿ.

ಸಹಿ/– ಮುಖ್ಯ ಮೌಲ್ಯಮಾಪನಾಧಿಕಾರಿ
ವಾ.ಸಾ.ಸಂ.ಇ/ವಾಪ್ರ/16/MAA/2024–25 ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ

ಷೇರುಪೇಟೆ ವಹಿವಾಟು ▼845



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,519
ಇಂದಿನ ಅಂತ್ಯ	22,272
▼	246
ದಿನದ ಕನಿಷ್ಠ	22,259

ವಿನಿಮಯ ದರ

$ ಡಾಲರ್	83.44
£ ಪೌಂಡ್	104.18
€ ಯುರೊ	88.91
¥ ಯೆನ್ (100ಕ್ಕೆ)	54

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹475
12 ಕ್ಕೆ	₹63
ಮೈಸೂರು	
100ಕ್ಕೆ	₹475

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1490 (1490)
ಸೋಯಾ (ರಿಫೈನ್ಡ್)	₹970 (960)
ಸೂರ್ಯಕಾಂತಿ (ರಿಫೈನ್ಡ್)	₹955 (950)
ಪಾಮೋಲಿನ್	₹965 (962)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹242-452

ದ್ವಿತಳಿ (ಬಿ.ವಿ) ₹265-545

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹15750
ಎಸಿ	₹8960
ಆರ್‌ಪಿ	₹16050
ಆರ್‌ಸಿ	₹9940

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹7500-9610
ಕೆ.ಆರ್.ಪೇಟೆ	₹9350-9350

ದೊಡ್ಡಬಳ್ಳಾಪುರದಲ್ಲಿ ಹೋಂಡಾ ಗೋದಾಮು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಪಾನ್‌ನ ಕಾರು ತಯಾರಿಕಾ ಕಂಪನಿ ಹೋಂಡಾ, ಕಾರಿನ ಬಿಡಿ ಭಾಗಗಳ ಗೋದಾಮಿನ (ವೇರ್‌ಹೌಸ್) ಭೂಮಿ ಪೂಜೆಯನ್ನು ದೊಡ್ಡಬಳ್ಳಾಪುರದಲ್ಲಿ ಸೋಮವಾರ ನೆರವೇರಿಸಿತು.

ಹೋಂಡಾ ಕಾರ್ಸ್ ಇಂಡಿಯಾದಿಂದ ನಿರ್ವಹಿಸಲಿರುವ ಈ ಗೋದಾಮು, ಹೋಂಡಾ ಕಾರ್ಸ್ ಇಂಡಿಯಾ, ಹೋಂಡಾ ಮೋಟರ್ ಸೈಕಲ್ ಮತ್ತು ಸ್ಕೂಟರ್ ಇಂಡಿಯಾ ಹಾಗೂ ಹೋಂಡಾ ಇಂಡಿಯಾ ಪವರ್ ಪ್ರಾಡಕ್ಟ್ಸ್ ಸೇರಿದಂತೆ ಎಲ್ಲ ಹೋಂಡಾ ವಾಹನಗಳಿಗೆ ಬಿಡಿ ಭಾಗಗಳನ್ನು ಪೂರೈಸಲಿದೆ ಎಂದು ಕಂಪನಿ ತಿಳಿಸಿದೆ.

2025–26ನೇ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಕಾರ್ಯಾಚರಣೆ ಪ್ರಾರಂಭಿಸಲಿದೆ. ಗೋದಾಮನ್ನು ಸುಮಿಟೊಮೊ ಮಿಟ್ಸುಯಿ ಕನ್‌ಸ್ಟ್ರಕ್ಷನ್ ಕಂಪನಿ (ಎಸ್‌ಎಂಸಿಸಿ) ನಿರ್ಮಾಣ ಮಾಡಲಿದೆ. ಮೊದಲ ಹಂತದಲ್ಲಿ, 60 ಸಾವಿರ ಚದರ ಮೀಟರ್ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗುತ್ತದೆ. ಇದರಲ್ಲಿ 25 ಸಾವಿರ ಚದರ ಮೀಟರ್ ವ್ಯಾಪ್ತಿಯ ಕಟ್ಟಡವೂ ಒಳಗೊಂಡಿರುತ್ತದೆ ಎಂದು ಕಂಪನಿ ತಿಳಿಸಿದೆ.

ಗ್ರಾಹಕರಿಗೆ ಸಕಾಲದಲ್ಲಿ ಹೋಂಡಾ ವಾಹನದ ಬಿಡಿ ಭಾಗಗಳನ್ನು ಪೂರೈಸುವುದು ಮತ್ತು ತ್ವರಿತವಾಗಿ ಲಭ್ಯವಾಗುವಂತೆ ಮಾಡಲು ಗೋದಾಮು ಸ್ಥಾಪಿಸಲಾಗುತ್ತಿದೆ ಎಂದು ಹೋಂಡಾ ಕಾರ್ಸ್ ಇಂಡಿಯಾ ಅಧ್ಯಕ್ಷ ಮತ್ತು ಸಿಇಒ ತಾಕುಯಾ ತ್ಸುಮಾರಾ ಹೇಳಿದ್ದಾರೆ.

ಈ ಗೋದಾಮು ನಿರ್ಮಾಣ ಪೂರ್ಣಗೊಂಡರೆ ದೇಶದ ದಕ್ಷಿಣ ಭಾಗದಲ್ಲಿ ವಾಹನದ ಬಿಡಿಭಾಗಗಳನ್ನು ಪೂರೈಕೆ ಮಾಡಲು ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.

ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ	
ಕೋಕ	18000-28500
ಹೊಸತು	28500-36500
ಹಳತು	36500-44500
ಚಿತ್ರದುರ್ಗ	
ಅಪಿ	49600-50000
ಬೆಟ್ಟೆ	35600-36000
ಕೆಂಪುಗೋಟು	29600-30000
ರಾಶಿ	49100-49500
ಕಾರ್ಕಳ	
ಹೊಸತು	25000-36500
ಹಳತು	30000-43500
ಕುಮಟ	
ಚಿಪ್ಪು	25089-28099
ಕೋಕ	12089-23019
ಫ್ಯಾಕ್ಟರಿ	11069-21369
ಹಳೆಚಾಲಿ	36099-38899
ಹೊಸಚಾಲಿ	31099-34399
ಪುತ್ತೂರು	
ಹೊಸತು	26500-36500
ಸಾಗರ	
ಬಿಳಿಗೋಟು	12339-25789
ಚಾಲಿ	22899-33829
ಕೋಕ	14989-30299
ಕೆಂಪುಗೋಟು	18399-34209
ರಾಶಿ	32699-49699
ಸಿಪ್ಪೆಗೋಟು	7290-18189
ಶಿವಮೊಗ್ಗ	
ಬೆಟ್ಟೆ	46000-54989
ಗೊರಬಲು	16589-35119
ರಾಶಿ	31779-50599
ಸರಕು	47700-83999
ಸಿದ್ದಾಪುರ	
ಬಿಳಿಗೋಟು	12699-30689
ಚಾಲಿ	28899-36139
ಕೋಕ	10689-29800
ಕೆಂಪುಗೋಟು	27318-31389
ರಾಶಿ	36100-48140
ತಟ್ಟಿಬೆಟ್ಟೆ	27099-37700
ಶಿರಸಿ	
ಬೆಟ್ಟೆ	36299-46199
ಬಿಳಿಗೋಟು	24169-30899
ಚಾಲಿ	32018-35898
ಕೆಂಪುಗೋಟು	29699-33699
ರಾಶಿ	44399-49099
ಯಲ್ಲಾಪುರ	
ಬಿಳಿಗೋಟು	21899-30600
ಕೋಕ	14699-27699
ಹಳೆಚಾಲಿ	36899-38141
ಹೊಸಚಾಲಿ	31012-36009
ಕೆಂಪುಗೋಟು	26899-36899
ರಾಶಿ	43590-55399
ತಟ್ಟಿಬೆಟ್ಟೆ	36189-43409

ಮಾರಾಟಕ್ಕೆ ತಟ್ಟಿದ ನೀತಿ ಸಂಹಿತೆ ಬಿಸಿ: ನೆರೆಯ ರಾಜ್ಯಗಳಿಂದ ಪೂರೈಕೆ ಹೆಚ್ಚಳ

ಅರಿಸಿನ ಧಾರಣೆ ದಿಢೀರ್ ಇಳಿಕೆ

• ಸೂರ್ಯನಾರಾಯಣ ವಿ.

ಚಾಮರಾಜನಗರ: ಜಿಲ್ಲೆಯಲ್ಲಿ ಮಾರ್ಚ್ ಎರಡನೇ ವಾರದಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದ್ದ ಅರಿಸಿನ ಧಾರಣೆಯು, ಲೋಕಸಭೆಗೆ ಚುನಾವಣೆ ಘೋಷಣೆಯಾದ ಬಳಿಕ ದಿಢೀರ್ ಕುಸಿತ ಕಂಡಿದೆ.

ಒಂದು ಕ್ವಿಂಟಲ್ ಅರಿಸಿನ ದರವು ₹19 ಸಾವಿರದವರೆಗೂ ತಲುಪಿತ್ತು. ಸದ್ಯ ಸ್ಥಳೀಯ ಮಾರುಕಟ್ಟೆಯಲ್ಲಿ ₹14 ಸಾವಿರದಿಂದ ₹15,500 ಧಾರಣೆ ಇದೆ. ಕ್ವಿಂಟಲ್‌ಗೆ ಏಕಾಏಕಿ ₹5 ಸಾವಿರ ಕುಸಿತವಾಗಿದೆ.

ಮಹಾರಾಷ್ಟ್ರ ಮತ್ತು ತೆಲಂಗಾಣದಿಂದ ಹೆಚ್ಚಿನ ಪ್ರಮಾಣದಲ್ಲಿ ಅರಿಸಿನ ಮಾರುಕಟ್ಟೆಗೆ ಬರುತ್ತಿರುವುದರಿಂದ ಬೆಲೆ ಕಡಿಮೆಯಾಗಿದೆ ಎಂದು ಕೆಲವು ರೈತರು ಹೇಳಿದರೆ, ಮಾರಾಟಕ್ಕೆ ಚುನಾವಣಾ ನೀತಿ ಸಂಹಿತೆಯ ಬಿಸಿಯೂ ತಟ್ಟಿದೆ ಎಂದು ಕೆಲವು ಬೆಳೆಗಾರರು ಹೇಳುತ್ತಾರೆ.

ನೀತಿ ಸಂಹಿತೆ ಜಾರಿಯಲ್ಲಿ ಇರುವುದರಿಂದ ದಾಖಲೆಗಳಿಲ್ಲದೆ ₹50 ಸಾವಿರಕ್ಕಿಂತ ಹೆಚ್ಚು ನಗದು ಕೊಂಡೊಯ್ಯುವುದು ಸಾಧ್ಯವಿಲ್ಲ. ಇದರಿಂದ ದಲ್ಲಾಳಿಗಳು, ವ್ಯಾಪಾರಿಗಳು ಇದೇ ಸಮಯವನ್ನು ಬಳಸಿಕೊಂಡು ಬೆಲೆ ಇಳಿಯುವಂತೆ ನೋಡಿಕೊಂಡಿದ್ದಾರೆ ಎಂದು ರೈತರು ದೂರುತ್ತಾರೆ.

ಚಾಮರಾಜನಗರದಲ್ಲಿ ಅರಿಸಿನವನ್ನು ಸ್ವಚ್ಛಗೊಳಿಸುತ್ತಿರುವ ಕಾರ್ಮಿಕ ಮಹಿಳೆ

ನೆರೆ ರಾಜ್ಯಗಳಿಂದಲೂ ಪೂರೈಕೆ: ಮಹಾರಾಷ್ಟ್ರದ ನಾಂದೇಡ್, ತೆಲಂಗಾಣದ ನಿಜಾಮಾಬಾದ್ ಪ್ರದೇಶದಲ್ಲಿ ಅರಿಸಿನವನ್ನು ಹೆಚ್ಚು ಬೆಳೆಯಲಾಗುತ್ತದೆ. ಅಲ್ಲಿನ ರೈತರು ಮುಂಗಾರು ಆರಂಭವಾದ ಬಳಿಕ ನಾಟಿ ಮಾಡುತ್ತಾರೆ.

‘ಕಳೆದ ವರ್ಷದ ಜೂನ್, ಜುಲೈ ನಂತರ ಬಿತ್ತನೆ ಮಾಡಿದ್ದ ಫಸಲು ಕೊಯ್ಲಿಗೆ ಬರುವುದು ವಿಳಂಬವಾಗಿತ್ತು. ಹಾಗಾಗಿ ಫೆಬ್ರುವರಿ, ಮಾರ್ಚ್‌ನಲ್ಲಿ ಮಾರುಕಟ್ಟೆಯಲ್ಲಿ ಅರಿಸಿನ ಕೊರತೆ ಉಂಟಾಗಿದ್ದರಿಂದ ಧಾರಣೆ ಏರಿಕೆಯಾಗಿತ್ತು’ ಎಂದು ಚಾಮರಾಜನಗರ ಜಿಲ್ಲಾ ಅರಿಸಿನ ಬೆಳೆಗಾರರ ಒಕ್ಕೂಟದ ಮುಖಂಡ ನಾಗಾರ್ಜುನ ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮಾರ್ಚ್ ಮೂರನೇ ವಾರದಿಂದ ಈ ಎರಡೂ ರಾಜ್ಯಗಳಲ್ಲಿ ಕಟಾವು ಆರಂಭಗೊಂಡಿದೆ. ಆ ಅರಿಸಿನವು ಹೆಚ್ಚಿನ ಪ್ರಮಾಣದಲ್ಲಿ ಮಾರುಕಟ್ಟೆಗೆ ಪೂರೈಕೆಯಾಗುತ್ತಿದೆ. ಹೀಗಾಗಿ ಬೆಲೆ ಇಳಿಕೆಯಾಗಿದೆ’ ಎಂದು ಹೇಳಿದರು.

‘ಚುನಾವಣಾ ನೀತಿ ಸಂಹಿತೆ ಜಾರಿಯಾದಾಗಿನಿಂದ ನಗದು ವಹಿವಾಟು ಹೆಚ್ಚು ನಡೆಯುತ್ತಿಲ್ಲ. ಹೆಚ್ಚು ಮೊತ್ತವನ್ನು ತೆಗೆದುಕೊಂಡು ಹೋಗಲಾಗುವುದಿಲ್ಲ. ಹಣದ ಅವಶ್ಯಕತೆ ಇರುವ ರೈತರಷ್ಟೇ ಅರಿಸಿನ ಮಾರಾಟ ಮಾಡುತ್ತಿದ್ದಾರೆ’ ಎಂದು ದಲ್ಲಾಳಿ ಸುರೇಶ್ ಬಾಬು ಹೇಳಿದರು.

ಬೆಳೆಗಾರರಿಗೆ ಗೊಂದಲ

ದಾಖಲೆ ಮಟ್ಟಕ್ಕೆ ಏರಿಕೆ ಕಂಡಿದ್ದ ಅರಿಸಿನದ ಧಾರಣೆ ಇಳಿದಿದ್ದರೂ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಬೆಳೆಗಾರರಿಗೆ ಉತ್ತಮ ಬೆಲೆಯೇ ಸಿಕ್ಕಿದೆ. ಇದೇ ಬೆಲೆ ಸ್ಥಿರವಾಗಿದ್ದರೆ ನಮಗೆ ನಷ್ಟವಾಗುವುದಿಲ್ಲ ಎಂದು ಹೇಳುತ್ತಾರೆ ಬೆಳೆಗಾರರು.

ಚುನಾವಣೆ ಬಳಿಕ ಧಾರಣೆ ಏರಿಕೆಯಾಗಬಹುದು ಎಂಬ ಮಾತು ಕೇಳಿಬರುತ್ತಿರುವುದರಿಂದ ಬೆಳೆಗಾರರು ಈಗ ಅರಿಸಿನ ಮಾರಾಟ ಮಾಡಬೇಕೇ, ಬೇಡವೇ ಎಂಬ ಗೊಂದಲದಲ್ಲಿದ್ದಾರೆ. ಚುನಾವಣೆ ಬಳಿಕ ಭಾರಿ ಪ್ರಮಾಣದಲ್ಲಿ ಮಾರುಕಟ್ಟೆಗೆ ಅರಿಸಿನ ಆವಕವಾದರೆ ಬೆಲೆ ಕುಸಿತವಾಗಬಹುದು ಎಂಬ ಆತಂಕವೂ ಅವರಿಗೆ ಕಾಡುತ್ತಿದೆ.

‘ಒಂದು ವಾರದ ಅವಧಿಯಲ್ಲಿ ಕ್ವಿಂಟಲ್‌ಗೆ ₹5,000–₹6,000 ದರ ಕಡಿಮೆಯಾಗಿದೆ. ಸಣ್ಣ ರೈತರು ಹೆಚ್ಚು ದಿನ ಅರಿಸಿನವನ್ನು ಸಂಗ್ರಹಿಸಿಡಲು ಆಗುವುದಿಲ್ಲ. ಹಾಗಾಗಿ, ಸಿಗುವ ಬೆಲೆಗೆ ಮಾರಾಟ ಮಾಡುವುದು ಅನಿವಾರ್ಯವಾಗಿದೆ’ ಎಂದು ಬೆಳೆಗಾರ ಲಿಂಗರಾಜು ತಿಳಿಸಿದರು.

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹181
ಆರ್‌ಎಸ್‌ಎಸ್-5	₹174.50
ಗುಡ್ ಲಾಟ್	₹164.50

(ಪ್ರತಿ ಕೆ.ಜಿಗೆ)

ಸುಧಾ, ಮಯೂರ ಓದಿರಿ

₹5.18 ಲಕ್ಷ ಕೋಟಿ ನಷ್ಟ

ಇಸ್ರೇಲ್–ಇರಾನ್ ಸಂಘರ್ಷ • ಕರಗಿದ ಷೇರು ಸಂಪತ್ತು

ಮುಂಬೈ/ ನವದೆಹಲಿ (ಪಿಟಿಐ): ಇಸ್ರೇಲ್–ಇರಾನ್ ಸಂಘರ್ಷದಿಂದ ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನ ಸ್ಥಿತಿ ಉಂಟಾಗಿದೆ. ಇದು ದೇಶದ ಷೇರುಪೇಟೆಯ ಮೇಲೆ ಪರಿಣಾಮ ಬೀರಿದ್ದು, ಹೂಡಿಕೆದಾರರ ಸಂಪತ್ತು ಸೋಮವಾರ ₹5.18 ಲಕ್ಷ ಕೋಟಿ ಕರಗಿದೆ.

ಇರಾನ್ ಮತ್ತು ಇಸ್ರೇಲ್ ನಡುವಿನ ಸಂಘರ್ಷ ಹಾಗೂ ಮಧ್ಯಪ್ರಾಚ್ಯದಲ್ಲಿ ಹದಗೆಟ್ಟ ಪರಿಸ್ಥಿತಿಯು ಷೇರು ಮಾರುಕಟ್ಟೆಯ ಮೇಲೆ ಪರಿಣಾಮ ಬೀರಿದೆ. ಭಾರತ ಸೇರಿದಂತೆ ವಿಶ್ವದಾದ್ಯಂತ ಹೂಡಿಕೆದಾರರು ಹೆಚ್ಚು ಜಾಗರೂಕರಾಗಿದ್ದಾರೆ. ಹೂಡಿಕೆದಾರರು ಷೇರು ಮಾರಾಟಕ್ಕೆ ಮುಂದಾಗಿದ್ದಾರೆ. ಇದರಿಂದ ಷೇರು ಸೂಚ್ಯಂಕಗಳು ಇಳಿದಿವೆ ಎಂದು ಮೆಹ್ತಾ ಈಕ್ವಿಟೀಸ್ ಲಿಮಿಟೆಡ್‌ನ ಹಿರಿಯ ಉಪಾಧ್ಯಕ್ಷ (ಸಂಶೋಧನೆ) ಪ್ರಶಾಂತ್ ತಾಪ್ಸೆ ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) 845 ಅಂಶ (ಶೇ 1.14) ಕುಸಿದು 73,399ಕ್ಕೆ ಸ್ಥಿರಗೊಂಡಿತು. ದಿನದ ವಹಿವಾಟಿನ ಅವಧಿಯಲ್ಲಿ ಒಂದು ಹಂತದಲ್ಲಿ 73,315ಕ್ಕೆ ಮುಟ್ಟಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 246 ಅಂಶ (ಶೇ 1.10) ಇಳಿದು 22,272ಕ್ಕೆ ಕೊನೆಗೊಂಡಿತು. ವಿಪ್ರೊ, ಐಸಿಐಸಿಐ ಬ್ಯಾಂಕ್, ಬಜಾಜ್ ಫಿನ್‌ಸರ್ವ್, ಬಜಾಜ್ ಫೈನಾನ್ಸ್, ಟಾಟಾ ಮೋಟರ್ಸ್, ಲಾರ್ಸೆನ್ ಆ್ಯಂಡ್ ಟೊಬ್ರೊ, ಟೆಕ್ ಮಹೀಂದ್ರ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಷೇರಿನ ಮೌಲ್ಯ ಇಳಿಕೆ ಆಗಿದೆ. ನೆಸ್ಲೆ, ಮಾರುತಿ ಸುಜುಕಿ ಮತ್ತು ಭಾರ್ತಿ ಏರ್‌ಟೆಲ್ ಗಳಿಕೆ ಕಂಡಿವೆ.

ಬಿಎಸ್‌ಇ ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 1.54 ಮತ್ತು ಮಿಡ್‌ಕ್ಯಾಪ್ ಸೂಚ್ಯಂಕ ಶೇ 1.50ರಷ್ಟು ಇಳಿದಿದೆ. ಜಾಗತಿಕ ಬ್ರೆಂಟ್ ಕಚ್ಚಾ ತೈಲವು ಶೇ 1.04ರಷ್ಟು ಇಳಿಕೆಯಾಗಿ, ಪ್ರತಿ ಬ್ಯಾರೆಲ್‌ಗೆ ₹7,468 (ಅಮೆರಿಕ ಡಾಲರ್ 89.51) ಮುಟ್ಟಿದೆ.

ಇಳಿಕೆ ಕಂಡ ಕಂಪನಿಗಳು (ಶೇಕಡಾವಾರು)



ಚಿನ್ನದ ದರ ಏರಿಕೆ: ಬೆಂಗಳೂರಿನಲ್ಲಿ ಸೋಮವಾರ 10 ಗ್ರಾಂ ಚಿನ್ನದ ಬೆಲೆ ₹74,920ರಂತೆ ಮಾರಾಟವಾಗಿದೆ. ಕೆ.ಜಿ ಬೆಳ್ಳಿ ಧಾರಣೆ ₹85,200ಕ್ಕೆ ಮುಟ್ಟಿದೆ.

ನವದೆಹಲಿಯಲ್ಲೂ ಏರಿಕೆ: ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ದರವು 10 ಗ್ರಾಂ.ಗೆ ₹300 ಹೆಚ್ಚಳವಾಗಿ 73,050ರಂತೆ ಮಾರಾಟವಾಗಿದೆ. ಬೆಳ್ಳಿಯು ಕೆ.ಜಿಗೆ ₹500 ಏರಿಕೆಯಾಗಿ ₹85,700ಕ್ಕೆ ಮುಟ್ಟಿದೆ.

‘ಇರಾನ್–ಇಸ್ರೇಲ್ ಸಂಘರ್ಷದಿಂದ ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಚಿನ್ನದತ್ತ ಗಮನಹರಿಸಿದ್ದಾರೆ. ಹಾಗಾಗಿ, ಬಂಗಾರದ ಬೆಲೆಯು ಏರಿಕೆ ಆಗುತ್ತಿದೆ’ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸೌಮಿಲ್ ಗಾಂಧಿ ಹೇಳಿದ್ದಾರೆ.

ಸುದ್ದಿ 2 ನಿಮಿಷ

ಸಗಟು ಹಣದುಬ್ಬರ ಏರಿಕೆ

ನವದೆಹಲಿ (ಪಿಟಿಐ): ತರಕಾರಿಗಳು, ಆಲೂಗೆಡ್ಡೆ, ಈರುಳ್ಳಿ ಮತ್ತು ಕಚ್ಚಾ ತೈಲದ ಬೆಲೆಗಳ ಹೆಚ್ಚಳದಿಂದಾಗಿ ಮಾರ್ಚ್‌ನಲ್ಲಿ ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧಾರಿತ ಹಣದುಬ್ಬರವು ಮೂರು ತಿಂಗಳ ಗರಿಷ್ಠ ಅಂದರೆ, ಶೇ 0.53ಕ್ಕೆ ಏರಿಕೆಯಾಗಿದೆ.

ಫೆಬ್ರುವರಿಯಲ್ಲಿ ಹಣದುಬ್ಬರವು ಶೇ 0.20 ರಷ್ಟಿತ್ತು. ಹಿಂದಿನ ವರ್ಷದ ಮಾರ್ಚ್‌ನಲ್ಲಿ ಶೇ 1.41ರಷ್ಟಿತ್ತು ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ.



ಆಹಾರದ ಹಣದುಬ್ಬರವು ಶೇ 6.88ಕ್ಕೆಏರಿಕೆಯಾಗಿದೆ. 2023ರ ಮಾರ್ಚ್‌ನಲ್ಲಿ ಶೇ 5.42ರಷ್ಟು ಇತ್ತು. ತರಕಾರಿ ಹಣದುಬ್ಬರವು ಶೇ 19.52ಕ್ಕೆ ಹೆಚ್ಚಳವಾಗಿದೆ. ಆಲೂಗೆಡ್ಡೆಯು ಶೇ 25.59ರಿಂದ ಶೇ 52.96ಕ್ಕೆ ಜಿಗಿತ ಕಂಡಿದ್ದರೆ, ಈರುಳ್ಳಿ ಶೇ (–)36.83ರಿಂದ ಶೇ 56.99ಕ್ಕೆ ಹೆಚ್ಚಳವಾಗಿದೆ. ಜಾಗತಿಕವಾಗಿ ಕಚ್ಚಾ ತೈಲ ದರವು ಏರಿಕೆಯಾಗುತ್ತಿದ್ದು, ಶೇ 10.26ರಷ್ಟು ಏರಿಕೆಯಾಗಿದೆ. 2023ರ ಮಾರ್ಚ್‌ನಲ್ಲಿ ಶೇ 23.53ರಷ್ಟು ದರ ಇಳಿಕೆ ಇತ್ತು.

ಆದಾಗ್ಯೂ, ಚಿಲ್ಲರೆ ಹಣದುಬ್ಬರವು ಮಾರ್ಚ್‌ನಲ್ಲಿ ಐದು ತಿಂಗಳ ಕನಿಷ್ಠ ಮಟ್ಟ ಶೇ 4.85ಕ್ಕೆ ಇಳಿದಿದೆ. ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರವು ಫೆಬ್ರುವರಿಯಲ್ಲಿ ಶೇ 5.09 ಆಗಿದ್ದರೆ, ಹಿಂದಿನ ವರ್ಷದ ಮಾರ್ಚ್‌ನಲ್ಲಿ ಶೇ 5.66 ಆಗಿತ್ತು ಎಂದು ಸಚಿವಾಲಯ ತಿಳಿಸಿದೆ.

ಬೈಜುಸ್ ಕಾರ್ಯಾಚರಣೆ ರವೀಂದ್ರನ್ ಹೆಗಲಿಗೆ

ನವದೆಹಲಿ (ಪಿಟಿಐ): ಬೈಜುಸ್ ಶಿಕ್ಷಣ ಸಂಸ್ಥೆಯ ಸಿಇಒ ಅರ್ಜುನ್ ಮೋಹನ್ ರಾಜಿನಾಮೆ ನೀಡಿದ ಕಾರಣ ಸಂಸ್ಥಾಪಕ ಬೈಜು ರವೀಂದ್ರನ್ ಅವರು ಸಂಸ್ಥೆಯ ದೈನಂದಿನ ಕಾರ್ಯಾಚರಣೆಗಳ ಉಸ್ತುವಾರಿ ನೋಡಿಕೊಳ್ಳಲಿದ್ದಾರೆ ಎಂದು ಸಂಸ್ಥೆ ತಿಳಿಸಿದೆ.

ಈ ಕ್ರಮದಿಂದಾಗಿ ಸಂಸ್ಥೆಯು ತನ್ನ ವ್ಯವಹಾರವನ್ನು ಲರ್ನಿಂಗ್ ಆ್ಯಪ್, ಆನ್‌ಲೈನ್ ತರಗತಿಗಳು ಮತ್ತು ಟ್ಯೂಷನ್ ಕೇಂದ್ರ ಮತ್ತು ಪರೀಕ್ಷಾ-ತಯಾರಿ ಎನ್ನುವ ಮೂರು ಭಾಗಗಳಾಗಿಸಿದೆ.

ಕಳೆದ ನಾಲ್ಕು ವರ್ಷಗಳಲ್ಲಿ, ರವೀಂದ್ರನ್ ಅವರು ಮುಖ್ಯವಾಗಿ ಬಂಡವಾಳವನ್ನು ಸಂಗ್ರಹಿಸುವುದು ಮತ್ತು ಜಾಗತಿಕ ವಿಸ್ತರಣೆಯಂತಹ ಕಾರ್ಯತಂತ್ರದ ಅಂಶಗಳ ಮೇಲೆ ಗಮನ ಕೇಂದ್ರೀಕರಿಸಿದ್ದರು. ಈ ಹೊಸ ಸಾಂಸ್ಥಿಕ ರಚನೆಯೊಂದಿಗೆ ಕಾರ್ಯಾಚರಣೆಯ ನಾಯಕರಾಗಿ ಬೈಜು ರವೀಂದ್ರನ್ ಮರಳಿದ್ದಾರೆ ಎಂದು ಸಂಸ್ಥೆ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

15-4-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1500)
ಒಂದು ವಾರದ ಡೆಲಿವರಿ	1495 (1495)
ಸೋಯಾ ಕಚ್ಚಾ	920 (915)
ಪಾಮ್ ವಾರದ ಡೆಲಿವರಿ	963 (960)
ಸೂರ್ಯಕಾಂತಿ ಎಣ್ಣೆ ಕಚ್ಚಾ	880 (870)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹72,450 (72,100)

ಬೆಳ್ಳಿ ಕೆ.ಜಿ ₹83,500 (82,700)

ಆವರಣದಲ್ಲಿ ಶನಿವಾರದ ಧಾರಣೆ

ಬಾಲ್ಟಿಮೋರ್ ಸೇತುವೆ ಕುಸಿತ: ತನಿಖೆ ಆರಂಭಿಸಿದ ಎಫ್‌ಬಿಐ

ನ್ಯೂಯಾರ್ಕ್ (ಪಿಟಿಐ): ಬಾಲ್ಟಿಮೋರ್ ಸೇತುವೆ ಕುಸಿತ ಪ್ರಕರಣದ ಬಗ್ಗೆ ಎಫ್‌ಬಿಐ ಕ್ರಿಮಿನಲ್ ತನಿಖೆ ಆರಂಭಿಸಿದೆ. ಹಡಗಿನಲ್ಲಿ ಗಂಭೀರ ತಾಂತ್ರಿಕ ಸಮಸ್ಯೆಗಳೇನಾದರೂ ಇದ್ದವೇ ಎಂದು ಪರಿಶೀಲಿಸಲಾಗುತ್ತಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಪಟಾಪ್‌ಸ್ಕೊ ನದಿ ಮೇಲಿನ 2.6 ಕಿ.ಮೀ. ಉದ್ದದ, ಫ್ರಾನ್ಸಿಸ್ ಸ್ಕಾಟ್ ಕೀ ಸೇತುವೆಯು ಮಾರ್ಚ್ 26ರಂದು ಸರಕು ಸಾಗಣೆ ಹಡಗು 'ಡಾಲಿ' ಡಿಕ್ಕಿ ಹೊಡೆದಿದ್ದರಿಂದ ಕುಸಿದಿತ್ತು. ಹಡಗಿನಲ್ಲಿ 20 ಭಾರತೀಯರು, ಒಬ್ಬ ಶ್ರೀಲಂಕಾದ ಸಿಬ್ಬಂದಿ ಇದ್ದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಪೂಜ್ಯಶ್ರೀ ಎಸ್. ಕರಿಯಪ್ಪ ರವರ 125ನೇ ವರ್ಷದ ಜನ್ಮದಿನೋತ್ಸವ ಮತ್ತು 44ನೇ ವಾರ್ಷಿಕ ಪುಣ್ಯ ಸ್ಮರಣೆ ಕಾರ್ಯಕ್ರಮ

ದಿ|| ಪೂಜ್ಯಶ್ರೀ ಎಸ್. ಕರಿಯಪ್ಪನವರು
1900 – 1980

ಪೂಜ್ಯಶ್ರೀ ಎಸ್. ಕರಿಯಪ್ಪರವರ 125ನೇ ವರ್ಷದ ಜನ್ಮದಿನೋತ್ಸವ ಮತ್ತು 44ನೇ ವಾರ್ಷಿಕ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ದಿನಾಂಕ: 17.04.2024ರ ಬುಧವಾರ ಶ್ರೀರಾಮನವಮಿ ದಿನದಂದು ಬೆಳಿಗ್ಗೆ 8.00 ಗಂಟೆಗೆ ಕನಕಪುರದ ಮುಖ್ಯ ರಸ್ತೆಯಲ್ಲಿ ಪೂಜ್ಯಶ್ರೀ ಎಸ್. ಕರಿಯಪ್ಪನವರ ಭಾವಚಿತ್ರ ಮೆರವಣಿಗೆ ಕಾರ್ಯಕ್ರಮವನ್ನು ಮತ್ತು ಬೆಳಿಗ್ಗೆ 10:00 ಗಂಟೆಯ ನಂತರ ಗ್ರಾಮ ವಿದ್ಯಾ ಪ್ರಚಾರಕ ಸಂಘದ ಆವರಣದ ವೇದಿಕೆ ಕಾರ್ಯಕ್ರಮದಲ್ಲಿ ಕರ್ಮಯೋಗಿ ಪೂಜ್ಯಶ್ರೀ ಎಸ್.ಕರಿಯಪ್ಪರವರ ಸ್ಮರಣಾ ಕಾರ್ಯಕ್ರಮವನ್ನು ಆಚರಿಸಲಾಗುವುದು.

ಅಧ್ಯಕ್ಷತೆ : ಶ್ರೀ ಹೆಚ್. ಕೆ. ಶ್ರೀಕಂಠ, ಎಂ.ಎಸ್ಸಿ (ಅಗ್ರಿ) ಅಧ್ಯಕ್ಷರು, ಆರ್.ಇ.ಎಸ್, ಕನಕಪುರ.

ಮುಖ್ಯ ಅತಿಥಿಗಳು : ಡಾ|| ಎಂ. ಪುಟ್ಟೇಗೌಡ, ಬಿ.ಎಸ್ಸಿ., ಬಿ.ಎಡ್., ಎಲ್.ಎಲ್.ಬಿ., ವಕೀಲರು & ಎಕ್ಸ್ ಮುನ್ಸಿಫ್ ನ್ಯಾಯಾಧೀಶರು, ಕಾನೂನು ತಜ್ಞರು/ ಕಾನೂನು ಸಲಹೆಗಾರರು, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ.

ಸಂಸ್ಥೆಯ ಅಜೀವ ಸದಸ್ಯರು, ಹಿರಿಯ ವಿದ್ಯಾರ್ಥಿಗಳು ಮತ್ತು ಅಭಿಮಾನಿಗಳು ಇದನ್ನೇ ಆಹ್ವಾನವೆಂದು ತಿಳಿದು ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ.

ಆಡಳಿತ ಮಂಡಳಿಯ ಪರವಾಗಿ
ಪುಟ್ಟಸ್ವಾಮಿ, ಗೌ|| ಕಾರ್ಯದರ್ಶಿ
ಗ್ರಾಮ ವಿದ್ಯಾ ಪ್ರಚಾರಕ ಸಂಘ(ರಿ), ಕನಕಪುರ.

ವೈಕುಂಠ ಸಮಾರಾಧನೆ



ಶ್ರೀ ಬಿ.ಹೆಚ್.ಚಾಮರಾಜ್
18-07-1944 - 06-04-2024
ನೀವು ಯಾವಾಗಲೂ ನಮ್ಮ ಆಲೋಚನೆಗಳಲ್ಲಿ ಹಾಗೂ ಎಂದೆಂದಿಗೂ ನಮ್ಮ ಹೃದಯದಲ್ಲಿ
ಇಂತಿ ದುಃಖತಪ್ತರು:
ಧರ್ಮಪತ್ನಿ – ಕಾತ್ಯಾಯಿನಿ
ಮಕ್ಕಳು – ಸಂಗೀತಾ ಮತ್ತು ಸುನೀತ
ಅಳಿಯ – ಜಗದೀಶ್
ಮೊಮ್ಮಗಳು– ತಾನಿಯಾ
ಕುಟುಂಬಸ್ಥರು ಮತ್ತು ಬಂಧು–ಮಿತ್ರರು

For Online Classified Booking
Name Change / Education / Property / Job / Services & many more
Log on to :
dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC,Degree, ITIನವರು. 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9353185367

Part-Time Jobs

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516, ಶಿವಮೊಗ್ಗ 8095555517

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

WORK FROM Home: ಮನೆಯಲ್ಲಿ ಕುಳಿತು 10,000–20,000 ದುಡಿಯಬಹುದು. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ,ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI,PF ಸೌಲಭ್ಯವಿರುತ್ತದೆ. ಬೆಂಗಳೂರು-76. ಸಂಪರ್ಕಿಸಿ: 7899235388, 9606385001

ಸಾರ್ವಜನಿಕ ಪ್ರಕಟಣೆ

SHORT TERM TENDER NOTIFICATION
No. AFB/ID/01/2024-25 dated 12-04-2024
On behalf of the President, Alliance Francaise de Bangalore (AFB) invites tenders from interested Bidders / Suppliers for the procurement, Installation& Refurbishment of Theatre Lights and Sound System along with necessary allied works for AFB Auditorium at Vasanth Nagar, Bangalore. For more details visit our website https:bangalore. afindia.org/tenders. april-2024/
Sd/-
Gen. Secretary / Director AFB.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036

ಎಲ್ಲ ಜಿಲ್ಲೆಗಳಿಗೂ ಇದೇ 18, 19ರಂದು ‘ಯೆಲ್ಲೊ ಅಲರ್ಟ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಇದೇ 18–19ರಂದು ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.

ಈ ಎರಡು ದಿನ ಎಲ್ಲ 31 ಜಿಲ್ಲೆಗಳಿಗೂ ಐಎಂಡಿ ‘ಯೆಲ್ಲೊ ಅಲರ್ಟ್’ ಸೂಚನೆ ನೀಡಿದೆ. ಪ್ರತಿ ಗಂಟೆಗೆ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ ಎಂದೂ ಮುನ್ನೆಚ್ಚರಿಕೆ ನೀಡಲಾಗಿದೆ.

ಕಳೆದ ವಾರದ ದಕ್ಷಿಣ ಹಾಗೂ ಉತ್ತರ ಒಳನಾಡಿನ ಕೆಲವು ಭಾಗದಲ್ಲಿ ಮಳೆ ಸುರಿದು ತಂಪೆರೆದಿತ್ತು. ಅದಾದ ಮೇಲೆ ಬಿಸಿಲಿನ ವಾತಾವರಣ ಕಾಣಿಸಿತ್ತು. ಈ ವಾರದಲ್ಲಿ ಮುಂಗಾರು ಪೂರ್ವ ಮಳೆ ಉತ್ತಮವಾಗಿ ಸುರಿಯುವ ಸಾಧ್ಯತೆಯಿದೆ ಎಂದೂ ತಿಳಿಸಿದೆ.

ಬಳ್ಳಾರಿ, ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಮೈಸೂರು ಜಿಲ್ಲೆಗಳ ಕೆಲವು ಭಾಗದಲ್ಲಿ ಮಂಗಳವಾರ ಹಗುರ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡು ಹಾಗೂ ಮಲೆನಾಡು ಭಾಗದ ಕೆಲವು ಪ್ರದೇಶಗಳಲ್ಲಿ ಬುಧವಾರ ಮಳೆಯಾಗಲಿದೆ ಎಂದು ಮಾಹಿತಿ ನೀಡಿದೆ.

ಮುಂದಿನ ಎರಡು ದಿನಗಳು ಬೆಂಗಳೂರಿನಲ್ಲಿ ನಿರ್ಮಲ ಆಕಾಶ ಇರಲಿದ್ದು ಗರಿಷ್ಠ ಉಷ್ಣಾಂಶ 36 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 22 ಡಿಗ್ರಿ ಸೆಲ್ಸಿಯಸ್ ಇರಲಿದೆ.

ರಾಜ್ಯದಲ್ಲೇ ಅತಿ ಗರಿಷ್ಠ ಉಷ್ಣಾಂಶ 39.2 ಡಿಗ್ರಿ ಸೆಲ್ಸಿಯಸ್ ಕಲಬುರಗಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ದಾಖಲಾಗಿತ್ತು.

ಸೆಮಿಕಂಡಕ್ಟರ್: ಸ್ಯಾಮ್‌ಸಂಗ್ ಜತೆ ಅಮೆರಿಕದ ₹53 ಸಾವಿರ ಕೋಟಿ ಒಪ್ಪಂದ

ವಾಷಿಂಗ್ಟನ್ (ಪಿಟಿಐ): ಟೆಕ್ಸಾಸ್‌ನಲ್ಲಿ ಕಂಪ್ಯೂಟರ್ ಚಿಪ್ ಉತ್ಪಾದನೆ ಮತ್ತು ಸಂಶೋಧನಾ ಕ್ಲಸ್ಟರ್ ಅಭಿವೃದ್ಧಿಗಾಗಿ ಸ್ಯಾಮ್‌ಸಂಗ್ ಎಲೆಕ್ಟ್ರಾನಿಕ್ಸ್ ಸಂಸ್ಥೆಗೆ ₹53 ಸಾವಿರ ಕೋಟಿ (6.4 ಬಿಲಿಯನ್ ಡಾಲರ್) ನೆರವು ನೀಡುವ ಒಪ್ಪಂದಕ್ಕೆ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರ ಆಡಳಿತ ಮುಂದಾಗಿದೆ.

ಸೋಮವಾರ ವಾಣಿಜ್ಯ ಇಲಾಖೆಯು ಈ ನೆರವಿನ ಘೋಷಣೆ ಮಾಡಿದೆ. ದೇಶದಲ್ಲೇ ಅತ್ಯಾಧುನಿಕ ಕಂಪ್ಯೂಟರ್ ಚಿಪ್‌ಗಳನ್ನು ಉತ್ಪಾದಿಸಬೇಕು ಎಂಬ ಗುರಿಯೊಂದಿಗೆ 2022ರಲ್ಲಿ ಬೈಡನ್ ಅವರು ಚಿಪ್ಸ್ ಮತ್ತು ವಿಜ್ಞಾನ ಕಾಯ್ದೆಗೆ ಸಹಿ ಹಾಕಿದ್ದರು. ಅದರ ಭಾಗವಾಗಿಯೇ ಇದೀಗ ನೆರವು ನೀಡಲಾಗಿದೆ ಎಂದು ತಿಳಿದುಬಂದಿದೆ.

ಈ ಕುರಿತು ಪ್ರತಿಕ್ರಿಯಿಸಿದ ವಾಣಿಜ್ಯ ಇಲಾಖೆಯ ಕಾರ್ಯದರ್ಶಿ ಗಿನ ರೈಮೊಂಡೊ, ‘ಪ್ರಸ್ತಾವಿತ ಯೋಜನೆಯು ಟೆಕ್ಸಾಸ್ ಅನ್ನು ಸೆಮಿಕಂಡಕ್ಟರ್ ಉತ್ಪನ್ನದಲ್ಲಿ ಕೌಶಲ ಸಾಧಿಸಲು ಹುರಿದುಂಬಿಸಲಿದೆ. ಈ ದಶಕದ ಕೊನೆಯಲ್ಲಿ ವಿಶ್ವದಲ್ಲಿ ತಯಾರಾಗುವ ಸೆಮಿಕಂಡಕ್ಟರ್‌ಗಳ ಪೈಕಿ ಶೇ 20ರಷ್ಟನ್ನು ಅಮೆರಿಕವೇ ತಯಾರಿಸುವ ಗುರಿಯನ್ನು ತಲುಪಲಿದ್ದೇವೆ. ಈ ಯೋಜನೆಯ ಆರಂಭದಿಂದ ದೇಶದಲ್ಲಿ ಕನಿಷ್ಠ 17 ಸಾವಿರ ನಿರ್ಮಾಣ ಉದ್ಯೋಗಗಳು ಮತ್ತು 4500ಕ್ಕೂ ಹೆಚ್ಚು ಉತ್ಪಾದನಾ ಉದ್ಯೋಗಗಳು ಸೃಷ್ಟಿಯಾಗಲಿವೆ’ ಎಂದಿದ್ದಾರೆ.



ಜೋ ಬೈಡನ್

ಟೆಕ್ಸಾಸ್‌ನ ಟೈಲರ್ ಎಂಬಲ್ಲಿ ಸ್ಯಾಮ್‌ಸಂಗ್‌ನ ಕ್ಲಸ್ಟರ್ ನಾಲ್ಕು ಮತ್ತು ಎರಡು ನ್ಯಾನೊಮೀಟರ್ ಚಿಪ್‌ಗಳನ್ನು ತಯಾರಿಸುವ ಎರಡು ಕಾರ್ಖಾನೆಗಳು ತಲೆಎತ್ತಲಿವೆ. ಅಲ್ಲದೆ, ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಪ್ರತ್ಯೇಕ ಕಾರ್ಖಾನೆ ಸ್ಥಾಪಿತವಾಗಲಿದೆ. ಮೊದಲ ಕಾರ್ಖಾನೆಯು 2026ರಲ್ಲಿ ತಯಾರಿಕೆ ಆರಂಭಿಸಲಿದ್ದರೆ, ಮತ್ತೊಂದು ಕಾರ್ಖಾನೆ 2027ರಿಂದ ಕಾರ್ಯನಿರ್ವಹಿಸಲಿದೆ ಎಂದು ಅಮೆರಿಕ ಸರ್ಕಾರ ತಿಳಿಸಿದೆ.

ರನ್ ಮಳೆಯಲ್ಲಿ ಗೆದ್ದ ಸನ್‌ರೈಸರ್ಸ್

ಟ್ರಾವಿಸ್ ಹೆಡ್ ಮಿಂಚಿನ ಶತಕ • ಹೈದರಾಬಾದ್ ದಾಖಲೆ ಮೊತ್ತ • ಆರ್‌ಸಿಬಿಗೆ ಆರನೇ ಸೋಲು

• ನಾಗೇಶ್ ಶೆಣೈ

ಬೆಂಗಳೂರು: ಬೆಂಗಳೂರಿನಲ್ಲಿ ಈ ಬಾರಿ ಮಳೆಯಾಗಿಲ್ಲ. ಆದರೆ, ಶತಕ ಬಾರಿಸಿದ ಟ್ರಾವಿಸ್ ಹೆಡ್ (102, 41ಎ, 4x9, 6x8) ಆದಿಯಾಗಿ ಹೈದರಾಬಾದ್‌ನ ಪ್ರಮುಖ ಬ್ಯಾಟರ್‌ಗಳು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬೌಂಡರಿ, ಸಿಕ್ಸರ್‌ಗಳ ಸುರಿಮಳೆಗರೆದರು.

ಸೋಮವಾರ ನಡೆದ ಐಪಿಎಲ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರುದ್ಧ ಲೀಗ್‌ನ ಸರ್ವಾಧಿಕ ಮೊತ್ತ ದಾಖಲಿಸಿತಲ್ಲದೇ, ಅಂತಿಮವಾಗಿ ಪಂದ್ಯವನ್ನು 25 ರನ್‌ಗಳಿಂದ ಗೆದ್ದುಕೊಂಡಿತು.

ಸನ್‌ರೈಸರ್ಸ್ ತಂಡದ 'ಹಿಮಾಲಯದೆತ್ತರದ ಮೊತ್ತ'ದ ಎದುರು ಆರ್‌ಸಿಬಿ ಒಂದು ಹಂತದಲ್ಲಿ ಕುಸಿದರೂ (5ಕ್ಕೆ 122) ಹೋರಾಟ ತೋರಿತು.

ಹೈದರಾಬಾದ್ ತಂಡ 3 ವಿಕೆಟ್‌ಗೆ 287 ರನ್‌ಗಳ ಭಾರಿ ಮೊತ್ತ ಗಳಿಸಿ, ಇದೇ ಆವೃತ್ತಿಯಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಗಳಿಸಿದ್ದ 277 ರನ್‌ಗಳ ತನ್ನದೇ ದಾಖಲೆಯನ್ನು ಸುಧಾರಿಸಿತು. ಉತ್ತರವಾಗಿ ಬೆಂಗಳೂರು ತಂಡ 7 ವಿಕೆಟ್‌ಗೆ 262 ರನ್ ಗಳಿಸಿತು.

ವಿರಾಟ್ ಕೊಹ್ಲಿ ಮತ್ತು ಫಫ್ ಡುಪ್ಲೆಸಿ 80 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ನಂತರ ದಿನೇಶ್ ಕಾರ್ತಿಕ್ (83, 35ಎ, 4x5, 6x7) ಮತ್ತೊಮ್ಮೆ ಏಕಾಂಗಿಯಾಗಿ ಹೋರಾಡಿದರು. ಅವರಿಗೆ ಉಳಿದವರಿಂದ ಬೆಂಬಲ ಸಿಗಲಿಲ್ಲ.

ಮುರಿದ ದಾಖಲೆಗಳು: ಪಂದ್ಯದಲ್ಲಿ ದಾಖಲೆಗಳಿಗೆ ಬರವಿರಲಿಲ್ಲ. ಒಟ್ಟು 38 ಸಿಕ್ಸರ್‌ಗಳು ಬಂದಿದ್ದು ದಾಖಲೆ. ಸನ್‌ರೈಸರ್ಸ್ ಹೊಡೆದ 22 ಸಿಕ್ಸರ್‌ಗಳು ಇನಿಂಗ್ಸ್ ಒಂದರಲ್ಲಿ ಅತ್ಯಧಿಕ. 2013ರಲ್ಲಿ ಪುಣೆ ವಾರಿಯರ್ಸ್ ವಿರುದ್ಧ ಆರ್‌ಸಿಬಿ 21 ಸಿಕ್ಸರ್‌ಗಳನ್ನು ಬಾರಿಸಿತ್ತು. ಇಂದಿನ ಪಂದ್ಯದಲ್ಲಿ ಒಟ್ಟು 549 ರನ್‌ಗಳು ಬಂದಿದ್ದೂ ದಾಖಲೆ. ಹೈದರಾಬಾದ್ ಮತ್ತು ಮುಂಬೈ ತಂಡ ಗಳ ನಡುವಣ ಇತ್ತೀಚಿನ ಪಂದ್ಯದಲ್ಲಿ 523 ರನ್ ಬಂದಿದ್ದು ಈ ಹಿಂದಿನ ದಾಖಲೆ.

ಕೊಹ್ಲಿ ಮತ್ತು ನಾಯಕ ಫಫ್ ಡುಪ್ಲೆಸಿ ಮೊದಲ ವಿಕೆಟ್‌ಗೆ 6.2 ಓವರುಗಳಲ್ಲಿ 80 ರನ್ ಸೇರಿಸಿದಾಗ ಆಸೆ ಚಿಗುರಿತ್ತು. ಆದರೆ ಲೆಗ್ ಸ್ಪಿನ್ನರ್ ಮಯಂಕ್ ಮಾರ್ಕಂಡೆ ತಮ್ಮ ಮೊದಲ ಓವರ್‌ನಲ್ಲೇ ಕೊಹ್ಲಿ (42, 20ಎ, 4x6, 6x2) ಅವರ ವಿಕೆಟ್ ಪಡೆದಾಗ ಕಿಕ್ಕಿರಿದಿದ್ದ ಕ್ರೀಡಾಂಗಣ ಸ್ತಬ್ಧವಾಯಿತು. ಗೂಗ್ಲಿ ಎಸೆತವನ್ನು ಸ್ವೀಪ್ ಮಾಡಲು ಹೋಗಿ ಅವರು ಎಡವಿದರು. ಮುಂದಿನ ಎರಡು ಓವರ್‌ಗಳ ಅಂತರದಲ್ಲಿ ವಿಲ್ ಜಾಕ್ಸ್ ಮತ್ತು ರಜತ್ ಪಾಟೀದಾರ್ ಕೂಡ ನಿರ್ಗಮಿಸಿದರು.

ನಂತರ ವೇಗದ ಬೌಲರ್ ಪ್ಯಾಟ್ ಕಮಿನ್ಸ್ ಒಂದೇ ಓವರ್‌ನಲ್ಲಿ ಡುಪ್ಲೆಸಿ (62, 28ಎ, 4x7, 6x4) ಮತ್ತು ಸೌರವ್ ಚೌಹಾನ್ ವಿಕೆಟ್ ಪಡೆದು ಪೆಟ್ಟು ನೀಡಿದರು. ನಂತರ ದಿನೇಶ್ ಹೋರಾಟ ಪ್ರೇಕ್ಷಕರನ್ನು ರಂಜಿಸಿದರು. ದಿನೇಶ್ ಅವರ ವಿಕೆಟ್ ಸೇರಿದಂತೆ ಪ್ಯಾಟ್ ಕಮಿನ್ಸ್ 43 ರನ್ನಿಗೆ 3 ವಿಕೆಟ್ ಯಶಸ್ವಿ ಬೌಲರ್ ಎನಿಸಿದರು.

ಇದಕ್ಕೆ ಮೊದಲು, ಟಾಸ್ ಸೋತರೂ ಸನ್‌ರೈಸರ್ಸ್ ತಂಡ ಆರಂಭದಿಂದಲೇ ಆಕ್ರಮಣಕಾರಿ ಆಟದ ಇರಾದೆ ಪ್ರದರ್ಶಿಸಿತು. ಟೋಪ್ಲಿ ಮಾಡಿದ ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ಎರಡು ಸಿಕ್ಸರ್ ಸೇರಿ 20 ರನ್‌ಗಳು ಬಂದವು. ಹೆಡ್ ಮತ್ತು ಅಭಿಷೇಕ್ ಶರ್ಮಾ ಅಬ್ಬರದ ಆಟದೆದುರು ಬೌಲರ್‌ಗಳು ಲಯ ತಪ್ಪಿದರು. ಪವರ್‌ಪ್ಲೇ ಅವಧಿಯಲ್ಲೇ 76 ರನ್‌ಗಳು ಬಂದವು. ನಂತರವೂ ಏನೂ ವ್ಯತ್ಯಾಸ ಆಗಲಿಲ್ಲ. ವೈಶಾಖ್ ವಿಜಯಕುಮಾರ್ ಅವರ ಮೊದಲ (ಪಂದ್ಯದ 8ನೇ) ಎಸೆತವನ್ನೇ ಲಾಂಗ್‌ಆಫ್‌ಗೆ ಸಿಕ್ಸರ್ ಎತ್ತಿದ ಅಭಿಷೇಕ್ ಶರ್ಮಾ (34, 22ಎ) ತಂಡದ ಮೊತ್ತವನ್ನು ನೂರು ದಾಟಿಸಿದರು. ಇವರಿಬ್ಬರು ಕೇವಲ 8 ಓವರ್‌ಗಳಲ್ಲಿ 108 ರನ್ ಸೇರಿಸಿದರು.

ಅಭಿಷೇಕ್ ಶರ್ಮಾ 9ನೇ ಓವರ್‌ನಲ್ಲಿ ನಿರ್ಗಮಿಸಿದರು. ಆದರೆ ಹೆಡ್ ಜೊತೆಗೂಡಿದ ವಿಕೆಟ್ ಕೀಪರ್ ಹೆನ್ರಿಚ್ ಕ್ಲಾಸೆನ್ (67, 31ಎ, 4x2, 7x6), ಹೆಡ್ ಜೊತೆ ಆಕ್ರಮಣದ ಆಟ ಮುಂದುವರಿಸಿದರು. ವೈಶಾಖ್ ವಿಜಯಕುಮಾರ್ ಬೌಲಿಂಗ್‌ನಲ್ಲಿ ಲಾಂಗ್‌ಆನ್‌ಗೆ ಸೊಗಸಾದ ಬೌಂಡರಿ ಎತ್ತಿದ ಹೆಡ್ 39ನೇ ಎಸೆತಗಳಲ್ಲೇ ಶತಕ ಪೂರೈಸಿದರು. ಇದು ಐಪಿಎಲ್‌ನಲ್ಲಿ ಅವರ ಮೊದಲ ಶತಕ. ಎರಡನೇ ವಿಕೆಟ್‌ಗೆ ಕೇವಲ 26 ಎಸೆತಗಳಲ್ಲಿ 57 ರನ್‌ಗಳು ಬಂದವು. 13ನೇ ಓವರ್‌ನಲ್ಲಿ ಟ್ರಾವಿಸ್ ಹೆಡ್ ಮಿಡ್‌ಆಫ್‌ನಲ್ಲಿ ಕ್ಯಾಚಿತ್ತು ನಿರ್ಗಮಿಸಿದರು. ಕ್ಲಾಸೆನ್ ಮತ್ತು ಮರ್ಕರಂ (ಔಟಾಗದೇ 32, 17ಎ) ಕೇವಲ 27 ಎಸೆತಗಳಲ್ಲಿ ಮೂರನೇ ವಿಕೆಟ್‌ಗೆ 66 ರನ್ ಹರಿಸಿದರು. ನಂತರ ಮರ್ಕರಂ ಮತ್ತು ಅಬ್ದುಲ್ ಸಮದ್ ಮುರಿಯದ ನಾಲ್ಕನೇ ವಿಕೆಟ್‌ಗೆ ಕೇವಲ 19 ಎಸೆತಗಳಲ್ಲಿ 56 ರನ್ ಸೇರಿಸಿದರು.

ಆರ್‌ಸಿಬಿಗೆ ಇದು ಆರನೇ ಸೋಲು. ಇದರಿಂದ ತಂಡದ ಪ್ಲೇ ಆಫ್ ಹಾದಿ ಇನ್ನಷ್ಟು ಕಠಿಣವಾಯಿತು.

ಈ ಪಂದ್ಯಕ್ಕೆ ಮ್ಯಾಕ್ಸ್‌ವೆಲ್ ಬದಲು ಲಾಕಿ ಫರ್ಗ್ಯುಸನ್, ಸಿರಾಜ್ ಬದಲು ಯಶ್ ದಯಾಳ್, ಆಕಾಶ್ ದೀಪ್ ಬದಲು ಸೌರವ್ ಚೌಹಾನ್ ಸ್ಥಾನ ಪಡೆದಿದ್ದರು. ಇದು ನ್ಯೂಜಿಲೆಂಡ್‌ನ ವೇಗಿ ಫರ್ಗ್ಯುಸನ್‌ಗೆ ಆರ್‌ಸಿಬಿ ಪರ ಪದಾರ್ಪಣೆ ಪಂದ್ಯವಾಯಿತು.



ಸನ್‌ರೈಸರ್ಸ್ ಹೈದರಾಬಾದ್ ತಂಡದ ಬ್ಯಾಟರ್ ಟ್ರಾವಿಸ್ ಹೆಡ್ ಶತಕ ಗಳಿಸಿ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರಗಳು/ಕೃಷ್ಣಕುಮಾರ್ ಪಿ.ಎಸ್.

ಐಪಿಎಲ್‌ನಲ್ಲಿ ತಂಡವೊಂದರ ಗರಿಷ್ಠ ರನ್

ತಂಡ	ರನ್	ಎದುರಾಳಿ	ವರ್ಷ
ಸನ್‌ರೈಸರ್ಸ್ ಹೈದರಾಬಾದ್	3ಕ್ಕೆ 287	ರಾಯಲ್ ಚಾಲೆಂಜರ್ಸ್ ಬೆಂಗಳೂರು	2024
ಸನ್‌ರೈಸರ್ಸ್ ಹೈದರಾಬಾದ್	3ಕ್ಕೆ 277	ಮುಂಬೈ ಇಂಡಿಯನ್ಸ್	2024
ಕೋಲ್ಕತ್ತ ನೈಟ್ ರೈಡರ್ಸ್	7ಕ್ಕೆ 272	ಡೆಲ್ಲಿ ಕ್ಯಾಪಿಟಲ್ಸ್	2024



ಅರ್ಧಶತಕದ ಸಂಭ್ರಮದಲ್ಲಿ ಆರ್‌ಸಿಬಿ ತಂಡದ ದಿನೇಶ್ ಕಾರ್ತಿಕ್

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್ 3ಕ್ಕೆ 287 (20 ಓವರ್‌ಗಳಲ್ಲಿ)
ಅಭಿಷೇಕ್ ಸಿ ಸಿ ಫರ್ಗ್ಯುಸನ್ ಬಿ ಟೋಪ್ಲಿ 34 (22ಎ, 4x2, 6x2)
ಟ್ರಾವಿಸ್ ಸಿ ಡುಪ್ಲಸಿ ಬಿ ಫರ್ಗ್ಯುಸನ್ 102 (41ಎ, 4x9, 6x8)
ಕ್ಲಾಸೆನ್ ಸಿ ವೈಶಾಖ ಬಿ ಫರ್ಗ್ಯುಸನ್ 67 (31ಎ, 4x2, 6x7)
ಏಡನ್ ಮರ್ಕರಂ ಔಟಾಗದೇ 32 (17ಎ, 4x2, 6x2)
ಅಬ್ದುಲ್ ಸಮದ್ ಔಟಾಗದೇ 37 (10ಎ, 4x4, 6x3)
ಇತರೆ: 15 (ಲೆಗ್‌ಬೈ 2, ನೋಬಾಲ್ 1, ವೈಡ್ 12)
ವಿಕೆಟ್ ಪತನ: 1-108 (ಅಭಿಷೇಕ್ ಶರ್ಮಾ; 8.1), 2-165 (ಟ್ರಾವಿಸ್ ಹೆಡ್; 12.3), 3-231 (ಹೆನ್ರಿಚ್ ಕ್ಲಾಸೆನ್; 16.6)
ಬೌಲಿಂಗ್: ವಿಲ್ ಜಾಕ್ಸ್ 3–0–32–0, ರೀಸ್ ಟೋಪ್ಲಿ 4–0–68–1, ಯಶ್ ದಯಾಳ್ 4–0–51–0, ಲಾಕಿ ಫರ್ಗ್ಯುಸನ್ 4–0–52–2, ವೈಶಾಖ ವಿಜಯಕುಮಾರ್ 4–0–64–0, ಮಹಿಪಾಲ್ ಲೊಮ್ರೋರ್ 1–0–18–0

ರಾಯಲ್ ಚಾಲೆಂಜರ್ಸ್ ಬೆಂಗಳೂರು, 7ಕ್ಕೆ 262 (20 ಓವರ್‌ಗಳಲ್ಲಿ)
ವಿರಾಟ್ ಬಿ ಮಾರ್ಕಂಡೆ 42 (20ಎ, 4x6, 6x2)
ಡುಪ್ಲಸಿ ಸಿ ಕ್ಲಾಸೆನ್ ಬಿ ಕಮಿನ್ಸ್ 62 (28ಎ, 4x7, 6x4)
ಜಾಕ್ಸ್ ರನೌಟ್ (ಉನದ್ಕತ್) 7 (4ಎ, 4x1)
ಪಾಟೀದಾರ್ ಸಿ ನಿತೀಶ್ ಬಿ ಮಾರ್ಕಂಡೆ 9 (5ಎ, 6x1)
ಸೌರವ್ ಎಲ್‌ಬಿಡಬ್ಲ್ಯು ಬಿ ಕಮಿನ್ಸ್ 0 (1ಎ)
ಕಾರ್ತಿಕ್ ಸಿ ಕ್ಲಾಸೆನ್ ಬಿ ನಟರಾಜನ್ 83 (35ಎ, 4x5, 6x7)
ಮಹಿಪಾಲ್ ಬಿ ಕಮಿನ್ಸ್ 19 (11ಎ, 6x2)
ಅನುಜ್ ರಾವತ್ ಔಟಾಗದೇ 25 (14ಎ, 4x5)
ವೈಶಾಖ ಔಟಾಗದೇ 1 (2ಎ)
ಇತರೆ: 14 (ಬೈ 1, ವೈಡ್ 13)
ವಿಕೆಟ್ ಪತನ: 1-80 (ವಿರಾಟ್ ಕೊಹ್ಲಿ; 6.2), 2-100 (ವಿಲ್ ಜಾಕ್ಸ್; 7.6), 3-111 (ಪಾಟೀದಾರ್; 8.6), 4-121 (ಫಫ್ ಡು ಪ್ಲೆಸಿ; 9.3), 5-122 (ಸೌರವ್ ಚೌಹಾಣ್; 9.6 ov), 6-181 (ಲೊಮ್ರೋರ್; 14.1), 7-244 (ದಿನೇಶ್ ಕಾರ್ತಿಕ್; 18.5)
ಬೌಲಿಂಗ್: ಅಭಿಷೇಕ್ ಶರ್ಮಾ 1–0–10–0, ಭುವನೇಶ್ವರ ಕುಮಾರ್ 4–0–60–0, ಶಾಬಾಜ್ ಅಹ್ಮದ್ 1–0–18–0, ಟಿ. ನಟರಾಜನ್ 4–0–47–1, ಪ್ಯಾಟ್ ಕಮಿನ್ಸ್ 4–0–43–3, ಮಯಂಕ್ ಮಾರ್ಕಂಡೆ 4–0–46–2, ಜಯದೇವ್ ಉನದ್ಕತ್ 2–0–37–0
ಪಂದ್ಯದ ಆಟಗಾರ: ಟ್ರಾವಿಸ್ ಹೆಡ್

ಫಲಿತಾಂಶ: ಸನ್‌ರೈಸರ್ಸ್ ಹೈದರಾಬಾದ್‌ಗೆ 25 ರನ್‌ಗಳ ಜಯ

ರಾಯಲ್ಸ್‌ಗೆ ಸುನಿಲ್ ಸ್ಪಿನ್ ಸವಾಲು

ವಿಶ್ವಾಸದಲ್ಲಿ ಸಂಜು ಪಡೆ • ಅಗ್ರಸ್ಥಾನದತ್ತ ಕೆಕೆಆರ್ ಚಿತ್ತ

ಕೋಲ್ಕತ್ತ (ಪಿಟಿಐ): ರಾಜಸ್ಥಾನ ರಾಯಲ್ಸ್ ತಂಡದ ತಾರಾಖಚಿತ ಬ್ಯಾಟಿಂಗ್ ಸರದಿ, ಸುನಿಲ್ ನಾರಾಯಣ್ ಅವರ ಸ್ಪಿನ್ ಒಗಟನ್ನು ಎಷ್ಟರ ಮಟ್ಟಿಗೆ ಬಿಡಿಸಬಲ್ಲದು ಎಂಬ ಕುತೂಹಲ ಗರಿಗೆದರಿದೆ. ಇವೆರಡು ತಂಡಗಳು ಮಂಗಳವಾರ ಈಡನ್ ಗಾರ್ಡನ್‌ನಲ್ಲಿ ನಡೆಯುವ ಐಪಿಎಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಇನ್ನೊಂದು ತಿಂಗಳಲ್ಲಿ 36ನೇ ವರ್ಷಕ್ಕೆ ಕಾಲಿಡುವ ನಾರಾಯಣ್, ಈ ಹಿಂದೆ ಗೌತಮ್ ಗಂಭೀರ್ ಅವರ ತರಬೇತಿಯ ಅವಧಿಯಲ್ಲಿ– 2013 ಮತ್ತು 2014ರಲ್ಲೂ ಕೆಕೆಆರ್ ಕಿರೀಟ ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. 2012ರಲ್ಲಿ ತಂಡವನ್ನು ಸೇರಿಕೊಂಡ ನಂತರ ಅವರು ತವರು ಮೈದಾನದಲ್ಲಿ ಎದುರಾಳಿ ಬ್ಯಾಟರ್‌ಗಳನ್ನು ಕಾಡಿದ್ದಾರೆ.

ನಾರಾಯಣ್ ಈ ಬಾರಿ ಆಲ್‌ರೌಂಡರ್ ಪ್ರದರ್ಶನ ನೀಡುತ್ತಿದ್ದಾರೆ. ಸನ್‌ರೈಸರ್ಸ್ ವಿರುದ್ಧ 19ಕ್ಕೆ1, ಲಖನೌ ಸೂಪರ್‌ಜೈಂಟ್ಸ್ ವಿರುದ್ಧ 17ಕ್ಕೆ 1 ವಿಕೆಟ್ ದೊಡ್ಡ ಸಾಧನೆಯಾಗಿ ಕಾಣುವುದಿಲ್ಲ. ಆದರೆ, ಅವರು ಒಂದೂ ಬೌಂಡರಿ ನೀಡಿಲ್ಲ ಎನ್ನುವುದು ಗಮನಾರ್ಹ. ಅದು ಅಂತಿಮವಾಗಿ ಕೆಕೆಆರ್ ಪಾಲಿಗೆ ಅಮೂಲ್ಯವಾಯಿತು.

ಎಲ್‌ಎಸ್‌ಜಿ ವಿರುದ್ಧ ಭಾನುವಾರದ ಪಂದ್ಯದಲ್ಲಿ ಫಿಲ್ ಸಾಲ್ಟ್ ಸ್ಫೋಟಕ ಬ್ಯಾಟಿಂಗ್‌ನಿಂದ ಪಂದ್ಯದ ಆಟಗಾರ ಎನಿಸಿದರು. ಆದರೆ, ಮಧ್ಯದ ಓವರ್‌ಗಳಲ್ಲಿ ನಾರಾಯಣ್ ಅವರ ಬಿಗು ದಾಳಿ ಲಖನೌ ಮೊತ್ತವನ್ನು 161ರ ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಲು ನೆರವಾಗಿತ್ತು.

ಸಂಜು ಸ್ಯಾಮ್ಸನ್, ರಿಯಾನ್ ಪರಾಗ್, ಶಿಮ್ರಾನ್ ಹೆಟ್ಮೆಯರ್ (ಎಲ್ಲರ ಸ್ಟ್ರೈಕ್‌ರೇಟ್ 155ರ ಮೇಲಿದೆ) ಅವರು ನಾರಾ ಯಣ್ ಅವರನ್ನು ಹೇಗೆ ನಿಭಾಯಿಸುತ್ತಾರೆ ಎಂಬುದು ಕುತೂಹಲಕರ. ಕಿಂಗ್ಸ್ ವಿರುದ್ಧ ಪಂದ್ಯ ತಪ್ಪಿಸಿಕೊಂಡಿದ್ದ ಬಟ್ಲರ್ ತಂಡಕ್ಕೆ ಮರಳುವರೊ ಎಂಬುದನ್ನು ಕಾದುನೋಡಬೇಕಾಗಿದೆ.

ಬ್ಯಾಟಿಂಗ್‌ನಲ್ಲೂ ಸುನಿಲ್ ನಾರಾಯಣ್ 183.51ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದ್ದಾರೆ. 33ಕ್ಕಿಂ ಹೆಚ್ಚು ಸರಾಸರಿಯಿದೆ. ಎಲ್‌ಎಸ್‌ಜಿ ವಿರುದ್ಧ ಪಂದ್ಯದಲ್ಲಿ ಮಿಚೆಲ್ ಸ್ಟಾರ್ಕ್ ಅವರ (28ಕ್ಕೆ3) ಬೌಲಿಂಗ್ ಕೂಡ ಪರಿಣಾಮಕಾರಿಯಾಗಿತ್ತು.

ಇಂಥ ಪರಿಸ್ಥಿತಿಯಲ್ಲಿ ಪಂದ್ಯ ಕೆಕೆಆರ್ ಬೌಲಿಂಗ್ ವರ್ಸಸ್ ರಾಜಸ್ಥಾನ ರಾಯಲ್ಸ್ ಬ್ಯಾಟಿಂಗ್ ಎಂಬಂತೆ ಆಗಿದೆ. ಕೆಕೆಆರ್ ತಂಡಕ್ಕೆ ಸ್ವಲ್ಪ ಚಿಂತೆಯ ವಿಷಯವೆಂದರೆ ಶ್ರೇಯಸ್ ಅಯ್ಯರ್ ಅವರ ಎಂದಿನ ಲಯದಲ್ಲಿ ಇಲ್ಲದಿರುವುದು. ಲಖನೌ ವಿರುದ್ಧ ಅವರು ಅಜೇಯ 38 ರನ್ ಗಳಿಸಿದ್ದರೂ ಅದು ಗಮನ ಸೆಳೆಯುವ ರೀತಿಯಲ್ಲಿರಲಿಲ್ಲ.

ಕೆಕೆಆರ್ ಬ್ಯಾಟಿಂಗ್ ಹೆಚ್ಚಾಗಿ ಸಾಲ್ಟ್, ನಾರಾಯಣ್ ಅವರ ಮಿಂಚಿನ ಬ್ಯಾಟಿಂಗ್ ಮೇಲೆ ಅವಲಂಬಿತವಾಗಿದೆ. ಕೊನೆಯಲ್ಲಿ ಆಂಡ್ರೆ ರಸೆಲ್ ಮಿಂಚಿನ ಬ್ಯಾಟಿಂಗ್‌ನಿಂದ ತಂಡದ ರಕ್ಷಣೆಗೆ ನಿಂತ ನಿದರ್ಶನ ಕಾಣಸಿಕ್ಕಿದೆ. ರಿಂಕು ಸಿಂಗ್ ಬ್ಯಾಟ್ ಎಂದಿನಂತೆ ಸದ್ದು ಮಾಡಿಲ್ಲ. ಉಪ ನಾಯಕ ನಿತೀಶ್ ರಾಣಾ ಗಾಯಾಳಾಗಿದ್ದಾರೆ.

ರಾಯಲ್ಸ್ ಬೌಲಿಂಗ್ ದಾಳಿ ಪ್ರಬಲವಾಗಿದೆ. ಟ್ರೆಂಟ್ ಬೌಲ್ಟ್, ಆವೇಶ್ ಖಾನ್, ಯಜುವೇಂದ್ರ ಚಾಹಲ್, ಕೇಶವ ಮಹಾರಾಜ್ ಪ್ರದರ್ಶನ ಉತ್ತಮವಾಗಿಯೇ ಇದೆ. ಚಾಹಲ್ ಈ ಸಲ 11 ವಿಕೆಟ್ ಪಡೆದಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30.
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಜಿಯೊ ಸಿನಿಮಾ ಆ್ಯಪ್

ಸುನಿಲ್ ನಾರಾಯಣ್ –ಪಿಟಿಐ ಚಿತ್ರ

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	6	5	1	10	0.767
ಕೋಲ್ಕತ್ತ ನೈಟ್ ರೈಡರ್ಸ್	5	4	1	8	1.688
ಚೆನ್ನೈ ಸೂಪರ್ ಕಿಂಗ್ಸ್	6	4	2	8	0.726
ಸನ್‌ರೈಸರ್ಸ್ ಹೈದರಾಬಾದ್	6	4	2	8	0.502
ಲಖನೌ ಸೂಪರ್ ಜೈಂಟ್ಸ್	6	3	3	6	0.038
ಗುಜರಾತ್ ಟೈಟನ್ಸ್	6	3	3	6	-0.637
ಪಂಜಾಬ್ ಕಿಂಗ್ಸ್	6	2	4	4	-0.218
ಮುಂಬೈ ಇಂಡಿಯನ್ಸ್	6	2	4	4	-0.234
ಡೆಲ್ಲಿ ಕ್ಯಾಪಿಟಲ್ಸ್	6	2	4	4	-0.975
ರಾಯಲ್ ಚಾಲೆಂಜರ್ಸ್ ಬೆಂಗಳೂರು	7	1	6	2	-1.185

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (361 ರನ್)
ಪರ್ಪಲ್ ಕ್ಯಾಪ್: ಯಜುವೇಂದ್ರ ಚಾಹಲ್, ರಾಜಸ್ಥಾನ ರಾಯಲ್ಸ್ (11 ವಿಕೆಟ್)

ಸಂಜು ಸ್ಯಾಮ್ಸನ್

'ಅನಿಯಂತ್ರಿತ ಪ್ರಕ್ಷುಬ್ಧತೆಗೆ ನಾಂದಿ'

ಜಿ–7 ರಾಷ್ಟ್ರಗಳ ಆತಂಕ: ವಿಶ್ವಸಂಸ್ಥೆ ಭದ್ರತಾ ಮಂಡಳಿ ತುರ್ತು ಸಭೆ, ಚರ್ಚೆ

ವಾಷಿಂಗ್ಟನ್ (ಪಿಟಿಐ): ಇಸ್ರೇಲ್‌ನ ಮೇಲೆ ಇರಾನ್ ನಡೆಸಿರುವ ಅಪ್ರಚೋದಿತ ಮತ್ತು ನೇರ ಸೇನಾ ದಾಳಿಗೆ ಜಿ–7 ಶೃಂಗದ ಸದಸ್ಯ ರಾಷ್ಟ್ರಗಳು ತೀವ್ರ ಕಳವಳ ವ್ಯಕ್ತಪಡಿಸಿವೆ. ಈ ಬೆಳವಣಿಗೆಯು ಮಧ್ಯಪ್ರಾಚ್ಯದ ಪ್ರಾದೇಶಿಕ ಮಟ್ಟದಲ್ಲಿ ಅನಿಯಂತ್ರಿತ ಪ್ರಕ್ಷುಬ್ಧತೆಗೆ ನಾಂದಿಯಾಗಬಹುದು ಎಂದೂ ಆತಂಕ ವ್ಯಕ್ತಪಡಿಸಿವೆ.

ಇನ್ನೊಂದೆಡೆ, ಬಿಗುವಿನ ಸ್ಥಿತಿ ಶಮನಗೊಳಿಸಲು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ (ಯುಎನ್‌ಎಸ್‌ಸಿ) ಶಾಶ್ವತ ಸದಸ್ಯ ರಾಷ್ಟ್ರಗಳ ತುರ್ತು ಸಭೆ ನ್ಯೂಯಾರ್ಕ್‌ನಲ್ಲಿ ನಡೆದಿದ್ದು, ವಸ್ತುಸ್ಥಿತಿ ಕುರಿತು ಚರ್ಚಿಸಲಾಯಿತು.

'ಇರಾನ್ ನೇರ ದಾಳಿಯು ಪ್ರಾದೇಶಿಕ ವಲಯದಲ್ಲಿ ಅಸ್ಥಿರತೆಗೆ ಕಾರಣವಾಗಿದೆ. ಇದನ್ನು ತಡೆಯಬೇಕಿದೆ' ಎಂದು ಜಿ–7 ರಾಷ್ಟ್ರಗಳ ನಾಯಕರು ಜಂಟಿ ಹೇಳಿಕೆ ನೀಡಿದ್ದಾರೆ. ಇದಕ್ಕೂ ಮುನ್ನ ಈ ನಾಯಕರ ಜೊತೆಗೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ವರ್ಚುವಲ್ ವೇದಿಕೆಯಲ್ಲಿ ಸಭೆ ನಡೆಸಿ ಚರ್ಚಿಸಿದರು.

ಇರಾನ್‌ನ ನೇರ ಸೇನಾ ದಾಳಿಗೆ ಪ್ರತ್ಯುತ್ತರ ನೀಡಿರುವ ಅಮೆರಿಕ ಸೇನೆ ಬೆಂಬಲಿತ ಇಸ್ರೇಲ್, 12ಕ್ಕೂ ಅಧಿಕ ಡ್ರೋನ್ ಮತ್ತು ಕ್ಷಿಪಣಿಗಳನ್ನು ಹೊಡೆದುರುಳಿಸಿದೆ. 'ಯಾವುದೇ ರೀತಿಯ ಗಮನಾರ್ಹ ಹಾನಿ ಸಂಭವಿಸಿಲ್ಲ' ಎಂದು ಇಸ್ರೇಲ್‌ನ ಆಡಳಿತವು ಈ ಸಂಬಂಧ ಪ್ರತಿಕ್ರಿಯಿಸಿದೆ.

'ಇರಾನ್ ನಡೆಸಿರುವ ದಾಳಿಯನ್ನು ಜಿ–7 ರಾಷ್ಟ್ರಗಳು ಖಂಡಿಸಲಿವೆ. ಇಸ್ರೇಲ್ ಗುರಿಯಾಗಿಸಿ ಡ್ರೋನ್, ಕ್ಷಿಪಣಿಗಳನ್ನು ಪ್ರಯೋಗಿಸಲಾಗಿದೆ. ಸ್ನೇಹಿ ರಾಷ್ಟ್ರಗಳ ಸಹಕಾರದಿಂದಾಗಿ ಇಸ್ರೇಲ್ ಮೇಲಿನ ದಾಳಿಯನ್ನು ವಿಫಲಗೊಳಿಸಲಾಯಿತು' ಎಂದು ಸಭೆ ಬಳಿಕ ಜಿ–7 ರಾಷ್ಟ್ರಗಳ ನಾಯಕರು ಹೇಳಿದ್ದಾರೆ.

ಅಮೆರಿಕ, ಇಟಲಿ, ಜಪಾನ್, ಜರ್ಮನಿ, ಫ್ರಾನ್ಸ್, ಬ್ರಿಟನ್, ಕೆನಡಾ ಜಿ–7 ಶೃಂಗದ ಸದಸ್ಯ ರಾಷ್ಟ್ರಗಳಾಗಿವೆ. ಈ ಬಿಕ್ಕಟ್ಟಿನ ಸಂದರ್ಭದಲ್ಲಿ ಇಸ್ರೇಲ್ ಮತ್ತು ಅಲ್ಲಿನ ಪ್ರಜೆಗಳ ರಕ್ಷಣೆಗೆ ನಿಲ್ಲುವುದಾಗಿ ಬದ್ಧತೆ ಪ್ರದರ್ಶಿಸಿವೆ.

'ಗಾಜಾದಲ್ಲಿ ಮೂಡಿರುವ ಬಿಕ್ಕಟ್ಟು ಅಂತ್ಯಗೊಳಿಸುವುದು, ಕದನ ವಿರಾಮ ಘೋಷಣೆ, ಒತ್ತೆಯಾಳುಗಳ ಬಿಡುಗಡೆಗೂ ಒತ್ತು ನೀಡಲಿದ್ದು, ಪ್ಯಾಲೆಸ್ಟೀನ್‌ಗೆ ಮಾನವೀಯ ನೆರವು ಒದಗಿಸಲಿದ್ದೇವೆ' ಎಂದು ಜಿ–7 ರಾಷ್ಟ್ರಗಳ ನಾಯಕರು ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಇನ್ನೊಂದೆಡೆ, ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಇಸ್ರೇಲ್ ಮೇಲಿನ ದಾಳಿ ವಿಷಯದ ಕುರಿತು ಜೋರ್ಡನ್ ರಾಜ 2ನೇ ಅಬ್ದುಲ್ಲಾ ಜೊತೆಗೂ ಚರ್ಚಿಸಿದರು. ಯಾವುದೇ ದಾಳಿಗೆ ಪ್ರತಿರೋಧ ಒಡ್ಡಲು ಸನ್ನದ್ಧವಾಗಿರುವ ನಿಟ್ಟಿನಲ್ಲಿ ಸೇನೆಯ 484, 335ನೇ ಫೈಟರ್ ಸ್ಕ್ವಾಡ್ರನ್ ಸದಸ್ಯರ ಜೊತೆಗೂ ಚರ್ಚಿಸಿದರು.

ವಿವಿಧ ರಾಷ್ಟ್ರಗಳ ಜೊತೆ ಚರ್ಚೆ: ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಅವರು ಜೋರ್ಡನ್, ಸೌದಿ ಅರೇಬಿಯಾ, ಟರ್ಕಿ, ಈಜಿಪ್ಟ್‌ನ ವಿದೇಶಾಂಗ ವ್ಯವಹಾರಗಳ ಸಚಿವರ ಜೊತೆಗೆ ಚರ್ಚಿಸಿದರು. ಅಲ್ಲದೆ, ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಅವರು ಸೌದಿ ಮತ್ತು ಇಸ್ರೇಲ್‌ನ ರಕ್ಷಣಾ ಕಾರ್ಯದರ್ಶಿ ಜೊತೆ ಚರ್ಚಿಸಿದರು.

ಮಧ್ಯಪ್ರಾಚ್ಯ ವಲಯದಲ್ಲಿ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸದಂತೆ ವಹಿಸಬೇಕಾದ ಎಚ್ಚರಿಕೆ ಕ್ರಮಗಳ ಕುರಿತು ಚರ್ಚೆ ನಡೆಯಿತು ಎಂದು ವಿದೇಶಾಂಗ ಇಲಾಖೆಯ ವಕ್ತಾರ ಮ್ಯಾಥ್ಯೂ ಮಿಲ್ಲರ್ ಅವರು ತಿಳಿಸಿದ್ದಾರೆ.

ಇಸ್ರೇಲ್ ಮೇಲೆ ನಡೆದ ದಾಳಿ ಹಿನ್ನೆಲೆಯಲ್ಲಿ ಮಧ್ಯಪೂರ್ವ ವಲಯದಲ್ಲಿನ ಪರಿಸ್ಥಿತಿ ಕುರಿತು ಚರ್ಚಿಸಲು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆ ನ್ಯೂಯಾರ್ಕ್‌ನ ಕೇಂದ್ರ ಕಚೇರಿಯಲ್ಲಿ ಭಾನುವಾರ ನಡೆಯಿತು –ಎಎಫ್‌ಪಿ ಚಿತ್ರ

'ಅಂತರರಾಷ್ಟ್ರೀಯ ಕಾಯ್ದೆಯ ಉಲ್ಲಂಘನೆ'

ವಾಷಿಂಗ್ಟನ್ (ಪಿಟಿಐ): ಇಸ್ರೇಲ್‌ನ ಮನವಿಗೆ ಸ್ಪಂದಿಸಿರುವ ವಿಶ್ವಸಂಸ್ಥೆಯ ಭದ್ರತಾ ಮಂಡಳಿ, ಇರಾನ್ ದಾಳಿ ನಂತರ ತುರ್ತು ಸಭೆ ನಡೆಸಿತು.

ಇಸ್ರೇಲ್‌ನ ಕೋರಿಕೆಯಂತೆ ಮಧ್ಯಪ್ರಾಚ್ಯದ ಸ್ಥಿತಿಯ ಬಗೆಗೆ ಚರ್ಚಿಸಲು ಸಭೆ ನಡೆಯಿತು. ಭದ್ರತಾ ಮಂಡಳಿ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರೆಸ್ ವಸ್ತುಸ್ಥಿತಿ ಕುರಿತು ಸಭೆಗೆ ಮಾಹಿತಿ ನೀಡಿದರು ಎಂದು ವರದಿ ತಿಳಿಸಿದೆ.

'ಇರಾನ್‌ನ ದಾಳಿ ಅಂತರರಾಷ್ಟ್ರೀಯ ಕಾಯ್ದೆಯ ಉಲ್ಲಂಘನೆ. ಪ್ರಾದೇಶಿಕವಾಗಿ ಇದು ಅಸ್ಥಿರತೆ ಮೂಡಿಸಲಿದೆ. ಐಆರ್‌ಜಿಸಿ (ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್) ಅನ್ನು ಉಗ್ರರ ಸಂಘಟನೆಯೆಂದು ಘೋಷಿಸಬೇಕು' ಎಂದು ಇಸ್ರೇಲ್ ಒತ್ತಾಯಿಸಿದೆ.

ಇರಾನ್ ಸಮರ್ಥನೆ: ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಪತ್ರ ಬರೆದಿರುವ ಇರಾನ್, ದಾಳಿ ನಡೆಸಿದ ತನ್ನ ಕ್ರಮವನ್ನು ಸಮರ್ಥಿಸಿಕೊಂಡಿದೆ. ವಿಶ್ವಸಂಸ್ಥೆ ಒಪ್ಪಂದದ ವಿಧಿ 51ರ ಅನ್ವಯ ಸ್ವಯಂ ರಕ್ಷಣೆ ಕ್ರಮವಾಗಿ ಈ ದಾಳಿ ನಡೆಸಿದ್ದಾಗಿ ಪತ್ರದಲ್ಲಿ ತಿಳಿಸಿದೆ.

ಏ. 13ರಂದು ಪತ್ರ ಬರೆದಿದ್ದು, ಡಮಾಸ್ಕಸ್‌ನ ಇರಾನ್‌ನ ತಾಣದ ಮೇಲೆ ಏ. 1ರಂದು ನಡೆಸಿದ್ದ ದಾಳಿಗೆ ಪ್ರತೀಕಾರವಾಗಿ ದಾಳಿ ನಡೆಸಲಾಗಿದೆ ಎಂದು ಸಮರ್ಥನೆ ನೀಡಿದೆ. ಏ. 1ರಂದು ನಡೆದಿದ್ದ ದಾಳಿಯಲ್ಲಿ ಐಆರ್‌ಜಿಸಿಯ ಹಲವು ಹಿರಿಯ ಕಮಾಂಡರ್‌ಗಳು ಹತರಾಗಿದ್ದರು.

80 ಯುಎವಿ ಹೊಡೆದುರುಳಿಸಿದ ಅಮೆರಿಕ ಸೇನೆ

ವಾಷಿಂಗ್ಟನ್ (ಪಿಟಿಐ): ಇಸ್ರೇಲ್ ಗುರಿಯಾಗಿಸಿ ಇರಾನ್ ಪ್ರಯೋಗಿಸಿದ್ದ 80ಕ್ಕೂ ಅಧಿಕ ಯುಎವಿ ಮತ್ತು ಕನಿಷ್ಠ 6 ಕ್ಷಿಪಣಿಗಳನ್ನು ಅಮೆರಿಕ ಸೇನೆಯು ಹೊಡೆದುರುಳಿಸಿದೆ.

ಹುತಿ ನಿಯಂತ್ರಣದಲ್ಲಿರುವ ಯೆಮನ್‌ನ ಪ್ರದೇಶದಲ್ಲಿ ಈ ಪ್ರತಿದಾಳಿ ನಡೆದಿದೆ ಎಂದು ಅಮೆರಿಕ ಸೇನೆಯ ಕೇಂದ್ರ ಕಮಾಂಡ್ ಪ್ರತಿಕ್ರಿಯಿಸಿದೆ. ಇರಾನ್ 300ಕ್ಕೂ ಅಧಿಕ ಡ್ರೋನ್, ಕ್ಷಿಪಣಿಗಳನ್ನು ಪ್ರಯೋಗಿಸಿತ್ತು.

ಪಾಕ್‌ಗೆ 22ರಂದು ಇರಾನ್ ಅಧ್ಯಕ್ಷರ ಭೇಟಿ

ಇಸ್ಲಾಮಾಬಾದ್ (ಪಿಟಿಐ): ಮಧ್ಯಪ್ರಾಚ್ಯ ಪ್ರಾಂತ್ಯದಲ್ಲಿನ ಬಿಗುವಿನ ಸ್ಥಿತಿ ನಡುವೆಯೂ, ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ, ಇದೇ 22ರಂದು ಪಾಕಿಸ್ತಾನಕ್ಕೆ ಭೇಟಿ ನೀಡುವರು. ಪಾಕ್‌ನ ಪ್ರಧಾನಿ ಶೆಹಬಾಜ್ ಷರೀಫ್, ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಹಾಗೂ ಸೇನಾ ಮುಖ್ಯಸ್ಥರ ಜೊತೆಗೆ ಚರ್ಚಿಸುವರು ಎಂದು ಮಾಧ್ಯಮ ವರದಿಗಳು ತಿಳಿಸಿವೆ.

ರಫ್ತು ವಹಿವಾಟು; ಪರಿಸ್ಥಿತಿ ಆಧರಿಸಿ ಸೂಕ್ತ ಕ್ರಮ –ಸರ್ಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಇಸ್ರೇಲ್ ಮೇಲಿನ ದಾಳಿ ನಂತರದ ಬೆಳವಣಿಗೆಗಳನ್ನು ಕೇಂದ್ರ ಸರ್ಕಾರ ಸೂಕ್ಷ್ಮವಾಗಿ ಗಮನಿಸುತ್ತಿದೆ. ರಫ್ತುದಾರರಿಗೆ ಪರ್ಯಾಯವಾಗಿ ಸೂಕ್ತ ಪರಿಹಾರ ಕ್ರಮ ಕೈಗೊಳ್ಳಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ರಫ್ತು ಉತ್ತೇಜನ ಮಂಡಳಿ, ಕಂಟೇನರ್ ಕಂಪನಿಗಳು, ಸಾಗಣೆ ಸಂಸ್ಥೆಗಳ ಜೊತೆಗೆ ಸಂಪರ್ಕದಲ್ಲಿದೆ ಎಂದು ಸಚಿವಾಲಯದ ಕಾರ್ಯದರ್ಶಿ ಸುನಿಲ್ ಬಾರ್ತ್‌ವಾಲ್ ತಿಳಿಸಿದರು.

ಪರಿಹಾರ ಕ್ರಮಗಳು ಅಗತ್ಯವಿದ್ದರೆ ಸಚಿವಾಲಯ ಮುಕ್ತವಾಗಿದೆ. ಒಟ್ಟು ಸ್ಥಿತಿ ಆಧರಿಸಿ ಭಾಗಿದಾರರ ಸಲಹೆ, ಅಭಿಪ್ರಾಯಗಳ ಆಧರಿಸಿ ಸಚಿವಾಲಯವು ತೀರ್ಮಾನಿಸಲಿದೆ ಎಂದು ಹೇಳಿದರು.

ಇಸ್ರೇಲ್ ರಾಯಭಾರಿ ನಾರ್ ಗಿಲೋನ್ ಅಭಿಮತ

'ಭಾರತ ನಿರ್ಣಾಯಕ ಪಾತ್ರ ವಹಿಸಲಿ'

ನವದೆಹಲಿ (ಪಿಟಿಐ): 'ಇಸ್ರೇಲ್ ದೃಢವಾಗಿದೆ ಮತ್ತು ಶಕ್ತಿಯುತವಾಗಿದೆ. ಅಗತ್ಯ ಬಿದ್ದರೆ ಇರಾನ್ ಜೊತೆಗೆ ಸಂಘರ್ಷ ನಡೆಸಲಿದೆ' ಎಂದು ಭಾರತದಲ್ಲಿನ ಇಸ್ರೇಲ್‌ನ ರಾಯಭಾರಿ ಪ್ರತಿಪಾದಿಸಿದ್ದಾರೆ. 'ಪಶ್ಚಿಮ ಏಷ್ಯಾ ವಲಯದಲ್ಲಿ ಸ್ಥಿರತೆ ಕಾಯ್ದುಕೊಳ್ಳಲು ಭಾರತ ನಿರ್ಣಾಯಕ ಪಾತ್ರ ವಹಿಸಬೇಕು' ಎಂದೂ ಕೋರಿದ್ದಾರೆ.

ನಾರ್ ಗಿಲೋನ್

ಪಿಟಿಐಗೆ ನೀಡಿದ ಸಂದರ್ಶನದಲ್ಲಿ ರಾಯಭಾರಿ ನಾರ್ ಗಿಲೋನ್ ಅವರು, 'ಅಮೆರಿಕ ಮತ್ತು ಇತರ ಮಿತ್ರ ರಾಷ್ಟ್ರಗಳ ಬೆಂಬಲದೊಂದಿಗೆ ಇಸ್ರೇಲ್ ಸೇನೆಯು ದಾಳಿಯನ್ನು ಶೇ 99ರಷ್ಟು ತಡೆದಿದೆ' ಎಂದರು. ಆದರೆ, ನೆವಟಿಮ್ ವಾಯುನೆಲೆ ಮೇಲಿನ ದಾಳಿಯಿಂದಾಗಿ ಅಲ್ಪಪ್ರಮಾಣದಲ್ಲಿ ಹಾನಿಯಾಗಿದೆ ಎಂದು ತಿಳಿಸಿದರು.

ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತಕ್ಕೆ ಗೌರವಾನ್ವಿತ ಹೆಸರಿದೆ. ತನ್ನ ಪ್ರಭಾವ, ವರ್ಚಸ್ಸು ಬಳಸಿಕೊಂಡು ಸಹಜ ಪರಿಸ್ಥಿತಿ ನೆಲೆಯೂರುವಂತೆ ಮಾಡಲು ಮುಂದಾಗಬೇಕು ಎಂದು ಗಿಲೋನ್ ಅಭಿಪ್ರಾಯಪಟ್ಟರು.

'ಒಂದು ವಲಯವಾಗಿ ಪಶ್ಚಿಮ ಏಷ್ಯಾ ಭಾರತಕ್ಕೆ ಮಹತ್ವದ್ದಾಗಿದೆ. ಈ ವಲಯದಲ್ಲಿ ಲಕ್ಷಾಂತರ ಭಾರತೀಯರು ಕೆಲಸ ಮಾಡುತ್ತಿದ್ದಾರೆ. ಸೌದಿ ಅರೇಬಿಯಾ, ಯುಎಇ, ಕತಾರ್‌ನ ಹಲವು ಉದ್ಯಮಗಳಲ್ಲಿ ಭಾರತೀಯರು ಕೆಲಸ ಮಾಡುತ್ತಿದ್ದಾರೆ. ಹೀಗಾಗಿ, ಸಹಜಸ್ಥಿತಿ ಸ್ಥಾಪನೆಗೆ ಭಾರತ ಹೆಚ್ಚು ಸಕ್ರಿಯವಾಗಲಿದೆ ಎಂಬುದಾಗಿ ಭಾವಿಸಿದ್ದೇನೆ' ಎಂದು ಅವರು ತಿಳಿಸಿದರು.

ಇರಾನ್ ದಾಳಿಗೆ ಭಾನುವಾರ ಪ್ರತಿಕ್ರಿಯಿಸಿದ್ದ ಭಾರತ, 'ಇದು ಪಶ್ಚಿಮ ಏಷ್ಯಾ ವಲಯದಲ್ಲಿ ಬಿಕ್ಕಟ್ಟು ಹೆಚ್ಚಲು ಕಾರಣವಾಗಬಹುದು. ಉಭಯ ದೇಶಗಳು ಹಿಂಸೆಯನ್ನು ತಕ್ಷಣ ನಿಲ್ಲಿಸಬೇಕು' ಎಂದು ಹೇಳಿತ್ತು.

ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರು, ಇರಾನ್ ಮತ್ತು ಇಸ್ರೇಲ್‌ನ ವಿದೇಶಾಂಗ ಸಚಿವರ ಜೊತೆಗೂ ಈ ಸಂಬಂಧ ಪ್ರತ್ಯೇಕವಾಗಿ ದೂರವಾಣಿಯಲ್ಲಿ ಮಾತನಾಡಿದ್ದರು.

'17 ಭಾರತೀಯರ ಬಿಡುಗಡೆಯ ಭರವಸೆ'

ಒಂದನೇ ಪುಟದಿಂದ...

'ನಿಮ್ಮ ಪರಿಸ್ಥಿತಿ ಅರ್ಥವಾಗಿದೆ. ಸಕಾರಾತ್ಮಕ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಅಲ್ಲಿನ ವಿದೇಶಾಂಗ ಸಚಿವರು ಹೇಳಿದ್ದಾರೆ. ಆದ್ದರಿಂದ, ಆದಷ್ಟು ಬೇಗ ನಾವಿಕರ ಬಿಡುಗಡೆ ಆಗಬಹುದು ಎಂಬ ವಿಶ್ವಾಸವಿದೆ' ಎಂದರು.

'ಇರಾನ್ ಅಲ್ಲದೇ, ಇಸ್ರೇಲ್ ವಿದೇಶಾಂಗ ಸಚಿವರ ಜತೆಗೂ ಮಾತುಕತೆ ನಡೆಸಿದ್ದೇವೆ. ಎರಡೂ ದೇಶಗಳೂ ತ್ವೇಷದ ವಾತಾವರಣವನ್ನು ತಿಳಿಗೊಳಿಸುವಂತೆ ಮನವಿ ಮಾಡಿದ್ದೇವೆ. ಅಲ್ಲಿ ಪರಿಸ್ಥಿತಿ ಬಿಗಡಾಯಿಸಿದರೆ ಭಾರತವೂ ಸೇರಿ ವಿಶ್ವದ ಹಲವು ದೇಶಗಳಿಗೆ ಸಮಸ್ಯೆ ಸೃಷ್ಟಿಯಾಗುತ್ತದೆ. ಮಧ್ಯ ಪ್ರಾಚ್ಯದ ದೇಶಗಳಲ್ಲಿ ಸುಮಾರು 90 ಲಕ್ಷ ಭಾರತೀಯರು ವಾಸವಿದ್ದಾರೆ. ಅವರೆಲ್ಲರ ರಕ್ಷಣೆಯೂ ಅತಿ ಮುಖ್ಯ. ಈ ನಿಟ್ಟನಲ್ಲೂ ಪರಿಸ್ಥಿತಿ ತಿಳಿಗೊಳಿಸುವ ಅಗತ್ಯವಿದೆ. ಇತರ ದೇಶಗಳೂ ಪರಿಸ್ಥಿತಿ ತಿಳಿಗೊಳಿಸುವ ಸಂಬಂಧ ಪ್ರಯತ್ನ ನಡೆಸಿವೆ' ಎಂದು ಜೈ ಶಂಕರ್ ಹೇಳಿದರು.

'ಯಾವುದೇ ಸಂಕಷ್ಟದಲ್ಲಿದ್ದರೂ ನೆರವಿಗೆ ಧಾವಿಸುತ್ತೇವೆ. ಸುರಕ್ಷಿತವಾಗಿ ಬಿಡಿಸಿಕೊಂಡು ಬರುತ್ತೇವೆ. ಸುರಕ್ಷಿತ ಭಾರತ ನಮ್ಮ ಧ್ಯೇಯವಾಗಿದೆ' ಎಂದು ತಿಳಿಸಿದರು.

'ಕಲ್ಲುಬಂಡೆ ಕದ್ದು ಸಾಗಿಸಿದ್ದೇ ಕೆಲಸ'

ಒಂದನೇ ಪುಟದಿಂದ...

'ಈಗ ತಾಯಂದಿರ ಕಣ್ಣೀರು ಡಿ.ಕೆ. ಶಿವಕುಮಾರ್ ಅವರಿಗೆ ಕಾಣುತ್ತಿದೆಯಾ? ಕೆಲವು ಹೆಣ್ಣು ಮಕ್ಕಳನ್ನು ಅಪಹರಿಸಿ ಅವರ ತಂದೆ, ತಾಯಂದಿರಿಂದ ಜಮೀನು ಬರೆಸಿಕೊಳ್ಳುವಾಗ ದುಃಖ ಆಗಲಿಲ್ಲವೆ' ಎಂದು ಪ್ರಶ್ನಿಸಿದರು.

'ಆಸ್ತಿಯ ದುರಾಸೆಗೆ 30 ವರ್ಷಗಳಲ್ಲಿ ಎಷ್ಟು ಕುಟುಂಬಗಳಿಗೆ ತೊಂದರೆ ಕೊಟ್ಟಿದ್ದೀರಿ ಎಂಬುದು ಗೊತ್ತಿದೆ. ಇವೆಲ್ಲವನ್ನೂ ನಾನು ಕಂಡಿದ್ದೇನೆ. ಧಮ್ಕಿ ಹಾಕಿಕೊಂಡು ರಾಜಕೀಯ ಮಾಡುವವರು ನನಗೆ ಬುದ್ಧಿ ಹೇಳುವ ಮಟ್ಟಕ್ಕೆ ಇದ್ದೀರಾ' ಎಂದು ಅವರು ಕೇಳಿದರು.

'₹2,000 ಕೊಟ್ಟು ದುಡಿಯುವ ಜನರಿಂದ ₹5,000 ಪಿಕ್‌ಪಾಕೆಟ್ ಮಾಡುತ್ತಾರೆ ಎಂಬುದನ್ನು ಹೇಳಿದ್ದೆ. ಮಹಿಳೆಯರನ್ನು ಗೌರವಿಸಿ ಸಾರಾಯಿ ನಿಷೇಧ ಮಾಡಿದ್ದೆ. ಕೋಟಿಗಟ್ಟಲೆ ಆಮಿಷ ಒಡ್ಡಿದ್ದರು. ಕಾಲಲ್ಲಿ ಒದ್ದು ಸಾರಾಯಿ ನಿಷೇಧ ಮಾಡಿದ್ದೆ' ಎಂದು ಹೇಳಿದರು.

'ನಾನು ದಾರಿ ತಪ್ಪಿದ್ದೇನೆ ಎಂದು ಕೆಲವರು ಹೇಳಿದ್ದಾರೆ. ಹೌದು ದಾರಿ ತಪ್ಪಿರುವುದನ್ನು ವಿಧಾನಸಭೆಯಲ್ಲಿ ನಾನೇ ಹೇಳಿದ್ದೇನೆ. ನಂತರ ತಪ್ಪನ್ನು ತಿದ್ದಿಕೊಂಡು ಮುನ್ನಡೆದಿದ್ದೇನೆ. ನನ್ನ ಪತ್ನಿಯೇ ನನ್ನನ್ನು ತಿದ್ದಿದ್ದಾಳೆ' ಎಂದರು.

'ಬಾರಯ್ಯ, ಚರ್ಚೆಗೆ ಸಿದ್ಧ'

ಒಂದನೇ ಪುಟದಿಂದ...

'ಗ್ಯಾರಂಟಿ ಯೋಜನೆಗಳನ್ನು ಪಿಕ್‌ಪಾಕೆಟ್ ಎಂದು ಹೀಯಾಳಿಸುವ ಆ ಕುಮಾರನಿಗೆ ಪಿಕ್‌ಪಾಕೆಟ್ ಬಹಳ ದಿನಗಳಿಂದ ರೂಢಿ. ಬ್ಲ್ಯಾಕ್‌ಮೇಲ್ ಮಾಡುವುದು ಚಟ' ಎಂದೂ ಆರೋಪಿಸಿದರು.

'ವರ್ಷದ ಹಿಂದಷ್ಟೇ ಈ ಅಪ್ಪ– ಮಗ ಅಮಿತ್ ಶಾ ಅವರನ್ನು ಟೀಕಿಸಿದ್ದರು. ಮೋಸ– ದ್ರೋಹವಾಗಿದೆ ಎಂದಿದ್ದರು. ಆದರೆ, ಈಗ ದ್ರೋಹ ಮಾಡಿದವರನ್ನೇ ಅಪ್ಪಿ, ಅಂಟಿಕೊಂಡು ಕೂತಿದ್ದಾರೆ' ಎಂದರು.

'ಕ್ಷೇತ್ರ ಬಿಟ್ಟು ಹೊರಗೆ ಹೋಗಿರುವ ಕುಮಾರಸ್ವಾಮಿ ಗೆಲ್ಲುವುದಿಲ್ಲ. ಮಂಡ್ಯದಲ್ಲಿ ನೂರಕ್ಕೆ ನೂರು ಗ್ಯಾರಂಟಿ ನೀನು ಗೆಲ್ಲುವುದಿಲ್ಲ ಕಣಯ್ಯ' ಎಂದು ಶಿವಕುಮಾರ್ ಹೇಳಿದರು.

'ನಮ್ಮ ಗ್ಯಾರಂಟಿಗಳ ಬಗ್ಗೆ ಇಷ್ಟೊಂದು ವಿರೋಧ ಮಾಡುತ್ತೀರಲ್ಲ; ನಿಮ್ಮ ಪಕ್ಷದವರು ಇವುಗಳನ್ನು ತಿರಸ್ಕರಿಸುತ್ತಾರೆಯೇ? ಇಡೀ ರಾಜ್ಯದಲ್ಲಿ ಐದು ಮಂದಿಗೆ ಮಾತ್ರ ತಿರಸ್ಕರಿಸಲು ಹೇಳಿ ನೋಡೋಣ' ಎಂದೂ ಹೇಳಿದರು.

ಸಿಡ್ನಿ: ಚರ್ಚ್‌ನಲ್ಲಿ ನಾಲ್ವರಿಗೆ ಚೂರಿ ಇರಿತ

ಸಿಡ್ನಿ (ಎಪಿ): ಶನಿವಾರ ಸಿಡ್ನಿಯ ಮಾಲ್‌ನಲ್ಲಿ 6 ಜನರನ್ನು ಚೂರಿ ಇರಿದು ಕೊಂದ ವ್ಯಕ್ತಿ ಕೇವಲ ಮಹಿಳೆಯರು ಹಾಗೂ ಮಕ್ಕಳನ್ನೇ ಗುರಿಯಾಗಿಸಿಕೊಂಡು ದಾಳಿ ನಡೆಸಿದ್ದಾನೆ ಎಂಬುದು ತಿಳಿದುಬಂದಿದೆ. ಈ ಘಟನೆ ಮಾಸುವ ಮುನ್ನವೇ ಸಿಡ್ನಿಯ ಚರ್ಚ್ ಒಂದರಲ್ಲಿ ಸೋಮವಾರ ವ್ಯಕ್ತಿಯೊಬ್ಬ ನಾಲ್ವರಿಗೆ ಚೂರಿಯಿಂದ ಇರಿದಿದ್ದಾನೆ.

ಚರ್ಚ್‌ನಲ್ಲಿದ್ದ ಬಿಷಪ್ ಮತ್ತು ಚರ್ಚ್‌ಗೆ ಹೋಗುತ್ತಿದ್ದವರಿಗೆ ಆರೋಪಿಯು ಚೂರಿಯಿಂದ ಇರಿದಿದ್ದಾನೆ. ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಡ್ನಿಯ ಹೊರವಲಯದಲ್ಲಿರುವ ವಾಕ್ಲೆಯ 'ಕ್ರಿಸ್ಟ್ ದಿ ಗುಡ್ ಶೆಫರ್ಡ್ ಚರ್ಚ್'ನಲ್ಲಿ ಬಿಷಪ್ ಅವರ ಬಳಿ ಕಪ್ಪು ಬಟ್ಟೆ ಧರಿಸಿರುವ ವ್ಯಕ್ತಿಯೊಬ್ಬ ಬರುತ್ತಿರುವುದು ಹಾಗೂ ಬಿಷಪ್‌ನ ತಲೆ ಹಾಗೂ ದೇಹದ ಮೇಲ್ಭಾಗದಲ್ಲಿ ಚಾಕುವಿನಿಂದ ಇರಿಯುತ್ತಿರುವ ದೃಶ್ಯಗಳಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಬಿಷಪ್ ಮೇಲೆ ದಾಳಿ ನಡೆಯುತ್ತಿದ್ದಂತೆ ಜನರೆಲ್ಲ ಕಿರುಚಾಡುತ್ತ ಬಿಷಪ್ ಸಹಾಯಕ್ಕೆ ಓಡಿ ಬಂದಿದ್ದಾರೆ. ಬಿಷಪ್ ಮತ್ತು ದಾಳಿಗೊಳಗಾದ ಇತರ ಮೂವರಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಉತ್ತರ ಗಾಜಾಕ್ಕೆ ಹಿಂತಿರುಗಬೇಡಿ ಇಸ್ರೇಲ್

ಡೀಲ್ ಅಲ್–ಬಲಾಹ್ (ಗಾಜಾಪಟ್ಟಿ): ಯುದ್ಧಪೀಡಿತ ಗಾಜಾದ ಉತ್ತರ ಭಾಗಕ್ಕೆ ಯಾವುದೇ ಕಾರಣಕ್ಕೂ ವಾಪಸ್ ಬರಬಾರದು ಎಂದು ಪ್ಯಾಲೆಸ್ಟೀನ್ ಪ್ರಜೆಗಳಿಗೆ ಇಸ್ರೇಲ್ ಸೇನೆ ಎಚ್ಚರಿಕೆ ನೀಡಿದೆ.

ದಾಳಿಗೆ ತುತ್ತಾದ ಉತ್ತರ ಗಾಜಾದಿಂದ ಇತರೆಡೆ ಸ್ಥಳಾಂತರಗೊಂಡವರ ಪೈಕಿ ವಾಪಸ್ ಮನೆಗೆ ಬರಲು ಯತ್ನಿಸುತ್ತಿದ್ದ ಐವರು ನಾಗರಿಕರು ಹತ್ಯೆಗೀಡಾಗಿದ್ದಾರೆ ಎಂದು ಗಾಜಾ ಆಸ್ಪತ್ರೆಯ ಅಧಿಕಾರಿಗಳು ಆರೋಪಿಸಿದ ಮಾರನೇ ದಿನವೇ ಇಸ್ರೇಲ್ ಸೇನೆಯ ಈ ಹೇಳಿಕೆ ಹೊರಬಿದ್ದಿದೆ.

ಹಮಾಸ್ ಬಂಡುಕೋರರನ್ನು ಸಂಪೂರ್ಣವಾಗಿ ಸದೆಬಡಿಯುವ ಗುರಿಯೊಂದಿಗೆ ದಾಳಿ ಕೈಗೊಂಡಿರುವ ಇಸ್ರೇಲ್, ಉತ್ತರ ಗಾಜಾವನ್ನು ಗುರಿಯಾಗಿಸಿಕೊಂಡಿದೆ. ಇದರಿಂದಾಗಿ ಇಲ್ಲಿ ನೆಲೆ ಕಂಡುಕೊಂಡಿದ್ದ ಹಲವರು ದಕ್ಷಿಣ ಭಾಗಕ್ಕೆ ಸ್ಥಳಾಂತರಗೊಂಡಿದ್ದಾರೆ. ಉತ್ತರ ಗಾಜಾದಲ್ಲಿ ಮುಂದಿನ 6 ತಿಂಗಳು ಯುದ್ಧ ಮುಂದುವರಿಯುವ ಕಾರಣ, ಅಲ್ಲಿಯವರೆಗೆ ಯಾರೂ ಈ ಭಾಗಕ್ಕೆ ಬರದಂತೆ ಇಸ್ರೇಲ್ ತಡೆಹಿಡಿದಿದೆ.

ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿ: ಪ್ರಜ್ಞಾನಂದ ವಿರುದ್ಧ ಡ್ರಾ ಸಾಧಿಸಿದ ಗುಕೇಶ್

ವಿದಿತ್‌ಗೆ ಶರಣಾದ ನಕಾಮುರಾ

ಟೊರಾಂಟೊ (ಪಿಟಿಐ): ಹಿಂದಿನ ಪಂದ್ಯದ ಸೋಲಿನ ನಂತರ ಅಮೋಘ ಪುನರಾಗಮನ ಮಾಡಿದ ಭಾರತದ ಗ್ರ್ಯಾಂಡ್‌ಮಾಸ್ಟರ್ ವಿದಿತ್ ಗುಜರಾತಿ ಭಾನುವಾರ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ 9ನೇ ಸುತ್ತಿನಲ್ಲಿ ಎರಡನೇ ಶ್ರೇಯಾಂಕದ ಹಿಕಾರು ನಕಾಮುರಾ ಅವರನ್ನು ಸೋಲಿಸಿದರು.

ಭಾರತದ ಆಟಗಾರರ ವ್ಯವಹಾರವಾಗಿದ್ದ ಪಂದ್ಯದಲ್ಲಿ ಡಿ.ಗುಕೇಶ್ ಅವರು ಆರ್.ಪ್ರಜ್ಞಾನಂದ ಅವರ ಜೊತೆ ಪಾಯಿಂಟ್ ಹಂಚಿಕೊಂಡರು. ಇದೂ ಸೇರಿ ಓಪನ್ ವಿಭಾಗದ ಇತರ ಪಂದ್ಯಗಳು ನಿರ್ಣಾಯಕ ಫಲಿತಾಂಶ ಪಡೆಯಲಿಲ್ಲ. ಫ್ರಾನ್ಸ್‌ನ ಇಯಾನ್ ನೆಪೊಮ್‌ನಿಯಾಚಿ ತೊಂದರೆಯಲ್ಲಿದ್ದರೂ, ಫ್ರಾನ್ಸ್‌ನ ಅಲಿರೇಝಾ ಫಿರೋಜ್ ಎದುರು ಪಾಯಿಂಟ್ ಹಂಚಿಕೊಳ್ಳುವಲ್ಲಿ ಯಶಸ್ವಿ ಆದರು. ಅಜರ್‌ಬೈಜಾನ್‌ನ ನಿಜತ್ ಅಬಸೋವ್ ಬಿಳಿ

ಹಿಕಾರು ನಕಾಮುರಾ ವಿರುದ್ಧ 9ನೇ ಸುತ್ತಿನ ಪಂದ್ಯದಲ್ಲಿ ಗೆದ್ದ ವಿದಿತ್ ಗುಜರಾತಿ

ಕಾಯಿಗಳಲ್ಲಿ ಆಡಿ, ಅಗ್ರ ಶ್ರೇಯಾಂಕದ ಫ್ಯಾಬಿಯಾನೊ ಕರುವಾನಾ ಜೊತೆ 'ಡ್ರಾ' ಮಾಡಿಕೊಂಡರು.

ಇನ್ನೂ ಐದು ಸುತ್ತು, ಎರಡು ವಿಶ್ರಾಂತಿ ದಿನಗಳು ಉಳಿದಿದ್ದು, ನೆಪೊಮ್ ಮತ್ತು ಗುಕೇಶ್ ತಲಾ ಐದೂವರೆ ಪಾಯಿಂಟ್ಸ್ ಸಂಗ್ರಹಿಸಿ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಪ್ರಜ್ಞಾನಂದ (5) ಮೂರನೇ ಸ್ಥಾನದಲ್ಲಿದ್ದಾರೆ. ನಕಾಮುರಾ, ವಿದಿತ್ ಗುಜರಾತಿ, ಕರುವಾನಾ (ತಲಾ 4.5) ನಂತರದ ಸ್ಥಾನಗಳಲ್ಲಿದ್ದಾರೆ. ಅಲಿರೇಝಾ (3.5) ಮತ್ತು ಅಬಸೋವ್ (3) ಕೊನೆಯ ಎರಡು ಸ್ಥಾನಗಳಲ್ಲಿದ್ದಾರೆ.

ವೈಶಾಲಿಗೆ ಮತ್ತೆ ಹಿನ್ನಡೆ

ಮಹಿಳಾ ವಿಭಾಗದಲ್ಲಿ ಆರ್.ವೈಶಾಲಿ ಅವರು ಮತ್ತೊಂದು ಸೋಲು ಅನುಭವಿಸಿದರು. ಈ ಬಾರಿ ಚೀನಾದ ಝೊಂಗ್ವಿ ತಾನ್ ಅವರ ಕೈಲಿ. 21 ನಡೆಗಳಲ್ಲಿ ಸಾಧಿಸಿದ ಈ ಗೆಲುವಿನೊಡನೆ ಝೊಂಗ್ವಿ ಅವರು 9 ಪಂದ್ಯಗಳಿಂದ 6 ಪಾಯಿಂಟ್ಸ್ ಸಂಗ್ರಹಿಸಿ ಒಂಟಿಯಾಗಿ ಅಗ್ರಸ್ಥಾನದಲ್ಲಿ ನೆಲೆಸಿದರು.

ಈ ವಿಭಾಗದ ಇತರ ಮೂರು ಪಂದ್ಯಗಳಲ್ಲಿ ಜಯಾಪಜಯ ನಿರ್ಧಾರವಾಗಲಿಲ್ಲ. ಕೋನೇರು ಹಂಪಿ, ರಷ್ಯಾದ ಕ್ಯಾಥರಿನಾ ಲಾಗ್ನೊ ಜೊತೆ 'ಡ್ರಾ' ಮಾಡಿಕೊಂಡರು. ಎಂಟನೇ ಸುತ್ತಿನ ನಂತರ ಅಗ್ರಸ್ಥಾನದಲ್ಲಿದ್ದ ಟಿಂಗ್ಜಿ ಲೀ ಅವರು ನುರ್ಗ್ಯುಲ್ ಸಲಿಮೋವಾ (ಬಲ್ಗೇರಿಯಾ) ಜೊತೆ 'ಡ್ರಾ' ಮಾಡಿಕೊಂಡರು.

ದಿನದ ಮತ್ತೊಂದು ಪಂದ್ಯದಲ್ಲಿ ಅನ್ನಾ ಮುಝಿಚುಕ್ (ಉಕ್ರೇನ್), ರಷ್ಯಾದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ ಜೊತೆ ಪಾಯಿಂಟ್ ಹಂಚಿಕೊಂಡರು.

ಗೊರ್ಯಾಚ್ಕಿನಾ (5.5) ಮತ್ತು ಲಾಗ್ನೊ (ತಲಾ 5.5) ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದಾರೆ.

ಸ್ಪಿನ್ ದಿಗ್ಗಜ ಡೆರೆಕ್ ಅಂಡರ್‌ವುಡ್ ನಿಧನ

ಲಂಡನ್ (ಎಎಫ್‌ಪಿ): ಇಂಗ್ಲೆಂಡ್ ಟೆಸ್ಟ್ ಕ್ರಿಕೆಟ್‌ನ ಯಶಸ್ವಿ ಸ್ಪಿನ್ ಬೌಲರ್ ಡೆರೆಕ್ ಅಂಡರ್‌ವುಡ್ (78) ನಿಧನರಾಗಿದ್ದಾರೆ ಎಂದು ಅವರು ಪ್ರತಿನಿಧಿಸುತ್ತಿದ್ದ ಕೆಂಟ್ ಕೌಂಟಿ ಕ್ಲಬ್ ಸೋಮವಾರ ಪ್ರಕಟಿಸಿದೆ.

ಡೆರೆಕ್ ಅಂಡರ್‌ವುಡ್

ಎಡಗೈ ಸ್ಪಿನರ್ ಅಂಡರ್‌ವುಡ್ 86 ಟೆಸ್ಟ್ ಪಂದ್ಯಗಳಲ್ಲಿ 297 ವಿಕೆಟ್‌ಗಳನ್ನು ಗಳಿಸಿದ್ದಾರೆ. 1963 ರಿಂದ 1987 ರವರೆಗೆ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಆಡಿದ್ದರು. ಆ ಸಮಯದಲ್ಲಿ ಅನ್‌ಕವರ್ಡ್ ಪಿಚ್‌ಗಳಲ್ಲಿ (ಇಬ್ಬನಿಯಿಂದ ರಕ್ಷಿಸಲು ವ್ಯವಸ್ಥೆ ಇರಲಿಲ್ಲ) ಕೂಡ ಅವರು ಪರಿಣಾಮಕಾರಿಯಾಗಿದ್ದರು.

1968ರಲ್ಲಿ ಓವಲ್‌ನಲ್ಲಿ ಸಾಂಪ್ರದಾಯಿಕ ಎದುರಾಳಿ ಆಸ್ಟ್ರೇಲಿಯಾ ವಿರುದ್ಧ ಇಂಗ್ಲೆಂಡ್ ಗೆಲುವು ಸಾಧಿಸಲು ಅಂಡರ್ ವುಡ್ (50ಕ್ಕೆ7) ಕಾರಣರಾಗಿದ್ದರು. 1966ರಲ್ಲಿ ತಮ್ಮ 21ನೇ ವಯಸ್ಸಿನಲ್ಲಿ ಇಂಗ್ಲೆಂಡ್ ತಂಡಕ್ಕೆ ಪದಾರ್ಪಣೆ ಮಾಡಿದ್ದರು. 1982ರಲ್ಲಿ ತಮ್ಮ ಕೊನೆಯ ಟೆಸ್ಟ್ ಆಡಿದರು.

ಕ್ರಿಕೆಟ್ ವೃತ್ತಿಜೀವನ ಮುಗಿದ ನಂತರ ಅಂಡರ್‌ವುಡ್ 2009 ರಲ್ಲಿ ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

'ಡೆರೆಕ್ ಅವರು ಕೆಂಟ್ ಮತ್ತು ಇಂಗ್ಲೆಂಡ್ ತಂಡಗಳಿಗೆ ಶ್ರೇಷ್ಠ ಕೊಡುಗೆ ನೀಡಿದ್ದಾರೆ. ಕ್ಲಬ್ ಮತ್ತು ದೇಶಕ್ಕಾಗಿ ಟ್ರೋಫಿಗಳನ್ನು ಗೆದ್ದಿದ್ದಾರೆ ಮತ್ತು ಇತಿಹಾಸದ ಪುಸ್ತಕಗಳಲ್ಲಿ ಅವರ ಹೆಸರು ಶಾಶ್ವತವಾಗಿದೆ' ಎಂದು ಕೆಂಟ್ ಅಧ್ಯಕ್ಷ ಸೈಮನ್ ಫಿಲಿಪ್ ತಿಳಿಸಿದ್ದಾರೆ.



ಡೆರೆಕ್ ಅಂಡರ್‌ವುಡ್ –ಎಕ್ಸ್ ಚಿತ್ರ

ಅವರಿಗೆ ಐಸಿಸಿ (ಇಂಟರ್‌ನ್ಯಾಷನಲ್ ಕ್ರಿಕೆಟ್ ಕೌನ್ಸಿಲ್) ಹಾಲ್ ಆಫ್ ಫೇಮ್ ಗೌರವವೂ ಸಂದಿದೆ.

ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್‌ಗೆ ಹೆಚ್ಚಿನ ಭದ್ರತೆ: ಮ್ಯಾಕ್ರನ್

ಉದ್ಘಾಟನಾ ಸಮಾರಂಭ ಸ್ಥಳಾಂತರ?

ಪ್ಯಾರಿಸ್ (ಪಿಟಿಐ): ಭದ್ರತೆ ಭೀತಿ ಹೆಚ್ಚಿರುವುದು ಕಂಡು ಬಂದರೆ ಸೀನ್ ನದಿಯಲ್ಲಿ ಯೋಜಿಸಲಾಗಿರುವ ಪ್ಯಾರಿಸ್ ಒಲಿಂಪಿಕ್ಸ್ ಉದ್ಘಾಟನಾ ಸಮಾರಂಭವನ್ನು ರಾಷ್ಟ್ರೀಯ ಕ್ರೀಡಾಂಗಣಕ್ಕೆ ಸ್ಥಳಾಂತರಿಸುವ ಸಾಧ್ಯತೆ ಇದೆ ಎಂದು ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಸೋಮವಾರ ಹೇಳಿದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್ ಮತ್ತು ಪ್ಯಾರಾಲಿಂಪಿಕ್ಸ್‌ಗೆ ಮುಂಚಿತವಾಗಿ ಫ್ರಾನ್ಸ್ ಹೆಚ್ಚಿನ ಭದ್ರತಾ ಎಚ್ಚರಿಕೆ ವಹಿಸಿದೆ. ದೇಶವು ಲಕ್ಷಾಂತರ ಪ್ರವಾಸಿಗರನ್ನು ಆಕರ್ಷಿಸುವ ನಿರೀಕ್ಷೆಯಿದೆ.

ಉದ್ಘಾಟನಾ ಸಮಾರಂಭದಲ್ಲಿ 6 ಕಿಲೋ ಮೀಟರ್ (3.7 ಮೈಲಿ) ಕ್ರೀಡಾಪಟುಗಳು ಚಿಕ್ಕ ದೋಣಿಗಳ ಮೂಲಕ ಮೆರವಣಿಗೆಯಲ್ಲಿ ಸಾಗುವರು. ಲಕ್ಷಾಂತರ ಪ್ರೇಕ್ಷಕರು ಇದನ್ನು ವೀಕ್ಷಿಸಲಿದ್ದಾರೆ.

ಇಮ್ಯಾನುಯೆಲ್ ಮ್ಯಾಕ್ರನ್

ಫ್ರಾನ್ಸ್ ಮಾಧ್ಯಮ ಬಿಎಫ್‌ಎಂ-ಟಿವಿ ಮತ್ತು ಆರ್‌ಎಂಸಿ ಯೊಂದಿಗೆ ಮಾತನಾಡಿದ ಮ್ಯಾಕ್ರನ್, 'ಬಯಲು ಕಾರ್ಯಕ್ರಮದ ಭದ್ರತೆಗಾಗಿ ಕಾನೂನು ಜಾರಿ ಪಡೆಗಳನ್ನು ಅಸಾಧಾರಣ ಮಟ್ಟದಲ್ಲಿ ಸಜ್ಜುಗೊಳಿಸಲಾಗುತ್ತದೆ. ಆದರೆ ಅಪಾಯಗಳಿವೆ ಎಂದು ಭಾವಿಸಿದರೆ, ಪ್ಲಾನ್ ಬಿ ಮತ್ತು ಪ್ಲಾನ್ ಸಿಎಸ್ ಇವೆ' ಎಂದು ಮ್ಯಾಕ್ರನ್ ಹೇಳಿದರು.

ಜುಲೈ 26ರಿಂದ ನಡೆಯಲಿರುವ ಕ್ರೀಡಾಕೂಟವು ಕ್ರೀಡಾಂಗಣದ ಹೊರಗೆ ನಡೆಯುವ ಮೊದಲ ಒಲಿಂಪಿಕ್ಸ್ ಸಮಾರಂಭವಾಗಿದೆ. ಸುಮಾರು 10,500 ಕ್ರೀಡಾಪಟುಗಳು ಸೀನ್ ನದಿಯಲ್ಲಿ ಚಿಕ್ಕ ದೋಣಿಗಳಲ್ಲಿ ಮೆರವಣಿಗೆ ನಡೆಸಲಿದ್ದಾರೆ.

ಆಯೋಜಕರು ಮೊದಲು ಆರು ಲಕ್ಷ ಜನರಿಗೆ ಉದ್ಘಾಟನಾ ಸಮಾರಂಭವನ್ನು ಯೋಜಿಸಿದ್ದರು. ಬಹುತೇಕರು ನದಿಯ ದಡದಿಂದ ಉಚಿತವಾಗಿ ವೀಕ್ಷಿಸುತ್ತಿದ್ದರು. ಆದರೆ, ಭದ್ರತೆಯ ಕಾರಣಕ್ಕೆ ಒಟ್ಟಾರೆ ಪ್ರೇಕ್ಷಕರ ಸಂಖ್ಯೆಯನ್ನು ಈ ವರ್ಷ ಸುಮಾರು 3 ಲಕ್ಷಕ್ಕೆ ಇಳಿಸಲಾಯಿತು.

ಭದ್ರತಾ ಕಾಳಜಿಯ ಕಾರಣದಿಂದ ಉದ್ಘಾಟನಾ ಸಮಾರಂಭ ವೀಕ್ಷಿಸಲು ಪ್ರವಾಸಿಗರಿಗೆ ಉಚಿತ ಪ್ರವೇಶ ನೀಡಲಾಗುವುದಿಲ್ಲ ಎಂದು ಸರ್ಕಾರ ನಿರ್ಧರಿಸಿದೆ. ಬದಲಿಗೆ ಉಚಿತ ಪ್ರವೇಶವು ಆಹ್ವಾನಿತರಿಗೆ ಮಾತ್ರ ಇರುತ್ತದೆ. ಸದ್ಯ ಉದ್ಘಾಟನಾ ಸಮಾರಂಭದ ಯೋಜನೆಗಳು ಒಂದೇ ಆಗಿರುತ್ತವೆ ಎಂದು ಅವರು ತಿಳಿಸಿದರು.

ಕೊಡವ ಹಾಕಿ: ತೀತಮಾಡಕ್ಕೆ ಜಯ

ನಾಪೋಕ್ಲು (ಕೊಡಗು ಜಿಲ್ಲೆ): ಸಾಂಘಿಕ ಹೋರಾಟ ಬಲದಿಂದ ತೀತಮಾಡ ತಂಡವು ಕುಂಡ್ಯೋಳಂಡ ಕಪ್‌ಗಾಗಿ ಇಲ್ಲಿ ನಡೆಯುತ್ತಿರುವ ಹಾಕಿ ಟೂರ್ನಿಯ ಪಂದ್ಯದಲ್ಲಿ 5–2 ಗೋಲುಗಳಿಂದ ಆತಿಥೇಯ ಕುಂಡ್ಯೋಲಂಡ ತಂಡವನ್ನು ಮಣಿಸಿತು.

ಚೆರಿಯಪರಂಬುವಿನ ಜನರಲ್ ಕೆ.ಎಸ್.ತಿಮ್ಮಯ್ಯ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಹಣಾಹಣಿಯಲ್ಲಿ ತೀತಮಾಡ ತಂಡದ ಪೃಥ್ವಿ, ದೇವಯ್ಯ, ಮದನ್, ಸುಜಿತ್ ಹಾಗೂ ಪೊನ್ನಣ್ಣ ತಲಾ ಒಂದು ಗೋಲನ್ನು ತಂಡಕ್ಕೆ ಸೇರಿಸಿ ಗೆಲುವು ಸುಲಭಗೊಳಿಸಿದರು.

ಆತಿಥೇಯ ತಂಡದ ಪೊನ್ನಪ್ಪ ಹಾಗೂ ವಿಕಾಸ್ ತಲಾ ಒಂದು ಗೋಲು ಗಳಿಸಲಷ್ಟೇ ಸಾಧ್ಯವಾಯಿತು.

ಚೆಕ್ಕೆರ ತಂಡದವರು 6–0 ಗೋಲುಗಳಿಂದ ಪೊಂಜಂಡ ತಂಡವನ್ನು ಮಣಿಸಿದರೆ, ಚಂದುರ ತಂಡದವರು 6-5 ಗೋಲಿನಿಂದ ಕಾಳಿಮಾಡ ವಿರುದ್ಧ ರೋಚಕ ಗೆಲುವು ದಾಖಲಿಸಿದರು. ಪೆನಾಲ್ಟಿ ಶೂಟೌಟ್‌ನಲ್ಲಿ ಕೋಡಿಮಣಿಯಂಡ ತಂಡದವರು 5-4ರಿಂದ ಕಾಂಡೇರ ವಿರುದ್ಧ ಜಯ ಸಾಧಿಸಿದರು.

ಮಂಡೇಟಿರ 2-0ರಿಂದ ಮೇವಡ ತಂಡವನ್ನು; ಕಂಬಿರಂಡ ತಂಡವು ಮಲ್ಲಜ್ಜಿರ ವಿರುದ್ಧ 3–0ರಿಂದ; ಪುದಿಯೋಕ್ಕಡ ತಂಡವು ಬೊಟ್ಟಂಗಡ ವಿರುದ್ಧ 3-0ರಿಂದ; ಕೊಂಗೆಟಿರ ತಂಡವು ಅಲ್ಲಾರಂಡ ವಿರುದ್ಧ 4-0ರಿಂದ; ಅಮ್ಮಣಿಚಂಡ ತಂಡವು ಚೋಕಿರ ತಂಡವನ್ನು 3-1ರಿಂದ; ಚೇಂದಂಡ ತಂಡವು ಕಂಗಂಡ ವಿರುದ್ಧ 3-0ರಿಂದ; ಕೇಲೆಟಿರ ತಂಡವು ಪಾಲಂದಿರ ತಂಡವನ್ನು 3-0ರಿಂದ; ಮುಕ್ಕಾಟಿರ (ಬೋಂದ) ತಂಡವು ಅಳಮೇಂಗಡ ತಂಡವನ್ನು 5-4 ಗೋಲುಗಳಿಂದ ಸೋಲಿಸಿದವು.

ಪಾಂಡಿಚೇರಿಯಲ್ಲಿ ನಡೆದ 38ನೇ ಯೂತ್ ನ್ಯಾಷನಲ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ರನ್ನರ್ಸ್ ಅಪ್ ಸ್ಥಾನ ಪಡೆದ ಕರ್ನಾಟಕದ ಬಾಲಕಿಯರ ತಂಡ. (ನಿಂತವರು– ಎಡದಿಂದ) ಖುಷಿ ನವೀನ್ (ನಾಯಕಿ), ನಿಧಿ ಉಮೇಶ್, ನೀಲಯ್ಯ ರೆಡ್ಡಿ, ಸತ್ಯನಾರಾಯಣ ಕಗ್ಗಲ್ (ಕೋಚ್), ಪವಿತ್ರಾ ಎನ್. (ಮ್ಯಾನೇಜರ್), ನಾಗರಾಜ್ ಎಲ್. (ಜನರಲ್ ಮ್ಯಾನೇಜರ್), ತಾರುಶೀ ತರುಣ್, ದೀಪಿಕಾ ಪಿ.ಪಿ, ಶ್ರಾವಣಿ ಶಿವಣ್ಣ, (ಕುಳಿತವರು– ಎಡದಿಂದ) ನಕ್ಷತ್ರಾ ಕೆ, ದಿಯಾ ರಾಥೋಡ್, ದೀಪುಶ್ರೀ, ತಿಶಾ, ನಿಧಿ ಶ್ರೀನಿವಾಸ್, ಅದಿತಿ ಸುಬ್ರಮಣಿಯಂ. ತಮಿಳುನಾಡು ತಂಡವು 65–60ರಿಂದ ಪ್ರಶಸ್ತಿ ಗೆದ್ದುಕೊಂಡಿತು.

ಫುಟ್‌ಬಾಲ್: ಢಾಕಾಕ್ಕೆ ತೆರಳಿದ ಭಾರತ ತಂಡ

ಫರಿದಾಬಾದ್ (ಪಿಟಿಐ): ವಿಶೇಷ ಒಲಿಂಪಿಕ್ಸ್ ದಕ್ಷಿಣ ಏಷ್ಯಾ ಏಕೀಕೃತ ಸೆವೆನ್-ಎ-ಸೈಡ್ ಫುಟ್‌ಬಾಲ್ ಟೂರ್ನಿಯಲ್ಲಿ ಭಾಗವಹಿಸಲು ಪುರುಷರು ಮತ್ತು ಮಹಿಳೆಯರನ್ನು ಒಳಗೊಂಡ 28 ಸದಸ್ಯರ ಭಾರತ ತಂಡ ಸೋಮವಾರ ಢಾಕಾಗೆ ತೆರಳಿದೆ.

22 ಆಟಗಾರರು ಮತ್ತು ಎಂಟು ವಿವಿಧ ರಾಜ್ಯಗಳನ್ನು ಪ್ರತಿನಿಧಿಸವ ಐವರು ತರಬೇತುದಾರರನ್ನು ಒಳಗೊಂಡ ತಂಡಕ್ಕೆ ಸೋಮವಾರ ಇಲ್ಲಿ ಬೀಳ್ಕೊಡುಗೆ ನೀಡಲಾಯಿತು.

'ಮಹಿಳಾ ತಂಡದಿಂದ ಖಂಡಿತವಾಗಿಯೂ ಒಂದು ಪದಕ ಗೆಲ್ಲುವ ಭರವಸೆ ಹೊಂದಿದ್ದೇವೆ. ಪುರುಷರ ತಂಡವು ತಮ್ಮ ಕೌಶಲಗಳನ್ನು ಸ್ವಲ್ಪ ಹೆಚ್ಚು ಸುಧಾರಿಸಬೇಕಾಗಿದೆ. ಪ್ರಮುಖವಾಗಿ ಗೋಲು ರಕ್ಷಿಸುವುದು. ನಾವು ಉತ್ತಮವಾದದ್ದನ್ನು ನಿರೀಕ್ಷಿಸುತ್ತಿದ್ದೇವೆ' ಎಂದು ವಿಶೇಷ ಒಲಿಂಪಿಕ್ಸ್ ಭಾರತದ ಕ್ರೀಡಾ ನಿರ್ದೇಶಕ ಹರ್ಪ್ರೀತ್ ಸಿಂಗ್ ಸಮಾರಂಭದಲ್ಲಿ ಹೇಳಿದರು.

ವಿಶೇಷ ಒಲಿಂಪಿಕ್ಸ್ ಭಾರತ್ ಬೌದ್ಧಿಕ ವಿಕಲಚೇತನರಿಗಾಗಿ ರಾಷ್ಟ್ರೀಯ ಕ್ರೀಡಾ ಫೆಡರೇಶನ್ ಆಗಿದೆ. ಕ್ರೀಡಾ ಸಚಿವಾಲಯ ಮಾನ್ಯತೆ ನೀಡಿದೆ.

'ಫುಟ್‌ಬಾಲ್ ಟೂರ್ನಿಯಲ್ಲಿ ಪಾಲ್ಗೊಳ್ಳುತ್ತಿರುವುದು ಇದೇ ಮೊದಲು. ಇದರಿಂದ ನನ್ನಲ್ಲಿ ಸಾಕಷ್ಟು ಪರಿವರ್ತನೆ ಆಗಿದೆ. ದೇಶ ಹೆಮ್ಮೆಪಡುವಂತೆ ಆಡಲು ಬಯಸುತ್ತೇನೆ. ಚಿನ್ನದ ಪದಕಕ್ಕಾಗಿ ಉತ್ತಮ ಪ್ರಯತ್ನ ಮಾಡುತ್ತೇವೆ' ಎಂದು ಮಹಿಳಾ ಫುಟ್‌ಬಾಲ್ ತಂಡದ ನಾಯಕಿ ಅಂಕಿತಾ ಹೇಳಿದರು.

ಇಂಡೊನೇಷ್ಯಾ, ಹಾಂಗ್ ಕಾಂಗ್ ಮತ್ತು ಮಾಲ್ಡೀವ್ಸ್ ಒಳಗೊಂಡ ಟೂರ್ನಿಯ ಸಿದ್ಧತೆಯ ಭಾಗವಾಗಿ ಆಟಗಾರರು ಇಲ್ಲಿ ತರಬೇತಿ ಶಿಬಿರದಲ್ಲಿ ಭಾಗಿಯಾಗಿದ್ದರು.

ಹಲ್ಲೆ ಆರೋಪ: ಪೊಲೀಸ್ ಕಸ್ಟಡಿಗೆ ಸ್ಲೇಟರ್

ಬ್ರಿಸ್ಬೇನ್ (ಪಿಟಿಐ): ಹಲ್ಲೆ ಮತ್ತು ಹಿಂಬಾಲಿಸುವಿಕೆ ಆರೋಪಕ್ಕೆ ಸಂಬಂಧಿಸಿದಂತೆ ಆಸ್ಟ್ರೇಲಿಯಾದ ಮಾಜಿ ಕ್ರಿಕೆಟಿಗ ಮತ್ತು ವೀಕ್ಷಕ ವಿವರಣೆಗಾರ ಮೈಕೆಲ್ ಸ್ಲೇಟರ್ ಅವರನ್ನು ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ.

54 ವರ್ಷದ ಸ್ಲೇಟರ್ ವಿರುದ್ಧ ಕಾನೂನುಬಾಹಿರ ಹಿಂಬಾಲಿಸುವಿಕೆ ಅಥವಾ ಬೆದರಿಕೆ, ಹಲ್ಲೆ, ರಾತ್ರಿಯಲ್ಲಿ ಉದ್ದೇಶಪೂರ್ವಕವಾಗಿ ಮನೆಗೆ

ನುಗ್ಗುವುದು ಸೇರಿದಂತೆ 12ಕ್ಕೂ ಹೆಚ್ಚು ಆರೋಪ ಹೊರಿಸಲಾಗಿದೆ ಎಂದು ಗಾರ್ಡಿಯನ್ ಪತ್ರಿಕೆ ತಿಳಿಸಿದೆ.

ಕ್ವೀನ್ಸ್‌ಲ್ಯಾಂಡ್‌ನ ಮರೂಚಿಡೋರ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಸ್ಲೇಟರ್ ಅವರ ಪ್ರಕರಣವನ್ನು ಸೋಮವಾರ ಉಲ್ಲೇಖಿಸಲಾಗಿದೆ.

ಕಳೆದ ವರ್ಷ ಡಿಸೆಂಬರ್ 5 ಮತ್ತು ಏಪ್ರಿಲ್ 12ರ ನಡುವೆ ವಿವಿಧ ದಿನಾಂಕಗಳಲ್ಲಿ ಸನ್‌ಶೈನ್ ಕೋಸ್ಟ್‌ನಲ್ಲಿ ನಡೆದ ಅಪರಾಧಗಳಿಗೆ ಸಂಬಂಧಿಸಿದಂತೆ ಅವರು ಒಟ್ಟು 19 ಆರೋಪಗಳನ್ನು ಎದುರಿಸುತ್ತಿದ್ದಾರೆ.

ಸ್ಲೇಟರ್ 1993 ಮತ್ತು 2003ರ ನಡುವೆ 74 ಟೆಸ್ಟ್ ಮತ್ತು 42 ಏಕದಿನ ಪಂದ್ಯಗಳನ್ನು ಆಡಿದ್ದಾರೆ.

ಟಿ20: ಬಾಂಗ್ಲಾ ವಿರುದ್ಧ ಸರಣಿಗೆ ಆಶಾ, ಸಜನಾ

ನವದೆಹಲಿ (ಪಿಟಿಐ): ಇತ್ತೀಚೆಗೆ ನಡೆದ ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಉತ್ತಮ ಪ್ರದರ್ಶನ ತೋರಿದ ಸ್ಪಿನ್ನರ್ ಆಶಾ ಶೋಭನಾ ಮತ್ತು ಬ್ಯಾಟರ್ ಸಜೀವನ್ ಸಜನಾ ಅವರು ಏಪ್ರಿಲ್ 28ರಿಂದ ನಡೆಯುವ ಬಾಂಗ್ಲಾದೇಶ ವಿರುದ್ಧದ ಐದು ಟಿ20 ಪಂದ್ಯಗಳಿಗೆ ಭಾರತ ತಂಡಕ್ಕೆ ಮೊದಲ ಬಾರಿಗೆ ಆಯ್ಕೆಯಾಗಿದ್ದಾರೆ.

ಲೆಗ್ ಸ್ಪಿನ್ನರ್ ಶೋಭನಾ ಅವರು ಡಬ್ಲ್ಯುಪಿಎಲ್‌ನಲ್ಲಿ ಆರ್‌ಸಿಬಿಯ ವಿಜಯದ ಅಭಿಯಾನದಲ್ಲಿ 10 ಪಂದ್ಯಗಳಲ್ಲಿ 15.42 ಸರಾಸರಿಯಲ್ಲಿ 12 ವಿಕೆಟ್‌ಗಳನ್ನು ಪಡೆದರು.

ಹರ್ಮನ್‌ಪ್ರೀತ್ ಕೌರ್ ತಂಡವನ್ನು ಮುನ್ನಡೆಸಲಿದ್ದು, ಈ ವರ್ಷದ ಕೊನೆಯಲ್ಲಿ ಬಾಂಗ್ಲಾದೇಶದಲ್ಲಿ ಟಿ20 ವಿಶ್ವಕಪ್ ನಡೆಯಲಿರುವ ಕಾರಣ ಹೆಚ್ಚಿನ ಮಹತ್ವ ಪಡೆದುಕೊಂಡಿದೆ. ಎಲ್ಲಾ ಐದು ಪಂದ್ಯಗಳು ಸಿಲೆಟ್‌ನಲ್ಲಿ ನಡೆಯಲಿವೆ.

ಕರ್ನಾಟಕದ ಶ್ರೇಯಾಂಕಾ ಪಾಟೀಲ ಕೂಡ ತಂಡದ ಭಾಗವಾಗಿದ್ದಾರೆ. ಅವರು ಡಬ್ಲ್ಯುಪಿಎಲ್‌ನಲ್ಲಿ ಆರ್‌ಸಿಬಿ ತಂಡದ ಪರ ಬೌಲಿಂಗ್‌ನಲ್ಲಿ ಮಿಂಚಿದ್ದರು. ಹೇಮಲತಾ ದಯಾಳನ್ ಅವರು ತಂಡಕ್ಕೆ ಮರಳಿದ್ದಾರೆ. ರೇಣುಕಾ ಸಿಂಗ್ ಠಾಕೂರ್, ಟಿಟಾಸ್ ಸಾಧು ಮತ್ತು ಪೂಜಾ ವಸ್ತ್ರಾಕರ್ ತಂಡದಲ್ಲಿ ವೇಗಿಗಳಾಗಿದ್ದಾರೆ. ಎಡಗೈ ಸ್ಪಿನ್ನರ್ ಸೈಕಾ ಇಶಾಕ್ ಕೂಡ ತಂಡದ ಭಾಗವಾಗಿದ್ದಾರೆ.

ಶ್ರೇಯಾಂಕಾ ಪಾಟೀಲ

ಏಪ್ರಿಲ್ 28, ಏಪ್ರಿಲ್ 30, ಮೇ 2, ಮೇ 6 ಮತ್ತು ಮೇ 9 ರಂದು ಪಂದ್ಯಗಳು ನಡೆಯಲಿವೆ.

ಟಿ20 ಪಂದ್ಯಗಳಿಗೆ ಭಾರತ ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪನಾಯಕಿ), ಶಫಾಲಿ ವರ್ಮಾ, ದಯಾಳನ್ ಹೇಮಲತಾ, ಸಜೀವನ್ ಸಜನಾ, ರಿಚಾ ಘೋಷ್ (ವಿಕೆಟ್ ಕೀಪರ್), ಯಾಸ್ತಿಕಾ ಭಾಟಿಯಾ (ವಿಕೆಟ್ ಕೀಪರ್), ರಾಧಾ ಯಾದವ್, ದೀಪ್ತಿ ಶರ್ಮಾ, ಪೂಜಾ ವಸ್ತ್ರಾಕರ್, ಅಮನ್ಜೋತ್ ಕೌರ್, ಶ್ರೇಯಾಂಕಾ ಪಾಟೀಲ, ಸೈಕಾ ಇಶಾಕ್, ಆಶಾ ಶೋಭನಾ, ರೇಣುಕಾ ಸಿಂಗ್ ಠಾಕೂರ್, ತಿತಾಸ್ ಸಾಧು.

ಹಾರ್ದಿಕ್ ವಿರುದ್ಧ ಗಾವಸ್ಕರ್ ಟೀಕೆ



ಮುಂಬೈ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್‌ಗೆ ಸೋತ ನಂತರ ಭಾರತ ತಂಡದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಹಿರಿಯ ಆಟಗಾರರ ವಾಗ್ದಾಳಿಗೆ ಗುರಿಯಾಗಿದ್ದಾರೆ. 'ಅವರ ಬೌಲಿಂಗ್ ಮತ್ತು ಇದುವರೆಗಿನ ನಾಯಕತ್ವ ಎರಡೂ ಸಾಧಾರಣ ಮಟ್ಟದ್ದಾಗಿತ್ತು' ಎಂದು ಮಾಜಿ ನಾಯಕ ಸುನಿಲ್ ಗಾವಸ್ಕರ್ ಟೀಕಿಸಿದ್ದರೆ.

ಚೆನ್ನೈ ಎದುರು ಭಾನುವಾರ ಎದುರಾದ ಸೋಲು ಈ ಬಾರಿಯ ಐಪಿಎಲ್‌ನಲ್ಲಿ ಮುಂಬೈಗೆ ನಾಲ್ಕನೇಯದ್ದಾಗಿದೆ. ಪಾಂಡ್ಯ ಅವರ ಅಂತಿಮ ಓವರ್‌ನಲ್ಲಿ 26 ರನ್‌ಗಳು ಬಂದಿದ್ದು ಚೆನ್ನೈನ ದಿಗ್ಗಜ ಎಂ.ಎಸ್.ಧೋನಿ ಒಬ್ಬರೇ ಮೂರು ಸಿಕ್ಸರ್ ಸಹಿತ 20 ರನ್ ಗಳಿಸಿದ್ದರು. ಅಂತಿಮವಾಗಿ ಇದು ನಿರ್ಣಾಯಕವಾಯಿತು.

ಮುಂಬೈ ನಾಯಕತ್ವ ವಹಿಸಿಕೊಂಡ ನಂತರ ಪಾಂಡ್ಯ ಪ್ರೇಕ್ಷಕರಿಂದ ಮೂದಲಿಕೆಗೆ ಒಳಗಾಗಿದ್ದರು. ಭಾನುವಾರ ಅವರ ನಿರ್ವಹಣೆಗೆ ಗಾವಸ್ಕರ್ ಜೊತೆ ಇಂಗ್ಲೆಂಡ್‌ನ ಮಾಜಿ ಕ್ಯಾಪ್ಟನ್ ಕೆವಿನ್ ಪೀಟರ್‌ಸನ್ ಸಹ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಇದು ಸಾಧಾರಣ ಬೌಲಿಂಗ್, ಸಾಧಾರಣ ನಾಯಕತ್ವ. ಶಿವಂ ದುಬೆ ಜೊತೆ ಗಾಯಕವಾಡ್ ಅವರ ಸೊಗಸಾದ ಆಟದ ಹೊರತಾಗಿಯೂ ಚೆನ್ನೈ ತಂಡವನ್ನು 185–190 ರನ್‌ಗಳಿಗೆ ಸೀಮಿತಗೊಳಿಸಬೇಕಿತ್ತು' ಎಂದಿದ್ದಾರೆ ಗಾವಸ್ಕರ್.

'ಇತ್ತೀಚಿನ ವರ್ಷಗಳಲ್ಲೇ ನಾನು ನೋಡಿದ ಅತ್ಯಂತ ಕೆಟ್ಟ ರೀತಿಯ ಬೌಲಿಂಗ್ ಇದು' ಎಂದಿದ್ದಾರೆ ಅವರು.

3 ಓವರುಗಳಲ್ಲಿ 42 ರನ್ ತೆತ್ತ ಪಾಂಡ್ಯ, ಬ್ಯಾಟಿಂಗ್‌ನಲ್ಲೂ ವಿಫಲರಾಗಿದ್ದರು.

ಹೊರಗಿನ ಟೀಕೆಗಳು ಪಾಂಡ್ಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ' ಎಂದು ಕೆವಿನ್ ಪೀಟರ್ಸನ್ ಅಭಿಪ್ರಾಯಪಟ್ಟಿದ್ದಾರೆ.

ಪೊಲ್ಲಾರ್ಡ್ ಸಮರ್ಥನೆ: ಇದೇ ವೇಳೆ ಮುಂಬೈನ ಬ್ಯಾಟಿಂಗ್ ಕೋಚ್ ಕೀರನ್ ಪೊಲ್ಲಾರ್ಡ್ ಅವರು, 'ತಂಡದ ಸೋಲಿಗೆ ಕೆಲವರನ್ನೇ ಹೊಣೆ ಮಾಡುವ ಪ್ರವೃತ್ತಿಯಿಂದ ಬೇಸತ್ತು ಹೋಗಿದ್ದೇನೆ' ಎಂದು ಹೇಳಿದ್ದಾರೆ. ಎಲ್ಲ ಹಿನ್ನಡೆಗೆ ಹಾರ್ದಿಕ್ ಪಾಂಡ್ಯ ಅವರನ್ನು ಗುರಿಮಾಡಬೇಡಿ ಎಂದು ಅಭಿಮಾನಿಗಳನ್ನು ಕೋರಿದ್ದಾರೆ.

ಪ್ರಜಾವಾಣಿ

ನಿಮ್ಮ ಮತ ಅತೀ ಮುಖ್ಯ

ಚುನಾವಣೆಯ ಪ್ರಯುಕ್ತ ಪ್ರಜಾವಾಣಿಯು ರಾಷ್ಟ್ರಾದ್ಯಂತ ತನ್ನ ವರದಿಗಾರರನ್ನು ನೇಮಿಸಿ, "ಪ್ರಜಾಮತ" ವಿಶೇಷ ಪುಟದಲ್ಲಿ ಸಮಗ್ರ ಚುನಾವಣಾ ಮಾಹಿತಿಯನ್ನು ಪ್ರಸ್ತುತಪಡಿಸುತ್ತಿದೆ. ಆಳವಾದ ವರದಿಗಳು, ವಿಶ್ಲೇಷಣೆಗಳು, ಸಂದರ್ಶನಗಳೊಂದಿಗೆ ಭಾರತದ ರಾಜಕೀಯ ಕ್ಷೇತ್ರದ ಪಕ್ಷಿನೋಟವು ಇದರಲ್ಲಿದ್ದು, ಸೂಕ್ತ ಅಭ್ಯರ್ಥಿಯನ್ನು ಆಯ್ಕೆ ಮಾಡಲು ನಿಮಗಿದು ನೆರವಾಗಲಿದೆ.

ನಮ್ಮ ಮತ ನಮ್ಮ ಹಕ್ಕು

#INFORMED VOTE

ಚಂದಾದಾರರಾಗಲು ಸಂಪರ್ಕಿಸಿ
ವಾಟ್ಸಾಪ್/ ಐ.ವಿ.ಆರ್. - 9008366666
ಅಥವಾ
QR ಕೋಡ್ ಸ್ಕ್ಯಾನ್ ಮಾಡಿ

Follow Us

ಕೀಲು ನೋವಿನಿಂದ ಮುಕ್ತಿ ಪಡೆಯಲು ಪ್ರಯೋಗ ಮಾಡುವುದನ್ನು ನಿಲ್ಲಿಸಿ, ಭರವಸೆದಾಯಕ ಡಾ.ಆರ್ಥೋ ತೈಲ ಬಳಸಿ ನೋಡಿ!

Dr. Juneja's
ಡಾ. ಆರ್ಥೋ®
Ayurvedic Oil, Capsules, Spray & Ointment

ಉತ್ತಮ ಫಲಿತಾಂಶಗಳಿಗಾಗಿ ನೀಡಲಾಗುವ ಜಾನು ಬಸ್ತಿ ಥೆರಪಿಯಲ್ಲಿ ಡಾ.ಆರ್ಥೋ ತೈಲವನ್ನು ಬಳಸುವ ಸರಿಯಾದ ವಿಧಾನ ನಿಮಗೆ ತಿಳಿದಿದೆಯೆ?

ಜಾನು ಬಸ್ತಿ ಥೆರಪಿ ಎಂದರೇನು?

ಮಂಡಿ ನೋವಿನ ಚಿಕಿತ್ಸೆಗಾಗಿ ಹಲವಾರು ಬಗೆಯ ಔಷಧಿಗಳು, ಚಿಕಿತ್ಸೆಗಳು, ಶಸ್ತ್ರಕ್ರಿಯೆಯ ಆಯ್ಕೆಗಳು ಲಭ್ಯವಿದ್ದರೂ, ಈ ಜಾನು ಬಸ್ತಿ ಥೆರಪಿಯು ಮಂಡಿಗಳಲ್ಲಿನ ನೋವನ್ನು ಕಡಿಮೆಗೊಳಿಸಲು ವಿಶೇಷವಾಗಿ ಸಹಾಯ ಮಾಡುತ್ತದೆ.

ಜಾನು ಬಸ್ತಿ ಥೆರಪಿ ಹೇಗೆ ಮಾಡಿಕೊಳ್ಳುವುದು?

ಈ ಥೆರಪಿ ಮಾಡಿಕೊಳ್ಳಲು, ರೋಗಿಯು ನೇರವಾಗಿ ಮಲಗಿಕೊಳ್ಳಬೇಕು. ಕಡಲೆ ಹಿಟ್ಟಿನಲ್ಲಿ ಹದವಾಗಿ ನೀರು ಬೆರೆಸಿ ಕನಕ ಮಾಡಿಕೊಳ್ಳಬೇಕು, ಅದನ್ನು ಮಂಡಿಗಳ ಸುತ್ತಲು ದಪ್ಪನಾಗಿ ವೃತ್ತಾಕಾರದಲ್ಲಿ ಕಟ್ಟೆ ಕಟ್ಟಬೇಕು. ನಂತರ ಅದರಲ್ಲಿ ಸಾಕಷ್ಟು ಪ್ರಮಾಣದ ಡಾ.ಆರ್ಥೋ ಆಯುರ್ವೇದಿಕ ತೈಲ ತುಂಬಿರಿ. ಈ ಸಂದರ್ಭದಲ್ಲಿ ರೋಗಿಯು ಅಲ್ಲಾಡದಂತೆ ಮಲಗಿದ್ದು 15–20 ನಿಮಿಷ ಕಾಲ ತೈಲ ಅಲ್ಲಿಯೆ ಉಳಿದಿರುವಂತೆ ನೋಡಿಕೊಳ್ಳ ಬೇಕು. ಉತ್ತಮ ಫಲಿತಾಂಶಗಳಿಗಾಗಿ, ಒಂದು ಬಾರಿ ಬಳಸಿದ ತೈಲವನ್ನು ಪುನಃ ಉಪಯೋಗಿಸದೆ ಹೊಸ ತೈಲ ಬಳಸಿರಿ.

ಜಾನು ಬಸ್ತಿ ಥೆರಪಿ ಹೇಗೆ ಕೆಲಸ ಮಾಡುತ್ತದೆ?

ಆಯುರ್ವೇದದಲ್ಲಿ ವಾತ ನಿವಾರಣೆಯಲ್ಲಿ ತೈಲವನ್ನು ಮಹತ್ವದ ಅಂಶವೆಂದು ಪರಿಗಣಿಸಲಾಗುತ್ತದೆ, ಇದು ವಾತ ದೋಷದಿಂದ ಉಂಟಾಗುವ ಕೀಲು ಸಮಸ್ಯೆಗಳನ್ನು ಶಮನಗೊಳಿಸುವಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಈ ತಂತ್ರದಲ್ಲಿ ಉತ್ತಮ ಪ್ರಮಾಣದ ಡಾ.ಆರ್ಥೋ ಆಯುರ್ವೇದಿಕ ತೈಲವನ್ನು ಮಂಡಿಗಳ ಮೇಲೆ ಸ್ಥಿರವಾಗಿ ಇರಿಸಲಾಗುತ್ತದೆ ಮತ್ತು ಇದರಿಂದಾಗಿ ಕೀಲುಗಳ ಆಳಕ್ಕೆ ಸೂಕ್ತ ಪ್ರಮಾಣದ ತೈಲವು ಇಳಿದುಕೊಂಡು ಚಲನಶೀಲತೆಯನ್ನು ಹೆಚ್ಚಿಸುವಲ್ಲಿ ನೆರವಾಗುತ್ತದೆ. ನಿಯಮಿತವಾಗಿ ಹೀಗೆ ಮಾಡುವುದರಿಂದ, ಕೀಲುಗಳಲ್ಲಿನ ಅಂಗಾಂಶಗಳು ಶಕ್ತಿಯುತಗೊಳ್ಳುತ್ತವೆ ಮತ್ತು ಈ ಥೆರಪಿಯನ್ನು ವಾರದಲ್ಲಿ ಎರಡು ಬಾರಿ ಮಾಡಿಕೊ ಳ್ಳಬಹುದು.

Clinically Tested*
*For efficacy and safety.

24x7 Helpline: 78769 77777 | www.drorthooil.com
Available at all medical & general stores